


ಚಿಂತನಧಾರೆ

ಡಾ. ಸಿ.ಪಿ.ಕೃಷ್ಣಕುಮಾರ್

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ
ಸುಕ್ಷೇತ್ರ ಹಾರಕೂಡ, ಜಿಲ್ಲೆ: ಬೀದರ



ಚಿಂತನ ಧಾರೆ

ಸೃಜನ ಸಾಹಿತ್ಯಮಾಲೆ - ೭

ಚಿಂತನ ಧಾರೆ

ಲೇಖಕರು :

ಸಿ. ಪಿ. ಕೃಷ್ಣಕುಮಾರ್

೨೦೦೭

ಪ್ರಕಾಶಕರು

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ

ಸುಕ್ಷೇತ್ರ ಹಾರಕೂಡ - ೫೮೫ ೪೩೭

ತಾಲೂಕ : ಬಸವಕಲ್ಯಾಣ ಜಿಲ್ಲೆ : ಬೀದರ

CHINTANA DHARE : Written by Dr. C. P. Krishnakumar, Mysore. Published by Shri Chennabasaveshwara Samsthan Hiremath, Harkud - 585 437, Tq. : Basavakalyan, Dist. : Bidar.

First impression : 2007

Copies : 1000

Pages : viii + 128

Paper Quality Used : 70 G.S.M. Maplitho Dandeli

Price : Rs. 60/-

'ಚಿಂತನ ಧಾರೆ' : ಲೇಖಕರು : ಡಾ. ಸಿ. ಪಿ. ಕೃಷ್ಣಕುಮಾರ್, ಮೈಸೂರು
ಪ್ರಕಾಶಕರು : ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ – ೫೮೫ ೪೩೭
ತಾ. ಬಸವಕಲ್ಯಾಣ ಜಿಲ್ಲಾ : ಬೀದರ

ಪ್ರಥಮ ಮುದ್ರಣ : ೨೦೦೭

ಪ್ರತಿಗಳು : ೧೦೦೦

ಪುಟಗಳು : viii + ೧೨೮

ಉಪಯೋಗಿಸಿದ ಕಾಗದ : 70 GSM ಮ್ಯಾಪಲಿಥೋ ದಾಂಡೇಲಿ

ಬೆಲೆ : ರೂ. ೬೦/-

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ – ೫೮೨ ೧೦೧.
(08372) 237566, 235509 (O) 236578 (R)

ಆಶೀರ್ವಚನ

ಕಲ್ಯಾಣ ಕರ್ನಾಟಕವು ೧೨ನೆಯ ಶತಮಾನದ ಸಮಾಜೋಧಾರ್ಮಿಕ ಕ್ಷಿಪ್ರ ಕ್ರಾಂತಿಯ ಕಾರಣವಾಗಿ ಅತ್ಯಂತ ಎತ್ತರದ ನಾಡಾಗಿ ಶೋಭಿಸತೊಡಗಿದ ನಾಡು. ನಡೆದಾಡುವ ಶಿವನಂತಿದ್ದ ಶಿವಶರಣರ ನೆಲೆವೀಡಾಗಿ ಕಂಗೊಳಿಸಿದ್ದ ಈ ಭೂಮಿಯಲ್ಲಿ ರಾಜಕೀಯ ಸ್ಥಿತ್ಯಂತರದಿಂದ ಕೆಲ ಶತಮಾನಗಳವರೆಗೆ ವೀರಶೈವ ಚಟುವಟಿಕೆಗಳು ಮೋಡ ಮುಸುಕಿದ ಚಂದ್ರನಂತೆ ಕಳೆಗುಂದಿದ್ದವು. ಆದರೆ ಜನರಲ್ಲಿ ಜಿನುಗುತ್ತಲೇ ಇದ್ದ ಭಕ್ತಿಯ ಸೆಲೆ ಬತ್ತಿರಲಿಲ್ಲ. ಅದು ನಿರಂತರ ಸಣ್ಣಗೆ ಪ್ರವಹಿಸುತ್ತಲೇ ಸಾಗಿತ್ತು. ಭಕ್ತಿಯ ಸೆಲೆಯನ್ನು ಬತ್ತದಂತೆ ಜಾಗೃತವಾಗಿಟ್ಟುಕೊಂಡು ಹೋಗುವಲ್ಲಿ ಬಸವೋತ್ತರ ಕಾಲದಲ್ಲಿ ಈ ಭಾಗದಲ್ಲಿ ಅನೇಕ ಮಹಾನುಭಾವಿಗಳು ಉತ್ತಮ ಕಾಣಿಕೆ ಸಲ್ಲಿಸಿದ್ದಾರೆ. ಹಾರಕೂಡದ ನಮ್ಮ ಶ್ರೀಮಠದ ಲಿಂ. ಶ್ರೀ ಚನ್ನಬಸವೇಶ್ವರರು ಮತ್ತು ಅವರ ನಂತರದ ಪೀಠಾಧಿಪತಿಗಳು ಕಲ್ಯಾಣನಾಡಿನ ಜಾಗೃತ ಚೇತನರಾಗಿ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಸಿದ ಕೈಂಕರ್ಯ ಅನನ್ಯವಾಗಿದೆ. ತಲೆತಲಾಂತರವಾಗಿ ಅವರು ಜನರ ಮನದ ಕೊನೆಯಮೇಲೆ ಅಚ್ಚಳಿಯದೆ ಇಂದಿಗೂ ನಿಲ್ಲಬೇಕಾದರೆ ಅವರು ಮಾಡಿದ ಕಾರ್ಯ ಎಂಥ ಅದ್ಭುತವಾದದ್ದು ಎಂಬುದರ ಕಲ್ಪನೆ ಗರಿಗೆದರುತ್ತದೆ. ಭಕ್ತಸಂದೋಹದ ಅಭೀಪ್ಸೆ ಅಂದಿನಿಂದ ಇಂದಿನವರೆಗೂ ಪೂರ್ಣಗೊಳ್ಳುತ್ತಲೇ ಬಂದಿರುವುದರಿಂದ ಮಾಡುವ ಭಕ್ತರಿಗೆ, ನೀಡುವ ದಾನಿಗಳಿಗೆ ಕೊರತೆ ಎಂಬುದೇ ಉಂಟಾಗಿಲ್ಲ. ಭಕ್ತಿಯಲ್ಲಿ ಚ್ಯುತಿ ಇಲ್ಲ. ಇಷ್ಟಾರ್ಥ ಪೂರೈಕೆಗೆ ಕೊನೆಯಿಲ್ಲ ಎಂಬಂತೆ ನಿರಂತರವಾಗಿ ತ್ರಿಕಾಲ ದಾಸೋಹ ಶ್ರೀಮಠದಲ್ಲಿ ಭಕ್ತರಿಂದ ನಡೆಯುತ್ತಲೇ ಇದೆ. ಕೊಡುವವನೂ ಅವನು, ಕೊಳ್ಳುವವನೂ ಅವನೇ ಇದ್ದಾಗ ಯಾವುದಕ್ಕೆ ಕೊರತೆ ! ಅವರ ಭಕ್ತಿಯೇ ಮಠದ ಶಕ್ತಿಯಾಗಿ ಅವರಿಗಾಗಿಯೇ ಶಿವನ ಕಾರ್ಯ ಎಡಬಿಡದೆ ಸಾಗಿದೆ.

ಹಾರಕೂಡ ಇಂದು ಒಂದು ಮಾದರಿ ಗ್ರಾಮೀಣ ವಿದ್ಯಾಕೇಂದ್ರವಾಗಿ ಧರ್ಮ ಸಂಸ್ಕೃತಿಯ ಪುಣ್ಯಭೂಮಿಯಾಗಿ ಕಂಗೊಳಿಸತೊಡಗಿದೆ. ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ತಪೋನಿಷ್ಠೆ, ಪೂಜೆ, ಸಾತ್ವಿಕ ವ್ಯಕ್ತಿತ್ವದಿಂದ ಜನರಲ್ಲಿ ಸದ್ಭಕ್ತಿ, ಸದ್ಭಾವ, ಸದಾಚಾರಗಳ ಗಟ್ಟಿ ಬೀಜ ಬಿತ್ತಿದ್ದರ ಫಲ ಇಂದು ಎದ್ದುಕಾಣುವಂತೆ ಆಗಿದೆ. ಶಿಕ್ಷಣ, ಧರ್ಮ, ಸಮಾಜ, ಸಂಸ್ಕೃತಿ, ಸಾಹಿತ್ಯ ಹೀಗೆ ಮನುಷ್ಯನ ಬದುಕಿನ ಸಾರ್ಥಕ ಮಜಲುಗಳನ್ನು ಶ್ರೀಮಠ ಕಾಣಿಸಿಕೊಡುತ್ತಲಿದೆ. ಕ್ರಿಯಾಶೀಲ ಮಠವಾಗಿ ಬಹುಮುಖಿ ಕಾರ್ಯಗಳನ್ನು ನೆರವೇರಿಸುತ್ತಿದೆ. ಸಾಮಾಜಿಕ ಧಾರ್ಮಿಕ ಚಟುವಟಿಕೆಗಳೊಂದಿಗೆ ಸಾಹಿತ್ಯ ಕೃತಿಗಳ ಪ್ರಕಟನೆ, ವಿದ್ವನ್ಮಣಿಗಳ ವಿಶೇಷ ಉಪನ್ಯಾಸ, ಮಾನವತಾವಾದದ ನೆಲೆಗಟ್ಟಿನ ಮೇಲೆ ಶ್ರೇಂಷ್ಠ ಜೀವನ ಮೌಲ್ಯಗಳ ಪ್ರತಿಪಾದನೆ,

ಜನಜಾಗೃತಿ, ಜನರ ಪ್ರಜ್ಞಾವಂತಿಕೆಯನ್ನು, ಸುಸಂಸ್ಕೃತಿಯ ಮಟ್ಟವನ್ನು ಎತ್ತರಕ್ಕೆ ಒಯ್ಯುವ ಹತ್ತುಹಲವು ಚಟುವಟಿಕೆಗಳನ್ನು ಇಲ್ಲಿ ಕೈಕೊಳ್ಳಲಾಗುತ್ತಿದೆ. ಜಿಲ್ಲಾಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವೊಂದು ಹಾರಕೂಡದಂಥ ಚಿಕ್ಕ ಗ್ರಾಮವೊಂದರಲ್ಲಿ ನಡೆಯಬೇಕಾದರೆ ನಮ್ಮ ಶ್ರೀಮಠದ ಮೇಲೆ ಸಾಹಿತ್ಯಾಸಕ್ತರು ಇಟ್ಟುಕೊಂಡ ಅನನ್ಯ ಪ್ರೇಮ, ಸದ್ಭಾವನೆಗಳು ಕಾರಣವೆಂದು ನಾವು ಭಾವಿಸಿದ್ದೇವೆ. ಕರ್ನಾಟಕದ ಅನೇಕ ಭಾಗಗಳಿಂದ ಶ್ರೇಷ್ಠ ಸಾಹಿತಿ ವಿದ್ವಾಂಸರು ನಮ್ಮ ಶ್ರೀಮಠಕ್ಕೆ ಆಗಮಿಸಿ ನುಡಿಸೇವೆ ಮಾಡಿರುವುದು ಒಂದು ವಿಶೇಷವೇ. ಡಾ. ಸಾ. ಶಿ. ಮರುಳಯ್ಯ, ಶ್ರೀ ಗೋ. ರು. ಚನ್ನಬಸಪ್ಪ, ಡಾ. ವಿದ್ಯಾಶಂಕರ, ಡಾ. ಬಿ. ಆರ್. ಹಿರೇಮಠ, ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಪಂಚಾಕ್ಷರಿ ಹಿರೇಮಠ, ಡಾ. ವೀರಣ್ಣ ರಾಜೂರ, ಡಾ. ಎಂ. ಎಸ್. ಲಠ್ಠೆ, ಡಾ. ಬಸವಲಿಂಗ ಸೊಪ್ಪಿಮಠ, ಪ್ರೊ. ಬಿ. ಮಹಾದೇವಪ್ಪ, ಡಾ: ಎಸ್. ಎಂ. ಹಿರೇಮಠ, ಡಾ. ಎಸ್. ಆರ್. ಗುಂಜಾಳ ಬಸವರಾಜ ಪುರಾಣಿಕ, ಡಿ. ಶಾಂತಾ ಇಮ್ರಾಪುರ ಮುಂತಾದ ವಿದ್ವಾಂಸರಲ್ಲದೆ, ಸ್ಥಳೀಯ ವಿದ್ವಾಂಸರಾದ ಪ್ರೊ. ಸೂಗಯ್ಯ ಹಿರೇಮಠ, ಪ್ರೊ. ಎಸ್. ಆರ್. ಶಾಸ್ತ್ರಿ, ಡಾ. ಎಚ್. ಕಾಶೀನಾಥ ರೆಡ್ಡಿ, ಡಾ. ಸೋಮನಾಥ ಯಾಳವಾರ, ಡಾ. ಮಾಯಾದೇವಿ ಮಾಲಿಪಾಟೀಲ, ಡಾ. ಮೀನಾಕ್ಷಿ ಬಾಳಿ ಇವರೇ ಮೊದಲಾದ ಹಲವರು ಶ್ರೀಮಠದ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ಅತ್ಯಂತ ಭಕ್ತಿಪೂರ್ವಕ ಸೇವೆ ಸಲ್ಲಿಸಿದ್ದಾರೆ. ಒಂದು ಚಿಕ್ಕ ಹಳ್ಳಿಯಲ್ಲಿರುವ ಸಣ್ಣಮಠವೊಂದು ಇಷ್ಟೊಂದು ದೂರದೂರದ ವಿದ್ವಾಂಸರನ್ನು ಬರಮಾಡಿಕೊಂಡು ಅವರಿಂದ ಸಾಹಿತ್ಯ ಸೇವೆ ಮಾಡಿಸಿರುವುದು ಒಂದು ಸಾಧನೆಯೆಂದು ಹಲವು ವಿದ್ವಾಂಸರು ಮೆಚ್ಚುಗೆಯ ನುಡಿಗಳನ್ನು ಆಡಿದ್ದಾರೆ.

ಇಲ್ಲಿಯವರೆಗೆ ಶ್ರೀಮಠವು ೩೦ ಗ್ರಂಥಗಳನ್ನು ಪ್ರಕಟಿಸಿದೆ. ಕಳೆದ ೮-೯ ವರ್ಷದಿಂದ ಶ್ರೇಷ್ಠ ವಿದ್ವಾಂಸರ ಅಪರೂಪದ ಕೃತಿಗಳು ನಮ್ಮ ಶ್ರೀಮಠದ ಪ್ರಕಟನೆಗಳಾಗಿ ಹೊಮ್ಮಿರುವುದು ಸಂತೋಷದ ಸಂಗತಿಯಾಗಿದೆ.

ಕಳೆದ ವರ್ಷ ಶ್ರೀ ಬಸವರಾಜ ಪುರಾಣಿಕ ಅವರ ಅಲ್ಲಮಪ್ರಭು : ಬೆರಗು, ಬೆಡಗು- ಬೆಳಗು ಮತ್ತು ಡಾ. ಸಂಗಮೇಶ ಸವದತ್ತಿಮಠ ಅವರ ಸದ್ಗುರು ಶ್ರೀ ಚನ್ನಬಸವ ಶಿವಯೋಗಿಗಳ ಪುರಾಣ ಎಂಬ ಎರಡು ಮೌಲಿಕ ಕೃತಿಗಳು ಪ್ರಕಟವಾದವು. ಅವುಗಳನ್ನು ಓದಿ ಅನೇಕ ವಿದ್ವಾಂಸರು ಮೆಚ್ಚುಗೆಯ ನುಡಿಗಳನ್ನಾಡಿರುವರು. ಪ್ರತಿವರ್ಷ ಪ್ರಕಟವಾಗುವ ಶ್ರೀಮಠದ ಗ್ರಂಥಗಳಿಗೆ ಒಂದಿಲ್ಲೊಂದು ಪ್ರಶಸ್ತಿ ದೊರೆಯುತ್ತಿರುವುದು ಗ್ರಂಥಗಳ ಉತ್ತಮಿಕೆಯ ಪ್ರತೀಕವೇ ಆಗಿದೆ.

ಪ್ರಸ್ತುತ ಡಾ. ಸಿ.ಪಿ.ಕೆ. ಅವರ 'ಚಿಂತನ ಧಾರೆ' ಕೃತಿಯನ್ನು ಸೃಜನ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸಲು ನಮಗೆ ಸಂತೋಷವಾಗಿದೆ. ಡಾ. ಸಿ.ಪಿ.ಕೆ. ಅವರು ಸುಪ್ರಸಿದ್ಧ ಸೃಜನಶೀಲ ಸಾಹಿತಿಗಳು, ವಿದ್ವಾಂಸರು. ನಾಡಿನ ಅನೇಕ ಪತ್ರಿಕೆಗಳಲ್ಲಿ

ಅವರ ಚಿಂತನ ಲೇಖನಗಳು ಪ್ರಕಟವಾಗಿವೆ. ಇಂತಹ ಚಿಂತನೆಗಳ ಸಂಕಲನಗಳೇ ೧೫ಕ್ಕೂ ಹೆಚ್ಚು ಪ್ರಕಟವಾಗಿರುವುದನ್ನು ನೋಡಿದರೆ ಅವರ ವೈಚಾರಿಕತೆಯ ಅಗಾಧತೆಯ ಅರಿವುಂಟಾಗುತ್ತದೆ.

ಈ ಕೃತಿಯಲ್ಲಿ ಅವರ ೫೧ ಚಿಂತನಗಳಿವೆ. ವಿಷಯ ವ್ಯಾಪ್ತಿ ವಿಸ್ತಾರವಾಗಿದೆ. ಬಿಂದುವಿನಲ್ಲಿ ಬಿಂದಿಗೆಯಷ್ಟು ಜೇನು ತುಂಬಿದಂತೆ ಇವು ಬುದ್ಧಿಗೂ ಮನಸ್ಸಿಗೂ ಆಹ್ಲಾದ ನೀಡುತ್ತವೆ. ಜೊತೆಗೆ ಬದುಕಿನಲ್ಲಿ ಸಾತ್ವಿಕ ಮೌಲ್ಯಗಳ ಮಹತ್ವವನ್ನು ಬಿಂಬಿಸುತ್ತವೆ. ನಾಡಿನ ಶ್ರೇಷ್ಠ ಸಾಹಿತಿ ವಿದ್ಯನ್ಮಣಿಗಳಾದ ಡಾ. ಸಿ.ಪಿ.ಕೆ. ಅವರು ನಮಗೆ ಉತ್ತಮ ಕೃತಿಯೊಂದನ್ನು ಪ್ರಕಟಣೆಗೆ ಕೊಟ್ಟು ನಮ್ಮ ಮನಾನಂದಗೊಳಿಸಿದ್ದಾರೆ. ಇಂಥ ಶ್ರೇಷ್ಠ ವಿದ್ವಾಂಸರು ನಮಗೆ ದೊರೆಯುವಂತೆ ಮಾಡಿದವರು ನಮ್ಮ ಶ್ರೀ ಮಠದ ಸಾಹಿತ್ಯ ಸಂಸ್ಕೃತಿ ವಿಭಾಗದ ಮಾರ್ಗದರ್ಶಕರಾದ ಡಾ. ಸಂಗಮೇಶ ಸವದತ್ತಿಮಠ ಅವರು. ಆದ್ದರಿಂದ ಅವರಿಬ್ಬರಿಗೂ ನಮ್ಮ ಹೃತ್ಪೂರ್ವಕ ಶುಭಾಶೀರ್ವಾದಗಳು. 'ಚಿಂತನ ಧಾರೆ' ನಮ್ಮ ಓದುಗರ ಬಳಗದ ಮಾನಸಿಕ ಮಲೀನತೆಯನ್ನು ತೊಳೆದು ಶುದ್ಧ ಮಾಡಲಿ ಎಂದು ಹಾರೈಸುತ್ತೇವೆ.

೪-೧೦-೨೦೦೭

ಷ. ಬ್ರ. ಚನ್ನವೀರ ಶಿವಾಚಾರ್ಯರು
ಸಂಸ್ಥಾನ ಹಿರೇಮಠ, ಹಾರಕೂಡ

ಅರಿಕೆ

ಇದೊಂದು ಚಿಂತನ ಪ್ರಬಂಧಗಳ ಸಂಕಲನ. ನನ್ನ ವಿಪುಲ ವಾಙ್ಮಯದ ಒಂದು ಪ್ರಶಸ್ತವಾದ ಆಯಾಮ ಚಿಂತನ ಪ್ರಬಂಧಗಳೆಂದು ನಮ್ರವಾಗಿ ನಂಬಿದ್ದೇನೆ.

(ಇಂತಹ ಇದುವರೆಗಿನ ಸಂಕಲನಗಳ ಸಂಖ್ಯೆ ಹದಿನೈದು)

''ಜಗತ್ತಿನಲ್ಲಿ ಜ್ಞಾನವೂ ಚಿಂತನವೂ ಆದುದರಲ್ಲಿ ಅತ್ಯುತ್ತಮವಾದುದನ್ನು'' ("The best that is Known and thought in the world") ನಮ್ಮ ಓದುಗರಿಗೆ ಒದಗಿಸಬೇಕೆಂಬುದು ಈ ಬಗೆಯ ಬರವಣಿಗೆಯ ನನ್ನ ಉದ್ದೇಶ. "Sweetness and Light" (ಮಾಧುರ್ಯ ಮತ್ತು ಬೆಳಕು) ಎಂದು ಸಂಸ್ಕೃತಿಯನ್ನು ಲಕ್ಷಣೀಕರಿಸಿದ್ದಾನೆ ಮಾಥ್ಯೂ ಅರ್ನಾಲ್ಡ್. ಸವಿಗಿಂತ ಮಿಗಿಲಾಗಿ ಬೆಳಕು ಈ ಬರಹಗಳ ಮುಖ್ಯವಾದ ಗಮ್ಯ. ಆದರೆ ಲಲಿತ ಪ್ರಬಂಧ, ಕವಿತೆ ಮುಂತಾದ ಪ್ರಕಾರಗಳ ಗುಣಗಳೂ ಆಂಶಿಕವಾಗಿ ಇಲ್ಲಿವೆ.

ಪ್ರಾಚೀನವನ್ನು ಅರ್ವಾಚೀನಕ್ಕೆ ಪ್ರಸ್ತುತಗೊಳಿಸುವುದು ಹಾಗೂ ಹಳೆಯದಕ್ಕೆ ಹೊಸ ವ್ಯಾಖ್ಯಾನವನ್ನು ಕೊಡುವುದು ಕೂಡ ನನ್ನ ಚಿಂತನ ಲೇಖನಗಳ ವಿವಕ್ಷೆ. ಪರಂಪರೆ, ಪ್ರಗತಿಗಳ ಸಮನ್ವಯ ಇವುಗಳಲ್ಲಿ ಉದ್ದಿಷ್ಟ. ಇವುಗಳನ್ನು ಬಹಳ ಜನ ಮೆಚ್ಚಿಕೊಂಡಿದ್ದಾರೆ ಎಂದು ಹೇಳಿದರೆ ಅದು ಕೇವಲ ಜಂಬದ ಮಾತಲ್ಲ!

ಪ್ರಕೃತ, ಅನೇಕ ಹಳೆಯ ಬರಹಗಳೂ ಅಂತೆಯೆ ಹೊಸವೂ ಈ ಹೊತ್ತಗೆಯಲ್ಲಿ ಸಮಾವೇಶಗೊಂಡಿವೆ. ಆದರೆ ಹುರುಳು ಹೂರಣಗಳು ಚಿರಂತನ ಎಂಬುದು ಮುಖ್ಯ ಸಂಗತಿ; ನಿತ್ಯ ವರ್ತಮಾನ ಇಲ್ಲಿದೆ.

ಇಲ್ಲಿ ಪೂರ್ವ ಸೂರಿಗಳಿಗೆ ನನ್ನ ಋಣ ಅಮಿತವಾಗಿದೆ, ಹಾಗೆಯೇ ಸ್ವೋಪಜ್ಞತೆಗೂ ಎಡೆಯಿದೆ ಎಂಬುದನ್ನು ಒತ್ತಿ ಹೇಳಬೇಕು. (ಅಲ್ಲಲ್ಲಿ ಸುಳಿಯುವ ಪುನರುಕ್ತಿಗಳನ್ನು ವಾಚಕರು ಮನ್ನಿಸಬೇಕು).

ಈ ಪುಸ್ತಕವನ್ನು ವಿಶ್ವಾಸದಿಂದ, ಆಶೀರ್ವಾದ ಪೂರ್ವಕವಾಗಿ ಪ್ರಕಟಿಸುತ್ತಿರುವ ಹಾರಕೂಡ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳವರಿಗೆ ನನ್ನ ಹಾರ್ದಿಕ ಪ್ರಣಾಮಗಳು ಸಲ್ಲುತ್ತವೆ. ಈ ದಿಶೆಯಲ್ಲಿ ಪ್ರೇರಣೆಯಿತ್ತು ನೆರವಾದ ಸನ್ಮಿತ್ರರೂ ವಿದ್ವಾಂಸ ವರಿಷ್ಠರೂ ಆದ ಡಾ. ಸಂಗಮೇಶ ಸವದತ್ತಿಮಠ ಅವರಿಗೆ ನನ್ನ ಮನಃ ಪೂರ್ವಕ ವಂದನೆಗಳು. ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ತ್ವರಿತ ಮುದ್ರಣಾಲಯಕ್ಕೆ ನಾನು ಆಭಾರಿ.

ಈ ಚಿಂತನ ಪ್ರಬಂಧ ಪುಂಜ ವಾಚಕ ವೃಂದಕ್ಕೆ ತಕ್ಕಮಟ್ಟಿಗಾದರೂ ಇಷ್ಟವೂ ಉಪಯುಕ್ತವೂ ಆಗುತ್ತದೆಂದು ಭಾವಿಸಿದ್ದೇನೆ. 'ಕರ್ಮ ನನ್ನದು; ಫಲದ ಅಪೇಕ್ಷೆ ನನಗಿಲ್ಲ'.

ಸಿ. ಪಿ. ಕೃಷ್ಣಕುಮಾರ್

ಪರಿವಿಡಿ

ಪುಟಸಂಖ್ಯೆ



೧. ಸರಸ್ವತಿ

ಭಾರತೀಯ ಪರಂಪರೆಯಲ್ಲಿ ಸರಸ್ವತಿಗೊಂದು ವಿಶಿಷ್ಟವಾದ ಸ್ಥಾನ. ಆಕೆ ವಿದ್ಯಾಧಿದೇವತೆ; ಸಮಸ್ತ ಜ್ಞಾನದ ತವರು. ವಿದ್ಯಾಕಾಂಕ್ಷಿಗಳಿಗೆ, ಜ್ಞಾನಪಿಪಾಸುಗಳಿಗೆ ಅವಳು ಆರಾಧ್ಯ ದೇವಿ. ಸರಸ್ವತಿಯ ಸಾಂಪ್ರದಾಯಿಕ ಚಿತ್ರ ಅರ್ಥವತ್ತಾದುದು. ಅವಳ ನಾಲ್ಕೂ ಕೈಗಳಲ್ಲಿ ಎರಡು ವೀಣೆಯನ್ನು ಹಿಡಿದಿವೆ: ಸಂತೋಷಪ್ರದಾಯಕವಾದ ಲಲಿತ ಕಲೆಗಳನ್ನು ಸಂಕೇತಿಸುತ್ತದೆ, ವೀಣೆ. ಒಂದು ಕೈಯಲ್ಲಿ ಸರಸ್ವತಿ ಹಿಡಿದಿರುವ ಪುಸ್ತಕ ಜ್ಞಾನವಿಜ್ಞಾನಗಳ ಪ್ರತೀಕವಾಗಿದೆ. ವಿದ್ಯೆಯನ್ನು ಸಂಪಾದಿಸಿ ರೂಢಿಸಿಕೊಳ್ಳುವಲ್ಲಿ ಅತ್ಯಗತ್ಯವಾದ ಧ್ಯಾನ ಮನನಗಳಿಗೆ ಸಂಕೇತವಾಗಿದೆ, ಇನ್ನೊಂದು ಕೈಯಲ್ಲಿರುವ ಅಕ್ಷಮಾಲೆ. ಸರಸ್ವತಿಯ ವಾಹನ ನವಿಲು. ಈ ಸಹಸ್ರಾಕ್ಷ ಪಕ್ಷಿ ಕಲ್ಪನೆಗೆ, ಪ್ರತಿಭೆಗೆ ಪ್ರತಿಮೆಯಾಗಿದೆ. ಹೀಗಾಗಿ, ಕಲೆ ಸಾಹಿತ್ಯ ಜ್ಞಾನ ವಿಜ್ಞಾನಗಳ, ಬುದ್ಧಿ ಭಾವಗಳ ಅಧಿಷ್ಠಾತ್ರಿಯಾಗಿದ್ದಾಳೆ, ಸರಸ್ವತಿ. ಅವಳ ಕೃಪೆಗೆ ಭಾರತೀಯರು ಎಂದಿನಿಂದಲೂ ಅತೀವ ಮಹತ್ವ ಕೊಡುತ್ತ ಬಂದಿದ್ದಾರೆ.

ಸರಸ್ವತಿಯನ್ನು ಕುರಿತ ಸ್ತೋತ್ರಪದ್ಯಗಳಲ್ಲಿ ಒಂದು ಅವಳನ್ನು ''ಕುಂದೇಂದು ತುಷಾರ ಹಾರಧವಳಾ'' ಎಂದು ಕೀರ್ತಿಸುತ್ತದೆ. ಸರಸ್ವತಿಗೆ ಇಲ್ಲಿ ಆರೋಪಿತವಾಗಿರುವ ಶ್ವೇತವರ್ಣ ಎಲ್ಲ ಒಳಿತಿಗೆ, ಪಾವಿತ್ರ್ಯಕ್ಕೆ ಸೂಚಕವಾಗಿದೆ. ದಂಡಿ ಕೂಡ ಸರಸ್ವತಿಯನ್ನು 'ಸರ್ವಶುಕ್ಲಾ' ಎಂದು ಬಣ್ಣಿಸಿದ್ದಾನೆ; ಇದು ಅತ್ಯಂತ ಧ್ವನಿಪೂರ್ಣವಾಗಿದೆ. 'ಶುಕ್ಲ' ಶಬ್ದಕ್ಕೆ 'ಬಿಳುಪು' ಎಂಬುದರ ಜೊತೆಗೆ 'ವೀರ್ಯ' ಎಂಬ ಅರ್ಥವೂ ಉಂಟು. ಸರಸ್ವತಿ ಅನುಗ್ರಹಿಸುವ ವಿದ್ಯೆ ಅಥವಾ ಜ್ಞಾನ ದುರ್ಬಲವಾದುದಲ್ಲ, ವೀರ್ಯಶಾಲಿಯಾದದ್ದು. ಈ ಪ್ರಸ್ತಾವದಲ್ಲಿ ''ಜ್ಞಾನವೇ ಶಕ್ತಿ'' (KNOWLEDGE IS POWER), ''ಖಡ್ಗಕ್ಕಿಂತ ಲೇಖನಿ ಬಲವತ್ತರವಾದುದು'' ಮುಂತಾದ ಮಾತುಗಳನ್ನು ಸ್ಮರಿಸಬಹುದು.

ವೈದಿಕ ಧರ್ಮದ ಪ್ರಕಾರ ಸರಸ್ವತಿ ಹೆಣ್ಣು; ಅವಳು ಬ್ರಹ್ಮನ ಮಡದಿ. ಈ ಕಲ್ಪನೆಯಲ್ಲಿ ಹುರುಳುಂಟು. ಸೃಷ್ಟಿ ಶಕ್ತಿಗೆ ಪೂರಕವಾದದ್ದು ಸರಸ್ವತೀಶಕ್ತಿ. ಜೈನಧರ್ಮ ಕೂಡ ಸರಸ್ವತಿಯನ್ನು ಹೆಣ್ಣೆಂದು ಕಲ್ಪಿಸಿಕೊಂಡಿದ್ದರೂ, ಅಲ್ಲಿ ಅವಳು ಬ್ರಹ್ಮ ಪತ್ನಿಯಲ್ಲ. ಪಂಪಕವಿಯ ಸರಸ್ವತೀ ಕಲ್ಪನೆ ಅಪೂರ್ವವಾಗಿದ್ದು, ಈ ಸಂದರ್ಭದಲ್ಲಿ ನೆನೆಯತಕ್ಕದ್ದಾಗಿದೆ. ಅವನ ದೃಷ್ಟಿಯಲ್ಲಿ ಸರಸ್ವತಿ ಹೆಣ್ಣಲ್ಲ. ಅವನು ಘೋಷಿಸುತ್ತಾನೆ: ''ಪರಮಜಿನೇಂದ್ರವಾಣಿಯೆ ಸರಸ್ವತಿ, ಬೇಱದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು''. ಒಂದರ್ಥದಲ್ಲಿ ಪಂಪನ ಮಾತು ದಿಟ: ಮಹಾಪುರುಷರ ವಾಣಿಯೆ ಸರಸ್ವತಿ. ಏಕೆಂದರೆ, ಅವರ ಮನದಲ್ಲಿ, ಮಾತಿನಲ್ಲಿ ಸರಸ್ವತಿ ನೆಲೆಗೊಂಡಿರುತ್ತಾಳೆ. ಸರಸ್ವತಿ ಒಂದು ವ್ಯಕ್ತಿಯಲ್ಲ, ಶಕ್ತಿ ಎಂಬುದು ಸರಿಯೇ.

ಆದರೂ ಅವಳು ಹೆಣ್ಣು, ಎಲ್ಲರ ತಾಯಿ, ಕಲೆ ಜ್ಞಾನ ವಿಜ್ಞಾನಗಳೆಲ್ಲ ಅವಳ ಸಂತಾನ ಎಂಬ ಕಲ್ಪನೆ ತಿರಸ್ಕಾರ್ಯವೇನೂ ಆಗುವುದಿಲ್ಲ.

ಶಾಸನವೊಂದರಲ್ಲಿ ಕಂಡುಬರುವ ಈ ಸರಸ್ವತೀದರ್ಶನ ತುಂಬ ಕುತೂಹಲಕಾರಿಯಾದುದು:

ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ
ಪ್ರೇರಿಸಲೋಸುಗ ಜಪಿಸುತಿರ್ಪಳಿರುಳ್ ಪಗಲಾವಳೊರ್ವಳಾ
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ

ಬ್ರಹ್ಮಾಂಡದ ತೇಜೋಗೋಲಗಳನ್ನೆಲ್ಲ ತನ್ನ ಮಣಿಮಾಲೆಯನ್ನಾಗಿ ಮಾಡಿಕೊಂಡು, ಲೋಕಹಿತಕ್ಕಾಗಿ ಹಗಲಿರುಳು ಜಪಿಸುತ್ತಿರುವ ಸರಸ್ವತಿಯ ಈ ಚಿತ್ರ ಅತ್ಯಂತ ಭವ್ಯವಾದದ್ದು. ಸರಸ್ವತೀ ತತ್ತ್ವ ಎಷ್ಟು ವ್ಯಾಪಕವಾದುದೆಂಬುದು ಇಲ್ಲಿ ಪ್ರತೀತವಾಗುತ್ತದೆ.

'ನಿಶ್ಶೇಷ ಜಾಡ್ಯಾಪಹಾ' ಎಂದು ಸರಸ್ವತಿಯನ್ನು ಒಂದೆಡೆ ವಿಶೇಷಿಸಲಾಗಿದೆ. ಇಂದು ವ್ಯಕ್ತಿಯ ಮಟ್ಟದಲ್ಲಿ, ದೇಶದ ಮಟ್ಟದಲ್ಲಿ ಒಳಗೆ, ಹೊರಗೆ ಎಷ್ಟೊಂದು ಜಾಡ್ಯಗಳು ಸುತ್ತಿಕೊಂಡಿವೆ! ಅವುಗಳನ್ನು ಸುಟ್ಟುಹಾಕುವಂತೆ ಸರಸ್ವತಿಯನ್ನು ಪ್ರಾರ್ಥಿಸಬೇಕಾಗಿದೆ; ಆ ತಾಯ ಸಾಕ್ಷಾತ್ಕಾರಕ್ಕಾಗಿ ಹಾರೈಸಬೇಕಾಗಿದೆ.

ಚತುರ್ಮುಖಮುಖಾಂಭೋಜ ವನಹಂಸವಧೂರ್ಮಮ
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ

■■

೨. ಹಿತ ಮತ್ತು ಪ್ರಿಯ

ಇದೊಂದು 'ಮನುಸ್ಮೃತಿ'ಯ ಪ್ರಸಿದ್ಧವಾದ ಶ್ಲೋಕ, ಆಡುವ ಮಾತು ಹೇಗಿರಬೇಕೆಂಬುದನ್ನು ವಿಧಿಸತಕ್ಕದ್ದು; ಅಂತಿಮವಾಗಿ ಜೀವನಮೌಲ್ಯಗಳ ಪ್ರಶ್ನೆಯನ್ನು ಕುರಿತದ್ದು :

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ
ಪ್ರಿಯಂ ಚ ನಾನೃತಂ ಬ್ರೂಯಾತ್ ಏಷ ಧರ್ಮಸ್ಸನಾತನಃ

(ಸತ್ಯವನ್ನು ಪ್ರಿಯವಾದ ರೀತಿಯಲ್ಲಿ ಹೇಳಬೇಕು, ಅಪ್ರಿಯವಾದ ರೀತಿಯಲ್ಲಿ ಹೇಳತಕ್ಕದ್ದಲ್ಲ; ಸತ್ಯವಲ್ಲದ ಪ್ರಿಯವನ್ನು ಹೇಳತಕ್ಕದ್ದಲ್ಲ. ಇದು ಸನಾತನ ಧರ್ಮ.)

ಇಲ್ಲಿ ಸತ್ಯ, ಪ್ರಿಯ ಎಂಬ ಎರಡು ಸಂಗತಿಗಳ ಪ್ರಸ್ತಾಪವಿದೆ. ಸತ್ಯ ಮುಖ್ಯವಾದದ್ದು ಪ್ರಿಯಕ್ಕೆ ದ್ವಿತೀಯ ಸ್ಥಾನ ಎಂಬುದು ಇಲ್ಲಿ ಸ್ಪಷ್ಟ. ಸಾಮಾನ್ಯವಾಗಿ ಸತ್ಯ ಮತ್ತು ಪ್ರಿಯ ಪರಸ್ಪರ ವಿರುದ್ಧವಾಗಿರುತ್ತವೆ. ಆದರೆ ಪ್ರಿಯವಾದುದು ಸತ್ಯವೂ ಆಗಿದ್ದರೆ, ಅದು ಆದರಣೀಯವಾಗುತ್ತದೆ ಎಂಬುದೂ ಪ್ರಕೃತ ಶ್ಲೋಕದಲ್ಲಿ ಸೂಚಿತವಾಗಿದೆ.

ಇಲ್ಲಿನ ಅಭಿಪ್ರಾಯವನ್ನು 'ಮಹಾಪುರಾಣ'ದ ಈ ಹೇಳಿಕೆ ಚೆನ್ನಾಗಿ ವಿಶದೀಕರಿಸುತ್ತದೆ :

ಕಿಂಚಿದ್ಧಿತಂ ಪ್ರಿಯಂ ಚೋಕ್ತಂ ಕಿಂಚಿಚ್ಚ ಹಿತಮಪ್ರಿಯಂ
ಕಿಂಚಿತ್ ಪ್ರಿಯಂ ಸದಹಿತಂ ಪರಂ ಚಾಹಿತಮಪ್ರಿಯಂ
ಅಂತ್ಯದ್ವಯಂ ಪರಿತ್ಯಜ್ಯ ಶೇಷಾಭ್ಯಾಂ ಭಾಷ್ಯತಾಂ ಹಿತಂ

ಇಲ್ಲಿ ನಾಲ್ಕು ವರ್ಗಗಳನ್ನು ಕಲ್ಪಿಸಲಾಗಿದೆಃ ಹಿತ ಮತ್ತು ಪ್ರಿಯ; ಹಿತ ಮತ್ತು ಅಪ್ರಿಯ; ಅಹಿತ ಮತ್ತು ಪ್ರಿಯ; ಅಹಿತ ಮತ್ತು ಅಪ್ರಿಯ. ಇವುಗಳಲ್ಲಿ ಕಡೆಯ ಎರಡನ್ನುಳಿದು, ಮಿಕ್ಕವನ್ನು ಹೇಳಬಹುದಂತೆ. ಎಂದರೆ ಹಿತಪ್ರಿಯ ಮತ್ತು ಹಿತಾಪ್ರಿಯ ಪೂಜ್ಯ; ಅಹಿತಪ್ರಿಯ ಮತ್ತು ಅಹಿತಾಪ್ರಿಯ ತ್ಯಾಜ್ಯ.

ಮನುಸ್ಮೃತಿಯಲ್ಲಿ 'ಸತ್ಯ' ಎಂದಿರುವುದನ್ನು ಮಹಾಪುರಾಣದಲ್ಲಿ 'ಹಿತ' ಎಂದಿದೆ; ಎರಡೂ ಅಭಿನ್ನ. ಇವು 'ಶಿವ' ಸಂಬಂಧಿಗಳು. 'ಪ್ರಿಯ'ವನ್ನು 'ಸುಂದರ' ಎಂದೂ ಕರೆಯಬಹುದು. ಸತ್ಯ, ಶಿವ, ಸೌಂದರ್ಯಗಳಲ್ಲಿ, ಮೊದಲಿನೆರಡು ಮೌಲ್ಯಗಳು ಭಾರತೀಯ ಆರ್ಷ ಪರಂಪರೆಯ ದೃಷ್ಟಿಯಿಂದ ಬಹಳ ಮಹತ್ವ ಪಡೆಯುತ್ತವೆ. ಮೂರರ ಸಮನ್ವಯ ಮಾನ್ಯ. ಕೇವಲ 'ಪ್ರಿಯ' ಅಥವಾ 'ಸುಂದರ' ಸಮ್ಮತವಾಗದು.

ಮಾತನ್ನು ಕುರಿತ ಈ ಹೇಳಿಕೆಗಳು ಕೃತಿಗೂ ಅನ್ವಯಿಸುತ್ತವೆ. ಹಾಗೆ ನೋಡಿದರೆ ಯಾವುದನ್ನು ಹೇಳಬೇಕು ಮತ್ತು ಯಾವುದನ್ನು ಬಿಡಬೇಕು ಎಂಬುದಕ್ಕಿಂತಲೂ ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಬಿಡಬೇಕು ಎಂಬುದು ಮುಖ್ಯ. ಹಿತಪ್ರಿಯಕ್ಕೆ ಪ್ರಥಮಸ್ಥಾನ; ಇದು ಉತ್ತಮ. (ಆದರೆ ಹಿತ, ಪ್ರಿಯಗಳು ಒಂದುಗೂಡುವುದು ವಿರಳ.) ಹಿತಾಪ್ರಿಯ ಮಧ್ಯಮ. ಅಹಿತ ಪ್ರಿಯ ಅಧಮ. ಅಹಿತಾಪ್ರಿಯವಂತೂ ಅಧಮಾಧಮ. ಒಟ್ಟಿನಲ್ಲಿ, ಹಿತ ಎಂದೂ ಮರೆಯತಕ್ಕದ್ದಲ್ಲ; ಹಿತವನ್ನೆ ಆಚರಿಸಬೇಕು ಹಾಗೂ ಆಡಬೇಕು. ಆಚರಣೆ ಸ್ವಂತ ಕಲ್ಯಾಣಕ್ಕಾಗಿ; ಆಡುವುದು ಇತರರ ಒಳಿತಿಗಾಗಿ. ಸತ್ಯದ, ಹಿತದ ಅನುಷ್ಠಾನದಲ್ಲಿ ಅಡಗಿದೆ, ಸರ್ವೋದಯ.

ಬದುಕಿನ ಎರಡು ಶಕ್ತಿಗಳು, ಶ್ರೇಯಸ್ಸು ಮತ್ತು ಪ್ರೇಯಸ್ಸು; ಮೊದಲನೆಯದು ಪ್ರಧಾನ. ಎರಡೂ ಒಂದಾದಾಗ, ಸಮಸ್ಯೆಯೇ ಇಲ್ಲ–ಪತ್ನಿಯೆ ಪ್ರೇಯಸಿಯೂ ಆದಾಗ ಹೇಗೊ ಹಾಗೆ! ಆದರೆ ಅದು ಅಸಂಭವನೀಯ.

ಜೇನುತುಪ್ಪದಂತೆ ಸವಿಯೂ ಔಷಧವೂ ಪುಷ್ಟಿಕಾರಕವೂ ಆದ ಪದಾರ್ಥಗಳು (ಹಿತಪ್ರಿಯ) ಅಪುರೂಪ. ಅವು ಯಾರಿಗೆ ಬೇಡ? ಅಧರಕ್ಕೆ ಕಹಿ, ಉದರಕ್ಕೆ ಸಿಹಿ ಎನಿಸುವ ವಸ್ತುಗಳೇ (ಹಿತಾಪ್ರಿಯ) ಹೆಚ್ಚು; ಅವೂ ಗ್ರಾಹ್ಯ. ಅಧರಕ್ಕೆ ಸಿಹಿಯಾಗಿ, ಉದರಕ್ಕೆ ಕಹಿಯಾಗುವ ವಸ್ತುಗಳು (ಅಹಿತಪ್ರಿಯ) ಅಪಾಯಕಾರಿ; ಅವುಗಳನ್ನು ದೂರವಿರಿಸಬೇಕು. ಆದರೆ ಲೋಕ ವಿಶೇಷವಾಗಿ ಬಲಿಬೀಳುವುದೇ ಈ ವರ್ಗಕ್ಕೆ. ಅಧರ, ಉದರ ಎರಡಕ್ಕೂ ಕಹಿಯಾದ ವಸ್ತುಗಳನ್ನು (ಅಹಿತಾಪ್ರಿಯ) ಸಾಮಾನ್ಯವಾಗಿ ಯಾರೂ ಪುರಸ್ಕರಿಸುವುದಿಲ್ಲ.

ಇಲ್ಲಿ ಧ್ರುವನ ಕತೆಯನ್ನು ಸ್ಮರಿಸಬೇಕು. ಧ್ರುವ ಸುನೀತಿಯ ಮಗ. ಅವನ ಮಲತಾಯಿ ಸುರುಚಿ. ಅವಳಿಂದಾಗಿ ಅವನು ಕಾಡಿಗೆ ಹೋಗಬೇಕಾಗುತ್ತದೆ. ಆದರೆ ಮುಂದೆ ಅವನು ತಪಸ್ಸಿನಿಂದ ಧ್ರುವ ಪದವಿಯನ್ನು ಪಡೆಯುತ್ತಾನೆ. ಸುರುಚಿಯಿಂದ–ಪ್ರಿಯದಿಂದ–ಒಳಿತಾಗದು; ಸುನೀತಿಯೇ ಶ್ರೇಯಸ್ಕರ, ಹಿತಕರ. ಸುನೀತಿಯನ್ನು–ಹಿತವನ್ನು–ತಾಯಾಗಿ ಉಳ್ಳವನು ಪುಣ್ಯ ಭಾಜನನಾಗಿ ಧ್ರುವನಕ್ಷತ್ರವಾಗುತ್ತಾನೆ; ಶಾಶ್ವತವಾಗಿ ಬೆಳಗುತ್ತಾನೆ.

■■

೩. ಅತೀತ ಸತ್ಯಗಳು

ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದ ಒಂದು ಸಣ್ಣ ದೃಷ್ಟಾಂತ ಕಥೆಯಿದು: “ಒಂದು ಬಾವಿಯಲ್ಲಿ ಒಂದು ಕಪ್ಪೆಯಿತ್ತು; ತನ್ನ ಬಾವಿಯೆ ಅದಕ್ಕೆ ಸರ್ವಸ್ವವಾಗಿತ್ತು. ಅದರ ಹೊರಗೆ ಜಗತ್ತುಂಟು ಎಂಬ ಕಲ್ಪನೆಯೆ ಆ ಕಪ್ಪೆಗಿರಲಿಲ್ಲ. ಒಂದು ಸಲ ಸಮುದ್ರದಿಂದ ಬಂದ ಕಪ್ಪೆಯೊಂದು ಬಾವಿಯ ಕಪ್ಪೆಯನ್ನು ಸಂಧಿಸಿ, ಸಮುದ್ರ ಆ ಬಾವಿಗಿಂತ ದೊಡ್ಡದೆಂದು ಬಣ್ಣಿಸಿತು. ಬಾವಿಯ ಕಪ್ಪೆಗೆ ಆಶ್ಚರ್ಯ. ಅದು ಬಾವಿಯ ಒಂದು ತುದಿಯಿಂದ ಇನ್ನೊಂದು ತುದಿಗೆ ಕುಪ್ಪಳಿಸಿ, ‘ಸಮುದ್ರ ಇಷ್ಟು ದೊಡ್ಡದೆ ?’ ಎಂದು ಕೇಳಿತು. ಸಮುದ್ರದ ಕಪ್ಪೆ ನಕ್ಕು ‘ಇದಕ್ಕಿಂತ ಎಷ್ಟೋ ಪಾಲು ದೊಡ್ಡದು !’ ಎಂದಿತು. ಬಾವಿಯ ಕಪ್ಪೆಗೆ ಕೋಪ ಬಂತು. ‘ನನ್ನ ಬಾವಿಗಿಂತ ಯಾವುದೂ ದೊಡ್ಡದಿರುವುದು ಸಾಧ್ಯವಿಲ್ಲ!’ ಎಂದು ಅದು ಅಬ್ಬರಿಸಿತು.”

ನಮ್ಮ ಭೌತ ಜಗತ್ತು ಮಾತ್ರವೆ ಸತ್ಯ, ಅದರಿಂದಾಚೆಗೆ ಏನೂ ಇರಲಾರದು ಎಂದು ಹಟ ಹಿಡಿಯುವ ಪ್ರವೃತ್ತಿಗೆ ಪ್ರತಿಮೆಯಾಗಿದೆ, ಈ ಕೂಪಮಂಡೂಕದ ಕತೆ. ನಮ್ಮ ಇಂದ್ರಿಯಗಳ ಅನುಭವಕ್ಕೆ ಬರದುದು ಯಾವುದೂ ಸತ್ಯವಲ್ಲ ಎಂಬುದು ಅನೇಕರ ನಿರ್ಧಾರ ; ವೈಜ್ಞಾನಿಕ ದೃಷ್ಟಿಯ ಒತ್ತಾಸೆ ಬೇರೆ ಅದಕ್ಕೆ. ಆದರೆ ಅತೀತ ಸತ್ಯಗಳ ಮಾತಿರಲಿ, ಎಷ್ಟೋ ಲೌಕಿಕ ವ್ಯಾವಹಾರಿಕ ಸತ್ಯಗಳೂ ನಮ್ಮ ಇಂದ್ರಿಯಗಳ ಅಳವಿನಾಚೆಗಿವೆ ಎಂಬುದನ್ನು ಗಮನಿಸಬೇಕು. ನಮ್ಮ ನಮ್ಮ ತಲೆಯಲ್ಲಿರುವ ಮೆದುಳನ್ನು, ಎದೆಯಲ್ಲಿರುವ ಹೃದಯವನ್ನು ನಾವು ಪ್ರತ್ಯಕ್ಷ ಕಂಡಿದ್ದೇವೆಯೆ ? ಆದರೆ, ಅವುಗಳ ಅಸ್ತಿತ್ವದ ಬಗ್ಗೆ ನಮಗೇನೂ ಅಪನಂಬಿಕೆ ಇಲ್ಲವಲ್ಲ ! ನಮ್ಮ ತಂದೆತಾಯಿಗಳಿಂದ ನಾವು ಬಂದೆವೆಂಬುದೂ ಹೀಗೆಯೆ. ಇಲ್ಲೆಲ್ಲ ಬೇರೆಯವರ ಮಾತುಗಳನ್ನು ನಾವು ನಂಬುತ್ತೇವೆ. ದೇವರ ವಿಷಯದಲ್ಲಿ, ಇಂದ್ರಿಯಾತೀತ ಸತ್ಯಗಳ ವಿಷಯದಲ್ಲಿ ಕೂಡ ಹೀಗೆಯೆ ಅನ್ಯರ ಅನುಭವಗಳನ್ನು ನಾವು ಆದರಿಸದಿರುವುದಕ್ಕೆ ಕಾರಣವೇನಿದೆ? ಬಾಹ್ಯ ಪ್ರಮಾಣಗಳಿಂದ ಸ್ಥಾಪಿಸಲಾಗದ, ತಾಳೆ ನೋಡಲಾಗದ ಅನುಭೂತಿಗಳೆಷ್ಟೋ ಉಂಟು. ಕಲೆ ತಕ್ಕ ಮಟ್ಟಿಗೆ ಅಂತಹುದು ; ಅಧ್ಯಾತ್ಮ ಅಂತಹುದು. ಅವು ಸ್ಥೂಲವಲ್ಲ, ಸೂಕ್ಷ್ಮ.

ವಿಜ್ಞಾನವೇನೂ ಅಧ್ಯಾತ್ಮ ವಿರೋಧಿಯಲ್ಲ; ನಮ್ಮ ಮುಷ್ಟಿಗೆ ಒಳಪಡದ ಎಷ್ಟೋ ನಿಗೂಢ ಸಂಗತಿಗಳಿವೆಯೆಂಬುದನ್ನು ದೊಡ್ಡ ದೊಡ್ಡ ವಿಜ್ಞಾನಿಗಳೂ ಒಪ್ಪಿದ್ದಾರೆ. ಈ ಸಂಬಂಧದಲ್ಲಿ, ಕವಿ ಪು.ತಿ.ನ. ಅವರು ಕೊಟ್ಟಿರುವ ಒಂದು ಉದಾಹರಣೆ ಸ್ವಾರಸ್ಯದ್ದಾಗಿದೆ. ಭೂಮಿ ಸ್ಥಿರವಾಗಿಲ್ಲ, ಸುತ್ತುತ್ತಿದೆ ಎಂಬುದು ವೈಜ್ಞಾನಿಕ ಸತ್ಯವಷ್ಟೆ. ಆದರೆ ಅದು ನಮ್ಮ ಇಂದ್ರಿಯಗಳ ಅರಿವಿಗೆ ಬಂದಿದೆಯೊ? ಅದು ಇಂದ್ರಿಯ ಗ್ರಾಹ್ಯವಾಗಿದ್ದರೆ, ನಾವು ನೆಟ್ಟಗೆ ನಿಲ್ಲಲಾರದೆ ಬಿದ್ದು ಉರುಳಾಡಬೇಕಿತ್ತಲ್ಲವೆ ?

ನಮ್ಮ ಇಂದ್ರಿಯಗಳ ಸಾಮರ್ಥ್ಯ ಪರಿಮಿತವಾದದ್ದು. ಅದನ್ನು ಮೀರಿ, ದೇವರೆಂಬ ಶಕ್ತಿಯಿದೆ; ಅನ್ಯಲೋಕಗಳಿವೆ, ಅಥವಾ ಈ ಲೋಕದವೇ ಅನೇಕ ಆಯಾಮಗಳಿವೆ; ಅವುಗಳ ಬಗೆಗೆ ಸಂತರು, ಋಷಿಗಳು, ಅನುಭಾವಿಗಳು ಯುಗಯುಗಗಳಿಂದಲೂ ಹೇಳಿದ್ದಾರೆ. ಸಾಧನೆಯ ಹಾದಿಯಲ್ಲಿ ಮುಂದೆ ಮುಂದೆ ಹೋದಂತೆ ಹೊಸ ಹೊಸ ಪ್ರಾಂತಗಳು, ಒಂದಕ್ಕಿಂತ ಮತ್ತೊಂದು ಸಮಧಿಕವಾಗಿ, ಶ್ರೀಮಂತವಾಗಿ ತೆರೆದುಕೊಳ್ಳುತ್ತವೆ. ಶ್ರೀ ರಾಮಕೃಷ್ಣರದೇ ಇನ್ನೊಂದು ದೃಷ್ಟಾಂತ ಕಥೆಯನ್ನು ನೋಡಬಹುದು: ''ಒಬ್ಬ ಕಟ್ಟಿಗೆ ಕಡಿಯುವವನಿದ್ದ. ಅವನಿಗೆ ಕಾಡಿನಲ್ಲೊಮ್ಮೆ ಒಬ್ಬ ಮಹಾತ್ಮ ಸಿಕ್ಕಿ 'ಮುಂದೆ ಹೋಗು' ಎಂದು ಆದೇಶಿಸಿದ. ಅದರಂತೆ ಕಟ್ಟಿಗೆಕಾರ ಸ್ವಲ್ಪ ದೂರ ಮುಂದೆ ಹೋದ; ಅಲ್ಲಿ ಅವನಿಗೆ ಗಂಧದ ಮರಗಳು ಸಿಕ್ಕಿದುವು. ಅವುಗಳಿಂದ ಅವನು ಸಿರಿವಂತನಾದ. ಮಹಾತ್ಮನ ಮಾತನ್ನು ನೆನೆದು ಅವನು ಇನ್ನೂ ದೂರ ಮುಂದೆ ಹೋದ; ಬೆಳ್ಳಿಯ ಗಣಿಯೇ ಅವನಿಗೆ ದೊರಕಿತು. ಅದರಿಂದ ಅವನು ಮತ್ತಷ್ಟು ಧನಿಕನಾದ. ಮಹಾತ್ಮನ ಮಾತನ್ನು ಜ್ಞಾಪಿಸಿಕೊಂಡು ಅವನು ಮತ್ತೂ ಮುಂದೆ ಹೋದಾಗ, ಚಿನ್ನದ ಗಣಿಯನ್ನು ಕಂಡ. ಅದರಿಂದ ಅವನ ಸಂಪತ್ತು ಹೆಚ್ಚಿತು. ಇನ್ನೂ ಮುಂದುವರಿದಾಗ ವಜ್ರದ ಗಣಿಯನ್ನು ಕಂಡ ; ಕುಬೇರನಾದ.''

ಕೂಪಮಂಡೂಕ ಮತಿ ಯಾವ ಕ್ಷೇತ್ರದಲ್ಲೂ ಸಲ್ಲದು; ವ್ಯಾವಹಾರಿಕ ಜಗತ್ತಿನಲ್ಲಿ ಹೇಗೊ ಹಾಗೆ ಅದರಾಚೆಯ ಜಗತ್ತಿನ ವಿಷಯದಲ್ಲೂ ಅದು ತ್ಯಾಜ್ಯ. ಹೊರಗಣ್ಣಿಗೆ ಕಾಣದ ವಸ್ತುಗಳುಂಟು; ಹೊರಗಿವಿಗೆ ಕೇಳದ ದನಿಗಳುಂಟು. ಆ ಕಾರಣದಿಂದಲೇ ಅವು ಸತ್ಯತರ. ಪಾರ್ಥಿವ ಜಗತ್ತೆ ಪರಮಾರ್ಥವಲ್ಲ. ಪಾರಮಾರ್ಥಿಕ ಭೂಮಿಕೆಯನ್ನು ನಂಬುವುದು ಸಾಧ್ಯವಾಗದಿದ್ದರೆ, ಕಡೆಯ ಪಕ್ಷ 'ಇದ್ದರೂ ಇರಬಹುದು' ಎಂಬ ಸಂದೇಹದ ನಿಲುವಾದರೂ ಲೇಸು. ಬುದ್ಧಿಯನ್ನು ಮೀರಿದ ಸಿದ್ಧಿಗಳಿಲ್ಲವೆ, ವಿಜ್ಞಾನದಲ್ಲಿ ಕೂಡ ?

■■

೪. ಸ್ವದೋಷ ದರ್ಶನ

ಲೋಕದಲ್ಲಿ ಯಾರೂ ಪರಿಪೂರ್ಣರಲ್ಲ; ನೂರಕ್ಕೆ ನೂರರಷ್ಟು ನಿರ್ದುಷ್ಟರಲ್ಲ. ಎಂತಹ ಮಹಾತ್ಮರಲ್ಲೂ ದೋಷ, ದೌರ್ಬಲ್ಯಗಳು ಕಿಂಚಿತ್ ಪ್ರಮಾಣದಲ್ಲಾದರೂ ಇರುತ್ತವೆ. ಸಾಮಾನ್ಯ ಮನುಷ್ಯರ ಮಾತಿರಲಿ, ಭಗವಂತನೆ ಮನುಷ್ಯರೂಪದಲ್ಲಿ ಅವತರಿಸಿದಾಗಲೂ ಮಾನವ ಸಹಜ ದೌರ್ಬಲ್ಯಗಳಿಂದ ಸಂಪೂರ್ಣ ಪಾರಾಗುವುದು ಸಾಧ್ಯವಿಲ್ಲವೆಂದು ತೋರುತ್ತದೆ.

ಶ್ರೀ ರಾಮನೊಬ್ಬ ಅವತಾರಪುರುಷ ತಾನೆ. ಅವನಿಗೆ ವಾಲ್ಮೀಕಿಗಳು ರಾಮಾಯಣದ ಆರಂಭದಲ್ಲಿ ''ಸ್ವದೋಷ ಪರದೋಷವಿತ್'' (ತನ್ನ ಮತ್ತು ಪರರ ದೋಷಗಳನ್ನು ಬಲ್ಲವನು) ಎಂಬ ವಿಶೇಷಣಗಳನ್ನು ಹಚ್ಚಿರುವುದು ಅತ್ಯಂತ ಗಮನಾರ್ಹವಾಗಿದೆ. ರಾಮ ತನ್ನ ದೋಷಗಳನ್ನು ಬಲ್ಲವನಾಗಿದ್ದನಂತೆ. ಎಂದರೆ, ಅವನಲ್ಲೂ ದೋಷಗಳಿದ್ದುವೆಂಬುದು ಸಿದ್ಧವಾಯಿತು. ಆದರೆ ಅವು ಬಹುಶಃ ಬೇರೆಯವರ ಅರಿವಿಗೆ ಬರದಷ್ಟು ಸಣ್ಣ ಪುಟ್ಟವಿರಬೇಕು.

'ಪರದೋಷವಿತ್' ಆಗುವುದೇನೂ ದೊಡ್ಡದಲ್ಲ. ಜಗತ್ತಿನಲ್ಲಿ ಬಹುಮಂದಿ ಇಂಥ 'ಜ್ಞಾನಿ'ಗಳೇ ! (ಇಲ್ಲದ ದೋಷಗಳನ್ನೂ ಕಾಣಬಲ್ಲ ದಿವ್ಯದೃಷ್ಟಿ ಕೆಲವರದು!) ಆದರೆ ಸ್ವದೋಷದರ್ಶನ ಮಹಾಪುರುಷರ ಲಕ್ಷಣ. ಅವರು ಸದಾ ಆತ್ಮಪರೀಕ್ಷೆಯಲ್ಲಿ ತೊಡಗಿರುತ್ತಾರೆ; ಇತರರಿಗೆ ಗೋಚರಿಸದಿರಬಹುದಾದ ದೌರ್ಬಲ್ಯಗಳನ್ನು ತಮ್ಮಲ್ಲಿ ಕಂಡುಕೊಳ್ಳುತ್ತಾರೆ. ಮಾತ್ರವಲ್ಲ, ಅವುಗಳ ನಿವಾರಣೆಗೆ ಸತತ ಪ್ರಯತ್ನಶೀಲ ರಾಗುತ್ತಾರೆ. ಅವರು ದೊಡ್ಡವರಾಗಿರುವುದಕ್ಕೆ ಇದೂ ಒಂದು ಕಾರಣವೆನ್ನಬೇಕು.

ಸಾಮಾನ್ಯರಲ್ಲಿ ಡೊಂಕುಗಳು ಬೇಕಾದಷ್ಟಿರುತ್ತವೆ; ಅವುಗಳ ಅರಿವೇ ಅವರಿಗಿರುವುದಿಲ್ಲ. ಇತರರ ಡೊಂಕುಗಳನ್ನು ಎಣಿಸುವುದರಲ್ಲಿ ಅವರು ಯಾವಾಗಲೂ ಆಸಕ್ತರು. ದೊಡ್ಡವರಲ್ಲೂ ಕೆಲವು ಕುಂದುಗಳಿರುತ್ತವೆ; ಅವುಗಳ ಅರಿವು ಅವರಿಗಿದ್ದು, ಅವುಗಳನ್ನು ಹೋಗಲಾಡಿಸಿಕೊಳ್ಳುವುದರ ಕಡೆಗೆ ನಿಗಾ ವಹಿಸುತ್ತಾರೆ. ಇತರರ ಲೋಪದೋಷಗಳ ಅರಿವು ಅವರಿಗಿರುವುದಿಲ್ಲವೆಂದಲ್ಲ; ಆದರೆ ಗುಣಗಳಿಗೆ ಹೆಚ್ಚು ಲಕ್ಷ್ಯ ಕೊಡುತ್ತಾರೆ. (ಚಿಕಿತ್ಸೆ ಮಾಡಬೇಕಾದರೆ ವ್ಯಾಧಿಯ ತಿಳಿವೂ ಇರಲೇಬೇಕಲ್ಲವೆ?)

ಬಸವಣ್ಣನವರು ಮಹಾನುಭಾವರಾಗಿಯೂ ''ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯಾ'' ಎಂದು ಗೋಗರೆದುದು ಇಂಥ 'ಸ್ವದೋಷವಿತ್' ಪ್ರವೃತ್ತಿಯಿಂದಲೇ; ಲೋಕ ಕೊಂಡಾಡಿದಾಗ ''ಎನ್ನವರೆನ್ನ ಹೊಗಳಿ ಹೊಗಳಿ ಹೊನ್ನ ಶೂಲದಲಿಕ್ಕಿದರು'' ಎಂದು ಅವರು ನೊಂದುಕೊಳ್ಳುವುದು ಈ ಸ್ವದೌರ್ಬಲ್ಯಪ್ರಜ್ಞೆಯಿಂದಲೇ. ರಾಮನಾಗಲಿ ಬಸವನಾಗಲಿ ಮತ್ತಾವ ಮಹಾತ್ಮನೆ ಆಗಲಿ ಲೋಕದ ತಪ್ಪನ್ನು ತಿದ್ದುವ

ಕೆಲಸಕ್ಕೆ ಕೈಹಾಕುವ ಮುನ್ನ ತಮ್ಮ ಸ್ವಂತ ತಪ್ಪು ತಡೆಗಳನ್ನು ಪರಿಹರಿಸಿಕೊಳ್ಳಲು ಹೆಣಗಿದರು. ಆ ಹೋರಾಟದಿಂದಲೆ ಅವರು ನಮಗೆ ಮಾನವೀಯವಾಗಿ ಕಾಣತಕ್ಕದ್ದು; ಏಕಕಾಲಕ್ಕೆ ಆತ್ಮೀಯರೂ ಅನುಕರಣೀಯರೂ ಆಗಿರತಕ್ಕದ್ದು.

ವೈಯಕ್ತಿಕ ಮತ್ತು ಸಾಮಾಜಿಕ ಅವಗುಣಗಳನ್ನು ಅರಿತುಕೊಳ್ಳುವುದು, ಮೊದಲು ಸ್ವಂತ ಅವಗುಣಗಳನ್ನು ನೀಗಿಕೊಂಡು, ಆಮೇಲೆ ಸಮಾಜದ ಅವಗುಣಗಳ ವಿರುದ್ಧ ಹೋರಾಡುವುದು – ಇದು ದೊಡ್ಡವರ ದಾರಿ. ಸಾಧನೆಯಿಲ್ಲದೆ ಸಿದ್ಧಿಯಿಲ್ಲ. ಅವತಾರಗಳೂ ಒಂದರ್ಥದಲ್ಲಿ ಉದ್ಧಾರಗಳೇ.

■■

೫. ಗುರು-ಶಿಷ್ಯ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ

(ಅಜ್ಞಾನದ ಕತ್ತಲಿಂದ ಕುರುಡಾದ ಕಣ್ಣುಗಳನ್ನು ಜ್ಞಾನಾಂಜನ ಶಲಾಕೆಯಿಂದ ತೆರೆಯಿಸಿದ ಶ್ರೀಗುರುವಿಗೆ ನಮಸ್ಕಾರ.)

ಭಾರತೀಯ ಪರಂಪರೆಯಲ್ಲಿ ಗುರುವಿನ ಸ್ಥಾನ ಬಹಳ ದೊಡ್ಡದು. ಗುರುವೆಂದರೆ ವಿದ್ಯೆ ಕಲಿಸುವ ಉಪಾಧ್ಯಾಯನಾಗಬಹುದು ; ಲೋಕಗುರುವಾದ ಭಗವಂತನೂ ಆಗಬಹುದು. ಇಬ್ಬರೂ ವಂದ್ಯರೇ. ''ಆಚಾರ್ಯದೇವೋ ಭವ''– ಆದ್ದರಿಂದ, ಗುರುವಿಗೂ ದೇವರಿಗೂ ಭೇದವಿಲ್ಲ.

ಗುರು–ಶಿಷ್ಯ ಪರಂಪರೆ ಭರತಖಂಡದ ಸಂಸ್ಕೃತಿಯ ಒಂದು ವೈಶಿಷ್ಟ್ಯವೆಂದು ಹೇಳಲಾಗಿದೆ. ಗುರು–ಶಿಷ್ಯರು ಎರಡು ಪೀಳಿಗೆಗಳ ಪ್ರತೀಕಗಳು; ಗುರು ಹಿರಿಯ ಪೀಳಿಗೆಯನ್ನು, ಶಿಷ್ಯ ಕಿರಿಯ ಪೀಳಿಗೆಯನ್ನು ಪ್ರತಿನಿಧಿಸುತ್ತಾನೆ. ಎರಡರ ಅವಿನಾಭಾವ ಸಮನ್ವಯದಿಂದ ಜನಜೀವನದ ಅಖಂಡತೆ ಮತ್ತು ಸಾತತ್ಯ ಸಾಧಿತವಾಗುತ್ತವೆ. ಗುರುಮುಖದಿಂದ ಬರದ ವಿದ್ಯೆ ವಿದ್ಯೆಯಲ್ಲ, ಭಾರತೀಯರ ಪ್ರಕಾರ. ''ವಿದ್ಯೆಯ ಕಲಿಸಯ್ಯ ಹಿರಿಯರ ಕೂಡ'' ಎಂಬುದು ಜಾನಪದರ ಪ್ರಾರ್ಥನೆಯೂ ಅಹುದು.

'ಗುರು'ಎಂದರೆ ಭಾರವಾದುದು, ಸತ್ತ್ವಗರ್ಭಿತವಾದುದು ಎಂದರ್ಥ. ಗುರುವೆನಿಸಿದವನು ಇದನ್ನರಿತುಕೊಂಡು, ಗೌರವ ಸಂಪಾದಿಸಬೇಕು ; ಹಗುರವಾಗಬಾರದು. ''ಶಿಷ್ಯಾದಿಚ್ಛೇತ್ ಪರಾಜಯಂ'' (ಶಿಷ್ಯನಿಂದ ಸೋಲನ್ನು ಬಯಸಬೇಕು) ಎಂಬ ಆರ್ಷ ಸೂಕ್ತಿಯನ್ನೂ ಅವನು ನೆನಪಿನಲ್ಲಿಡಬೇಕು. ತನ್ನ ಶಿಷ್ಯ ತನಗಿಂತ ಮುಂದೆ ಹೋದಾಗ, ಬೆಳೆದಾಗ ಗುರು ಕರುಬದೆ, ಹೆಮ್ಮೆಪಡಬೇಕು ; ಶಿಷ್ಯನಿಂದ ಕಲಿಯಬಹುದಾದುದೇನಾದರೂ ಇದ್ದರೆ ಅದನ್ನು ಮುಕ್ತಮನದಿಂದ ಕಲಿಯಲೂ ಅವನು ಸಿದ್ಧನಿರಬೇಕು. ಇನ್ನು, ಶಿಷ್ಯನಾದವನು ಗುರುವನ್ನು ಸೋಲಿಸುವ ಗುರಿಯನ್ನಿಟ್ಟುಕೊಂಡಿರಬೇಕು; ದೇಹಬಲದಲ್ಲೊ ಐಶ್ವರ್ಯದಲ್ಲೊ ಮತ್ತೊಂದರಲ್ಲೊ ಅಲ್ಲ, ಗುರುವಿನಿಂದ ಏನನ್ನು ಕಲಿತನೊ ಅದರಲ್ಲಿ. ಹಾಗೆ ಗುರುವನ್ನು ವಿದ್ಯೆಯಲ್ಲಿ ಮೀರಿಸಿದಾಗ, ಅವನು ಅಹಂಕಾರ ಪಡದೆ, ತನ್ನ ಬೆಳವಣಿಗೆಗೆ ಗುರುವೆ ಕಾರಣನೆಂಬ ತಿಳಿವಳಿಕೆಯಿಂದ ವಿನೀತನಾಗಿರಬೇಕು.

ಗುರು–ಶಿಷ್ಯರಲ್ಲಿ ವೈಮನಸ್ಯವುಂಟಾಗುವುದಕ್ಕೆ ಅನೇಕ ಕಾರಣಗಳಿದ್ದಾವು ; ''ಶಿಷ್ಯಾದಿಚ್ಛೇತ್ ಪರಾಜಯಂ'' ಎಂಬುದರ ಹಿನ್ನೆಲೆಯಲ್ಲೆ ವಿರಸವುಂಟಾಗಲೂ ಬಹುದು. ಆದ್ದರಿಂದಲೇ ಉಪನಿಷತ್ತಿನ ಋಷಿ ಶಿಷ್ಯರನ್ನು ಕುರಿತು ''ಮಾ ವಿದ್ವಿಷಾವಹೈ'' (ನಮ್ಮಲ್ಲಿ ದ್ವೇಷವಿಲ್ಲದಿರಲಿ)ಎಂದು ಹೇಳಿದ್ದು.

ನಿಜವಾದ ಗುರು, ನಿಜವಾದ ಶಿಷ್ಯ ಇಂದು ವಿರಳವಾಗುತ್ತಿದ್ದಾರೆ. ಗುರುಶಿಷ್ಯ ಸಂಬಂಧದಲ್ಲಿ ಬಿರುಕುಗಳುಂಟಾಗಿ ದಿನೇ ದಿನೇ ಅಗಲವಾಗುತ್ತಿವೆ. ಮೌಲ್ಯಕ್ಷಯದ ಈ ದಿನಗಳಲ್ಲಿ ಗುರು ಶಿಷ್ಯರಿಬ್ಬರೂ ಈ ಅಂಶಗಳನ್ನು ಮನದಂದು, ಹಾರೈಸಬೇಕಾಗಿದೆ :

ತೇಜಸ್ವಿಯಾಗಿರಲಿ ನಾವು ಓದುವ ಓದು;
ವಿದ್ವೇಷವೆಮ್ಮೊಳಗೆ ಇಲ್ಲದಿರಲಿ !

■■

೬. ಯುಗಧರ್ಮ

"ರಾಜಕೀಯದ ಸ್ಥಾನದಲ್ಲಿ ಅಧ್ಯಾತ್ಮ ನೆಲೆಗೊಳ್ಳಬೇಕು" ಎಂಬುದು ಆಚಾರ್ಯ ವಿನೋಬಾ ಭಾವೆ ಅವರ ಒಂದು ಮಾತು. ಇದು ಇಂದಿನ ಯುಗಧರ್ಮವನ್ನೆ ಕನ್ನಡಿಸುವಂಥದು. ಅವರ ಆಶಯ ಸಂಪೂರ್ಣವಾಗಿ ಈಡೇರದಿದ್ದರೂ ದೇಶ–ಅಷ್ಟೇಕೆ, ಜಗತ್ತು– ಆ ಹಾದಿಯಲ್ಲಿದೆ ಎನ್ನಲು ಅಡ್ಡಿಯಿಲ್ಲ.

ಎಲ್ಲೆಡೆಯೂ, ಎಲ್ಲ ರಂಗಗಳಲ್ಲಿಯೂ ರಾಜಕೀಯವೆ ಈ ಹೊತ್ತು ತಾಂಡವವಾಡುತ್ತಿರುವಾಗ, ಅಧ್ಯಾತ್ಮ ಹೇಗೆ ನೆಲೆ ಗೊಂಡೀತು, ಇಂಥ ಹಾರೈಕೆ ಭ್ರಮಾಜನ್ಯವಲ್ಲವೆ ಎಂಬ ಪ್ರಶ್ನೆ ಮೊದಲೇ ಹುಟ್ಟದಿರದು. ಮೇಲುನೋಟಕ್ಕೆ, ರಾಜಕೀಯವೆ ವಿಜೃಂಭಿಸುತ್ತಿರುವ ಚಿತ್ರ ಕಾಣುತ್ತದೆ, ದಿಟ. ಆದರೆ ಸೂಕ್ಷ್ಮವೂ ದೂರಗಾಮಿಯೂ ಆದ ದೃಷ್ಟಿಗೆ ಗೋಚರಿಸುತ್ತದೆ, ಅದರ ಹಿಂದೆ ಸುಪ್ತಾಸುಪ್ತವಾಗಿ ಕೆಲಸಮಾಡುತ್ತಿರುವ ಆಧ್ಯಾತ್ಮಿಕ ಶಕ್ತಿ. ಪೂರ್ಣಪ್ರಜ್ಞೆಗೆ ಅದು ಅಗ್ರಾಹ್ಯವಾಗಲಾರದು.

ಇಲ್ಲಿ ರಾಜಕೀಯ, ಅಧ್ಯಾತ್ಮ ಎಂಬ ನುಡಿಗಳ ಅರ್ಥವನ್ನು ವಿಶದಗೊಳಿಸಿ ಕೊಳ್ಳಬೇಕು. ರಾಜಕೀಯಕ್ಕೆ ಒಳ್ಳೆಯ ಅರ್ಥವೂ ಉಂಟು. (ಗಾಂಧಿಯೊಬ್ಬ ರಾಜಕೀಯ ವ್ಯಕ್ತಿಯೆ ಅಲ್ಲವೆ?) ಆದರೂ ಇಂದು ಅದು ಅಧಿಕಾರಲಾಲಸೆ, ಸ್ವಾರ್ಥ ಮುಂತಾದ ಅನಿಷ್ಟಗಳಿಗೆ ಸಂಕೇತವಾಗಿ ಪರಿಣಮಿಸಿದೆ. ಈ ಅರ್ಥದಲ್ಲಿ ರಾಜಕೀಯ ತೊಲಗಬೇಕಾಗಿದೆ. ಇನ್ನು, ಅಧ್ಯಾತ್ಮ ಅದನ್ನು ನಾವು ಅದ್ವೈತ, ಬ್ರಹ್ಮಸಾಕ್ಷಾತ್ಕಾರ, ನಿರ್ವಿಕಲ್ಪ ಸಮಾಧಿ ಎಂಬ ಅತೀತಾರ್ಥಗಳಲ್ಲಿ ತೆಗೆದುಕೊಳ್ಳದೆ, ಲೌಕಿಕವಾದ ಅರ್ಥದಲ್ಲಿ ಪರಿಭಾವಿಸಬೇಕಾಗುತ್ತದೆ. ಮಾನವೀಯತೆ, ಸೌಹಾರ್ದ, ಸಮಷ್ಟಿ ಹಿತದೃಷ್ಟಿ, ಇತರರೂ ನಮ್ಮಂತೆಯೆ ಎಂದು ತಿಳಿಯುವ ಔದಾರ್ಯ, ಸಮತ್ವದ ಭಾವನೆ (ಇದೂ ಅದ್ವೈತವೆ)– ಇದೆಲ್ಲ ಅಧ್ಯಾತ್ಮವಲ್ಲದೆ ಮತ್ತೇನು? ಜನಾರ್ದನನ ಬದಲು ಜನತೆ ನಮ್ಮ ಲಕ್ಷ್ಯವಾಗಬೇಕು, ಅಥವಾ ಜನತೆಯ ಸೇವೆಯ ಮೂಲಕವೆ ಜನಾರ್ದನನ ಸೇವೆ ಮಾಡಬೇಕು–ಇದು ಇಂದಿನ ಆದರ್ಶ. ಇದನ್ನೆಲ್ಲ 'ಸರ್ವೋದಯ' ಎಂಬ ಒಂದು ಮಾತಿನಲ್ಲಿ ಸಂಗ್ರಹಿಸಬಹುದು. ಪ್ರಜಾಪ್ರಭುತ್ವ ಎಷ್ಟೇ ದುರು ಪಯೋಗಗೊಂಡರೂ ಅಂತಿಮವಾಗಿ ಸರ್ವೋದಯದಲ್ಲಿ ಪರ್ಯವಸಾನಗೊಳ್ಳಲೇಬೇಕು.

ಸಮಾಜದ ದುರ್ಬಲ ವರ್ಗಗಳು ಇಂದು ಮುಂದೆ ಬರುತ್ತಿವೆ; ಅವುಗಳನ್ನು ಹಿಂದಿನಂತೆ ತುಳಿಯುವುದು ಸಾಧ್ಯವಿಲ್ಲ. ಆ ವರ್ಗಗಳಿಗೆ ಕಾನೂನಿನ ರಕ್ಷಣೆಯಿದೆ. ಉದಾಹರಣೆಗೆ, ಅಸ್ಪೃಶ್ಯತೆಯ ಸಾರ್ವಜನಿಕ ಆಚರಣೆ ಇಂದು ಅಶಕ್ಯ. ಆದ್ದರಿಂದ, ಬಹು ಸಂಖ್ಯಾತ ಪ್ರಬಲ ವರ್ಗಗಳು ಅನಿವಾರ್ಯವಾಗಿ, ಒಂದು ವೇಳೆ ಮನಸ್ಸಿಲ್ಲ ದಿದ್ದರೂ, ಅಲ್ಪಸಂಖ್ಯಾತ ದುರ್ಬಲ ದಲಿತ ವರ್ಗಗಳ ಏಳಿಗೆಗೆ ಅವಕಾಶ

ಮಾಡಿಕೊಡಬೇಕಾಗಿದೆ ಮಾತ್ರವಲ್ಲ, ನೆರವಾಗಬೇಕಾಗಿದೆ. ಇದು ಈ ಯುಗದ ಒತ್ತಡ. ಕವಿವಾಣಿ ಸಾರುವಂತೆ, ''ಇನ್ನಾಯಿತು ಓರ್ಲೊರ್ವರ ಗರ್ವದ ಕಾಲ, ಇದು ಸರ್ವರ ಕಾಲ!'' ಈ ಸಮಷ್ಟಿಪ್ರಜ್ಞೆಯಲ್ಲಿ ಆಧ್ಯಾತ್ಮಿಕ ಸ್ಫುರಣವಿದೆ. ಇಂದಲ್ಲ ನಾಳೆ ಕ್ಷುಲ್ಲಕ ರಾಜಕೀಯ ಹಿಂಜರಿದು, ಪ್ರಬುದ್ಧ ರಾಜಕಾರಣ ಬೇರೂರಿ, ಸರ್ವೋದಯ ಸಿದ್ಧಿಸದಿರದು. ಈ ಪರಿವರ್ತನೆಯ ಚಕ್ರವನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ; ಬೇಕಾದರೆ, ಅದನ್ನು ತ್ವರಿತಗೊಳಿಸಬಹುದಷ್ಟೆ.

ಸದ್ಯಕ್ಕಂತೂ ರಾಜಕೀಯವೊಂದೆ ಸಾರ್ವಭೌಮ (ಅಪ) ಮೌಲ್ಯವಾಗಿ ಮೆರೆಯುವಂತೆ ತೋರುತ್ತಿದೆ. ಅದನ್ನು ಆದಷ್ಟು ಬೇಗ ಪದಚ್ಯುತಿಗೊಳಿಸಿ, ಅದರ ಸ್ಥಾನದಲ್ಲಿ ಉನ್ನತ ಮೌಲ್ಯಗಳನ್ನು – ಅವು ಸಾಹಿತ್ಯಕವಾಗಬಹುದು, ಸಾಂಸ್ಕೃತಿಕವಾಗಬಹುದು, ಆಧ್ಯಾತ್ಮಿಕವಾಗಬಹುದು – ಪ್ರತಿಷ್ಠಾಪಿಸುವುದು ಪ್ರಜ್ಞಾವಂತರೆಲ್ಲರ ಕರ್ತವ್ಯವಾಗಿದೆ. ರಾಜಕೀಯ ಕನಿಷ್ಠವಾದದ್ದು, ಅಧ್ಯಾತ್ಮ ವರಿಷ್ಠವಾದದ್ದು. ಈ ತುದಿಯಿಂದ ಆ ತುದಿಗೆ ಏರುವುದು ಎಲ್ಲರ ಆದರ್ಶವಾಗಲಿ ; ಪ್ರತಿಜ್ಞೆಯಾಗಲಿ. ಇದು ಯುಗ ವಾಣಿಯ ಕರೆ.

■■

೭. 'ಕುರ್ವನ್ನೇವೇಹ ಕರ್ಮಾಣಿ...'

''ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'' (ಕರ್ಮ ಮಾಡುತ್ತಲೆ ಇಹದಲ್ಲಿ ನೂರು ವರ್ಷ ಬದುಕೋಣ) ಎಂಬುದು ಉಪನಿಷತ್ತಿನ ಒಂದು ಉಕ್ತಿ. ಇದರ ಅರ್ಥಪರಿಧಿ, ಪರಿಭಾವಿಸಿದಷ್ಟೂ ಹಿಗ್ಗುತ್ತದೆ. ಇದೊಂದು ಸಾರ್ವಕಾಲೀನವಾದ ಸಂದೇಶವಾದರೂ, ಇಂದಿನ ನಮ್ಮ ರಾಷ್ಟ್ರಕ್ಕೆ ಅತ್ಯಂತ ಪ್ರಸ್ತುತವಾದದ್ದು.

ಮೊದಲನೆಯದಾಗಿ ಇದರಲ್ಲಿ ನಮ್ಮ ಗಮನ ಸೆಳೆಯತಕ್ಕದ್ದು ಅದಮ್ಯವಾದ ಜೀವನೋತ್ಸಾಹ ; ನೂರು ವರ್ಷ ಬದುಕೋಣ ಎಂಬ ಹುಮ್ಮಸ್ಸು. ನಮ್ಮ ದೇಶದ ಈ ಹೊತ್ತಿನ ಪರಿಸ್ಥಿತಿಯಲ್ಲಿ ಇಂಥ ಉತ್ಸಾಹಕ್ಕೆ ಅವಕಾಶವಿದೆಯೆ? ಎಲ್ಲ ಮುಖಗಳಲ್ಲೂ ಬದುಕು ದುರ್ಭರವಾಗಿದೆ; ಆದಷ್ಟು ಬೇಗ 'ಕಂತೆ ಒಗೆ'ಯುವುದು ಲೇಸು ಎಂಬ ವಿಷಣ್ಣ ಭಾವನೆ ಬಹುಮಂದಿಯಲ್ಲಿ ಬೆಳೆಯುತ್ತಿದೆ. ಈ ನಿರುತ್ಸಾಹ, ನಿರ್ವೇದಗಳನ್ನು ಹೊಡೆದೋಡಿಸಬಲ್ಲುದು, ಉಪನಿಷದ್ವಾಣಿ.

ಆದರೆ ನೂರು ವರ್ಷ ಬದುಕೋಣ ಎಂದು ಸಂಕಲ್ಪಿಸಿಬಿಟ್ಟರೆ ಸಾಕೆ? ಅದರ ಸಾಧ್ಯತೆಯನ್ನೂ ಕುರಿತು ಯೋಚಿಸಬೇಕಷ್ಟೆ. ಅಲ್ಲದೆ, ನೂರು ವರ್ಷ ಹೇಗೋ ಬದುಕಿದರೆ ಪ್ರಯೋಜನವಿಲ್ಲ. ಸಾರ್ಥಕ ರೀತಿಯಲ್ಲಿ ಬದುಕಬೇಡವೆ? ಈ ಪ್ರಶ್ನೆಗಳಿಗೆ 'ಕುರ್ವನ್ನೇವೇಹ ಕರ್ಮಾಣಿ' ಎಂಬಲ್ಲಿ ಉತ್ತರವಿದೆ. ಕರ್ಮ ಮಾಡುತ್ತ ಮಾಡುತ್ತ ನೂರು ವರ್ಷ ಬದುಕಬೇಕು; ಅದು ಸಾರ್ಥಕ ಜೀವನ.

ನಮ್ಮ ನಾಡಿನ ಇಂದಿನ ಸಮಸ್ಯೆ ಸಂಕಷ್ಟಗಳಿಗೆ ಒಂದು ಮುಖ್ಯ ಕಾರಣವೆಂದರೆ, ಜನರಲ್ಲಿ ಕೆಲಸಮಾಡುವ–ಕಷ್ಟಪಟ್ಟು ಕೆಲಸ ಮಾಡುವ–ಪ್ರವೃತ್ತಿ ಕಡಿಮೆ ಯಾಗುತ್ತಿರುವುದು. ''ಕಾಯಕವೆ ಕೈಲಾಸ'' ಎಂಬ ಮಾತು ಈಗ ಬೆಲೆ ಕಳೆದು ಕೊಂಡಿದೆ. ದುಡಿಯದೆ ಸುಖಪಡಬೇಕು ಎಂಬ ಭಾವನೆ ಎಲ್ಲೆಡೆ ಪ್ರಬಲಿಸುತ್ತಿದೆ. ರಾಷ್ಟ್ರಜೀವನ ಅಸಹನೀಯವಾಗಿ ಪರಿಣಮಿಸುತ್ತಿರುವುದು ಇದರ ಫಲವಾಗಿಯೆ. ಜಪಾನ್ ಅಮೆರಿಕಗಳಂಥ ದೇಶಗಳ ಸ್ವರ್ಗೀಯ ಪರಿಸ್ಥಿತಿಗೆ– ಈ ವಿಶೇಷಣ ತೌಲನಿಕವಾಗಿಯಾದರೂ ಸಮರ್ಥನೀಯ – ಕಾರಣ, ಅಲ್ಲಿನ ಜನತೆಯ ಕಾಯಕ ಪ್ರವೃತ್ತಿ; ಪ್ರಾಮಾಣಿಕವಾದ ದುಡಿಮೆಯ ಜಾಯಮಾನ. ಅಲ್ಲಿ, ನೂರು ವರ್ಷ ಬದುಕುವುದು ಸುಖಕರ ಎನ್ನುವಂಥ ಪರಿಸ್ಥಿತಿಯಿರುವುದು ಅಚ್ಚರಿಯಲ್ಲ. ನಮ್ಮಲ್ಲಾದರೆ, ದೀರ್ಘವಾದ ಬಾಳೊಂದು ಗೋಳು ಅಥವಾ ಶಿಕ್ಷೆ ಎನಿಸದಿರದು.

ಇನ್ನೂ ಒಂದು ದೃಷ್ಟಿಯಿಂದ ಕರ್ಮಪ್ರಸಕ್ತಿಗೂ ನಿಡು ಬಾಳಿಗೂ ನಿಕಟ ಸಂಬಂಧವುಂಟು. ಕಷ್ಟಪಟ್ಟು ಕೆಲಸಮಾಡುವುದು ಆರೋಗ್ಯಕ್ಕೆ ಒಳ್ಳೆಯದೆಂಬುದು

ನಿರ್ವಿವಾದ ಸಂಗತಿ. ಆಲಸ್ಯದ ಆರಾಮ ಜೀವನ ಅನೇಕ ವ್ಯಾಧಿಗಳಿಗೆ ಎಡೆಗೊಡುತ್ತದೆ. ಶರೀರದಲ್ಲಿ ಕೊಬ್ಬು ಹೆಚ್ಚಿದರೆ, ಬೊಜ್ಜು ಬೆಳೆದರೆ, ಮರಣಕ್ಕದು ಆಮಂತ್ರಣವೇ ಸರಿ. ಆದ್ದರಿಂದ, ಆರೋಗ್ಯವನ್ನು ಕಾಪಾಡಿಕೊಂಡು ನೂರು ವರ್ಷ ಬದುಕಬೇಕಾದರೆ, ದೈಹಿಕವಾದ ದುಡಿಮೆ ಅತ್ಯಗತ್ಯ. ರಷ್ಯದಲ್ಲಿ ನೂರರ ಗಡಿ ದಾಟಿದವರ ಸಂಖ್ಯೆ ಬಹಳವಿದ್ದು ,ಅವರ ದೀರ್ಘಾಯುಷ್ಯದ ಗುಟ್ಟು ಇದೇ ಎನ್ನಲಾಗಿದೆ.

ಹೀಗಾಗಿ, 'ಕುರ್ವನ್ನೇವೇಹ ಕರ್ಮಾಣಿ', 'ಜಿಜೀವಿಷೇಚ್ಛತಂ ಸಮಾಃ'- ಇವೆರಡೂ ಪರಸ್ಪರ ಪೂರಕವಾದ ವಾಕ್ಯಖಂಡಗಳು; ಎರಡೂ ಸೇರಿ ಚಿರಂತನವಾದ ಸತ್ಯವೊಂದನ್ನು ರೂಪಿಸಿವೆ. ಶತಮಾನ ಕಾಲ ಬದುಕಬೇಕು, ಚೆನ್ನಾಗಿ ಬದುಕಬೇಕು, ಆರೋಗ ದೃಢಕಾಯದಿಂದ ಬದುಕಬೇಕು. ಸದಾ ಕರ್ಮಮಾಡುವುದರ ಹೊರತು, ಕಾಯಕನಿಷ್ಠೆಯ ಹೊರತು ಅನ್ಯಮಾರ್ಗವಿಲ್ಲ, ಇದಕ್ಕೆ.

ಕರ್ಮ ಮಾಡುತ್ತಲೆ ಹಾರೈಸೋಣ: ''ಜೀವೇಮ ಶರದಶ್ಶತಮ್.''

■■

೮. ಆಸೆ

"ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ" ಎಂಬುದು ಅಲ್ಲಮಪ್ರಭುವಿನ ಉದ್ಗಾರ. ಈ ಆಸೆಯ ಮಾಯೆ ಯಾರನ್ನು ತಾನೆ ಬಿಟ್ಟಿದೆ? ಪ್ರತಿಯೊಬ್ಬರಿಗೂ ಆಸೆಗಳುಂಟು : ಹೆಣ್ಣು ಬೇಕು, ಮಣ್ಣು ಬೇಕು, ಹೊನ್ನು ಬೇಕು ; ಇನ್ನೂ ಏನೇನೋ ಬೇಕು. ಈ ಪಟ್ಟಿಗೆ ಕೊನೆಯೆಲ್ಲಿದೆ? ಆದರೆ ಕೆಲವರ ಆಸೆಗಳು ಈಡೇರುತ್ತವೆ, ಇನ್ನು ಕೆಲವರವು ಈಡೇರುವುದಿಲ್ಲ. ಹಾಗೆ ಈಡೇರದಿರುವುದು ಕೆಲವೊಮ್ಮೆ ಒಳ್ಳೆಯದೇ ಎಂದರೆ, ಈ ಮಾತನ್ನು ಎಷ್ಟು ಜನ ಒಪ್ಪಿಯಾರು ? ಆದರೆ ನಾವು ಗಮನಿಸಬೇಕು, ಯಾವ ಆಸೆಯ ಪೂರೈಕೆಯಾಗಬೇಕಾದರೂ ನಾವು ಅದಕ್ಕೆ ತಕ್ಕ ಬೆಲೆ ತೆರಬೇಕು, ಅರಿತೊ ಅರಿಯದೆಯೊ ತೆರುತ್ತೇವೆ ಎಂಬುದನ್ನು. ಈ ಬೆಲೆ, ನಾವು ಪಡೆದ ವಸ್ತುವಿಗಿಂತ ದೊಡ್ಡದಿರಲೂಬಹುದು. ಮಾಣಿಕ್ಯವನ್ನು ಕೊಟ್ಟು ಗಾಜನ್ನು ನಾವು ಪಡೆದುಕೊಂಡಿರುವ ಸಾಧ್ಯತೆಯುಂಟು. ಅಂತೂ, ನಾವು ಒಂದೆಡೆ ಲಾಭವಾಯಿತೆಂದು ಹಿಗ್ಗುತ್ತೇವೆ. ಆದರೆ ನಮ್ಮ ಖಾತೆಯಲ್ಲೆ ಇನ್ನೆಲ್ಲೊ ಒಂದೆಡೆ ನಷ್ಟವಾಗಿರುತ್ತದೆ. ಈ ನಷ್ಟದ ಅರಿವು ತತ್ಕಾಲಕ್ಕೆ ಆಗುವುದಿಲ್ಲ. ಇದೇ ಮಾಯೆಯ ಮಾಟ.

ಈ ಪ್ರಸ್ತಾವದಲ್ಲಿ ಒಂದು ಅರ್ಥಗರ್ಭಿತವಾದ ಇಂಗ್ಲಿಷ್ ಕಥೆ ನೆನಪಿಗೆ ಬರುತ್ತದೆ. ಒಬ್ಬಾತನಿಗೆ ಒಂದು ಕಪಿಹಸ್ತ ಸಿಕ್ಕುತ್ತದೆ; ಅದೊಂದು ಮಾಂತ್ರಿಕ ಹಸ್ತ, ಮೂರು ವರಗಳನ್ನು ಕೊಡುವಂಥದು. ಅದನ್ನು ಪಡೆದ ವ್ಯಕ್ತಿ ತನಗೆ ಧನಲಾಭವಾಗಲಿ ಎಂದು ಮೊದಲನೆಯ ವರ ಕೇಳುತ್ತಾನೆ. ಅವನಿಗೆ ಹಣ ಸಿಕ್ಕುತ್ತದೆ. ಹೇಗೆ? ಅವನ ಮಗ ಕಾರ್ಖಾನೆಯಲ್ಲಿ ಕಾರ್ಮಿಕ. ಅವನು ಯಂತ್ರಕ್ಕೆ ಸಿಕ್ಕಿ ಸಾಯುತ್ತಾನೆ. ಕಾರ್ಖಾನೆಯವರು ಪರಿಹಾರ ರೂಪದಲ್ಲಿ ತಂದೆಗೆ ಹಣ ಕೊಡುತ್ತಾರೆ. ಇನ್ನೂ ಎರಡು ವರಗಳಿವೆಯಷ್ಟೆ. ತನ್ನ ಮಗ ಬದುಕಿ ಬರಲಿ ಎಂದು ಎರಡನೆಯ ವರ ಕೇಳುತ್ತಾನೆ. ಆಗ ನಡುರಾತ್ರಿ. ಮಗ ಬಂದು ಬಾಗಿಲು ತಟ್ಟುತ್ತಾನೆ. ಇದ್ದಕ್ಕಿದ್ದಂತೆ ತಂದೆಯನ್ನು ಭೀತಿ ಕವಿಯುತ್ತದೆ : ಮಗ ತನ್ನ ಹಿಂದಿನ ರೂಪದಲ್ಲಿ ಬಂದಿದ್ದಾನೊ ಅಥವಾ ಯಂತ್ರಕ್ಕೆ ಸಿಕ್ಕಿ ನಜ್ಜುಗುಜ್ಜಾದ ವಿಕರಾಳ ರೂಪದಲ್ಲಿ ಬಂದಿದ್ದಾನೊ ? ಎರಡನೆಯದನ್ನು ಕಲ್ಪಿಸಿಕೊಂಡು ತಲ್ಲಣಿಸಿದ ತಂದೆ ಮೂರನೆಯ ವರವನ್ನು ಕೇಳುತ್ತಾನೆ, ಮಗ ಮತ್ತೆ ಹೊರಟು ಹೋಗಲಿ ಎಂದು. ಅಲ್ಲಿಗೆ ಮೂರು ವರಗಳೂ ಮುಗಿದುವು. ಕಡೆಗೂ ಆ ವ್ಯಕ್ತಿಗೆ ಸಿಕ್ಕಿದ್ದೇನು ? ಅಷ್ಟಿಷ್ಟು ಹಣ. ಆದರೆ ಅದಕ್ಕಾಗಿ ಅವನು ತನ್ನ ಅಮೂಲ್ಯ ಪುತ್ರನನ್ನೇ ಕಳೆದುಕೊಳ್ಳಬೇಕಾಯಿತು. ಯಾವ ಆಸೆಯ ಕತೆಯೂ ಪ್ರಾಯಃ ಇದಕ್ಕಿಂತ ಭಿನ್ನವಲ್ಲ.

ಹಾಗಾದರೆ, ಆಸೆಗಳೆ ಮನುಷ್ಯನಿಗಿರಬಾರದೆ ಎಂಬ ಪ್ರಶ್ನೆ ಹುಟ್ಟಬಹುದು. ಮನುಷ್ಯ ಆಶಾರಹಿತನಾಗುವುದು ಶಕ್ಯವಿಲ್ಲ. ಸರ್ವಸಂಗಪರಿತ್ಯಾಗಿಯಾದ ಯತಿಗೂ ಮೋಕ್ಷದ ಆಸೆಯಿರುತ್ತದೆ ಎಂಬುದನ್ನು ನೆನೆಯಬೇಕು. ಆಸೆ ಕೆಟ್ಟದ್ದಾಗಿರಬಾರದು, ಅಷ್ಟೆ ; ಅದು ಸದಿಚ್ಛೆಯಾಗಿರಬೇಕು. ಕ್ಷುದ್ರವಲ್ಲದ. ಭದ್ರವಾದ ಬಯಕೆಗಳನ್ನು, ಉನ್ನತವಾದ ಅಭೀಪ್ಸೆಗಳನ್ನು ಇರಿಸಿಕೊಳ್ಳಬೇಕು, ಮಾನವ. ಆಸೆಯಿಲ್ಲದ ಬದುಕು ಅರ್ಥಹೀನವಾದದ್ದು. ಬದುಕಿರಬೇಕು ಎಂಬುದೆ ಎಲ್ಲಕ್ಕಿಂತ ದೊಡ್ಡ ಆಸೆಯಲ್ಲವೆ, ಮೂಲಭೂತ ಆಸೆಯಲ್ಲವೆ ? ಜೀವಕಾಮವನ್ನು ಯಾರು ತೊರೆಯಬಹುದು ? ''ನನ್ನಾಸೆ ನಿನ್ನಿಚ್ಛೆಯಪ್ಪನ್ನೆಗಂ ಸಲ್ಲದಿರಲಿ'' ಎಂಬ ಕವಿಪ್ರಾರ್ಥನೆಯನ್ನಿಲ್ಲಿ ಅಗತ್ಯವಾಗಿ ಲಕ್ಷಿಸಬೇಕು. ನಮ್ಮ ಇಚ್ಛೆ ಭಗವದಿಚ್ಛೆಯೂ ಆದಾಗ ಅದು ಸಾರ್ಥಕವಾಗುತ್ತದೆ. ಒಳ್ಳೆಯ ಇಚ್ಛೆಯಾಗದೆ ಅದೆಂತು ಭಗವದಿಚ್ಛೆಯಾದೀತು ? ದೈವಸಂಕಲ್ಪಕ್ಕೆ ವಿರುದ್ಧವಾದ ಇಚ್ಛೆ ಸದ್ಯಕ್ಕೆ ರುಚಿಕರವಾದರೂ ಕಡೆಗೆ ಅನರ್ಥಕಾರಿಯಾಗಬಹುದು. ಆದ್ದರಿಂದ ನಮ್ಮ ಇಚ್ಛೆಗಳನ್ನು ಭಗವದಿಚ್ಛೆಯೊಡನೆ ಮೇಳೈಸುವ ಪ್ರಯತ್ನವನ್ನು ಸದಾ ಮಾಡುತ್ತಿರಬೇಕು. ಅಂತಹ ಇಚ್ಛೆಯ ನೆರವೇರಿಕೆಗೆ ನಾವು ಯಾವ ಬೆಲೆಯನ್ನೂ ತೆರಬೇಕಾಗಿಲ್ಲ; ತೆತ್ತರೂ ಅದು ಅಲ್ಪ; ಅಥವಾ ಅಂಥ ತೆರವೂ ಲಾಭವೆ ಆಗಬಹುದು. ಒಟ್ಟಿನಲ್ಲಿ ನಮ್ಮ ಮನಸ್ಸು ಆ ವಿಶ್ವ ನಿಯಾಮಕನ ವಿರಾಣ್ಮನದೊಡನೆ ಸಂವಾದಗೊಳ್ಳಲಿ, ಸಮರಸಗೊಳ್ಳಲಿ. ಈ ಹೊಂದಿಕೆಯಲ್ಲಿ ನಿಜವಾದ ಸುಖವಿದೆ.

■■

೯. ಕರ್ಣ-ವಿಕರ್ಣ

ಮಹಾಭಾರತದಲ್ಲಿ ಬರುವ ಕರ್ಣನ ಹೆಸರು ಎಲ್ಲರಿಗೂ ಗೊತ್ತಿರುವಂಥದು. ಆದರೆ ಅಲ್ಲಿಯೇ ಒಮ್ಮೆ ಕಾಣಿಸಿಕೊಳ್ಳುವ ವಿಕರ್ಣನ ಹೆಸರು ಬಹಳ ಜನಕ್ಕೆ ತಿಳಿದಿಲ್ಲ. ನೂರು ಮಂದಿ ಕೌರವರಲ್ಲಿ ಈ ವಿಕರ್ಣನೊಬ್ಬ ; ಆದರೆ ಅವನೊಬ್ಬ ಭಿನ್ನಮತೀಯ. ಹೆಸರಿನಲ್ಲಿ ಹೇಗೊ ಹಾಗೆ ಸ್ವಭಾವದಲ್ಲೂ ಅವನು ಕರ್ಣನಿಗೆ ವಿರುದ್ಧವಾಗಿ ನಿಲ್ಲುತ್ತಾನೆ.

ಸಂದರ್ಭ ಹೀಗಿದೆ: ತನ್ನನ್ನು ದುಶ್ಶಾಸನ ಸಭೆಗೆ ಎಳೆದು ತಂದಾಗ, ದ್ರೌಪದಿ ತರ್ಕವೊಂದನ್ನು ಸಭೆಯ ಮುಂದಿಡುತ್ತಾಳೆ; ಆದರೆ ಅವಳ ಪ್ರಶ್ನೆಗೆ ಯಾರೂ ಉತ್ತರಿಸುವುದಿಲ್ಲ. ಆಗ ವಿಕರ್ಣ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾನೆ: ''ದ್ರೌಪದಿಯ ಪ್ರಶ್ನೆಗೆ ಉತ್ತರ ಕೊಡಿ. ಭೀಷ್ಮ, ಧೃತರಾಷ್ಟ್ರ, ವಿದುರ, ದ್ರೋಣ, ಕೃಪರು ಮೌನದಿಂದಿರುವುದೇಕೆ ?'' ಆಗಲೂ ಯಾರೂ ಸೊಲ್ಲೆತ್ತುವುದಿಲ್ಲ. ಆಗ ವಿಕರ್ಣ ಕೈ ಹಿಸುಕಿಕೊಳ್ಳುತ್ತ ಮುಂದುವರಿಸುತ್ತಾನೆ : ''ನೀವು ಉತ್ತರ ಕೊಡಿ, ಇಲ್ಲವೆ ಬಿಡಿ, ನನಗೆ ಸರಿಯೆನಿಸಿದ್ದನ್ನು ನಾನು ಹೇಳುತ್ತೇನೆ. ಬೇಟೆ, ಕುಡಿತ, ಜೂಜು, ಸ್ತ್ರೀಲಂಪಟತೆ ಇವು ದೊರೆಗಳ ನಾಲ್ಕು ಚಟಗಳು. ಯುಧಿಷ್ಠಿರನನ್ನು ವಂಚಕ ಜೂಜುಕೋರರು ಆಮಂತ್ರಿಸಿ, ದ್ರೌಪದಿಯನ್ನು ಪಣವೊಡ್ಡುವಂತೆ ಮಾಡಿದರು. ಅಲ್ಲದೆ ಈ ದ್ರೌಪದಿ ಎಲ್ಲ ಪಾಂಡವರಿಗೂ ಸೇರಿದವಳು. ಯುಧಿಷ್ಠಿರ ಮೊದಲು ತನ್ನನ್ನು ಸೋತು, ಆಮೇಲೆ ಶಕುನಿಯ ಪ್ರೇರಣೆಯಂತೆ ದ್ರೌಪದಿಯನ್ನು ಒಡ್ಡಿದನಷ್ಟೆ. ಇದನ್ನು ನೋಡಿದರೆ, ದ್ರೌಪದಿ ಗೆಲ್ಲಲ್ಪಟ್ಟಿಲ್ಲವೆಂದೇ ನನ್ನ ಭಾವನೆ.'' ಹೀಗೆ ಧೈರ್ಯದಿಂದ ಒಂಟಿದನಿಯಾಗಿ ಮೊಳಗಿದ ವಿಕರ್ಣನನ್ನು ಕರ್ಣ ಜರೆದು, ''ಈ ವಿಕರ್ಣ ಹುಡುಗ !'' ಎಂದು ದಬಾಯಿಸಿ ಸುಮ್ಮನಿರಿಸಿಬಿಡುತ್ತಾನೆ.

ಈ ವಿಕರ್ಣನ ಪಾತ್ರ ಮಹತ್ವಪೂರ್ಣವಾದುದು, ವಾಸ್ತವವಾಗಿ ಮತ್ತು ಸಾಂಕೇತಿಕವಾಗಿ. ಉಳಿದವರೆಲ್ಲ ತೆಪ್ಪಗಿರುವಾಗ, ಧರ್ಮ, ನ್ಯಾಯಗಳ ಪರವಾಗಿ ನಿಲ್ಲುತ್ತಾನೆ ವಿಕರ್ಣ. ಕೌರವರಲ್ಲಿ ಒಬ್ಬನಾಗಿ ಅವನು ಹೀಗೆ ಮಾಡುತ್ತಾನೆ ಎಂಬುದಿಲ್ಲಿ ಮುಖ್ಯವಾದ ಮಾತು. ಪ್ರಪಂಚದಲ್ಲಿ ಕೇವಲ ಕೆಟ್ಟದ್ದೆ ತುಂಬಿಲ್ಲ, ಎಲ್ಲರೂ ಕೆಟ್ಟವರಲ್ಲ, ಕೆಟ್ಟದ್ದರ ನಡುವೆಯೆ ಒಳ್ಳೆಯದಿರುತ್ತದೆ, ಮಾತ್ರವಲ್ಲ, ಕೆಟ್ಟದ್ದರೊಡನೆಯೆ ಅದು ಹುಟ್ಟಿ ಬಂದಿರುತ್ತದೆ ಎಂಬ ಸತ್ಯವನ್ನು ಇಲ್ಲಿ ಸಾರುತ್ತದೆ, ಮಹಾಭಾರತ. ಅಂಥ ಒಳಿತನ್ನು ಸಂಕೇತಿಸುತ್ತಾನೆ ವಿಕರ್ಣ. ಅವನದು ಅವಿವೇಕದ ಮಧ್ಯೆ ವಿವೇಕದ ವಾಣಿ.

ಆದರೆ ಅಂಥವರು ದುಷ್ಟಶಕ್ತಿಗಳ ವಿಜೃಂಭಣದಲ್ಲಿ ತತ್ಕಾಲಕ್ಕೆ ಅಸಹಾಯರಾಗುತ್ತಾರೆ. ಎಂದಾಕ್ಷಣ ಅವರ ಮಾತಾಗಲಿ ಕೃತಿಯಾಗಲಿ ವಿಫಲವಾಯಿತೆಂದು ಅರ್ಥವಲ್ಲ. ಅದು ಸುಪ್ತವಾಗಿ ಕೆಲಸ ಮಾಡಿಯೆ ಮಾಡುತ್ತದೆ; ಅಂತಿಮವಾಗಿ

ಗೆಲುವು ಅವರದೇ, ಅವರು ಪ್ರತಿನಿಧಿಸುವ ಮೌಲ್ಯದ್ದೇ. ಅಂತೂ ಭವಿಷ್ಯತ್ತಿಗೆ ಭರವಸೆಯ ಬೀಜಗಳಾಗುತ್ತಾರೆ, ಆಶಾಕಿರಣಗಳಾಗುತ್ತಾರೆ, ವಿಕರ್ಣನಂಥವರು.

ಭವಿಷ್ಯದ ಮಾತಿರಲಿ, ಅಂಥವರ ವರ್ತನೆ ಸದ್ಯದಲ್ಲೇ ಅಷ್ಟಿಷ್ಟು ಪರಿಣಾಮಕಾರಿಯಾಗಲೂ ಬಹುದು. ಹಿಂದೆ ಹೇಳಿದ ಸಂದರ್ಭದಲ್ಲಿ ಇದು ಕೂಡ ನಿದರ್ಶಿತವಾಗಿದೆ. ಸತ್ತಂತಿದ್ದ ಸಭೆಯಲ್ಲಿ ವಿಕರ್ಣನ ಮಾತಿನಿಂದ ಚೈತನ್ಯ ಸಂಚಾರವಾಗುತ್ತದೆ. ಪ್ರಮುಖರ ಹೊರತು ಎಲ್ಲರೂ ಕೋಲಾಹಲಮಾಡಿ, ವಿಕರ್ಣನನ್ನು ಹೊಗಳಿ, ಶಕುನಿಯನ್ನು ಹಳಿಯುತ್ತಾರೆ. ಧರ್ಮದ ಪರವಾಗಿ ಒಬ್ಬನಾದರೂ ದನಿಯೆತ್ತಿದಾಗ, ಉಳಿದವರಿಗೂ ಸ್ವಲ್ಪ ಧೈರ್ಯ ಬಂದು, ಅವನನ್ನು ಹೇಗೆ ಪ್ರೋತ್ಸಾಹಿಸುತ್ತಾರೆ, ಅಧರ್ಮವನ್ನು ಪ್ರತಿಭಟಸುತ್ತಾರೆ ಎಂಬುದಕ್ಕೆ ಇದು ದೃಷ್ಟಾಂತ.

ಜಗತ್ತು ನಾನಾ ಶಕ್ತಿಗಳ ಸಂಘರ್ಷಣರಂಗ; ಇಲ್ಲಿ ಯಾವುದೂ ಬಹುಶಃ ಶುದ್ಧರೂಪದಲ್ಲಿಲ್ಲ. ಇಲ್ಲಿ ಕೆಡುಕಿದೆ, ಒಳಿತಿದೆ; ಅಂತೆಯೆ ಕೆಡುಕಿನೊಡನೆ ಒಳಿತು, ಒಳಿತಿನೊಡನೆ ಕೆಡುಕು ಭಿನ್ನ ಭಿನ್ನ ಪ್ರಮಾಣಗಳಲ್ಲಿ ಬೆರೆತುಕೊಂಡಿವೆ. ಒಳಿತಿನ ಪ್ರಮಾಣವನ್ನು ಬೆಳೆಸುವುದು, ಕೆಡುಕಿನ ಪ್ರಮಾಣವನ್ನು ತಗ್ಗಿಸುವುದು ನಾವು ಮಾಡಬೇಕಾದ ಕೆಲಸ. ದುಷ್ಟ ಕೌರವರ ಸಹೋದರನಾದ ಶಿಷ್ಟ ವಿಕರ್ಣನನ್ನು ನಾವು ನೆನಪಿನಲ್ಲಿಡಬೇಕು ; ಬೀಜಗಳನ್ನು ಹೆಮ್ಮರಗಳನ್ನಾಗಿಸಬೇಕು. ವಸ್ತು ಸ್ಥಿತಿ ಎಷ್ಟೇ ದಾರುಣವಾಗಿದ್ದರೂ ನಿರಾಶಾವಾದ ಸಲ್ಲದು; ಆಸೆಗೆ ಅನಂತ ಅವಕಾಶಗಳುಂಟು. ಇಲ್ಲವಾದರೆ ಬಾಳಿಗೆ ಏನರ್ಥ?

ವಿಕರ್ಣ ಸಹಜವಾಗಿ ಒಳ್ಳೆಯವನು; ಅವನೊಡಹುಟ್ಟಿದ ಇತರ ಕೌರವರು ಸಹಜವಾಗಿ ಕೆಟ್ಟವರು ; ಕರ್ಣನಾದರೊ ಸನ್ನಿವೇಶವಶದಿಂದ ದುಷ್ಟ ಚತುಷ್ಟಯದಲ್ಲಿ ಒಬ್ಬನಾದವನು. ಒಳಿತು ಕೆಡುಕುಗಳಲ್ಲಿ ಎಷ್ಟೊಂದು ವೈವಿಧ್ಯ ! ಇದು ಬದುಕು. ಈ ಸಂಕೀರ್ಣತೆಯನ್ನು ಮಹಾಭಾರತದಲ್ಲಿ ಮಾತ್ರ ಕಾಣುವುದು ಸಾಧ್ಯ. ಇಡೀ ಜೀವನಕ್ಕೆ ಅದೊಂದು ಅದ್ಭುತ ಪ್ರತಿಮೆ. ಜಗತ್ತು ಮಾತ್ರವಲ್ಲ, ಒಂದೊಂದು ಹೃದಯವೂ ಕುರುಕ್ಷೇತ್ರವೇ ; ಅಲ್ಲಿ ಕರ್ಣ–ವಿಕರ್ಣರ ಚಕಮಕಿ ಚಿರಂತನವಾದದ್ದು. ಅಂತಿಮ ಜಯ ಪಾಂಡವರದಾಗಬೇಕು.

■■

೧೦. ವಿದ್ಯೆ-ಅವಿದ್ಯೆ

'ವಡ್ಡಾರಾಧನೆ' ಎಂಬ ಪ್ರಾಚೀನ ಗ್ರಂಥವೊಂದರಲ್ಲಿ ಅಗ್ನಿಭೂತಿ, ವಾಯುಭೂತಿ ಎಂಬ ಸೋದರರಿಬ್ಬರ ಕತೆ ಬರುತ್ತದೆ. ಇಬ್ಬರನ್ನೂ ಅವರ ತಾಯಿ ಸೂರ್ಯಮಿತ್ರನೆಂಬ ತನ್ನ ಅಣ್ಣನಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸುತ್ತಾಳೆ. ತಾನು ಅವರ ಸೋದರಮಾವ ನೆಂದು ತಿಳಿಸಿದರೆ ಅವರು ಸರಿಯಾಗಿ ವಿದ್ಯೆ ಕಲಿಯುವುದಿಲ್ಲವೆಂದು ಬಗೆದ ಸೂರ್ಯಮಿತ್ರ, ''ನಾನು ನಿಮ್ಮ ಸೋದರಮಾವನಲ್ಲ. ಅದರೇನು ? ನೀವು ವಿದ್ಯಾರ್ಥಿ ಗಳಾಗಿ ಬಂದಿದ್ದೀರಿ. ನಿಮಗೆ ಕಲಿಸುತ್ತೇನೆ'' ಎಂದು ಹೇಳಿ, ಯಾವ ಸುಖಭೋಗ ಗಳಿಗೂ ಅವಕಾಶಕೊಡದೆ, ತುಂಬ ಕಠಿಣವಾದ ರೀತಿಯಲ್ಲಿ ಅವರಿಗೆ ವಿದ್ಯಾಭ್ಯಾಸ ಮಾಡಿಸುತ್ತಾನೆ. ಏಳೆಂಟು ವರ್ಷಗಳಲ್ಲಿ ಅವರು ಸಕಲವಿದ್ಯಾಪರಿಣತರಾಗುತ್ತಾರೆ. ವಿದ್ಯೆ ಕಲಿಯುವುದು ಹೇಗೆ, ಹಿಂದಿನ ಕಾಲದಲ್ಲಿ ಹೇಗೆ ಕಲಿಯುತ್ತಿದ್ದರು ಎಂಬುದರ ಮೇಲೆ ಇದು ಬೆಳಕು ಬೀರುತ್ತದೆ. ಮುಂದಿನ ಸ್ವಾರಸ್ಯವನ್ನು ನೋಡೋಣ. ಅಗ್ನಿ ಭೂತಿ, ವಾಯುಭೂತಿಯರ ಕಲಿಕೆ ಪೂರ್ಣವಾದನಂತರ ಸೂರ್ಯ ಮಿತ್ರ ಅವರಿಗೆ ಹೇಳುತ್ತಾನೆ : ''ನಾನು ನಿಮ್ಮ ಸೋದರಮಾವನೆ ಹೌದು. ಹಾಗೆಂದು ಮೊದಲೆ ತಿಳಿಸಿದ್ದರೆ, ನೀವು ಸರಿಯಾಗಿ ಓದದೆ ಕೆಟ್ಟುಹೋಗುತ್ತಿದ್ದಿರಿ. ನಿಮ್ಮನ್ನು ಪಂಡಿತರನ್ನಾಗಿ ಮಾಡುವುದಕ್ಕಾಗಿ ನಾನು ಹೀಗೆ ನಿರ್ದಯೆಯಿಂದ ವರ್ತಿಸಬೇಕಾಯಿತು. ಅದಕ್ಕಾಗಿ ಕ್ಷಮಿಸಿ.'' ಇದನ್ನು ಕೇಳಿ, ಸೋದರ ಮಾವನಿಂದ ಉಪಕಾರವೆ ಆಯಿತೆಂದು ಅಗ್ನಿಭೂತಿ ಹಿಗ್ಗುತ್ತಾನೆ; ಆದರೆ ವಾಯುಭೂತಿ, ತಮ್ಮನ್ನು ಮಾವ ಶತ್ರುಗಳನ್ನು ದಂಡಿಸುವಂತೆ ದಂಡಿಸಿ ಅಪಕಾರ ಮಾಡಿದನೆಂದು ಭಾವಿಸಿ, ಕೋಪಿಸಿಕೊಂಡು ಹೋಗುತ್ತಾನೆ. ಮುಂದೆ ಅದರಿಂದ ದುರಂತ ಪರಂಪರೆಯೆ ಸಂಭವಿಸುತ್ತದೆ.

ಇಲ್ಲಿ, ವಿದ್ಯೆ ಎಂದರೇನೆಂಬ ಒಂದು ಮೂಲಭೂತ ಪ್ರಶ್ನೆ ಎದುರಾಗುತ್ತದೆ. ವಾಯುಭೂತಿ ಪ್ರಕಾಂಡಪಂಡಿತನಾಗಿದ್ದಾನೆ; ಆದರೆ ಅದರಿಂದ ಯಾವ ಸಂಸ್ಕಾರವನ್ನೂ ಅವನು ಪಡೆದಿಲ್ಲ. ನಿಜವಾದ ವಿದ್ಯೆಯಿಂದ ವಿನಯ, ಸಂಸ್ಕಾರಗಳು ಸಿದ್ಧಿಸಬೇಕು. ಪಾಂಡಿತ್ಯವೆ ವಿದ್ಯೆಯಲ್ಲ. ಈ ದೃಷ್ಟಿಯಿಂದ, ವಾಯುಭೂತಿಗೆ ವಿದ್ಯೆ ಸಿದ್ಧಿಸಿಲ್ಲ. ಆದರೆ ಅಗ್ನಿಭೂತಿಯಿಲ್ಲಿ ವಿದ್ಯಾವಂತನಾಗಿ ಕಾಣುತ್ತಾನೆ. ಆದ್ದರಿಂದ ಯಾವುದು ನಿಜವಾದ ವಿದ್ಯೆ, ಯಾವುದಲ್ಲ ಎಂಬುದನ್ನು ಈ ಇಬ್ಬರು ಸೋದರರು ಇಲ್ಲಿ ತಮ್ಮ ತಮ್ಮ ವರ್ತನೆಯಿಂದ ನಿದರ್ಶಿಸುತ್ತಾರೆ.

ಹಾಗೆ ನೋಡಿದರೆ, ವಿದ್ಯೆ ಎಂಬ ಮಾತಿಗೆ ಭಾರತೀಯ ಪರಂಪರೆಯಲ್ಲಿ ಬಹು ವ್ಯಾಪಕವಾದ ಅರ್ಥವುಂಟು : ಯಾವುದು ಮೋಕ್ಷವನ್ನು ದೊರಕಿಸಿಕೊಡುತ್ತದೋ ಅದು ವಿದ್ಯೆ. ಮೋಕ್ಷವೆಂದರೆ ಸತ್ತ ಮೇಲೆಯೆ ಸಿಗತಕ್ಕದ್ದಲ್ಲ; ಬದುಕಿರುವಾಗಲೆ, ಈ

ಇಹದಲ್ಲೆ ಗಳಿಸಬೇಕಾದದ್ದು. ಮನುಷ್ಯ ದೈವತ್ವಕ್ಕೇರುವುದು ಹಾಗಿರಲಿ, ಪಾಶವೀ ಪ್ರವೃತ್ತಿಗಳಿಂದ ಪಾರಾಗಿ, ನಿಜವಾದ ಮನುಷ್ಯನಾದರೆ ಸಾಕಾಗಿದೆ. ಅದು ವಿದ್ಯೆಯ ಧ್ಯೇಯ. ಇಂಥ ಬಿಡುಗಡೆಯನ್ನು ದೊರಕಿಸತಕ್ಕ ವಿದ್ಯೆಯನ್ನು ಲೋಕೋತ್ತರ ಅಥವಾ ಆಧ್ಯಾತ್ಮಿಕ ಎಂದು ನಿರ್ದೇಶಿಸಬಹುದು.

ಆದರೆ ಮಾನವಜೀವನದ ಪರಿಪೂರ್ಣತೆಗೆ ವಿದ್ಯೆಯೊಂದೇ ಸಾಲದು; 'ಅವಿದ್ಯೆ'ಯೂ ಅಗತ್ಯ. ಅವಿದ್ಯೆಯೆಂದರೆ ಅಜ್ಞಾನವೆಂದು ಅರ್ಥವಲ್ಲ; ಲೌಕಿಕ ವಿದ್ಯೆ ಎಂದಷ್ಟೆ. ಉಪನಿಷತ್ತು ಹೇಳುತ್ತದೆ, "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ" ಎಂದು. (ಎಂದರೆ, ಮನುಷ್ಯ ಅವಿದ್ಯೆಯಿಂದ ಮೃತ್ಯುವನ್ನು ದಾಟಿ, ವಿದ್ಯೆಯಿಂದ ಅಮೃತವನ್ನು ಉಣ್ಣುತ್ತಾನೆ). ಮೃತ್ಯುವನ್ನು ಗೆಲ್ಲಬೇಕಾದುದು ಮಾನವನ ಮೊದಲ ಕೆಲಸ ; ಅವನು ಅನ್ನ ಬಟ್ಟೆಗಳನ್ನು ಗಳಿಸಬೇಕು, ರೋಗಗಳಿಗೆ ಮದ್ದು ಮಾಡಬೇಕು, ಇತರ ಸೌಕರ್ಯ ಸೌಲಭ್ಯಗಳನ್ನೂ ಕಲ್ಪಿಸಿಕೊಳ್ಳಬೇಕು. ಈ ಶರೀರ ಸುಸ್ಥಿತಿಯಲ್ಲಿದ್ದರೆ ತಾನೆ ಮುಂದಿನ ಸಾಧನೆ? ಈ ದಿಶೆಯಲ್ಲಿ ಲೌಕಿಕ ವಿದ್ಯೆಗಳು ನೆರವಾಗುತ್ತವೆ. ಆದರೆ ಈ ಅವಿದ್ಯಾ ಸಮುಚ್ಚಯವೇ ಸರ್ವಸ್ವವಲ್ಲ. ಮೃತ್ಯುವಿನಿಂದ ಪಾರಾದರೆ ಸಾಲದು; ಅದು ನೇತ್ಯಾತ್ಮಕವಾದ, ಅರ್ಧಸಿದ್ಧಿ ಮಾತ್ರ. ಅದಕ್ಕಿಂತ ಮುಖ್ಯವಾದದ್ದು ಅಮೃತತ್ವ ಲಾಭ ; ಇದು ವಿದ್ಯೆಯ ಫಲ. ಇದರಿಂದ ಪೂರ್ಣಸಿದ್ಧಿ. ಹೀಗೆ ಅವಿದ್ಯೆ-ವಿದ್ಯೆಗಳ, ಲೌಕಿಕ – ಪಾರಮಾರ್ಥಿಕಗಳ ಸಮನ್ವಯವನ್ನು ಒತ್ತಿ ಹೇಳುತ್ತದೆ, ಉಪನಿಷತ್ತು. ಇದು ಎಲ್ಲರಿಗೂ ಗ್ರಾಹ್ಯವಾದದ್ದು.

"ಮನುಷ್ಯ ಮೀನಿನಂತೆ ನೀರಿನಲ್ಲಿ ಈಜುವುದನ್ನು ಕಲಿತಿದ್ದಾನೆ, ಹಕ್ಕಿಯಂತೆ ಗಾಳಿಯಲ್ಲಿ ಹಾರುವುದನ್ನು ಕಲಿತಿದ್ದಾನೆ, ಆದರೆ ನೆಲದಲ್ಲಿ ಮನುಷ್ಯನಂತೆ ಬಾಳುವುದನ್ನು ಕಲಿತಿಲ್ಲ" ಎಂಬ ಹೇಳಿಕೆಯೊಂದನ್ನು ಇಲ್ಲಿ ನೆನೆಯಬಹುದು. ಅಜ್ಞಾನವನ್ನು ಗೆದ್ದು ಅವಿದ್ಯಾಕ್ಷೇತ್ರದಲ್ಲಿ ಮಾನವ ಏನೇನು ಸಾಧಿಸಿದ್ದಾನೊ ಅದಕ್ಕಾಗಿ ಹೆಮ್ಮೆಪಡೋಣ ; ಆದರೆ ಅವನ ಸಾಧನೆ ಇಷ್ಟರಲ್ಲೆ ಪರ್ಯವಸಾನಗೊಳ್ಳದೆ ವಿದ್ಯಾವಲಯಕ್ಕೆ ವಿಸ್ತರಿಸಲಿ ಎಂದು ಹಾರೈಸೋಣ. ಒಟ್ಟಿನಲ್ಲಿ ಬದುಕಿಗೆ ವಿದ್ಯೆ, ಅವಿದ್ಯೆ ಎರಡೂ ಬೇಕು ; ಕುವಿದ್ಯೆ ಮಾತ್ರ ಬೇಡ, ಮೌಢ್ಯ ಬೇಡ. ವೈಯಕ್ತಿಕ ಸುಖಸಂಪತ್ತುಗಳಿಗಿಂತ ಸರ್ವೋದಯ ಗುರುತರವಾದದ್ದು; ಆ ಗುರಿಯತ್ತ ವಿದ್ಯೆ ನಮ್ಮನ್ನು ಕರೆದೊಯ್ಯಲಿ.

■■

೧೧. ಅಪರಿಪೂರ್ಣತೆ

ಪರಿಪೂರ್ಣತೆ ಬಹುಶಃ ಮನುಷ್ಯನಿಗೆ ಹೇಳಿಸಿದ್ದಲ್ಲ. ದೇವರೆಂಬ ಶಕ್ತಿ ಇದ್ದರೆ, ಅದು ಪರಿಪೂರ್ಣವಾಗಿರಬಹುದೊ ಏನೊ. ದೇವರ ಮಾತಿರಲಿ, ಪ್ರಕೃತಿಯಲ್ಲಿರುವಷ್ಟು ಪರಿಪೂರ್ಣತೆಯೂ ಮಾನವನಲ್ಲಿಲ್ಲ. ಸಮಾಜದಲ್ಲಿ, ಸಂಸಾರದಲ್ಲಿ, ನಾನಾ ಒತ್ತಡಗಳ ಪರಿಸರದಲ್ಲಿ, ಜನರ ನಡುವೆ ಬದುಕುವ ವ್ಯಕ್ತಿ ಪ್ರತ್ಯಂಶದಲ್ಲೂ ಪರಿಪೂರ್ಣನಾಗಿರುವುದು ಸಾಧ್ಯವಿಲ್ಲ. ಊರು ಬಿಟ್ಟು, ಸಮಾಜ ದೂರನಾಗಿ, ಸಂಸಾರರಹಿತನಾಗಿ ವಿರಕ್ತ ಜೀವನ ನಡೆಸುವ ವ್ಯಕ್ತಿ ಮಾನವಸಹಜ ದೌರ್ಬಲ್ಯಗಳನ್ನು ಅಷ್ಟಿಷ್ಟು ಗೆಲ್ಲಬಲ್ಲನೇನೊ. ಅಂಥವರು ಅಪುರೂಪ.

ಸಮಾಜಸಂಗದಲ್ಲಿ ಬದುಕುವ ಎಲ್ಲ ವ್ಯಕ್ತಿಗಳೂ ಒಂದಲ್ಲ ಒಂದು ಬಗೆಯ ದೌರ್ಬಲ್ಯಕ್ಕೆ ಒಳಗಾದವರೇ ; ಅದು ಸಣ್ಣದಿರಬಹುದು, ದೊಡ್ಡದಿರಬಹುದು. ದೊಡ್ಡವರೆನಿಸಿಕೊಂಡವರಲ್ಲೂ ದೋಷಗಳಿರುತ್ತವೆ ; ಇತರರಲ್ಲಿವುದಕ್ಕಿಂತ ಕಡಮೆ ಇರಬಹುದಷ್ಟೆ. ಹೀಗಾಗಿ ಒಬ್ಬ ವ್ಯಕ್ತಿಯ ಒಳ್ಳೆಯತನ ಅಥವಾ ಕೆಟ್ಟತನ ಸ್ವಯಂ ಪೂರ್ಣವಾಗಿರದೆ ಸಾಪೇಕ್ಷವಾಗಿರುತ್ತದೆ. ಬದುಕಿನಲ್ಲಿ ಒಂದಲ್ಲ ಒಂದು ಸಲ ತಪ್ಪು ಮಾಡದವರು ಯಾರೂ ಇಲ್ಲ; ಅದು ಪ್ರಜ್ಞಾಪೂರ್ವಕವಾಗಿರಬಹುದು, ಅಪ್ರಜ್ಞಾಪೂರ್ವಕವಾಗಿರಬಹುದು. ದೈಹಿಕವಾಗಿಯಲ್ಲದಿದ್ದರೆ ಮಾನಸಿಕವಾಗಿ ಯಾದರೂ ಪಾಪ ಮಾಡದವರು ಲೋಕದಲ್ಲಿ ಅತ್ಯಂತ ವಿರಳ. ಸ್ವರೂಪ ಎಂತಾದರಿರಲಿ, ತಪ್ಪು ತಪ್ಪೇ, ಪಾಪ ಪಾಪವೇ. ಒಂದು ಕ್ಷಣ ಕಾಲವಾದರೂ ಮನಸ್ಸು ಚಂಚಲವಾಗದ, ಭ್ರಷ್ಟವಾಗದ ಶಿಷ್ಟರು ಎಷ್ಟು ಜನ ಸಿಗುತ್ತಾರೆ ? ಭ್ರಷ್ಟಾಚಾರದ ಪ್ರಕಾರಗಳು ಅಸಂಖ್ಯ ; ಯಾವುದಾದರೊಂದು ಪ್ರಕಾರದ ಸಂಸರ್ಗವಿಲ್ಲದವರನ್ನು ಎಲ್ಲಿ ತರೋಣ ? ಕೊಲೆ, ಕಳವು, ಸುಳ್ಳು, ವಂಚನೆ ಮುಂತಾದುವು ಎದ್ದು ಕಾಣುವ ಸ್ಥೂಲರೂಪದ ಅನಾಚಾರಗಳು . ಆದರೆ ಹೀಗೆ ಢಾಳಾಗಿ ತೋರದ ಸೂಕ್ಷ್ಮರೂಪದ ಅನಾಚಾರಗಳು ಎಷ್ಟೆಷ್ಟೋ ಇವೆ. ಅವುಗಳಿಂದ ಸಂಪೂರ್ಣವಾಗಿ ಪಾರಾದವರು ಜಗತ್ತಿನಲ್ಲಿ ದುರ್ಲಭ.

ಈ ಹಿನ್ನೆಲೆಯಲ್ಲಿ ಆಲೋಚಿಸಿದಾಗ, ಯಾರಲ್ಲೂ ನಾವು ಪರಿಪೂರ್ಣತೆಯನ್ನು, ದೇವತ್ವವನ್ನು ನಿರೀಕ್ಷಿಸಲೇಬಾರದು ಎನಿಸುತ್ತದೆ. ಎಲ್ಲರೂ ಮನುಷ್ಯಮಾತ್ರರೇ ಎಂದುಕೊಂಡು ಪರಸ್ಪರ ಸಹನೆಯಿಂದ ಬದುಕುವುದೊಂದೇ ನಮಗಿರುವ ಮಾರ್ಗ. ಯಾವುದೋ ಪರಿಮಿತಿಯಲ್ಲಿ ಮಾನವಸಹಜ ದೌರ್ಬಲ್ಯಗಳು ಕ್ಷಮ್ಯವೂ ಹೌದು. ಆದರೆ ಅಕ್ಷಮ್ಯವಾದ ಪ್ರವೃತ್ತಿಯೊಂದು ಮಾನವನಲ್ಲುಂಟು: ಲೋಕವೆಲ್ಲ ಕೆಟ್ಟುಹೋಗಿದೆ, ನಾನೊಬ್ಬ ಮಾತ್ರ ಪರಿಶುದ್ಧನಾಗಿ, ಸಂಪನ್ನನಾಗಿ ಉಳಿದಿದ್ದೇನೆ

ಎಂದು ತಮ್ಮಟೆ ಬಾರಿಸಿಕೊಂಡು ತುತ್ತೂರಿಯೂದತಕ್ಕದ್ದು. ಬಹುಮಂದಿ ಈ ಕೆಲಸದಲ್ಲಿ ಸದಾ ತೊಡಗಿರುತ್ತಾರೆ. ಆತ್ಮಸ್ತುತಿ, ಅನ್ಯನಿಂದೆ ಯಾವಾಗಲೂ ಇವರ ಚಟ. ಇದು ಖಂಡನೀಯವಾದದ್ದು. ಇವರು ಬೇರೆಯವರ ಕುಂದುಕೊರತೆಗಳನ್ನು ಎತ್ತಿಯಾಡದೆ, ಬಯ್ಯದೆ ಸುಮ್ಮನಿದ್ದುಬಿಟ್ಟರೆ ಸಾಕು; ಆಗ ನಾವು ಅವರ ದೋಷ ದೌರ್ಬಲ್ಯಗಳನ್ನು ಮರೆತು, ಅವರ ವ್ಯಕ್ತಿತ್ವದ ಒಳ್ಳೆಯ ಅಂಶಗಳನ್ನಷ್ಟೆ ಗ್ರಹಿಸಿ ಗೌರವಿಸಬಹುದು. ತಾವೇ ಅಪರಾಧಿಗಳಾಗಿದ್ದುಕೊಂಡು ಅವರು ಇನ್ನೊಬ್ಬರ ಟೀಕೆಯಲ್ಲಿ ಆಸಕ್ತರಾದಾಗ, ಅವರ ದುರ್ಗುಣಗಳೂ ಮುಂಚೂಣಿಗೆ ಬರುತ್ತವೆ; ಮರ್ಯಾದೆಗೆ ಸಂಚಕಾರವೊದಗುತ್ತದೆ. ಗಾಜಿನ ಮನೆಯಲ್ಲಿ ವಾಸಿಸುವವರು ಮತ್ತೊಬ್ಬರ ಮೇಲೆ ಕಲ್ಲು ತೂರಿದರೆ, ಮೊದಲು ಹಾನಿಯಾಗುವುದು ಹಾಗೆ ತೂರಿದವರಿಗೇ. ಆದ್ದರಿಂದ ಯಾರೂ ಇನ್ನೊಬ್ಬರನ್ನು ಹಳಿಯದೆ, ತಮ್ಮ ಪಾಡಿಗೆ ತಾವಿದ್ದುಬಿಡುವುದು ಎಲ್ಲರ ದೃಷ್ಟಿಯಿಂದಲೂ ಹಿತಕರ. ತಮ್ಮನ್ನು ತಾವು ದೊಡ್ಡವರು ಎಂದು ತಿಳಿದುಕೊಂಡಿರುವವರಂತೂ ಈ ವಿಷಯದಲ್ಲಿ ತುಂಬ ಎಚ್ಚರಿಕೆಯಿಂದಿರಬೇಕು.

ಜನರ ಗುಂಪೊಂದು ಯೇಸುಕ್ರಿಸ್ತನ ಮುಂದೆ ಹೆಣ್ಣೊಬ್ಬಳನ್ನು ಎಳೆದುತಂದು, ''ಇವಳು ವ್ಯಭಿಚಾರ ಮಾಡಿದ್ದಾಳೆ. ಇವಳನ್ನು ಕಲ್ಲುಹೊಡೆದು ಸಾಯಿಸುತ್ತೇವೆ'' ಎಂದು ಬೊಬ್ಬೆ ಹಾಕಿತಂತೆ. ಕ್ರಿಸ್ತ ಹೇಳಿದನಂತೆ : ''ನಿಮ್ಮಲ್ಲಿ ಎಂದೂ ಯಾವ ತಪ್ಪನ್ನೂ ಮಾಡದವರು ಇವಳ ಮೇಲೆ ಮೊದಲ ಕಲ್ಲು ಎಸೆಯಿರಿ!'' ಗುಂಪು ಅವನನ್ನು ದುರುಗುಟ್ಟಿ ನೋಡುತ್ತ ಕರಗಿಹೋಯಿತಂತೆ.

ಈ ಕ್ರಿಸ್ತವಾಣಿ ಎಷ್ಟು ಅರ್ಥವತ್ತಾದದ್ದು: "Judge not lest ye be judged!" (ಯಾರನ್ನೂ ಕುರಿತು ತೀರ್ಪು ಕೊಡಬೇಡಿ; ನೀವೇ ತೀರ್ಪಿಗೆ ಗುರಿಯಾದೀರಿ!)

■■

೧೨. ಸುಖದ ದಾರಿ

ಮಾನವ ಸುಖಾಪೇಕ್ಷಿ. ಇದರಲ್ಲಿ ತಪ್ಪೇನೂ ಇಲ್ಲ. ಸುಖ ಸಂತೋಷಗಳು ಎಲ್ಲರಿಗೂ ಬೇಕು. ಆದರೆ ಸುಖವನ್ನು ಸಂಪಾದಿಸುವುದು ಹೇಗೆ? ಕಷ್ಟಪಡಬೇಕು, ಶ್ರಮವಹಿಸಬೇಕು ಎನ್ನುವುದೊಂದೆ ಈ ಪ್ರಶ್ನೆಗೆ ಉತ್ತರ. ''ಕೈ ಕೆಸರಾದರೆ ಬಾಯಿ ಮೊಸರಾಗುತ್ತದೆ'' ಎಂಬುದು ಇದೇ ಅರ್ಥದ ಒಂದು ಸೊಗಸಾದ ಗಾದೆ. ಆದರೆ ಬಹಳ ಜನರಿಗೆ ಕೈ ಕೆಸರಾಗದೆ ಬಾಯಿ ಮೊಸರಾಗಬೇಕೆಂಬ ಹಂಬಲ; ಮೊಸರಾಗಬೇಕು ಮಾತ್ರವಲ್ಲ, ಬೆಣ್ಣೆಯಾಗಬೇಕು, ತುಪ್ಪವಾಗಬೇಕು, ಇನ್ನೂ ಏನೇನೊ ಆಗಬೇಕು. ಈ ಹಂಬಲದ ಪೂರೈಕೆಗಾಗಿ ಅವರು ವಾಮಮಾರ್ಗಗಳನ್ನು ಹಿಡಿಯುವುದು ಅನಿವಾರ್ಯವಾಗುತ್ತದೆ; ಹಿಡಿಯುತ್ತಾರೆ. ದೇಶದಲ್ಲಿ ತಾಂಡವ ವಾಡುತ್ತಿರುವ ಭ್ರಷ್ಟಾಚಾರಕ್ಕೆ, ಮೌಲ್ಯಕ್ಷಯಕ್ಕೆ, ನೈತಿಕ ಕುಸಿತಕ್ಕೆ ವಿವರಣೆಯನ್ನು ಇಲ್ಲಿ ಕಾಣಬೇಕು.

ಸ್ವಲ್ಪವೂ ಕಷ್ಟಪಡದೆ ಆರಾಮವಾಗಿ ಕುಳಿತು ಸುಖಭೋಗಗಳನ್ನು ಅನುಭವಿಸ ಬೇಕು ಎಂಬ ಪ್ರವೃತ್ತಿ ಹೊಸದೇನೂ ಅಲ್ಲ; ಎಲ್ಲ ಕಾಲದಲ್ಲೂ ಅದು ಇದ್ದದ್ದೇ. ಮಹಾಭಾರತದಲ್ಲಿ ಬರುವ ಈ ಉಕ್ತಿಯನ್ನು ಗಮನಿಸಬಹುದು : ''ಪುಣ್ಯಸ್ಯ ಫಲಮಿಚ್ಛಂತಿ, ಪುಣ್ಯಂ ನೇಚ್ಛಂತಿ ಮಾನವಾಃ'' (ಮನುಷ್ಯರು ಪುಣ್ಯದ ಫಲವನ್ನು ಬಯಸುತ್ತಾರೆ, ಪುಣ್ಯವನ್ನು ಬಯಸುವುದಿಲ್ಲ.) ಪುಣ್ಯದ ಫಲವೆಂದರೆ ಸ್ವರ್ಗವಾಗ ಬಹುದು, ಮೋಕ್ಷವಾಗಬಹುದು. ಆದರೆ ಆ ಮಾತನ್ನು ನಾವು ಲೌಕಿಕವಾಗಿ ಅರ್ಥೈಸೋಣ. ಈ ದೃಷ್ಟಿಯಿಂದ ಪುಣ್ಯದ ಫಲವೆಂದರೆ ಸುಖ.ಇದು ಸರ್ವಕಾಮ್ಯ ವಾದದ್ದು. ಆದರೆ ಪುಣ್ಯ ಯಾರಿಗೂ ಬೇಡ. ಪುಣ್ಯ ಗಳಿಸುವುದೇನು ಸುಲಭವೆ? ಹಿಂದಿನವರ ದೃಷ್ಟಿಯಲ್ಲಿ ವ್ರತೋಪವಾಸಗಳು, ತೀರ್ಥಯಾತ್ರೆಗಳು, ದೈವಭಕ್ತಿ, ದೇಹದಂಡನೆ ಮುಂತಾದುವೆಲ್ಲ ಅಗತ್ಯವಾಗಿದ್ದುವು ಪುಣ್ಯಾರ್ಜನೆಗೆ. ಅವು ಹೋಗಲಿ, ಸ್ವಾರ್ಥತ್ಯಾಗ, ಪರೋಪಕಾರ, ಋಜುವರ್ತನೆ, ಶೀಲಶುದ್ಧಿ ಮೊದಲಾದುವಂತೂ ಪುಣ್ಯಲಾಭಕ್ಕೆ ಬೇಕೇ ಬೇಕು. ಆದರೆ ಎಷ್ಟು ಜನರಲ್ಲಿ ಇವು ಕಂಡುಬರುತ್ತವೆ ? ಯಾರಿಗೂ ಇಷ್ಟವಲ್ಲದ ಕಃಪದಾರ್ಥಗಳಿವು. ಆದರೆ ಸುಖ ಮಾತ್ರ ಯಾರಿಗೂ ಬೇಡವಲ್ಲದ್ದು.

ಪುಣ್ಯ ಎಂಬ ಮಾತನ್ನು ಇಂದಿಗೆ ಸಂಗತವಾಗುವಂತೆ ಇನ್ನೊಂದು ರೀತಿಯಲ್ಲಿ ಅರ್ಥಮಾಡಬಹುದು. ಪುಣ್ಯ ಶಬ್ದಕ್ಕೆ ಸಮಾನಾರ್ಥಕವಾದ ಶಬ್ದ ಇಂಗ್ಲಿಷಿನಲ್ಲಿ ಇಲ್ಲವಾದ್ದರಿಂದ, ಅದನ್ನು merit ಎಂದು ಅನುವಾದಿಸುವುದು ಪದ್ಧತಿ. Merit ಎಂದರೆ ಯೋಗ್ಯತೆ, ಅರ್ಹತೆ ಎಂಬುದು ಪ್ರಸಿದ್ಧಾರ್ಥ. ಈ ದೃಷ್ಟಿಯಿಂದ ವ್ಯಾಸರ ಮಾತನ್ನು ಹೀಗೆ ಮಾರ್ಪಡಿಸಬಹುದು : ''ಮಾನವರು ಅರ್ಹತೆಯ ಫಲವನ್ನು ಬಯಸುತ್ತಾರೆ,

ಅರ್ಹತೆಯನ್ನು ಬಯಸುವುದಿಲ್ಲ.'' ನಮ್ಮ ಆಧುನಿಕ ಸಮಾಜದ ಸ್ವಭಾವವನ್ನು ಇದು ಅನನ್ಯರೀತಿಯಲ್ಲಿ ಸಂಗ್ರಹಿಸುತ್ತದೆ. ಉದಾಹರಣೆಗೆ, ಶಿಕ್ಷಣಕ್ಷೇತ್ರವನ್ನೆ ತೆಗೆದು ಕೊಳ್ಳೋಣ. ಕಷ್ಟಪಟ್ಟು ಶ್ರದ್ಧೆಯಿಂದ ವ್ಯಾಸಂಗಮಾಡಿ ಪದವಿ ಪಡೆಯಬೇಕೇಕೆ? ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಸುಲಭೋಪಾಯಗಳಿದ್ದೇ ಇವೆ. ಪದವಿ ಪಡೆದ ಬಳಿಕ ಅವೇ ಉಪಾಯಗಳಿಂದ ಉದ್ಯೋಗ ಗಿಟ್ಟಿಸಿಕೊಳ್ಳಬಹುದು; ಹಾಗೆಯೇ ಮೇಲು ಮೇಲಕ್ಕೆ ಏರುತ್ತ ಹೋಗಬಹುದು. ಎಲ್ಲ ಕ್ಷೇತ್ರಗಳಲ್ಲೂ ಇದೇ ಸೂತ್ರ: ಅರ್ಹತೆ ಪಡೆಯದೆ ಅಧಿಕಾರ, ಸ್ಥಾನಮಾನ, ಹಣ, ಆಸ್ತಿಪಾಸ್ತಿಗಳನ್ನು ಸಂಪಾದಿಸ ಬೇಕೆನ್ನುವುದು. ಹಾಗೆ ಜೀವನದಲ್ಲಿ ಗೆಲುವು ಪಡೆದವರನ್ನು ಅಸಂಖ್ಯವಾಗಿ ಕಾಣುತ್ತಿದ್ದೇವೆ. ಆದರೆ ಇದು ಒಳ್ಳೆಯ ಗೆಲುವಲ್ಲ.

''ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಂ'' (ಪರೋಪಕಾರ ದಿಂದ ಪುಣ್ಯ, ಪರಪೀಡನೆಯಿಂದ ಪಾಪ) ಎಂದೂ ಹೇಳಿದ್ದಾರೆ, ವ್ಯಾಸಮಹರ್ಷಿಗಳು. ಪರೋಪಕಾರದಿಂದ ಪಡೆಯತಕ್ಕದ್ದೇ ನಿಜವಾದ ಸುಖ; ತದ್ವಿರುದ್ಧ ಮಾರ್ಗದ ಅನುಸರಣದಿಂದ ಆಗತಕ್ಕದ್ದು ಪರಪೀಡನೆ, ಹಿಂಸೆ.

ಪುಣ್ಯಪಾಪಗಳ ವಿಷಯ ಏನೇ ಇರಲಿ, ಸರಳವಾಗಿ ಹೇಳಬಹುದಾದ್ದು ಇಷ್ಟು: ಸುಖದ ಮೂಲಕವೇ ಸುಖವನ್ನು ಸಾಧಿಸುತ್ತೇವೆನ್ನುವುದು ಅಸಾಧ್ಯ; ಕಷ್ಟದ ಮೂಲಕ ಸುಖವನ್ನು ಸಾಧಿಸುವುದೇ ಸರಿಯಾದ ವಿಧಾನ. ಸರ್ವೋದಯಕ್ಕೆ ಇದರ ಹೊರತು ಬೇರೆ ದಾರಿಯಿಲ್ಲ.

■■

೧೩. 'ಅನಿಕೇತನ'

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ

-ಭಗವದ್ಗೀತೆ, ೧೨.೧೯

(ಸ್ತುತಿನಿಂದೆಗಳಲ್ಲಿ ಸಮಭಾವನೆಯುಳ್ಳವನೂ ಮೌನಿಯೂ ಯತ್ಕಿಂಚಿತ್ ಲಾಭದಲ್ಲಿ ಸಂತುಷ್ಟನೂ ನಿರ್ದಿಷ್ಟ ಸ್ಥಾನವಿಲ್ಲದವನೂ ಸ್ಥಿರಬುದ್ಧಿಯುಳ್ಳವನೂ ಭಕ್ತಿವಂತನೂ ಆದ ಮನುಷ್ಯನು ನನಗೆ ಪ್ರಿಯನು.)

ಹಾರೈಸು ಹಾರೈಸು ಹಾರೈಸು ಜೀವ:
ಹಾರೈಸು ನೀನಾಗುವನ್ನೆಗಂ ದೇವ !

-ಕುವೆಂಪು

ದೇವನಾಗುವುದು ಮಾನವನ ಧ್ಯೇಯ. ಸಾಧನೆಯ ಪಥದಲ್ಲಿ ಹೆಜ್ಜೆಹೆಜ್ಜೆಗೂ ಅಡ್ಡಿ ಆತಂಕಗಳು ಕಾದಿವೆ. ಅವುಗಳನ್ನು ವ್ಯಕ್ತಿ ದಾಟಬೇಕು. ಇಂಥ ಸೀಮೋಲ್ಲಂಘನಕ್ಕೆ ಕರೆಕೊಡುತ್ತದೆ, ಕುವೆಂಪು ಅವರ 'ಅನಿಕೇತನ' ಕವನ.

ಅನಿಕೇತನಪ್ರಜ್ಞೆಯನ್ನು ಇದು ಪ್ರತಿಪಾದಿಸುತ್ತದೆ. 'ನಿಕೇತನ' ಎಂದರೆ ಮನೆ. ಆದರೆ ಇದು ಕಲ್ಲು ಇಟ್ಟಿಗೆ ಸಿಮೆಂಟುಗಳ ಭೌತಿಕವಾದ ಮನೆಯಲ್ಲ; ಮಾನಸಿಕವಾದ, ಆತ್ಮಿಕವಾದ ಮನೆ. ಎಂದರೆ ಆತ್ಮನ ಉಪಾಧಿ, ಪರಿಮಿತಿಗಳಿಗೆ 'ನಿಕೇತನ' ಎಂಬುದು ಸಂಕೇತವಾಗುತ್ತದೆ. ಈ ಎಲ್ಲ ಉಪಾಧಿಗಳನ್ನೂ ಪರಿಮಿತಿಗಳನ್ನೂ ಚೇತನ ಕಳಚಿಕೊಳ್ಳುವುದೇ 'ಅನಿಕೇತನ' ಸ್ಥಿತಿ. ಅದೇ ಎಲ್ಲರ ಗಮ್ಯವಾಗಬೇಕು. ''ಮನೆಯನೆಂದೂ ಕಟ್ಟದಿರು'' ಎಂಬ ಆದೇಶ ಅಥವಾ ಸಂದೇಶ ಅಥವಾ ಪ್ರಾರ್ಥನೆ ಈ ಅರ್ಥದಲ್ಲಿ. ಇರುವ ಮನೆಗಳನ್ನೆ ನಾಶಗೊಳಿಸಬೇಕಾಗಿರುವಾಗ, ಇನ್ನಷ್ಟು ಮನೆಗಳನ್ನು ನಿರ್ಮಿಸುವುದು ಅವಿವೇಕ.

ವಿವಿಧ ನಾಮ, ರೂಪ, ಮತ, ತತ್ತ್ವ, ಸಿದ್ಧಾಂತ ರಾದ್ಧಾಂತಗಳೆಲ್ಲ ಆತ್ಮನ ಮನೆಗಳು. ಇವು ಪ್ರವಾಸಕ್ಕಾಗಿಯೆ ಹೊರತು ನಿವಾಸಕ್ಕಾಗಿಯಲ್ಲ; ದಾರಿಯೆ ಹೊರತು ಗುರಿಯಲ್ಲ. ಇವು ಕೇವಲ ತಾತ್ಕಾಲಿಕವಾದ ತಂಗುದಾಣಗಳು. ಚೇತನ ಇವುಗಳಲ್ಲಿ ಶಾಶ್ವತವಾಗಿ ನೆಲಸಿಬಿಡುವುದು ಶ್ರೇಯಸ್ಕರವಲ್ಲ. ಅದು ಇವುಗಳನ್ನು ಬಿಟ್ಟು, ಮುಂದುಮುಂದಕ್ಕೆ ಯಾತ್ರೆಗೈಯಬೇಕು. ಈ ಊರ್ಧ್ವಯಾತ್ರೆ ಎಲ್ಲೆಯಿಲ್ಲದ್ದು; ಅನಂತವಾದುದು. ಸಾಧನೆಗೆ ಕಡೆಯೆಂಬುದಿಲ್ಲ; ಆತ್ಮವಿಕಾಸಕ್ಕೆ ನಿಲುಗಡೆ ಎಂಬುದಿಲ್ಲ. ವಿಶ್ವಮಾನವತೆ ಸಿದ್ಧಿಸುವ ತನಕ, ನರ ನಾರಾಯಣನಾಗುವ ತನಕ, ಮೋಕ್ಷ ಕೈಗೂಡುವತನಕ, ಯಾವ ಬಂಧನಕ್ಕೂ ಸಿಕ್ಕಿಹಾಕಿಕೊಳ್ಳದೆ ಚೇತನ ಸತತವಾಗಿ ಮುನ್ನಡೆಯುತ್ತಲೆ ಇರಬೇಕು.

ಮತದ ಹೊಟ್ಟನ್ನು ತೂರಿ ಧರ್ಮದ ಮತ್ತು ಅಧ್ಯಾತ್ಮದ ಕಾಳನ್ನು ಉಳಿಸಿಕೊಂಡು, ಅನಂತತೆಯತ್ತ ಸಾಗುವ, ತಾನೆ ಅನಂತವಾಗುವ ವ್ಯಕ್ತಿಯೆ ನಿತ್ಯಯೋಗಿ. ಅನಿಕೇತನತೆಯ ಅನುಸಂಧಾನವೊಂದು ತಪಸ್ಸು. ಇದು ಕಾಡಿನಲ್ಲಿ ಮಾಡಬೇಕಾದುದಲ್ಲ.

ಇರವು (being) ಮುಖ್ಯವಲ್ಲ, ಪರಿಣಮನ–ಎಂದರೆ ಆಗುವಿಕೆ ಅಥವಾ ಮಾಗುವಿಕೆ (becoming)-ಮುಖ್ಯ ಎಂಬುದು 'ಅನಿಕೇತನ'ದ ಆಶಯ; ಆದ್ದರಿಂದಲೆ ಅದು ''ಆಗು ಆಗು ಆಗು'' ಎಂದು ಅವಧಾರಣ ಪೂರ್ವಕವಾಗಿ ಹೇಳುತ್ತದೆ.

ಎರಡು ಸ್ತರಗಳಲ್ಲಿ ಈ ಕವನ ಕೆಲಸ ಮಾಡುತ್ತದೆ. ಜಾತಿ, ಮತ, ಪಂಥ ಮುಂತಾದ 'ಮನೆ'ಗಳಿಂದ ವ್ಯಕ್ತಿ ಹೊರಬಿದ್ದು ವಿಶ್ವಮಾನವನಾಗಬೇಕು– ಇದು ಲೌಕಿಕ ಸ್ತರ; ಅವನು ನಾಮ ರೂಪಗಳನ್ನು ಮೀರಿ, ನಿರ್ದಿಗಂತವಾಗಿ ಏರಿ, ನಿರುಪಾಧಿಕವಾದ ಬ್ರಹ್ಮಪದವಿಯಲ್ಲಿ ಪ್ರತಿಷ್ಠಿತನಾಗಬೇಕು– ಇದು ಆಧ್ಯಾತ್ಮಿಕ ಸ್ತರ. ಪರಸ್ಪರ ಪೂರಕವಾದ ಎರಡೂ ಅನಿಕೇತನಪ್ರಜ್ಞೆಯ ಫಲಗಳೇ.

■■

೧೪. 'ವಾಗರ್ಥ ಪ್ರತಿಪತ್ತಯೇ'

ಕಾಳಿದಾಸನ 'ರಘುವಂಶ'ದ ಈ ನಾಂದೀಪದ್ಯ ಬಹಳ ಪ್ರಸಿದ್ಧವಾದದ್ದು; ಅಷ್ಟೇ ಅರ್ಥಗರ್ಭಿತವಾದದ್ದು:

ವಾಗರ್ಥಾವಿವ ಸಂಪೃಕ್ತೌ, ವಾಗರ್ಥಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ

ಮಾತು ಮತ್ತು ಅರ್ಥಕ್ಕಾಗಿ ಕಾಳಿದಾಸ ಇಲ್ಲಿ ಶಿವ–ಪಾರ್ವತಿಯರನ್ನು ಬೇಡುತ್ತಿದ್ದಾನೆ. ಎಂಥ ಮಾತು ಮತ್ತು ಅರ್ಥ? ಶಿವ–ಪಾರ್ವತಿಯರಂತೆಯೆ ಸಾಮರಸ್ಯವುಳ್ಳ, ಅರ್ಧನಾರೀಶ್ವರ ಸ್ವರೂಪದ ಮಾತು ಮತ್ತು ಅರ್ಥ. (ಯಾರಿಂದ ಏನು ಕೇಳಬೇಕು ಎಂಬುದನ್ನು ವರಕವಿ ಬಲ್ಲ!) ವಾಗರ್ಥಗಳ ಇಂಥ ಅನುರೂಪ ದಾಂಪತ್ಯಕ್ಕಾಗಿ ಕವಿ ಮಾತ್ರವಲ್ಲ, ಎಲ್ಲರೂ ಪ್ರಾರ್ಥಿಸಬಹುದು, ಪ್ರಾರ್ಥಿಸಬೇಕು.

ಕಾವ್ಯಭೂಮಿಕೆಯಲ್ಲಾಗಲಿ ವ್ಯವಹಾರಭೂಮಿಕೆಯಲ್ಲಾಗಲಿ ಮಾತಿಗೊಂದು ಅರ್ಥ ಇದ್ದೇ ಇರುತ್ತದಲ್ಲವೆ, ವಾಗರ್ಥಗಳ ಹೊಂದಾಣಿಕೆಯನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವೇನು ಎಂಬ ಪ್ರಶ್ನೆಯೊಂದು ಹುಟ್ಟಬಹುದು. ನಿಜ, ಲೋಕದಲ್ಲಾಗಲಿ ಕಾವ್ಯದಲ್ಲಾಗಲಿ ಶಬ್ದಾರ್ಥಗಳು ಒಟ್ಟಿಗಿರುತ್ತವೆ. ಆದರೆ ಅವುಗಳ ಸಾಹಚರ್ಯವೆ ಸಮನ್ವಯವಲ್ಲ. ವಾಗರ್ಥಗಳ ವಿರಸದಾಂಪತ್ಯವೆ ಹೆಚ್ಚು; ವಿಚ್ಛೇದನವೂ ವಿರಳವಲ್ಲ. ಶಬ್ದಾರ್ಥಗಳ ಅನ್ಯೋನ್ಯ ಮೈತ್ರಿ, ಬೆಸುಗೆ ಎಲ್ಲೂ ಕಡಮೆಯೇ.

ಹೀಗೂ ಆಗಬಹುದು: ಎಷ್ಟೋ ಸಲ ನಮ್ಮಲ್ಲಿ ಭಾವ (ಎಂದರೆ ಅರ್ಥ)ಗಳಿರುತ್ತವೆ; ಆದರೆ ಅವುಗಳನ್ನು ಅಭಿವ್ಯಕ್ತಿಸಲು ಸರಿಯಾದ ಶಬ್ದಗಳು ಸಿಕ್ಕುವುದಿಲ್ಲ. ಇನ್ನೆಷ್ಟೋ ಸಲ, ಏನೇನೊ ಶಬ್ದಗಳನ್ನುಚ್ಚರಿಸುತ್ತೇವೆ; ಆದರೆ ಅವುಗಳಲ್ಲಿ ವಿವಕ್ಷಿತವಾದ ಅರ್ಥವಿರುವುದಿಲ್ಲ. ಹೀಗಾಗಿ, ಅಪಾರ್ಥವೊ ಅನರ್ಥವೊ ಘಟಿಸುವ ಸಂಭವವುಂಟು. ಆದ್ದರಿಂದ ವಾಗರ್ಥಗಳು ಒಟ್ಟಿಗಿರಬೇಕು; ಮಾತ್ರವಲ್ಲ, ಅವು ಪರಸ್ಪರ ನ್ಯೂನಾತಿರಿಕ್ತವಾಗದೆ ಸ್ಪರ್ಧಿಸುವಂತಿರಬೇಕು. ಶಬ್ದಾರ್ಥಗಳ ಈ ಸಂಬಂಧಪರಿಪೂರ್ಣತೆ ಕಾವ್ಯ ರಂಗದಲ್ಲಿ ಹೆಚ್ಚು ಅಪೇಕ್ಷಣೀಯ.

ಯಾವುದೇ ಭಾಷೆಯಲ್ಲಿ ಸಮಾನಾರ್ಥಕ ಶಬ್ದಗಳೆ ಇಲ್ಲವೆನ್ನುತ್ತಾರೆ. ಇರತಕ್ಕದ್ದು ಒಂದು ಶಬ್ದಕ್ಕೆ ಒಂದೇ ಅರ್ಥ: ''ಪರಮ ಪತಿವ್ರತೆಗೆ ಗಂಡನೊಬ್ಬ, ಕಾಣಿರೋ'' ಎಂಬಂತೆ. ಆ ಅರ್ಥಕ್ಕೆ ಆ ಶಬ್ದವೆ ಸರಿ; ಬೇರೊಂದು ಶಬ್ದವನ್ನು ಅದರ ಬದಲು ಹಾಕುವಂತಿಲ್ಲ. ಈ ರಹಸ್ಯವನ್ನು ಉಳಿದವರಿಗಿಂತ ಮಿಗಿಲಾಗಿ ಕವಿ ಬಲ್ಲ. ಉದಾಹರಣೆಗೆ, ''ನರಶರದ ಜೋಡಿನ ಜುಂಜುವಳೆಯಲಿ ಜಾಹ್ನವೀಧರ

ಜಾರುವನೆ'' ಎಂಬಲ್ಲಿ, 'ಜಾಹ್ನವೀಧರ' ಶಬ್ದದ ಬದಲು ಮತ್ತಾವ ಶಬ್ದವನ್ನು ಪ್ರಯೋಗಿಸಿದರೂ, ಈಗ ಹೊರಡುವ ಧ್ವನಿ ಹೊರಡುತ್ತಿರಲಿಲ್ಲ. ಇಲ್ಲಿ ಶಬ್ದಾರ್ಥಗಳ ಅಭೇದವನ್ನು ಕಾಣುತ್ತೇವೆ.[೧] ಇಂಥ ಅಭೇದಕ್ಕಾಗಿ ಕಾಳಿದಾಸನಂತೆ ಎಲ್ಲರೂ ಹಾರೈಸಬೇಕು.[೨]

■■

---

೧. ''ಶಬ್ದಾರ್ಥೌ ಸಹಿತೌ ಕಾವ್ಯಂ'' ಎಂಬ ಭಾಮಹನ ಉಕ್ತಿಯಲ್ಲೂ ಇದೇ ಅಭಿಪ್ರಾಯವಿದೆ. ಶಬ್ದಾರ್ಥಗಳ 'ಸಹಿತಭಾವ' (ಮಿಲನ)ದಿಂದ 'ಸಾಹಿತ್ಯ'. 'ಸ–ಹಿತ' (ಹಿತದಿಂದ ಕೂಡಿದ್ದು) ದಿಂದ 'ಸಾಹಿತ್ಯ' ಎಂಬ ನಿಷ್ಪತ್ತಿ ಈಚಿನದು.

೨. ಇಲ್ಲಿ ''ಮೂಕಂ ಕರೋತಿ ವಾಚಾಲಂ...'' ಎಂಬ ಶ್ಲೋಕವನ್ನೂ ನೆನಪಿಸಿಕೊಳ್ಳಬಹುದು. ಮೂಕನಿಗೆ ಮಾತು ಬರಬೇಕು; ಇಲ್ಲವಾದರೆ ಅವನು ಪ್ರಾಣಿಗಳಿಗಿಂತ ಕೀಳು.. ಇದು ಮೊದಲ ಹಂತ. ಆ ಮೇಲೆ ತಕ್ಕ ಶಬ್ದಾರ್ಥಗಳು ಸಿದ್ಧಿಸಬೇಕು.

೧೫. ಅಧ್ಯಾತ್ಮ ಮತ್ತು ಲೌಕಿಕ ಸಂಬಂಧಗಳು

ಬಹುತೇಕ ಪ್ರಾಚೀನ ಕನ್ನಡ ಕಾವ್ಯಗಳಿಗೆ ಆಕರಗಳು ಸಂಸ್ಕೃತದಲ್ಲೊ ಪ್ರಾಕೃತದಲ್ಲೊ ಇವೆಯೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ನಮ್ಮ ಕವಿಗಳು ಮೂಲವನ್ನು ಸುಮ್ಮನೆ ನಕಲು ಮಾಡಿ ವಿರಮಿಸುವುದಿಲ್ಲವೆಂಬುದನ್ನು ನೆನೆಪಿಡಬೇಕು. ಕನ್ನಡ ಜೈನ ಕವಿಗಳು ತಮ್ಮ ಆಗಮಿಕ ಕಾವ್ಯಗಳಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸಲಾರರಾದರೂ, ಮೂಲಕ್ಕೆ ಅವಿರುದ್ಧವಾಗಿ ತಮ್ಮ ಸಮನ್ವಯದೃಷ್ಟಿಯನ್ನು ಒಮ್ಮೊಮ್ಮೆ ಮಿಂಚಿಸಿ, ತಮ್ಮ ಚಿತ್ರಣ ಸಾಧ್ಯವಾದಮಟ್ಟಿಗೆ ಬದುಕಿನ ಸಂಕೀರ್ಣತೆಯನ್ನು ಒಳಗೊಂಡು ಮಾನವೀಯವೂ ಆಗುವಂತೆ ನೋಡಿಕೊಳ್ಳುತ್ತಾರೆ. ಇದಕ್ಕೆ ಎರಡು ಕಿರು ನಿದರ್ಶನಗಳನ್ನಿಲ್ಲಿ ಕೊಡಲಾಗುವುದು.

ಮೊದಲನೆಯದಾಗಿ, ಪಂಪನ 'ಆದಿಪುರಾಣ'ದಿಂದ. ಶ್ರೀಮತಿ ವಜ್ರಜಂಘರ ಸಹಮರಣದ ಪ್ರಸಂಗದಲ್ಲಿ ಕವಿ ''ಸಂಸ್ಕೃತಿಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್'' ಎಂದು ಮೂಲಾನುಸಾರಿಯಾಗಿ ಉದ್ಗರಿಸಿದರೂ, ಕಡೆಯಲ್ಲೊಂದು ತಿರುವು ಕೊಡುತ್ತಾನೆ: ''ಓಪರ್ ಓಪರೊಳ್ ಒಡಸಾಯಲ್ ಪಡೆದರ್. ಇನ್ ಅವೇಂ ಸೈಪು ಒಳವೇ?'' (ಒಲಿದವರು ಒಟ್ಟಿಗೇ ಸಾಯುವಂಥ ಪುಣ್ಯ ಬೇರೆ ಉಂಟೆ ?)

ಎರಡನೆಯದಾಗಿ, ನೇಮಿಚಂದ್ರನ 'ನೇಮಿನಾಥಪುರಾಣ'ದಿಂದ. ಭಾವೀ ತೀರ್ಥಂಕರನಾದ ಅಪರಾಜಿತ ತನ್ನ ಹಿಂದಿನ ಎರಡು ಜನ್ಮಗಳಲ್ಲಿ ಸೋದರರಾಗಿದ್ದವರ ಪೂರ್ವಕಥೆಗಳನ್ನು ಕೇಳಿ ಅವರಿಗೆ ಹೀಗೆನ್ನುತ್ತಾನೆ :

ಗುಣದಿಂದಂ ಸಹಜಾತ ಮೋಹದ ರಿಣಂ ಒಲ್ಲಿತ್ತು ನೀಮೀ ಮಹಾ
ಗುಣದಿಂದಲ್ಲಮರತ್ವಮಂ ಬಿಸುಟೊಡಂ ತಾಂ ಬಿಟ್ಟುದಿಲ್ಲೆಮ್ಮ ಮೇ
ಗಣ ನಿಮ್ಮೊಂದು ಮಮತ್ವ ಮಿತುಟು ರಿಣಂ ಕ್ಷಂತವ್ಯಮ್[೧] (ಎಂದಂದು ಚಾ
ರಣಯುಗ್ಮಕ್ಕತಿ ಭಕ್ತಿಯಿಂದೆಱಗಿದಂ ವಿದ್ಯಾವಧೂವಲ್ಲಭಂ)

ಈ ಪುರಾಣ ಕಾವ್ಯಗಳ ಉದ್ದೇಶ ಧರ್ಮ, ಮೋಕ್ಷಗಳನ್ನು ಎತ್ತಿಹಿಡಿಯುವುದೇ ಆಗಿದೆ. ಆದರೆ ಅವು ಲೌಕಿಕ ಸಂಬಂಧಗಳನ್ನು ಅಲ್ಲಗಳೆದಿಲ್ಲ ಅಥವಾ ಧಿಕ್ಕರಿಸಿಲ್ಲ ಎಂಬುದು ಗಮನಾರ್ಹ ಸಂಗತಿ. 'ಆದಿಪುರಾಣ'ದ ಪೂರ್ವೋಕ್ತ ಸಂದರ್ಭದಲ್ಲಿ ನಾವು ನೋಡುವುದು ಪತಿ–ಪತ್ನಿಯರ ಸಂಬಂಧವನ್ನು; 'ನೇಮಿನಾಥಪುರಾಣ'ದ ಭವಾವಳಿಯಲ್ಲಿ ಸೋದರಸಂಬಂಧವನ್ನು. ಇವು ಕವಿಗಳಿಂದ ಬೆಲೆ ಪಡೆದುಕೊಂಡಿವೆ.

---

೧ 'ಉತ್ತರ ಪುರಾಣ'ದಲ್ಲಿ ''ನೀವು ನಿಸ್ಸಂಗತ್ವವನ್ನು ಹೊಂದಿದವರಾಗಿದ್ದರೂ ಜನ್ಮಾಂತರಸ್ನೇಹದಿಂದ ನನಗೆ ಹಿತೈಷಿಗಳಾಗಿ ಮಹೋಪಕಾರವನ್ನು ಮಾಡಿದಿರಿ'' ಎಂದಷ್ಟೆ ಇದೆ.

ಧರ್ಮ, ಮೋಕ್ಷಗಳು ದೊಡ್ಡವು, ನಿಜ; ಆದರೆ ಲೌಕಿಕ ಸಂಬಂಧಗಳಲ್ಲಿ ನಿಷ್ಠೆ ಸಣ್ಣದಲ್ಲ. ಬಹಳ ಜನಕ್ಕೆ ಅಧ್ಯಾತ್ಮದಲ್ಲೂ ನಿಷ್ಠೆ ಇರುವುದಿಲ್ಲ, ಲೌಕಿಕದಲ್ಲೂ ಇರುವುದಿಲ್ಲ. ಹೀಗಿರುವಾಗ, ಐಹಿಕ ಸಂಬಂಧಗಳನ್ನು ಪುರಸ್ಕರಿಸುವವರೂ ಸುತ್ತ್ಯರೇ ಆಗುತ್ತಾರೆ. ಎಲ್ಲವನ್ನೂ ತ್ಯಜಿಸಿ ಮೋಕ್ಷರತರಾಗಬಲ್ಲ ಮಹಾನುಭಾವ ಎಷ್ಟು ಮಂದಿ ಇದ್ದಾರು? ಉಳಿದ ಸಾಮಾನ್ಯರು ಸಂಸಾರದ ಮಿತಿಯಲ್ಲೆ ಉತ್ತಮರೆನಿಸಿಕೊಳ್ಳಬೇಕು ತಾನೆ.

ಆದ್ದರಿಂದ, ಲೌಕಿಕ ಪ್ರೀತಿ ಒಂದರ್ಥದಲ್ಲಿ ಗುಣವಲ್ಲ; ಇನ್ನೊಂದರ್ಥದಲ್ಲಿ ಅದು 'ಮಹಾಗುಣ'. 'ಮೋಹದ ಋಣ' ನಿಂದ್ಯವಲ್ಲ, ಕ್ಷುಲ್ಲಕವಲ್ಲ; ಮಮಕಾರ ಸರ್ವತ್ರ ಕೆಟ್ಟದ್ದಲ್ಲ. ಅವೂ ಪುಣ್ಯಜನ್ಯವೇ. ಅಂತೂ ಅಧ್ಯಾತ್ಮದ ಭೂಮದೆದುರು ಈ ಲೌಕಿಕ ಋಣ ಕ್ಷಮ್ಯವೇ ಸರಿಃ ''ರಿಣಂ ಕ್ಷಂತವ್ಯಂ !''

■■

೧೬. 'ಸತ್ಯಮೇವ ಜಯತೇ'

''ಸತ್ಯಮೇವ ಜಯತೇ ನಾನೃತಂ'', ''ಯತೋ ಧರ್ಮಸ್ತತೋ ಜಯಃ'' ಮುಂತಾದ ಒಳ್ನುಡಿಗಳಿಗೆ ಬರವಿಲ್ಲ. ಆದರೆ ವಾಸ್ತವ ಪರಿಸ್ಥಿತಿಯೇನು? ಇಂಥ ಮಾತುಗಳಲ್ಲಿ ಏನಾದರೂ ಹುರುಳುಂಟೊ? ನಮ್ಮ ಸುತ್ತಮುತ್ತ ಅಸತ್ಯ, ಅಧರ್ಮಗಳೆ ವಿಜೃಂಭಿಸುವುದನ್ನು, ಅವುಗಳ ಅನುಯಾಯಿಗಳೆ ಕಡೆಯತನಕ ಏಳ್ಗೆ ಹೊಂದುವುದನ್ನು ನೋಡುತ್ತಿದ್ದೇವೆ. ಇಂದು ಮಾತ್ರವಲ್ಲ, ಎಂದೂ ಎಲ್ಲಿಯೂ ಇದೇ ವಿದ್ಯಮಾನ. ಉದಾಹರಣೆಗಳ ಅಗತ್ಯವೇ ಇಲ್ಲದಷ್ಟು ಇದರ ವ್ಯಾಪಕತೆ. ಸತ್ಯ ಧರ್ಮಗಳ ಗೆಲುವು ಏನಿದ್ದರೂ ಆಕಸ್ಮಿಕ. ಅಂಥ ಪ್ರಕರಣಗಳು ಅಪವಾದಗಳು ಮಾತ್ರ ಎಂಬುದನ್ನು ಲೋಕ ನಮಗೆ ನಿತ್ಯವೂ ತೋರಿಸಿಕೊಡುತ್ತದೆ; ಹಾಗೆಯೆ ನಿಯಮ ಯಾವುದು ಎಂಬುದನ್ನು ಕೂಡ.

''ಎಲ್ಲಿ ಧರ್ಮವೊ ಅಲ್ಲಿ ಜಯ'' ಎಂಬುದು ಮಹಾಭಾರತದ ಉಕ್ತಿ. ಅಲ್ಲಿ ತಾನೆ ಅದು ಸಾರ್ಥಕವಾಗಿದೆಯೆ? ಅಂತಿಮವಾಗಿ ಪಾಂಡವರು ಗೆದ್ದರು, ಕೌರವರು ನಾಶಗೊಂಡರು, ನಿಜ. ಆದರೆ ''ಗೆದ್ದವನು ಸೋತ, ಸೋತವನು ಸತ್ತ'' ಎನ್ನುವಂತಾಗಲಿಲ್ಲವೆ? ಪಾಂಡವರು ಏನು ಸುಖಪಟ್ಟರು? ಕೌರವರನ್ನು ಗೆದ್ದು ರಾಜ್ಯ ಪಡೆಯುವ ವೇಳೆಗೆ ಅವರಲ್ಲಿ ಸುಖಾನುಭವದ ಶಕ್ತಿಯಾಗಲಿ, ಮನೋಧರ್ಮವಾಗಲಿ ಉಳಿದಿದ್ದುವೆ? ಮೊದಲಿಂದ ಕಡೆಯುವರೆಗೂ ಸಕಲಭೋಗಪಾತ್ರರಾದವರು ಕೌರವರಲ್ಲವೆ? ಎಂದೋ ಒಂದು ದಿನ ಪ್ರತಿಯೊಬ್ಬರಿಗೂ ಮೃತ್ಯು ಬರುತ್ತದೆ, ಕೆಟ್ಟವರಿಗೂ ಬರುತ್ತದೆ. ಅದರಲ್ಲೇನು ವಿಶೇಷ? ''ಆ ಖಲ ಮ್ಲೇಚ್ಛರು ಸತ್ತೇ ಸತ್ತರು!– ಬಹು ಕಾಲಾನಂತರದಲ್ಲಿ'' ಎಂದು ಸಮಾಧಾನಪಟ್ಟುಕೊಂಡರೆ ಬಂದ ಭಾಗ್ಯವೇನು?

ಆದ್ದರಿಂದ, ಸತ್‌ಶಕ್ತಿಯೆ ಸದಾ ಗೆಲ್ಲುತ್ತದೆ, ಎಂದಿದ್ದರೂ ಅಸತ್‌ಶಕ್ತಿಗೆ ಅಪಜಯ ಎಂಬಂತಹ ನುಡಿಗಳನ್ನು ಅವುಗಳ ಮುಖಮೌಲ್ಯದಲ್ಲಿ ತೆಗೆದುಕೊಳ್ಳಲಾಗದು. ಆದರೆ, ಸುಖಸಂಪತ್ತುಗಳಿಗಾಗಿ ಅಸತ್ಯ, ಅಧರ್ಮಗಳ ಮಾರ್ಗವನ್ನು ಹಿಡಿಯಬೇಕೆಂಬುದು ಈ ಎಲ್ಲ ವಾದದ ಅರ್ಥವಲ್ಲ. ಸತ್ಯ, ಧರ್ಮಗಳನ್ನು ಆಶ್ರಯಿಸಿದ ವ್ಯಕ್ತಿಗೆ ಒದಗುವ ಮಾನಸಿಕ ಶಾಂತಿ ಮತ್ತು ನೈತಿಕ ಧೈರ್ಯಕ್ಕೆ ಯಾವುದೂ ಸಾಟಿಯಲ್ಲ; ಅವನು ನಿಜವಾಗಿಯೂ ಸುಖಿ. ಈ ಅರ್ಥದಲ್ಲಿ ಸತ್ಯ ಧರ್ಮಗಳಿಗೆ ಜಯವುಂಟು; ಸಾಂಪ್ರದಾಯಿಕ ಅರ್ಥದಲ್ಲಲ್ಲ.

ಹೀಗಾಗಿ, ಸತ್ಯ ಧರ್ಮಗಳ ಆಚರಣೆ ಶ್ರೇಯಸ್ಕರವೇ; ಅವುಗಳನ್ನು ತೊರೆಯುವುದಕ್ಕೆ ಪ್ರಬಲ ಕಾರಣವೇನೂ ಇಲ್ಲ. ಆದರೆ ''ಸತ್ಯಮೇವ ಜಯತೇ''

ಹಾವು ಸುಂದರವಾದ ಪ್ರಾಣಿ. (''ಹಾವಿನಾ ಹೆಡೆ ಚಂದ''). ನಾಯಿಯೂ ಅಷ್ಟೆ; ಅದು ಸ್ವಾಮಿನಿಷ್ಠ ಪ್ರಾಣಿ ಕೂಡ. ಅವು ಅಪಾಯಕಾರಿಯಾಗದ ಹಾಗೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ. ''ಹಾವಿನ ಬಾಯ ಹಲ್ಲ ಕಳೆದು ಹಾವನಾಡಿ ಸಬಲ್ಲಡೆ, ಹಾವಿನ ಸಂಗವೇ ಲೇಸು ಕಂಡಯ್ಯಾ'' ಎಂಬ ಅಕ್ಕಮಹಾದೇವಿಯ ನುಡಿಯನ್ನು ನೆನೆಯಬಹುದು. ಅಂತೆಯೆ, ನಾಯಿಗೆ ಹುಚ್ಚು ಹಿಡಿಯದಂತೆ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಬೇಕು. ವಿಷದ ಹಲ್ಲಿಲ್ಲದ ಹಾವು, ಹುಚ್ಚು ಹಿಡಿಯದ ನಾಯಿ ಒಳ್ಳೆಯ ಸಂಗಾತಿಗಳೇ.

ಸಂಸಾರಕ್ಕೆ ಪ್ರವೇಶಮಾಡದೆ ಉಳಿಯಬಲ್ಲವರು ವಿರಳ. (ಅಂಥವರಲ್ಲಿ ಕೆಲವರಾದರೂ ಯಾವುದೋ ಹಂತದಲ್ಲಿ, ತಮ್ಮ ವಿಮುಖತೆಗಾಗಿ ಪಶ್ಚಾತ್ತಾಪ ಪಟ್ಟಾರು, ಅದು ಅನಗತ್ಯವಾದರೂ!) ಸಂಸಾರದ ಮೋಹಕ ಮಾಯಾವಿಲಾಸ ಅಂಥದು. ಆದರೆ ಅದನ್ನು ನಮ್ಮ ಅಡಿಯಾಳಾಗಿ ಇಟ್ಟುಕೊಳ್ಳಬೇಕೆ ವಿನಾ, ಅರಸನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ. ಆಗ ಮಾತ್ರವೆ ನೆಮ್ಮದಿ. ಇಷ್ಟಕ್ಕೂ ಸಂಸಾರ ತ್ಯಾಜ್ಯವೇನಲ್ಲ. ಶ್ರೀ ರಾಮಕೃಷ್ಣಪರಮಹಂಸರು ಹೇಳುವಂತೆ ''ಕೋಟೆಯೊಳಗಿದ್ದು ಕೊಂಡು ಶತ್ರುಗಳನ್ನು ಗೆಲ್ಲುವುದು ಸುಲಭ. ಸಂಸಾರವೊಂದು ಕೋಟೆಯಿದ್ದ ಹಾಗೆ!'' ಅದು ಕೋಟಲೆಯಾಗಬಾರದಷ್ಟೆ.

■■

೧೮. 'ನ ಖಲು ತದ್ವಾಚ್ಯಂ'

ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ನಾಲ್ಕನೆಯ ಅಂಕ ಅತ್ಯಂತ 'ರಮ್ಯ'ವೆನಿಸಿದೆಯಷ್ಟೆ. ಅದರಲ್ಲಿ ಬರುವ ಒಂದು ಮಾತನ್ನು ಕುರಿತು ಇಲ್ಲಿ ಪರ್ಯಾಲೋಚಿಸಬೇಕಾಗಿದೆ. ಅದು ಅರ್ಥಗರ್ಭಿತವಾದದ್ದು.

ಶಕುಂತಲೆಯನ್ನು ಪತಿಗೃಹಕ್ಕೆ ಕಳುಹಿಸಿಕೊಡುವಾಗ, ಕಣ್ವರು ದುಷ್ಯಂತನಿಗೊಂದು ಸಂದೇಶವನ್ನು ಕಳುಹಿಸುತ್ತಾರೆ. ಅದರ ಕಡೆಯಲ್ಲಿ ಹೇಳುತ್ತಾರೆ : ''ಭಾಗ್ಯಾಯತ್ತಮತಃ ಪರಂ, ನ ಖಲು ತದ್ವಾಚ್ಯಂ ವಧೂ ಬಂಧುಭಿಃ'' (ಉಳಿದುದು ದೈವಕ್ಕೆ ಸೇರಿದ್ದು; ಅದನ್ನು ವಧುವಿನ ಬಂಧುಗಳು ಹೇಳತಕ್ಕದ್ದಲ್ಲ).

''ನ ಖಲು ತದ್ವಾಚ್ಯಂ'' ಎಂದರೆ 'ಅದನ್ನು ಹೇಳಕೂಡದು' ಎಂದೂ ಅರ್ಥವಾಗಬಹುದು ; 'ಹೇಳುವುದು ಸಾಧ್ಯವಿಲ್ಲ' ಎಂದೂ ಆಗಬಹುದು. ಕಣ್ವರಂಥ ಋಷಿಗಳಿಗೆ ಭವಿಷ್ಯ ಗೊತ್ತು; ಆದರೆ ಅದನ್ನು ಅವರು ಹೇಳಬಾರದು. ಸಾಮಾನ್ಯರಿಗೆ ಭವಿಷ್ಯ ಗೊತ್ತಿಲ್ಲ; ಆದ್ದರಿಂದ ಅದನ್ನವರು ಹೇಳಲಾರರು. ದುಷ್ಯಂತ ಶಕುಂತಲೆಯನ್ನು ತಿರಸ್ಕರಿಸುತ್ತಾನೆಂಬುದು ಕಣ್ವರಿಗೆ ಮೊದಲೇ ತಿಳಿದಿತ್ತೆಂಬುದು, ಅವರು ಅವನಿಗೆ ಕಳುಹಿಸಿದ ಸಂದೇಶದ ಧಾಟಿಯಲ್ಲೆ ವ್ಯಕ್ತವಾಗುತ್ತದೆ. ಹಾಗಿದ್ದರೆ, ಅವರು ಶಕುಂತಲೆಗೊದಗಿದ ದುರವಸ್ಥೆಯನ್ನು ತಡೆಗಟ್ಟಬಹುದಿತ್ತಲ್ಲ ಎಂಬ ಪ್ರಶ್ನೆಯೇಳುತ್ತದೆ. ಉತ್ತರವಿಷ್ಟೆ : ಯಾವುದೇ ಒಂದು ಚೇತನ ಅನೇಕ ಪೆಟ್ಟುಗಳಿಗೆ ಗುರಿಯಾಗಿ ಸಂಸ್ಕಾರಗೊಳ್ಳಬೇಕಾದ್ದು ಅನಿವಾರ್ಯ ; ಅದನ್ನು ಯಾರೂ–ಕಣ್ವರು ಕೂಡ–ತಪ್ಪಿಸಬಾರದು. ಆಘಾತವಿಲ್ಲದೆ ಉದ್ಧಾರವಿಲ್ಲ. ಅಲ್ಲದೆ, ಶಕುಂತಲೆ ತನ್ನ ಕರ್ಮಕ್ಕೆ ಶಿಕ್ಷೆ ಅನುಭವಿಸಲೇಬೇಕು. ಅದಕ್ಕೆ ಕಣ್ವರು ಅಡ್ಡಬರಲಾರರು. ಆದರೆ ಅಂತಿಮವಾಗಿ ಅವಳಿಗೆ ಒಳಿತಾಗುತ್ತದೆಯೆಂಬುದನ್ನವರು ಬಲ್ಲರು ; ಅಲ್ಲದೆ ಆ ಅಂತ್ಯಮಂಗಳಕ್ಕಾಗಿ ಅವರು ಆರಂಭದಲ್ಲೆ ಪ್ರಯತ್ನ ಪರರಾಗುತ್ತಾರೆ. ಶಕುಂತಲೆಯ ಪ್ರತಿಕೂಲ ದೈವಶಮನಾರ್ಥವಾಗಿ ಅವರು ಸೋಮತೀರ್ಥಕ್ಕೆ ಹೋಗಿರುವ ಸಂಗತಿ 'ಶಾಕುಂತಲ'ದ ಆದಿಯಲ್ಲೆ ಉಕ್ತವಾಗಿದೆ.

ಭವಿಷ್ಯವನ್ನು ಯಾರೂ ಯಾವಾಗಲೂ ಹೇಳಬಾರದು, ಅದರ ಮುಂಗಾಣ್ಕೆ ಸಾಧ್ಯವಾದರೂ ಕೂಡ. ಹಾಗೆ ಹೇಳುವುದರಿಂದ ದೈವೀಯೋಜನೆಗೆ ಭಂಗ ಬರುತ್ತದೆ ; ಎಲ್ಲವೂ ಗೊಂದಲಮಯವಾಗುತ್ತದೆ. (ಮ್ಯಾಕ್‌ಬೆತ್‌ನಿಗೆ ಯಕ್ಷಿಣಿಯರು ಭವಿಷ್ಯ ನುಡಿದುದರಿಂದ ಉಂಟಾದ ದುರಂತವನ್ನು ನೆನೆಯಬಹುದು.) ಈ ಸತ್ಯವನ್ನು ಕಣ್ವರು ಅರಿತವರಾದ್ದರಿಂದಲೇ, ಭವಿಷ್ಯಜ್ಞಾನಿಯಾಗಿಯೂ, ''ಅತಃ ಪರಂ ನ ಖಲು ತದ್ವಾಚ್ಯಂ'' ಎಂದುಬಿಡುತ್ತಾರೆ. ಅವರಂತೆ ಒಳಗಣ್ಣಿಲ್ಲದವರೂ ಅಸಹಾಯರಾಗಿ ಹಾಗೆಯೆ ಉದ್ಗರಿಸಬೇಕಾಗುತ್ತದೆ.

''ನ ಖಲು (ತದ್) ವಾಚ್ಯಂ'' ಎಂಬುದನ್ನಷ್ಟೆ ತೆಗೆದುಕೊಂಡರೂ, ಅದೊಂದು ಉಪಾದೇಯವಾದ ಲೌಕಿಕ ಸಂದೇಶವಾಗುತ್ತದೆ, ಎಲ್ಲರಿಗೂ. ನಮಗೆ ಗೊತ್ತಿರುವುದನ್ನೆಲ್ಲ ಸಮಯ ಸಂದರ್ಭ ನೋಡದೆ, ಔಚಿತ್ಯಪ್ರಜ್ಞೆಯಿಲ್ಲದೆ, ಎಲ್ಲರ ಮುಂದೆ ಒದರುತ್ತ ಹೋಗಬಾರದು. ಕೆಲವೊಮ್ಮೆ ಕೆಲ ವಿಷಯಗಳನ್ನು ಮನಸ್ಸಿನಲ್ಲೆ ಇಟ್ಟುಕೊಂಡು ಮೌನ ವಹಿಸಬೇಕಾಗುತ್ತದೆ; ಕೆಲವೊಮ್ಮೆ ಮನೋಗತವನ್ನು ಬಾಯಿಬಿಟ್ಟು ನೇರವಾಗಿ ಹೇಳದೆ ಸೂಕ್ಷ್ಮವಾಗಿ ಸೂಚಿಸಬೇಕಾಗುತ್ತದೆ. ಇದು ಭೂತ, ವರ್ತಮಾನಗಳಿಗೆ ಅನ್ವಯಿಸುವ ಉಪದೇಶ ; ಭವಿಷ್ಯದ ಮಾತು ಇಲ್ಲಿ ಬೇಡ. ನೆನಪಿಡಬೇಕು : ಮೌನ ಬಂಗಾರ, ಮಾತು ಬೆಳ್ಳಿ–ಧ್ವನಿಸಮನ್ವಿತವಾಗಿದ್ದರೆ ; ಇಲ್ಲವಾದರೆ ಹಿತ್ತಾಳೆ.

ಇನ್ನು, ಕಣ್ವರಂಥವರೇ ''ದೈವಾಯತ್ತಮತಃಪರಂ'' ಎಂದ ಮೇಲೆ, ಉಳಿದವರ ಪಾಡೇನು ? ಹೌದು, ಎಲ್ಲ ದೈವವನ್ನೆ ಅವಲಂಬಿಸಿದೆ. ಹಾಗೆಂದು, ನಮ್ಮ ಕರ್ತವ್ಯದಿಂದ ವಿಮುಖರಾಗತಕ್ಕದ್ದಲ್ಲ. ಶುಭಕ್ಕಾಗಿ ಹಾರೈಸಬೇಕು, ದೈವವನ್ನು ಪ್ರಾರ್ಥಿಸಬೇಕು. ಕಷ್ಟನಷ್ಟಗಳಿಲ್ಲದೆ ಬಹುಶಃ ಪ್ರಾಪ್ತವಾಗತಕ್ಕದ್ದಲ್ಲ, ಶ್ರೇಯ.

■■

೧೯. ಕುತೂಹಲ

ವಾಲ್ಮೀಕಿ ರಾಮಾಯಣದಲ್ಲಿ ಅಹಲ್ಯಾ ಪ್ರಕರಣ ಬರುತ್ತದಷ್ಟೆ. ಪತಿಯಿದ್ದೂ ಅಹಲ್ಯೆ ಇಂದ್ರನಲ್ಲಿ ಮೋಹಗೊಂಡುದಕ್ಕೆ ಕಾರಣವನ್ನು ವಾಲ್ಮೀಕಿಗಳು ಒಂದೇ ಒಂದು ಮಾತಿನಲ್ಲಿ ತಿಳಿಸುತ್ತಾರೆ: ''ದೇವರಾಜ ಕುತೂಹಲಾತ್'' (ದೇವೇಂದ್ರನ ಬಗೆಗಿನ ಕುತೂಹಲದಿಂದ). ಇದು ಅರ್ಥಯುಕ್ತವೂ ಮನೋವೈಜ್ಞಾನಿಕವೂ ಆಗಿದೆ. ಆ ಕುತೂಹಲದಿಂದ ಅಹಲ್ಯೆ ಎಂತಹ ದುರಂತವನ್ನು ತಂದುಕೊಂಡಳೆಂಬುದನ್ನೂ ಕವಿ ಚಿತ್ರಿಸಿದ್ದಾನೆ.

ಕುತೂಹಲ ಎರಡು ತೆರನಾಗಿರಬಲ್ಲುದು : ಒಳ್ಳೆಯದು ಮತ್ತು ಕೆಟ್ಟದ್ದು. ಜ್ಞಾನ, ವಿಜ್ಞಾನಗಳಿಗೆ, ಕಲೆಯ ಪ್ರಪಂಚಕ್ಕೆ, ಅಧ್ಯಾತ್ಮಕ್ಕೆ ಕೂಡ ಒಳ್ಳೆಯ ಕುತೂಹಲವೇ ಪ್ರೇರಕ ಚೈತನ್ಯ. ಏನು ? ಏಕೆ ? ಹೇಗೆ ? ಎಂಬ ಕುತೂಹಲಾನ್ವಿತ ಪ್ರಶ್ನೆಗಳೆ ಮಾನವನನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಿವೆ ; ಸೃಷ್ಟಿರಹಸ್ಯಭೇದನಕ್ಕೆ ಕುಮ್ಮಕ್ಕು ಕೊಟ್ಟಿವೆ. ಮಗು ಹುಟ್ಟಿದ ಕೂಡಲೆ ಸುತ್ತಣ ಜಗತ್ತನ್ನು ಬೆರಗುಗಣ್ಣುಗಳಿಂದ, ಕುತೂಹಲ ದೃಷ್ಟಿಯಿಂದ ನೋಡುತ್ತದೆ. ಕಾವ್ಯಕ್ಕೆ ವಿಸ್ಮಯ, ಕುತೂಹಲಗಳೆ ತಳಹದಿಯೆನ್ನ ಬಹುದು. ಆಶ್ಚರ್ಯ ಚಿಹ್ನೆ, ಪ್ರಶ್ನ ಚಿಹ್ನೆ ಎರಡೂ ಕುತೂಹಲ ಸಂಬಂಧಿಯಾದವೇ ; ಒಂದು ಬುದ್ಧಿಗೆ ಸೇರಿದ್ದಾದರೆ, ಇನ್ನೊಂದು ಹೃದಯಕ್ಕೆ ಸೇರಿದ್ದು.

ಕುತೂಹಲ ಎಲ್ಲರಿಗೂ ಒಂದೇ ಪ್ರಮಾಣದಲ್ಲಿರುತ್ತದೆಂದು ಹೇಳಬರುವುದಿಲ್ಲ. ವಿಜ್ಞಾನಿಗಳಲ್ಲಿ ಅದು ಪರಮಾವಧಿ ಮಟ್ಟದಲ್ಲಿರುತ್ತದೆ. ಒಂದು ಉದಾಹರಣೆ ಕೊಡಬಹುದು. ಮೇಲಕ್ಕೆಸೆದ ವಸ್ತು ಕೆಳಕ್ಕೆ ಬೀಳುವುದು ಕೇವಲ ಸಹಜವೆಂದು ಸಾಮಾನ್ಯರ ತಿಳಿವಳಿಕೆ. ಆದರೆ ಅದು ಮೇಲಕ್ಕೇ ಹಾರಿಹೋಗುವುದಿಲ್ಲವೇಕೆ, ಕೆಳಕ್ಕೇ ಬೀಳಬೇಕೇಕೆ ಎಂಬ ಪ್ರಶ್ನೆ ನ್ಯೂಟನ್‌ಗೆ ಮಾತ್ರ ಎದುರಾಯಿತು. ಮರದ ಹಣ್ಣೊಂದು ಕೆಳಕ್ಕೆ ಬಿದ್ದಾಗ ಅವನಲ್ಲಿ ಕೆರಳಿದ ಕುತೂಹಲ, ಭೂಮಿಯ ಗುರುತ್ವಾಕರ್ಷಣ ಸಿದ್ಧಾಂತಕ್ಕೆ ನಾಂದಿಯಾಯಿತು. ಈ ಸಿದ್ಧಾಂತದ ಮಹತ್ವ ವೆಷ್ಟೆಂಬುದು ಇಂದು ಎಲ್ಲರಿಗೂ ಗೊತ್ತು. ನ್ಯೂಟನ್‌ಗೆ ಕುತೂಹಲವುಂಟಾಗದಿದ್ದರೆ, ಈ ಗುರುಸತ್ಯ ಪ್ರಾಯೇಣ ಬೆಳಕಿಗೆ ಬರುತ್ತಿರಲಿಲ್ಲ.

ಇನ್ನು ಕೆಟ್ಟ ಕುತೂಹಲ; ಅಹಲ್ಯೆಯಂಥವರದು. ಇದು ಮನುಷ್ಯನ ನೈತಿಕ ಭೂಮಿಕೆಗೆ ಸಂಬಂಧಿಸಿದ್ದು. ವ್ಯಕ್ತಿಗೆ ಹಲವು ಸಾಮಾಜಿಕ ವಿಧಿ ನಿಷೇಧಗಳಿರುತ್ತವೆ. ಅವುಗಳನ್ನು ಮೀರಬೇಕೆಂಬ ಪ್ರಲೋಭನೆ, ಮೀರಿದರೆ ಏನಾಗುತ್ತದೆಯೆಂಬ ಕುತೂಹಲ ಆಗಾಗ ಉಂಟಾಗಿ, ನಾನಾ ರೀತಿಯ ಅನರ್ಥಗಳಿಗೆ ಹೇತುವಾಗುತ್ತವೆ. ಸಾಮಾಜಿಕ ಕಟ್ಟುಪಾಡುಗಳ ಉಲ್ಲಂಘನೆಯಲ್ಲೆ ಏನೊ ಒಂದು ಸುಖವಿರುವಂತೆ

ತೋರಿಬರುವುದೂ ಉಂಟು. ಉಲ್ಲಂಘಿಸಿದ ಬಳಿಕ ಅಷ್ಟಿಷ್ಟು ಸುಖ ಸಿಗಬಹುದು, ಸಿಗದಿರಬಹುದು; ಸಿಕ್ಕಿದಾಗ ಕೂಡ ಅದು ತಾತ್ಕಾಲಿಕ, ಆದರೆ ಶಾಶ್ವತ ದುಷ್ಪರಿಣಾಮ ಬೀರುವಂಥದು. ಧರ್ಮ, ನೀತಿಗಳಿಗೆ ವಿರುದ್ಧವಾದ ಇಂಥ ಸುಖದ ಸಂಪಾದನೆ ವ್ಯಕ್ತಿಗೆ ಅಂತಿಮವಾಗಿ ಮಾರಕವಾಗುವುದು ಮಾತ್ರವಲ್ಲದೆ, ಸಮಾಜದ ನೆಮ್ಮದಿಯನ್ನೂ ಕೆಡಿಸಬಹುದು. ಅಂತೂ ಎಲ್ಲ ಅಪರಾಧಗಳ, ಪಾಪಗಳ ಹಿನ್ನೆಲೆಯಲ್ಲಿರತಕ್ಕದ್ದು ಕೆಟ್ಟ ಕುತೂಹಲ.

ಮನುಷ್ಯ ಇತರರ ಅನುಭವಗಳಿಂದ ಪಾಠ ಕಲಿಯುವುದಿಲ್ಲ; ಸ್ವಾನುಭವದಿಂದಲೆ ಕಲಿಯುವುದು ಅವನ ಪ್ರವೃತ್ತಿ. ಆದರೆ ಅದಕ್ಕೆ ತೆರಬೇಕಾದ ಬೆಲೆ ಎಷ್ಟು ದುಬಾರಿ! ವ್ಯಕ್ತಿ ಕುತೂಹಲವನ್ನು ಹತ್ತಿಕ್ಕಿ ಹಿಂದಿನವರ, ಹಿರಿಯರ, ಅನ್ಯರ ಅನುಭವಗಳ ಲಾಭ ಪಡೆಯಬಲ್ಲನಾದರೆ ನಿಜವಾದ ಸುಖ, ಶಾಂತಿಗಳು ದೊರೆಯುವುದರಲ್ಲಿ ಸಂಶಯವಿಲ್ಲ. 'ದೇವರಾಜ ಕುತೂಹಲ'ದಿಂದ ಅಹಲ್ಯೆ ಪಡೆದುದೇನು? ಅವಳ ಪತಿ ಕೊಡದಿದ್ದ ಸುಖವೇನದು? ಅವಳದು ವ್ಯರ್ಥ ಕುತೂಹಲ; ಅಹಿತಕರವಾದದ್ದು. ಅಲ್ಲದೆ, ಮಾನವರಿಗೆ 'ದೇವರಾಜ ಕುತೂಹಲ' ತಗದು. ತಮ್ಮ ಮಿತಿಗಳನ್ನು ಅರ್ಥ ಮಾಡಿಕೊಂಡು ಅವರು ಸಂಯಮದಿಂದ ಬದುಕಬೇಕು. ದುರಾಶೆ, ಅತ್ಯಾಶೆ ಸಲ್ಲದು. ''ನ ದೇವ ಚರಿತಂ ಚರೇತ್.''

ಒಳ್ಳೆಯ ಕುತೂಹಲ ಎಲ್ಲರಿಗೂ ಇರಬೇಕು; ಕೆಟ್ಟ ಕುತೂಹಲ, ವ್ಯರ್ಥ ಕುತೂಹಲ ಮಾತ್ರ ಬೇಡ. ಇಂದ್ರ, ಅಹಲ್ಯೆಯರ ಜಾಡು ತ್ಯಾಜ್ಯ; ಶುಚಿಯಾದ ಶಚಿ ಎಲ್ಲರ ಆದರ್ಶವಾಗಿರಲಿ.

■■

೨೦. ಪರೋಪದೇಶ

ಲೋಕದಲ್ಲಿ ಬಹಳ ಮಂದಿ ಪರೋಪದೇಶಪಂಡಿತರು; ನಮ್ಮ ದೇಶದಲ್ಲಂತೂ ಇಂಥವರ ಸಂಖ್ಯೆ ವಿಪುಲ. ಹೆರರಿಗೆ ಹೇಳುವುದನ್ನು ಇವರು ಸ್ವತಃ ಆಚರಿಸುವುದಿಲ್ಲ ವಾದ್ದರಿಂದಲೇ ದೇಶದ ಅವಸ್ಥೆ ಹೀಗಿರುವುದು.

''ನಾನು ಹೇಳಿದಂತೆ ಮಾಡು. ಆದರೆ ನಾನು ಮಾಡುವಂತೆ ಮಾಡಬೇಡ'' (Do as I say, don't do as I do) ಎಂಬುದು ಇಂಥ ಉಪದೇಶಪ್ರವೀಣರ ಅವ್ಯಕ್ತ ನಿಲುವು. ಇದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ವ್ಯಕ್ತಿ ಮಾಡುವುದೊಂದು, ಹೇಳುವುದು ಮತ್ತೊಂದು ಆದಾಗ, ಅವನ ಬೋಧನೆ ಪರಿಣಾಮರಹಿತವಾಗುವುದು ಸಹಜ. ಅದಕ್ಕೆ ಬೆಲೆ ಬರುವುದು, ವ್ಯಕ್ತಿ ಅದನ್ನು ತನ್ನ ಸ್ವಂತ ಬದುಕಿನಲ್ಲಿ ಅನುಷ್ಠಾನಕ್ಕೆ ತಂದಾಗ. ನಡೆ–ನುಡಿಗಳಲ್ಲಿ ಸಾಮರಸ್ಯವಿಲ್ಲದಿದ್ದಾಗ, ಯಾರನ್ನೂ ಮೆಚ್ಚಿಸುವುದು ಸಾಧ್ಯವಾಗದು. ಇನ್ನೊಬ್ಬರನ್ನು ತಿದ್ದಬಯಸುವ ವ್ಯಕ್ತಿ ತಾನೆ ಮೇಲ್ಪಂಕ್ತಿಯಾಗಬೇಕು, ಮಾದರಿಯಾಗಬೇಕು.

ಅನುಕರಣ ಮಾನವನ ಸಹಜಪ್ರವೃತ್ತಿ ; ಇನ್ನೊಬ್ಬರ ಕ್ರಿಯೆಯನ್ನು ಅವನು ಸುಲಭವಾಗಿ ಅನುಕರಿಸುತ್ತಾನೆಯೆ ಹೊರತು, ಅವರ ಮಾತಿನಿಂದ ಪ್ರಭಾವಿತ ನಾಗುವುದಿಲ್ಲ. ಆದ್ದರಿಂದ, ಉದ್ದಿಷ್ಟ ಮೌಲ್ಯಗಳನ್ನು ವ್ಯಕ್ತಿ ಆಚರಿಸಿ ತೋರಿದರೆ ಸಾಕು ; ಆಗ ಉಪದೇಶದ ಅಗತ್ಯವೆ ಇರುವುದಿಲ್ಲ. ''ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ'' ಎಂಬ ಬಸವ ವಚನದಲ್ಲಿ ಇದೇ ಅರ್ಥ ಇರತಕ್ಕದ್ದು. ನಮ್ಮ ನಮ್ಮ ಡೊಂಕನ್ನು ನಾವು ತಿದ್ದಿ ಕೊಂಡರೆ ಇತರರೂ ನಮ್ಮನ್ನು ಅನುಕರಿಸಿ ತಮ್ಮ ತಮ್ಮ ಡೊಂಕು ಕೊಂಕುಗಳನ್ನು ತಿದ್ದಿಕೊಳ್ಳುತ್ತಾರೆ. ಬರಿಯ ಉಪದೇಶದಿಂದ ಸಮಾಜ ಸುಧಾರಣೆ ಮಾಡುವ ಪ್ರಯತ್ನ ವಿಫಲವಾಗುವ ಸಂಭವವೆ ಹೆಚ್ಚು.

ಇದು ವಿಷಯದ ಒಂದು ಮುಖ. ಇನ್ನೊಂದು ಮುಖವನ್ನೂ ನೋಡಬೇಕು. ಎಲ್ಲ ನಿಯಮಗಳಿಗೂ ಅಪವಾದಗಳುಂಟಷ್ಟೆ. ತಾನು ಉಪದೇಶಿಸುವುದನ್ನೆಲ್ಲ ಒಬ್ಬ ವ್ಯಕ್ತಿ ಎಲ್ಲ ಸಂದರ್ಭಗಳಲ್ಲೂ ಅಕ್ಷರಶಃ ಆಚರಿಸಿಯೆ ತೋರಬೇಕು, ತನ್ನ ಬದುಕನ್ನು ಬಹಿರಂಗ ಪ್ರದರ್ಶನಕ್ಕಿಡಬೇಕು ಎಂಬ ನಿರೀಕ್ಷೆ ಸಾಧುವೆ? ಕೆಲವೊಮ್ಮೆ ಸ್ವಂತ ಆಚರಣೆ ಅವನಿಗೆ ಅನಿವಾರ್ಯ ಕಾರಣಗಳಿಂದ ಸಾಧ್ಯವಾಗದಿರಬಹುದು, ಆದರೆ ತನ್ನಂತೆ ಇತರರೂ ಆಗದಿರಲಿ ಎಂಬ ಕಳಕಳಿಯಿಂದ ಅವನು ಪರೋಪದೇಶ ಮಾಡಬಹುದು. ಆಗ ಅದನ್ನು ನಿರಾಕರಿಸುವುದು ಉಚಿತವೆ ? ಉದಾಹರಣೆಗೆ, ಧೂಮಪಾನವನ್ನು ಬಿಡಲಾರದ ಒಬ್ಬ ವ್ಯಕ್ತಿ, ಆ ಚಟದಿಂದ ಇತರರಾದರೂ ದೂರ

ಉಳಿಯಲೆಂಬ ಸದುದ್ದೇಶದಿಂದ, ಧೂಮಪಾನದ ದುಷ್ಪರಿಣಾಮಗಳನ್ನೂ ತನ್ನದೇ ಆರೋಗ್ಯ ಅದರಿಂದ ಹೇಗೆ ಹಾಳಾಗಿದೆಯೆಂಬುದನ್ನೂ ಅನ್ಯರ ಮುಂದೆ ವಿವರಿಸುತ್ತಾನೆ ಎಂದಿಟ್ಟುಕೊಳ್ಳೋಣ. ಅವನ ಮಾತುಗಳನ್ನು ತಳ್ಳಿಹಾಕಬಹುದೆ? ವಾಸ್ತವವಾಗಿ, ಅವನ ಮಾತುಗಳು ಧೂಮಪಾನ ಮಾಡದ ವ್ಯಕ್ತಿಯ ಮಾತುಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಬೇಕು. ಏಕೆಂದರೆ ಅವು ಅನುಭವಜನ್ಯ ; ಉಪಯುಕ್ತ.

ಆದ್ದರಿಂದ, ವ್ಯಕ್ತಿ ತನ್ನ ಉಪದೇಶವನ್ನು ಸ್ವತಃ ಪಾಲಿಸುತ್ತಿದ್ದಾನೆಯೆ ಎಂಬ ಪ್ರಶ್ನೆಗಿಂತ, ಅವನ ಉಪದೇಶ ಎಷ್ಟರಮಟ್ಟಿಗೆ ಪ್ರಾಮಾಣಿಕವಾದದ್ದು, ಹೃತ್ಪೂರ್ವಕ ವಾದದ್ದು, ಸಮಾಜ ಸುಧಾರಣೆಯ ಕಳಕಳಿಯಿಂದ ಕೂಡಿದ್ದು ಎಂಬ ಪ್ರಶ್ನೆ ಮುಖ್ಯ ವಾದುದೆನಿಸುತ್ತದೆ. ಸ್ವತಃ ಆಚರಿಸದವನಿಗೆ ಉಪದೇಶದ ಹಕ್ಕಿಲ್ಲ ಎಂದು ಬೇಕಾದರೆ ಒಪ್ಪೋಣ. ಆದರೆ ಅವನ ಉಪದೇಶ ಯಾವಾಗಲೂ ತಿರಸ್ಕಾರಯೋಗ್ಯ ವಾಗಬೇಕಿಲ್ಲ. ಒಬ್ಬನ ವೈಯಕ್ತಿಕ ಬದುಕನ್ನು ಪರೀಕ್ಷಿಸಿಯೇ ಅವನ ಉಪದೇಶವನ್ನು ಒಪ್ಪುತ್ತೇನೆ, ಇಲ್ಲವೆ ಬಿಡುತ್ತೇನೆ ಎಂದು ಹಟ ಹಿಡಿಯುವುದು ಅತಿರೇಕವಾದೀತು. ಒಳ್ಳೆಯ ಮಾತು, ಹಿತದಿಂದ ಕೂಡಿದ ಮಾತು ಯಾರಿಂದ ಬಂದರೂ ಸ್ವೀಕಾರ್ಯವೇ. ತ್ರಿಕರಣಶುದ್ಧಿ ಶ್ರೇಷ್ಠತಮ ಆದರ್ಶ ; ಆದರೆ ವಿರಳವಾದದ್ದು.

■■

೨೧. ಹೊಗಳಿಕೆ

ಅಧಿಕಾರದಲ್ಲಿರುವವರನ್ನು ಜನ ಓಲೈಸುವುದು, ಧಾರಾಳವಾಗಿ ಹೊಗಳುವುದು ಸರ್ವೇಸಾಮಾನ್ಯ. ಅಧಿಕಾರಮಹಿಮೆಯಿಂದ ಗುಣದ ಕಣ ಕಡಲಾಗಿ ಪರಿಣಮಿಸಿ ಪೂಜೆಗೊಳ್ಳುತ್ತದೆ. ಕೆಲವರು ಅರ್ಹತೆಯಿಂದ ಅಧಿಕಾರ ಪಡೆದರೆ ಹಲವರು ಅಧಿಕಾರಬಲದಿಂದ ಕೀರ್ತಿ, ಸ್ತುತಿಗಳಿಗೆ ಅರ್ಹತೆ ಪಡೆಯುತ್ತಾರೆ. ಅಧಿಕಾರ ಹೋದ ಮೇಲೆ ವ್ಯಕ್ತಿ ಮತ್ತೆ 'ಹಾಳೂರ ಶುನಕ'ನಾಗುತ್ತಾನೆ. ಇದು ಲೋಕದ ಪರಿ.

ಅಧಿಕಾರಸ್ಥಾನಗಳಲ್ಲಿರುವವರೆಲ್ಲ ಅನರ್ಹರು, ನಿರ್ಗುಣಿಗಳು ಎಂದೇನೂ ಅರ್ಥವಲ್ಲ. ಸ್ವಸಾಮರ್ಥ್ಯ, ಯೋಗ್ಯತೆ ಅಂಥ ಎಷ್ಟೋ ಮಂದಿಯಲ್ಲಿರುತ್ತದೆ. ಆದರೆ ಜನ ಅದನ್ನು ಗುರುತಿಸಿ ಗೌರವಿಸುವುದು ಮಾತ್ರ ಆಯಾ ವ್ಯಕ್ತಿಯ ಅಧಿಕಾರದ ಕಾರಣದಿಂದಲೇ. ಅಧಿಕಾರದಲ್ಲಿಲ್ಲದವರನ್ನು ಯಾರು ಲಕ್ಷಿಸುತ್ತಾರೆ? ಅವರು ಎಷ್ಟೇ ಸಮರ್ಥರಾದರೂ, ಎಷ್ಟೇ ಸಾಧನೆ ಮಾಡಿದರೂ ಪುರಸ್ಕಾರ ಸಿಕ್ಕುವುದು ಕಷ್ಟ. ಅಪವಾದಗಳು ಅಲ್ಲೊಂದು ಇಲ್ಲೊಂದು ಇರಬಹುದು.

''ಅಧಿಕಾರ ಪಂಚೆಗೆ ಅಂಚಿದ್ದಂತೆ: ಭೂಷಣಕ್ಕೆ ಭೂಷಣ, ಭದ್ರತೆಗೆ ಭದ್ರತೆ'' ಎಂಬುದು ಕುವೆಂಪು ಅವರ ಒಂದು ಮಾತು. ಹೊಗಳಿಕೆ, ಪ್ರಸಿದ್ಧಿಗಳಿಗೂ ಸಾಧನವಾಗುತ್ತದೆ, ಅಧಿಕಾರ. ಒಳ್ಳೆಯ ಕೆಲಸ ಮಾಡುವುದಕ್ಕೆ, ಜನತಾಸೇವೆಗೆ ಅದರಲ್ಲಿ ಅವಕಾಶಗಳೂ ಉಂಟು. ಆದರೆ ದುರುಪಯೋಗದ ಸಾಧ್ಯತೆಯೂ ಇದ್ದು, ಹಾಗಾದಾಗ ಅದು ಪತನಹೇತುವಾಗುತ್ತದೆ. ನಹುಷನ ಕತೆಯನ್ನು ನೆನೆಯಬಹುದು.

ಅಧಿಕಾರ, ಅನಧಿಕಾರಗಳ ಮಾತು ಹಾಗಿರಲಿ, ಕೀರ್ತಿ ಪುರಸ್ಕಾರಗಳ ಪ್ರಾಪ್ತಿಯಲ್ಲಿ ಅದೃಷ್ಟದ ಪಾತ್ರವೂ ಇರುವುದನ್ನು ಅಲ್ಲಗಳೆಯುವಂತಿಲ್ಲ. ಒಬ್ಬರಿಗೆ ಬರುವ ಕೀರ್ತಿ ಅಷ್ಟೇ ಸಮರ್ಥರಾದ, ಅಥವಾ ಅಧಿಕಸಮರ್ಥರಾದ ಇನ್ನೊಬ್ಬರಿಗೆ ಬರದಿರಬಹುದು; ಅಲ್ಪಸಾಧನೆಗೆ ಸಿಕ್ಕುವ ಪ್ರಚಾರ, ಪ್ರಶಂಸೆಗಳು ಮಹತ್ ಸಾಧನೆಗೆ ದೊರಕದಿರಬಹುದು.

ಲೀಲಾಶುಕನ 'ಶ್ರೀ ಕೃಷ್ಣಕರ್ಣಾಮೃತ'ದ ಒಂದು ಪದ್ಯವನ್ನಿಲ್ಲಿ ಸ್ಮರಿಸಬಹುದು. ರಾಧೆ ಕೃಷ್ಣನಿಗೆ ವಿಷಾದದಿಂದ ಹೇಳುವ ಈ ಮಾತುಗಳಲ್ಲಿರುವ ಚಮತ್ಕಾರದ ಮತ್ತು ಶೃಂಗಾರದ ಅಂಶಗಳನ್ನು ಕಡೆಗಣಿಸಿ, ತಾತ್ಪರ್ಯವನ್ನು ಗ್ರಹಿಸಬೇಕು :

ನೆಲದೊಳಾವುದೊ ಒಂದು ಹಗುರಾದ ಬೆಟ್ಟವನು
  ಸುಲಭದಲಿ ತೋಳ್ಗಳಿಂ ಮೇಲೆತ್ತಿದೆ
ನೀನು ; ಅದರಿಂ ಸತತ ಗೋವರ್ಧನನು ಎಂದು
  ಸ್ವರ್ಗಮರ್ತ್ಯಾದಿ ನಿನ್ನ ಕೀರ್ತಿಸುವರು.

ಮೂರು ಲೋಕವ ಧರಿಸಿದಂಥ ನಿನ್ನನು, ಕೃಷ್ಣ,
ಧರಿಸುವೆನು ನಾನೆನ್ನ ಮೊಲೆತುದಿಯಲಿ.
ಆದರೂ ಇದು ಲೆಕ್ಕಕಿಲ್ಲ! ಬಹು ಮಾತಿನೊಳು
ಫಲವೇನು ? ಯಶ ಬಹುದು ಪುಣ್ಯದಿಂದ !

ಗೀತೆಯಲ್ಲಿ ಕೃಷ್ಣ ಉಸುರಿದ ''ಕರ್ಮಣ್ಯೇವಾಧಿಕಾರಸ್ತೇ, ಮಾ ಫಲೇಷು ಕದಾಚನ'' ಎಂಬ ಮಾತು ಒಂದರ್ಥದಲ್ಲಿ ರಾಧೆಯ ಆಕ್ಷೇಪಣೆಗೆ ಉತ್ತರವಾಗ ಬಹುದೇನೊ. ಕೆಲಸ ಮಾಡಬೇಕು; ಆದರೆ ಕೀರ್ತಿಯ ಆಸೆಯಿಟ್ಟುಕೊಳ್ಳಬಾರದು, ಹೊಗಳಿಕೆಯನ್ನು ನಿರೀಕ್ಷಿಸಬಾರದು. ಅದು ಅನಿಶ್ಚಿತ. ದುಡಿಮೆಯಲ್ಲೇ ಒಂದು ಸುಖವಿದೆ, ಸಮಾಧಾನವಿದೆ.

■■

೨೨. ದೇವಾಲಯಗಳು

ಭರತಖಂಡದಲ್ಲಿ ದೇವಾಲಯವಿಲ್ಲದ ಊರು ಯಾವುದಾದರೂ ಉಂಟೆ ? ದೇಶದಾದ್ಯಂತ ದೇವಾಲಯಗಳನ್ನು ಹಿಂದಿನವರು ಕಟ್ಟಿಸಿದರು. ರಾಜರು, ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು ದೇವಾಲಯ ನಿರ್ಮಾಣದಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಸ್ಪರ್ಧೆಯನ್ನೆ ಹೂಡಿದರೆನ್ನಬೇಕು. ಈ ದೇಗುಲಗಳಲ್ಲಿ ಎಷ್ಟೋ ಅಳಿದಿವೆ, ಇನ್ನೆಷ್ಟೋ ಜೀರ್ಣಾವಸ್ಥೆಯಲ್ಲಿವೆ; ಸುಸ್ಥಿತಿಯಲ್ಲಿರುವ ಗುಡಿಗಳ ಸಂಖ್ಯೆಯೂ ಸಾಕಷ್ಟಿದೆ.

ಹಿಂದಿನವರು ಮಾಡಿದ ಈ ಕೆಲಸ ಇಂದಿಗೆ ಅರ್ಥರಹಿತವಾಗಿಯೊ ಪ್ರಶ್ನಾಸ್ಪದವಾಗಿಯೊ ಕಂಡರೆ ಆಶ್ಚರ್ಯವಿಲ್ಲ. ದೇವರನ್ನೆ ನಂಬದವರ ಮಾತನ್ನು ಬಿಡೋಣ. ನಂಬತಕ್ಕವರಲ್ಲಿ ಕೆಲವರಾದರೂ ದೇವಾಲಯಗಳ ಅಗತ್ಯವನ್ನು ಪ್ರಶ್ನಿಸಬಹುದು. ದೇವರು ಎಲ್ಲೆಲ್ಲೂ ಇರುವಾಗ, ನಮ್ಮಲ್ಲೆ ಇರುವಾಗ ದೇವಾಲಯಗಳನ್ನು ಕಟ್ಟಬೇಕೇಕೆ ? ಅಲ್ಲಿ ಹೋಗಿ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸಬೇಕೇಕೆ ? ಇದು ಒಂದು ವಾದ. ದೇವಾಲಯಗಳು ದೇವರ, ಭಕ್ತಿಯ ನೆಪದಲ್ಲಿ ಸುಲಿಗೆ ಶೋಷಣೆಗಳ ಸಾಧನವಾಗಿಲ್ಲವೆ ? ಇದು ಮತ್ತೊಂದು ವಾದ.

ದೇವರಾಗಲಿ ದೇಗುಲವಾಗಲಿ ವಂಚನೆಯ ಮಾಧ್ಯಮಗಳಾಗಿರುವುದು ಅವುಗಳ ತಪ್ಪಲ್ಲ. ಲೋಕದಲ್ಲಿ ದುರುಪಯೋಗಗೊಳ್ಳಲಾರದ ವಸ್ತು ಯಾವುದೂ ಇಲ್ಲ. ದೇವಾಲಯಗಳು ಒಂದು ಕಾಲದಲ್ಲಿ ಸಾಮಾಜಿಕ ಸಂಸ್ಥೆಗಳಾಗಿ, ವಿದ್ಯಾಕೇಂದ್ರಗಳಾಗಿ, ಕಲಾ ಪ್ರದರ್ಶನ ವೇದಿಕೆಗಳಾಗಿ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದುದನ್ನು ಮರೆಯುವಂತಿಲ್ಲ. ಅವುಗಳ ಅವನತಿ ಈಚಿನದು; ಜನರ ಅವನತಿಯಿಂದಾದದ್ದು.

ದೇವರು ಸರ್ವಾಂತರ್ಯಾಮಿ. ನಿಜ : ''ಈಶಾವಾಸ್ಯಮಿದಂ ಸರ್ವಂ.'' ಆದರೆ ಸಾಮಾನ್ಯರಿಗೆ ಈ ಗಹನ ತತ್ತ್ವ ಗ್ರಾಹ್ಯವಾದದ್ದಲ್ಲ. ಅವರ ಪೂಜೆಗೊಂದು ಮೂರ್ತವಾದ ದೇವರು ಬೇಕು; ಅದರಿಂದ ಅವರ ಬಾಳಿಗೊಂದು ನಂಬಿಕೆ, ನೆಮ್ಮದಿ. ಭಗವಂತ ಸಾಕಾರನೂ ಹೌದು, ನಿರಾಕಾರನೂ ಹೌದು; ಸಗುಣನೂ ಹೌದು, ನಿರ್ಗುಣನೂ ಹೌದು. ಆದರೆ ಸಾಮಾನ್ಯರಿಗೆ ಸಾಕಾರ, ಸಗುಣ ಭಗವಂತನ ಉಪಾಸನೆಯಲ್ಲೆ ಆಸಕ್ತಿ; ಮಾತ್ರವಲ್ಲ, ಅವರಿಗೆ ಸುಲಭವಾದ ಮಾರ್ಗ ಅದೇ. (ಆದರೆ ದೇವರನ್ನು ಗುಡಿಗಷ್ಟೆ ಸೀಮಿತಗೊಳಿಸುವ ಅಪಾಯವೂ ಅದರಲ್ಲುಂಟು. ನಮ್ಮ ಸಮಾಜ ಆ ಅಪಾಯಕ್ಕೆ ಗುರಿಯಾಗದಿಲ್ಲ.)

ಭಗವಂತ ಎಲ್ಲೆಡೆ ಇದ್ದರೂ, ಭಗವದ್ಗೀತೆಯ ವಿಭೂತಿತತ್ತ್ವವನ್ನು ಅನ್ವಯಿಸಿ ನೋಡಿದರೆ, ದೇವಾಲಯಗಳಲ್ಲಿ ದೈವೀಶಕ್ತಿ ಹೆಚ್ಚಿನ ಪ್ರಮಾಣದಲ್ಲಿ, ತೀವ್ರತೆಯಲ್ಲಿ

ನೆಲೆಗೊಂಡಿರಬೇಕಷ್ಟೆ. ಭಕ್ತಿಯೆ ಭಗವಂತನನ್ನು ಸೃಷ್ಟಿಸತಕ್ಕದ್ದು, ಆವಿರ್ಭಾವಗೊಳಿಸ ತಕ್ಕದ್ದು. ಈ ದೃಷ್ಟಿಯಿಂದ ಪರಿಭಾವಿಸಿದರೆ, ದೇವಾಲಯಗಳಲ್ಲಿ ಶತಶತಮಾನಗಳಿಂದ ಎನಿತೊಂದು ಚೇತನಗಳ ಭಕ್ತಿ, ಸಮರ್ಪಣ, ಪ್ರಾರ್ಥನೆ, ಹಾರೈಕೆ ಮುಂತಾದುವು ಮಡುಗಟ್ಟಿ ನಿಂತಿವೆ! ಅಲ್ಲಿನ ವಾತಾವರಣ ಇತರೆಡೆಗಳಲ್ಲಿರುವಂತೆಯೇ ಎಂದು ಹೇಳಲಾದೀತೆ? ಆದಕ್ಕೊಂದು ವೈಶಿಷ್ಟ್ಯವಿಲ್ಲವೆ? ಆದ್ದರಿಂದ ದೇಗುಲಗಳ ಚಿತ್ ಪರಿಸರದಲ್ಲಿ, ಕಡೆಯ ಪಕ್ಷ ಸಾಮಾನ್ಯ ಜನಕ್ಕೆ, ಸಿಕ್ಕುವ ನೆಚ್ಚು,ಶಾಂತಿ ಸಮಾಧಾನಗಳು ಅನ್ಯತ್ರ ಸಿಕ್ಕವು. ಈ ವಿಷಯ ಮನೋವೈಜ್ಞಾನಿಕ ಪರಿಶೀಲನೆಗೂ ಯೋಗ್ಯವಾದದ್ದು.

ತಿಳಿದವರೆನಿಸಿಕೊಂಡವರು, ವಿಚಾರಮತಿಗಳೆನಿಸಿಕೊಂಡವರು ಎಲ್ಲವನ್ನೂ ತಮ್ಮ ಮೂಗಿನ ನೇರಕ್ಕೆ, ಇರಬೇಕೆಂದು ನಿರೀಕ್ಷಿಸುವುದಾಗಲಿ, ಹಾಗಿಲ್ಲದೆ ತಮಗೆ ರುಚಿಸದುದನ್ನು ಅಲ್ಲಗಳೆಯುವುದಾಗಲಿ ಸರಿಯಲ್ಲ. ನಾಡಿನ ಉದ್ದಗಲಕ್ಕೂ ದೇವಾಲಯಗಳು ಕಂಡುಬರುವುದು ಮೂಲತಃ ಅರ್ಥಹೀನವೇನೂ ಅಲ್ಲ. ಆದರೆ ಇಂದು ದೇವಾಲಯಗಳ ನಿಜವಾದ ಉದ್ದೇಶ ಈಡೇರುತ್ತಿದೆಯೇ ಎಂಬುದನ್ನೂ ಆಲೋಚಿಸಬೇಕು; ಅವುಗಳಲ್ಲಿರುವ ಅನಿಷ್ಟಗಳನ್ನು ತಪ್ಪಿಸಬೇಕು. ನಮ್ಮ ವೈಜ್ಞಾನಿಕ ದೃಷ್ಟಿ ದೇವರ ವಿರುದ್ಧವಾಗದೆ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಅನರ್ಥ, ಅನ್ಯಾಯಗಳ ವಿರುದ್ಧವಿರಬೇಕು. ಆದರೆ ಇಂದು ಹೊಸದಾಗಿ ದೇವಸ್ಥಾನಗಳನ್ನು ಕಟ್ಟಿಸುವುದು ಅನವಶ್ಯಕವಾದ, ಅಷ್ಟೇಕೆ, ಅನುಚಿತವಾದ ಕಾರ್ಯವಾಗುತ್ತದೆ.

''ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯಾ!'' ಎಂಬುದು ಸರಿಯಾದ ನಿಲುವು ಆದರೆ ಹಾಗೆ ಹೇಳಿಕೊಳ್ಳಲಾರದವರಿಗೆ ದೇವಾಲಯಗಳ ಅಗತ್ಯ ಉಂಟೆನ್ನಬಹುದು. ಎಲ್ಲೆಲ್ಲಿಯೂ ಇರುವ ದೇವರು ದೇಗುಲದಲ್ಲೂ ಇರುತ್ತಾನಷ್ಟೆ.

■■

೨೩. ದೇವರು-ಧರ್ಮ

ಜಗತ್ತಿನಲ್ಲಿ ನಾಸ್ತಿಕರಿಗಿಂತ ಆಸ್ತಿಕರ ಸಂಖ್ಯೆಯೇ ಮಿಗಿಲು. ಆದರೆ ಆಸ್ತಿಕರಲ್ಲಿ, ನಿಜವಾಗಿಯೂ ದೈವಭಕ್ತಿಯುಳ್ಳವರು ಕಡಮೆ; ಯಾಂತ್ರಿಕವಾದ ಪೂಜೆ, ಕರ್ಮಾಚರಣೆಗಳಲ್ಲಿ ತೊಡಗುವವರೇ ಹೆಚ್ಚು. ಇಂಥವರು ವಾಸ್ತವವಾಗಿ ಮತನಿಷ್ಠರೆ ಹೊರತು ಧರ್ಮರತರಲ್ಲ. ಅನ್ಯಮತಗಳ ಬಗ್ಗೆ ಅಸಹನೆ, ಸ್ವಂತ ಮತದ ಬಗ್ಗೆ ದುರಭಿಮಾನ ಅಥವಾ ಅಂಧಾಭಿಮಾನ ಇವರಲ್ಲಿ ನೆಲೆಗೊಂಡಿರುತ್ತದೆ. ದೇವರ ಬಗೆಗೆ ಅಪ್ಪಟವಾದ ಕಳಕಳಿಯುಳ್ಳವರು, ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರು ಉದಾರಮನೋಭಾವದವರಾಗಿರುತ್ತಾರೆ. ದೇವರನ್ನು ಪ್ರೀತಿಸುವವನು ಯಾರನ್ನೂ ದ್ವೇಷಿಸಲಾರ. ಆದರೆ ಲೋಕದ ಇತಿಹಾಸದ ಎಷ್ಟೋ ಪುಟಗಳು ಮತೀಯ ದ್ವೇಷ, ಕಲಹ, ರಕ್ತಪಾತಗಳಿಂದ ಕಳಂಕಿತವಾಗಿವೆ.

ಸ್ವಮತಭ್ರಾಂತರಾದವರು ತಮಗರಿವಿಲ್ಲದಂತೆಯೆ ದೇವರನ್ನು ಅವಹೇಳನ ಮಾಡುತ್ತಾರೆ; ದೈವದ್ರೋಹ ಬಗೆಯುತ್ತಾರೆ. ಆಚಾರ್ಯ ವಿನೋಬಾ ಭಾವೆಯವರು ಒಂದು ವಿಡಂಬನಾತ್ಮಕವಾದ ದೃಷ್ಟಾಂತ ಕಥೆ ಹೇಳಿದ್ದಾರೆ : ''ಒಬ್ಬಾತ, ಎಲ್ಲರೂ ಬಂದು ದೈವಾನುಗ್ರಹಕ್ಕೆ ಪಾತ್ರರಾಗಲೆಂಬ ಸದುದ್ದೇಶದಿಂದ ಒಂದು ಹಿಂದೂ ದೇವಾಲಯ ಕಟ್ಟಿಸಿದ. ಆದರೆ ಅದಕ್ಕೆ ಹಿಂದೂಗಳು ಮಾತ್ರ ಬರುತ್ತಿದ್ದರು, ಮುಸ್ಲಿಮರು ಬರುತ್ತಿರಲಿಲ್ಲ. ಆ ವ್ಯಕ್ತಿ ಅದರಿಂದ ನೊಂದುಕೊಂಡು, ಆ ದೇವಾಲಯವನ್ನೊಂದು ಮಸೀದಿಯನ್ನಾಗಿ ಪರಿವರ್ತಿಸಿದ. ಆಗ ಅಲ್ಲಿಗೆ ಮುಸ್ಲಿಮರು ಮಾತ್ರ ಬರತೊಡಗಿದರು. ಹಿಂದೂಗಳು ದೂರ ಉಳಿದರು. ಮಸೀದಿಯನ್ನು ಅವನು ಚರ್ಚನ್ನಾಗಿ ಪರಿವರ್ತಿಸಿ ನೋಡಿದ. ಕ್ರೈಸ್ತರು ಮಾತ್ರ ಅಲ್ಲಿಗೆ ಬರತೊಡಗಿದರು. ಇದನ್ನೆಲ್ಲ ನೋಡಿ ಬೇಸರಗೊಂಡ ಆ ವ್ಯಕ್ತಿ ಆ ಕಟ್ಟಡವನ್ನೊಂದು ಶೌಚಾಲಯವಾಗಿ ಬದಲಿಸಿಬಿಟ್ಟ. ಆಶ್ಚರ್ಯ ! ಭೇದವಿಲ್ಲದೆ ಎಲ್ಲರೂ ಅಲ್ಲಿಗೆ ಬರತೊಡಗಿದರು. !''

ಮಾರ್ಮಿಕವಾದ ಕತೆಯಿದು. ಶೌಚಾಲಯಗಳಿಗೆ ಕೊಡುವ ಬೆಲೆಯನ್ನು ಜನ ದೇವಮಂದಿರಗಳಿಗೆ ಕೊಡುವುದಿಲ್ಲ; ಆದರೆ ತಾವು ಭಕ್ತರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇದೆಂಥ ಮತ ಮೌಢ್ಯ! ಒಬ್ಬನೇ ದೇವರಿಗೆ ಹಲವು ಹೆಸರುಗಳು, ಅವನು ಗುಡಿ, ಚರ್ಚು ಮಸೀದಿ ಎಲ್ಲೆಡೆಗಳಲ್ಲೂ ಇರುತ್ತಾನೆ ಎಂಬ ಅರಿವಿಲ್ಲದಿದ್ದರೆ ಅದೆಂಥ ಧಾರ್ಮಿಕತೆ !

ಧರ್ಮ ಬೇರೆ, ಮತ ಬೇರೆ; ಒಂದು ಉದಾರವಾದದ್ದು, ಇನ್ನೊಂದು ಸಂಕುಚಿತವಾದದ್ದು. ಆದರೆ ಧರ್ಮ ಮತವಾಗುವುದು ಸುಲಭ ; ಈಗ ಆಗಿರುವುದೂ ಹಾಗೆಯೆ. ಅಸಂಖ್ಯ ಮತ, ಪಂಥಗಳ ಗೊಂದಲದಲ್ಲಿ ಭಗವತ್ತತ್ತ್ವ ಮರೆಯಾಗಿ

ಬಿಟ್ಟಿದೆ. ಯಾವೊಂದು ಮತದ ಅಥವಾ ಧರ್ಮದ ಮಾಧ್ಯಮವಿಲ್ಲದೆ ನೇರವಾಗಿ ಭಗವಂತನನ್ನು ಪ್ರೀತಿಸುವುದು, ಪೂಜಿಸುವುದು ಶ್ರೇಯಸ್ಕರವೆಂದು ತೋರುತ್ತದೆ. ಮತ, ಧರ್ಮಗಳು ತೊಲಗಿ ಆಧ್ಯಾತ್ಮ ಉಳಿಯಲಿ ಎಂದು ಹೇಳುವುದು ಸಮಂಜಸವಾದೀತು.

ಭಗವದ್ಗೀತೆಯಲ್ಲಿ ಕೃಷ್ಣ ಕೊಡುವ ಕರೆ ಈ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾಗಿದೆ; ಅರ್ಥವತ್ತಾಗಿದೆ :

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ

(ಎಲ್ಲ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನು ಶರಣುಹೊಂದು. ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ. ಶೋಕಿಸಬೇಡ.)

ಮತ, ಧರ್ಮಗಳ ಹೆಸರಿನಲ್ಲೆ ಎಷ್ಟೋ ಪಾಪಗಳು ನಡೆದಿದೆ, ನಡೆಯುತ್ತಿವೆ. ಎಂದಮೇಲೆ ಅವು ಸರ್ವಥಾ ತ್ಯಾಜ್ಯ. ಭಗವಂತನೊಬ್ಬನೆ ಶರಣ್ಯ. ಬೇಕಾದದ್ದು ಭಕ್ತಿ, ಶ್ರದ್ಧೆ, ಶುದ್ಧಿ, ಶೀಲ.

■■

೨೪. ಚರಿತ್ರೆ – ಚಾರಿತ್ರ್ಯ

ಭಾರತೀಯರ ಮೇಲೆ ಪಾಶ್ಚಾತ್ಯಪಂಡಿತರ ಅಪಾದನೆಯೊಂದಿದೆ : ಇವರಿಗೆ ಚಾರಿತ್ರಿಕ ಪ್ರಜ್ಞೆಯಿಲ್ಲ, ಘಟನೆಗಳನ್ನು ಯಥಾವತ್ತಾಗಿ ಸಕ್ರಮವಾಗಿ ನಿರೂಪಿಸುವುದರ ಬದಲು ಕತೆ ಕಟ್ಟಿಬಿಡುವುದು ಇವರ ಪ್ರವೃತ್ತಿ ಎಂಬುದು.

ಈ ಆರೋಪದಲ್ಲಿ ಸಾಕಷ್ಟು ಹುರುಳಿದೆ. ಪ್ರಾಚೀನ ಭಾರತೀಯರು ಇಂದಿನ ಅರ್ಥದಲ್ಲಿ ಚರಿತ್ರೆಗೆ ಹೆಚ್ಚು ಗಮನ ಕೊಡಲಿಲ್ಲ; ಇತಿಹಾಸಕ್ಕಿಂತ ಪುರಾಣದಲ್ಲಿ ಅವರು ಹೆಚ್ಚು ಆಸಕ್ತರಾಗಿದ್ದರು, ನಿಜ. ಆದರೆ ಇದು ಭಾರತೀಯರ ಪಾಲಿಗೆ ದೂಷಣವಾಗದೆ ಭೂಷಣವೆ ಆಗಬಲ್ಲುದು. ನಮ್ಮವರಿಗೆ ಬಾಹ್ಯ ಚರಿತ್ರೆಗಿಂತ ಆತ್ಮಚರಿತ್ರೆ ಮುಖ್ಯವಾಗಿತ್ತು; ಅದನ್ನವರು ಎಲ್ಲೆಡೆ ದಾಖಲಿಸಿ ತಮ್ಮ 'ಆತ್ಮಸಾರ'ವನ್ನು ಅಭಿವ್ಯಕ್ತಿಸಿದ್ದಾರೆ.

ಕಾವ್ಯಪ್ರಪಂಚವನ್ನೆ ತೆಗೆದುಕೊಳ್ಳೋಣ. ನಮ್ಮ ಬಹುಮಂದಿ ಕವಿಗಳು ತಮ್ಮ ಕೃತಿಗಳಲ್ಲಿ ವೈಯಕ್ತಿಕ ಸಂಗತಿಗಳನ್ನು ಹೇಳಿಕೊಳ್ಳುವುದಿಲ್ಲ. ಕಾಳಿದಾಸನಂಥ ದೊಡ್ಡ ಕವಿಯೊಬ್ಬನ ಬದುಕಿನ ವಿವರಗಳು ನಮಗೆ ಏನೇನೂ ತಿಳಿದುಬಂದಿಲ್ಲ. ಕಾವ್ಯ ವ್ಯಕ್ತ್ಯತೀತವಾದದ್ದು, ಅದರಲ್ಲಿ ನಮ್ಮ ವೈಯಕ್ತಿಕ ವಿಷಯಗಳನ್ನು ನಿರೂಪಿಸುವುದರಲ್ಲಿ ಅರ್ಥವಿಲ್ಲ ಎಂದು ಹಿಂದಿನ ಕವಿಗಳು ಭಾವಿಸಿದ್ದಿರಬೇಕು. ಇನ್ನೊಂದು ಅತ್ಯಾಶ್ಚರ್ಯಕರ ಪ್ರವೃತ್ತಿಯೆಂದರೆ, ಎಷ್ಟೋ ಮಂದಿ ಕವಿಗಳು ತಮ್ಮ ಹೆಸರನ್ನು ಕೂಡ ಹೇಳಿಕೊಳ್ಳದೆ, ಬೇರೆಯವರ ಹೆಸರಿನಲ್ಲಿ ತಮ್ಮ ಕೃತಿಗಳನ್ನು ತೇಲಿಬಿಟ್ಟಿರುವುದು. ಹೀಗಾಗಿ, ಕಾಳಿದಾಸ, ಶಂಕರಾಚಾರ್ಯ ಮುಂತಾದವರ ಹೆಸರಿನಲ್ಲಿ, ಅವರು ರಚಿಸದ ಎಷ್ಟೋ ಕೃತಿಗಳಿವೆ. ದೊಡ್ಡವರ ನಾಮಾಶ್ರಯದಲ್ಲಿ ಅವು ಬದುಕಿಕೊಳ್ಳಲಿ ಎಂಬುದು ಇಂಥ ಪ್ರವೃತ್ತಿಯ ಹಿಂದಿರುವ ಆಶಯವಾದರೂ, ಹೆಸರಿಗಿಂತ ಉಸಿರಿಗೆ ಹಿಂದಿನವರು ಕೊಟ್ಟ ಪ್ರಾಶಸ್ತ್ಯಕ್ಕೆ ಇದು ದ್ಯೋತಕವಾಗಿದೆ. (ಇಂದಿನ ಪ್ರವೃತ್ತಿ ತದ್ವಿರುದ್ಧವಾದದ್ದು: ಅನ್ಯರ ಕೃತಿಗಳನ್ನು ತಮ್ಮ ಹೆಸರಿಗೆ ಜಮಾ ಮಾಡಿಕೊಳ್ಳುವುದು !)

ಗೊಮ್ಮಟ ವಿಗ್ರಹದಂಥ ಐವತ್ತೇಳು ಅಡಿ ಎತ್ತರದ ಬೃಹಚ್ಛಿಲ್ಪವನ್ನು ಕಂಡರಿಸಿದ ಮಹಾಕಲಾವಿದ ಮನಸ್ಸು ಮಾಡಿದ್ದರೆ ಅದರ ಯಾವುದಾದರೊಂದು ಭಾಗದಲ್ಲಿ ತನ್ನ ಹೆಸರನ್ನು ಸಣ್ಣಕ್ಷರಗಳಲ್ಲಾದರೂ ಕೊರೆಯಬಹುದಿತ್ತು. ಅವನು ಹಾಗೆ ಮಾಡಲಿಲ್ಲ: ಅವನಿಗದು ಆತ್ಮನಿವೇದನಕ್ರಿಯೆಯಾಗಿತ್ತು. ಆದ್ದರಿಂದ ಇಂದವನು ಸಂಪೂರ್ಣ ಅಜ್ಞಾತನಾಗಿ ಉಳಿದಿದ್ದಾನೆ. ಮೂಲ ಬಾಹು ಬಲಿಯ ಉತ್ತುಂಗ ವೈರಾಗ್ಯ, ತ್ಯಾಗಗಳಿಗೆಂತೊ ಅಂತೆ ಆ ಶಿಲ್ಪಿಮಹಾಶಯನ ಸ್ವತ್ಯಾಗಕ್ಕೂ ಪ್ರತಿಮೆಯಾಗಿದೆ, ಗೊಮ್ಮಟ ಮೂರ್ತಿ.

ರಾಮಾಯಣ, ಮಹಾಭಾರತಗಳನ್ನು ನಮ್ಮವರು ಇತಿಹಾಸಗಳೆಂದು ಕರೆದಿದ್ದರೂ, ಅವು ಪೂರ್ಣವಾಗಿ ಆಧುನಿಕಾರ್ಥದ ಚರಿತ್ರೆಗಳಲ್ಲ; ಪ್ರಧಾನವಾಗಿ ಅವು ಕಾವ್ಯಗಳೇ. ರಾಮ, ಸೀತೆ, ಯುಧಿಷ್ಠಿರ ಮೊದಲಾದವರು ಬಾಳಿದ ಮೌಲ್ಯಗಳನ್ನು ಎತ್ತಿ ಹಿಡಿಯುವುದು ವ್ಯಾಸ, ವಾಲ್ಮೀಕಿಗಳ ವಿವಕ್ಷೆಯಾಗಿತ್ತು; ಚರಿತ್ರೆ ಬರೆಯುವುದಲ್ಲ. ಚರಿತ್ರೆ ಎಂದೋ ನಡೆದುಹೋದ ಘಟನೆಗಳನ್ನು ದಾಖಲು ಮಾಡುತ್ತದೆ; ಕಾವ್ಯವಾದರೊ ಮೂರು ಕಾಲಕ್ಕೂ ನಿಲ್ಲಬಲ್ಲ ವ್ಯಕ್ತಿತ್ವಗಳನ್ನು ನಿರೂಪಿಸುತ್ತದೆ. ಚರಿತ್ರೆ ವಿಜ್ಞಾನ ಸಂಬಂಧವಾದದ್ದು; ಕಾವ್ಯ ಅಧ್ಯಾತ್ಮಸಂಬಂಧವಾದದ್ದು. ಪ್ರಾಚೀನ ಭಾರತೀಯರು ವಿಶೇಷವಾಗಿ ಪುರಸ್ಕರಿಸಿದ್ದು ಎರಡನೆಯದನ್ನು.

ಇಂದಿನ ದೃಷ್ಟಿಯಿಂದ ಹೇಳುವುದಾದರೆ, ಚರಿತ್ರೆ ಅಗತ್ಯವಾಗಿ ಬೇಕು; ಆದರೆ ಅದಕ್ಕಿಂತ ಮುಖ್ಯವಾದದ್ದು ಚಾರಿತ್ರ್ಯ.

■■

೨೫. ಪ್ರಕೃತಿ

''ಓ ನನ್ನ ಚೇತನ, ಆಗು ನೀ ಅನಿಕೇತನ'' ಎಂದೂ ''ಮನೆಯನೆಂದೂ ಕಟ್ಟದಿರು'' ಎಂದೂ ಕುವೆಂಪು ಅವರ ಕವನವೊಂದು ಕರೆಕೊಡುತ್ತದೆ. ಅದರ ಧ್ವನಿ ಏನೇ ಇರಲಿ, ವಾಚ್ಯಾರ್ಥ ಕೂಡ ಗಮನಿಸಬೇಕಾದದ್ದೆ ಆಗಿದೆ. ಮನೆ ಕಟ್ಟಿಕೊಳ್ಳು ವುದರಿಂದ ಮಾನವ ಪ್ರಕೃತಿಗೆ ದೂರವಾಗುತ್ತಾನೆ. ಸೂರ್ಯ ಚಂದ್ರ ನಕ್ಷತ್ರಗಳನ್ನು ಮನೆಯ ಸೂರು ಮರೆ ಮಾಡುತ್ತದೆ ; ಸುತ್ತಣ ನಿಸರ್ಗವನ್ನು ನಾಲ್ಕು ಗೋಡೆಗಳು ಮರೆಮಾಡುತ್ತವೆ. ಹೊರಗೆ ಬಂದು ಪ್ರಕೃತಿಯೊಡನೆ ಬೆರೆಯಬಾರದೆಂದಿಲ್ಲ; ಆದರೂ ಅಂಥ ಪ್ರವೃತ್ತಿಗೆ ನಿಕೇತನಪದ್ಧತಿ ಬಾಧಕವಾಗುವ ಸಂಭವವೆ ಹೆಚ್ಚು.

ಭಾರತೀಯ ಸಂಸ್ಕೃತಿ ಒಂದರ್ಥದಲ್ಲಿ ಆರಣ್ಯಕ ಸಂಸ್ಕೃತಿ. ವೇದೋಪ ನಿಷತ್ತುಗಳ ಋಷಿಗಳು ಪ್ರಕೃತಿಸಾನ್ನಿಧ್ಯದಲ್ಲಿ, ಅರಣ್ಯ ಮಧ್ಯದ ತಪೋವನಗಳಲ್ಲಿ ಸತ್ಯಸಾಕ್ಷಾತ್ಕಾರ ಮಾಡಿಕೊಂಡರು ; ದೇವರನ್ನು ಕಂಡರು; ದಿವ್ಯಾನುಭವಗಳನ್ನು ಪಡೆದರು; ಬದುಕಿನ ರಹಸ್ಯವನ್ನು ಭೇದಿಸಿದರು. ಭಾರತದ ಹೃದಯವಿರುವುದು ನೈಸರ್ಗಿಕ ಪರಿಸರದಲ್ಲಿರುವ ಲಕ್ಷಾಂತರ ಹಳ್ಳಿಗಳಲ್ಲಿ. ಆದರೆ ಈಚೆಗೆ ಪ್ರಾಕೃತಿಕ ಗ್ರಾಮೀಣ ಸಂಸ್ಕೃತಿ ಹಿಂದೆ ಬಿದ್ದು ನಗರಸಂಸ್ಕೃತಿ ಪ್ರಬಲಿಸುತ್ತಿದೆ. ಮನುಷ್ಯನ ಅವಿವೇಕ, ಸ್ವಾರ್ಥಗಳಿಗೆ ಪ್ರಕೃತಿ ಕ್ರಮೇಣ ಬಲಿಯಾಗುತ್ತಿದ್ದು, ವಿಕೃತಿಯ ವಿಜೃಂಭಣೆ ಹೆಚ್ಚುತ್ತಿರುವ ದುರ್ದಿನಗಳಲ್ಲಿ ನಾವಿದ್ದೇವೆ.

ಆಕಾಶ, ಗಿಡ ಮರ ಬಳ್ಳಿಗಳು, ಹೊಳೆ ಕೆರೆ ಕೊಳಗಳು, ಹೂವು ಹಕ್ಕಿಗಳು ಮುಂತಾದುವುಗಳಿಂದ ಕೂಡಿದ ಪ್ರಕೃತಿ ಮಾನವನಿಗೆ ಕೊಡುವ ಶಾಂತಿ, ಸುಖ, ಸಮಾಧಾನಗಳು ಎಣೆಯಿಲ್ಲದವು. ಅದರ ಸಾನ್ನಿಧ್ಯದಲ್ಲಿ ನೊಂದೆದೆ ತಂಪುಗೊಳ್ಳುತ್ತದೆ; ಕಾಮ ಕ್ರೋಧ ಲಾಭ ಮೋಹ ಮದ ಮಾತ್ಸರ್ಯಾದಿ ಮಾನಸಿಕ ಅನಿಷ್ಟಗಳು ತಗ್ಗಿ, ತೊಲಗಿ, ಚೇತನಕ್ಕೆ ನೈರ್ಮಲ್ಯವುಂಟಾಗುತ್ತದೆ ; ಬಾಳಿಗೆ ನವೋತ್ಸಾಹ ಬರುತ್ತದೆ. ನಿಸರ್ಗದೆದುರು ವ್ಯಕ್ತಿ ತನ್ನ ಅಲ್ಪತೆಯನ್ನು ಕಳೆದುಕೊಂಡು, ಭೂಮಾಭಿಮುಖಿ ನಾಗುತ್ತಾನೆ. ನಾಲ್ಕು ಗೋಡೆಗಳ ನಡುವೆ ಹುದುಗಿದಾಗ ಅವನನ್ನು ಕಾಡುವ ಉಪಾಧಿಗಳು, ಹೊರಗೆ ಬಂದು ನೀಲಾಕಾಶವನ್ನೊ ನಿಸರ್ಗಶ್ರೀಯನ್ನೆ ತದೇಕಚಿತ್ತ ದಿಂದ ನೋಡಿದಾಗ ಜಗುಳಿ ಹೋಗುತ್ತವೆ. ಉಸಿರು ಕಟ್ಟಿದಂಥ ಪರಿಸ್ಥಿತಿಯಿಂದ ಪಾರುಮಾಡಿ, ವಿಶ್ವವಾತಾವರಣದೊಡನೆ ನಮ್ಮನ್ನು ಸಂಲಗ್ನಗೊಳಿಸುತ್ತದೆ, ಪ್ರಕೃತಿ. ಆಗ ಶ್ವಾಸಕೋಶಗಳು ಪರಿಶುದ್ಧವಾದ ಗಾಳಿಯಿಂದ ತುಂಬಿಕೊಳ್ಳುತ್ತವೆ. ಇಂಗಾಲವನ್ನು ಹೀರಿಕೊಂಡು ಪ್ರಾಣವಾಯುವನ್ನು ದಾನಮಾಡುವ ಪ್ರಕೃತಿಯ 'ವಿಶ್ವಾಸ' ಬಹಳ ದೊಡ್ಡದು ; ಮಾನವಲೋಕದಲ್ಲಿ ವಿರಳವಾದದ್ದು.

ಆದ್ದರಿಂದ ಮಾನಸಿಕ ಆರೋಗ್ಯಕ್ಕೆ ಮಾತ್ರವಲ್ಲ, ದೈಹಿಕವಾದ ಆರೋಗ್ಯಕ್ಕೂ ನಿಸರ್ಗಸಂಸರ್ಗ ಅತ್ಯಮೂಲ್ಯವಾದುದು; ಆಧ್ಯಾತ್ಮಿಕ ಸ್ವಸ್ಥತೆಗೂ ವಿಕಾಸಕ್ಕೂ ಅದರ ಕೊಡುಗೆ ಸಾಮಾನ್ಯವಲ್ಲ. ''ಪ್ರಕೃತಿಯಾರಾಧನೆಯೆ ಪರಮನಾರಾಧನೆ'' ಎಂಬ ಕವಿ ವಾಣಿ ಅನೇಕಾರ್ಥಗಳಲ್ಲಿ ಸತ್ಯದರ್ಶಿಯಾದುದು. ದೇವರೆಡೆಗೆ ಕರೆದೊಯ್ಯಬಲ್ಲುದು ಪ್ರಕೃತಿ; ಸ್ವತಃ ದೇವರ ಸ್ಥಾನದಲ್ಲೂ ನಿಲ್ಲಬಲ್ಲುದು. ಹೇಗೂ ಮನುಷ್ಯನಿಗೆ ಅದರಿಂದ ಅಪರಿಮಿತ ಲಾಭ, ಉಪಕಾರ. ಭೌತಿಕವಾಗಿ ಅದರಿಂದ ಮನುಷ್ಯನಿಗಾಗುತ್ತಿರುವ ಪ್ರಯೋಜನಗಳಂತೂ ಸುಪರಿಚಿತವೇ. ಅವೇ ಈಗ ಪ್ರಕೃತಿ ಪ್ರಚಂಚಕ್ಕೆ ಮುಳುವಾಗಿ ಪರಿಣಮಿಸಿವೆ. ಎಲ್ಲೆಲ್ಲಿಯೂ ಗಿಡಮರಗಳನ್ನು, ಕಾಡುಗಳನ್ನು ಕಡಿಯುವ ಕ್ರೌರ್ಯ ನಡೆದಿದೆ. ಇದು ಕುಳಿತ ಕೊಂಬೆಯನ್ನೆ ಕಡಿಯುವ ಹುಂಬತನ.

ಪ್ರಕೃತಿಯನ್ನು ಮಾನವ ಉಳಿಸಬೇಕು, ಬೆಳೆಸಬೇಕು–ತನ್ನ ಪ್ರಕೃತಿಯ ಹಿತದ ದೃಷ್ಟಿಯಿಂದ. ಪ್ರಕೃತಿಪರಿಭಾವನೆಯ ಅಭ್ಯಾಸವನ್ನೂ ಅವನು ಬೆಳೆಸಿಕೊಳ್ಳಬೇಕು; ಆ ಚಟ ಎಂದೂ ದುಶ್ಚಟವಾಗುವುದು ಸಾಧ್ಯವಿಲ್ಲ. ಉಪಕಾರಕ್ಕೆ ನೂರ್ಮಡಿ ಪ್ರತ್ಯುಪಕಾರ ಮಾಡುವುದು ಪ್ರಕೃತಿಯ ಸ್ವಭಾವ; ತನ್ನನ್ನು ನಂಬಿದವರನ್ನು ಅದು ಎಂದೂ ಕೈ ಬಿಡುವುದಿಲ್ಲ. ಕವಿಯೊಬ್ಬ ಹೇಳಿದಂತೆ, "Nature never did betray the heart that loved her!"

■■

೨೬. ಅತೃಪ್ತಿ

ಮನುಷ್ಯನ ಆಸೆಗೆ ಎಲ್ಲೆಯಿಲ್ಲ; ಎಷ್ಟು ಸಿಕ್ಕಿದರೂ ಅವನಿಗೆ ತೃಪ್ತಿಯಿಲ್ಲ. ಈ ಪ್ರವೃತ್ತಿಯನ್ನು ದಾಸರು ''ಇಷ್ಟು ಸಿಕ್ಕಿದರೆ ಮತ್ತಷ್ಟು ಬೇಕೆಂಬಾಸೆ'' ಎಂದು ವಿಡಂಬಿಸಿದ್ದಾರೆ. ಮಾನವ ಅಲ್ಪಸಂತೃಪ್ತನಾಗಿರಬೇಕು, ಯಾವುದೋ ಮಿತಿಯಾಚೆಗೆ ತನ್ನ ಆಸೆಯನ್ನು ಬೆಳೆಸಬಾರದು ಎಂಬುದು ಇದರ ತಾತ್ಪರ್ಯ.

ಆದರೆ ಮಹಾಭಾರತದಲ್ಲಿ ಒಂದು ಮಾತು ಬರುತ್ತದೆ: ''ಅಸಂತೋಷಃ ಶ್ರಿಯೋ ಮೂಲಃ'' (ಅಸಂತುಷ್ಟಿಯೆ ಸಂಪತ್ತಿಗೆ ಕಾರಣ). ಇದು ಸ್ವೀಕಾರ್ಯವಲ್ಲದ ಹೇಳಿಕೆಯೆ? ಹಾಗೇನೂ ಅಲ್ಲ. ಯಾವ ವಿಷಯದಲ್ಲಿ ತೃಪ್ತಿ ಬೇಕು, ಯಾವ ವಿಷಯದಲ್ಲಿ ಅತೃಪ್ತಿಯಿರಬೇಕು ಎಂಬುದನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕಷ್ಟೆ.

ಯಾವ ವ್ಯಕ್ತಿಯೇ ಆಗಲಿ ಹಸಿದುಕೊಂಡು, ಬೆತ್ತಲೆಯಾಗಿರುವುದು ಸಾಧ್ಯವಿಲ್ಲ; ಹೊಟ್ಟೆ, ಬಟ್ಟೆಗಳಿಗಾಗಿ ಅವನು ಅಷ್ಟಿಷ್ಟು ಸಂಪಾದಿಸಲೇಬೇಕು. ಈ ಮೂಲಭೂತ ಆವಶ್ಯಕತೆಗಳನ್ನು ಮೀರಿಯೂ ಕೆಲವು ಅಗತ್ಯಗಳಿರುತ್ತವೆ; ಅವುಗಳನ್ನೂ ಪೂರೈಸಬೇಕಾಗುತ್ತದೆ. ಎಂದರೆ, ಅವರವರ ಅಗತ್ಯಗಳಿಗೆ ತಕ್ಕಂತೆ ಕನಿಷ್ಠ ಪ್ರಮಾಣದ ಸಂಪತ್ತು ಎಲ್ಲರಿಗೂ ಬೇಕು ; ಅದನ್ನವರು ಆರ್ಜಿಸದೆ ಕೈಕಟ್ಟಿಕೊಂಡು ಕುಳಿತಿರಬಾರದು. ಆ ಒಂದು ಹಂತವನ್ನು ಮುಟ್ಟುವವರೆಗೆ ಅವರಲ್ಲಿ ಅಸಂತುಷ್ಟಿಯಿರಬೇಕು ; ಮುಟ್ಟಿದಮೇಲೆ ಅವರು ಸಂತುಷ್ಟರಾಗಬೇಕು. ಇಲ್ಲವಾದರೆ, ಅಸಂತೃಪ್ತಿ ಅಸುಖಕ್ಕೆ ದಾರಿಮಾಡಿಕೊಟ್ಟೀತು.

ಇದು ಲೌಕಿಕ ಸುಖ ಸಂಪದಗಳ ಬಗೆಗೆ ಹೇಳಬಹುದಾದ ಮಾತು. ಆಧ್ಯಾತ್ಮಿಕ ಸಾಧನೆ, ಜ್ಞಾನಾರ್ಜನೆ, ಸಾಹಿತ್ಯ ಸೃಷ್ಟಿ ಮುಂತಾದ ವಿಷಯಗಳಿಗೆ ಇದು ಅನ್ವಯಿಸದು. ಆ ಕ್ಷೇತ್ರಗಳಲ್ಲಿ ಸಂತುಷ್ಟಿ ಸಲ್ಲದು; ವ್ಯಕ್ತಿ ಸದಾ ಅಸಂತೃಪ್ತನಾಗಿ ಮುಂದೆ ಮುಂದೆ ಹೋಗುತ್ತಿರಬೇಕು. ಅವನು ಅಲ್ಪಸಂತೃಪ್ತನಾದರೆ ಬೆಳವಣಿಗೆ ಕುಂಠಿತವಾಗುತ್ತದೆ. ಅಲ್ಲಿ ಸಾಧನೆಗೆ ಅಂತ್ಯವೆಂಬುದಿಲ್ಲ; ಸಿದ್ಧಿಯೂ ನಿರ್ದಿಗಂತವಾದದ್ದೇ. ಆದ್ದರಿಂದ, ಈಗ ಸಾಧಿಸಿದ್ದು ಸಾಲದು ಎಂಬ ಅಸಮಾಧಾನ, ಇನ್ನೂ ಮಿಗಿಲಾದುದನ್ನು ಸಾಧಿಸಬೇಕು ಎಂಬ ಛಲ ಅಲ್ಲಿ ಶ್ರೇಯಸ್ಕರ.

ವ್ಯಾವಹಾರಿಕ ರಂಗದಲ್ಲಿ ಕೂಡ, ಸಂತೃಪ್ತಿಯೆನ್ನುವುದು ಸೋಮಾರಿತನಕ್ಕೆ ಇನ್ನೊಂದು ಹೆಸರಾಗಬಾರದು. ಆದರೆ ಅದು ದುರ್ಯೋಧನನ ದುರಾಶೆಗೆ ಪರ್ಯಾಯವೂ ಆಗಬಾರದು. (ಪೂರ್ವೋಕ್ತ ಮಹಾಭಾರತದ ಹೇಳಿಕೆ ದುರ್ಯೋಧನನ ಬಾಯಲ್ಲಿ

ಬಂದಿದೆಯೆಂಬುದು ಗಮನಾರ್ಹ). ಹೀಗೂ ಹೇಳಬಹುದು: ವ್ಯಕ್ತಿಯ ಪ್ರಗತಿಗೆ ಸಂಬಂಧಿಸಿದಂತೆ ಅಸಂತೋಷ ಅತಿಯಾಗಬಾರದು; ಆದರೆ ಸಮಾಜದ, ದೇಶದ ಅಭ್ಯುದಯಕ್ಕೆ ಸಂಬಂಧಿಸಿದಂತೆ ಅಸಂತೋಷ ಎಷ್ಟಿದ್ದರೆ ಅಷ್ಟೂ ಒಳ್ಳೆಯದು. ಒಟ್ಟಿನಲ್ಲಿ, ಅತೃಪ್ತಿ ಜೀವಂತಿಕೆಯ ಲಕ್ಷಣವೆಂಬುದರಲ್ಲಿ ಸಂಶಯವಿಲ್ಲ; ಹಾಗೆಯೆ, ಸಂತೃಪ್ತಿ ಜಡತೆಯ ಲಕ್ಷಣವಾಗುವ ಸಂಭವವುಂಟು.

■■

೨೭. ಪ್ರಾರ್ಥನೆ

''ಈ ಜಗತ್ತು ಕಲ್ಪಿಸಿಕೊಳ್ಳುವುದಕ್ಕಿಂತ ಹೆಚ್ಚು ಸಂಗತಿಗಳು ಪ್ರಾರ್ಥನೆಯಿಂದ ಸಾಧಿತವಾಗುತ್ತವೆ'' ('More things are wrought by Prayer than this world dreams of') ಎಂಬುದು ಟೆನಿಸನ್ ಕವಿಯ ಪ್ರಸಿದ್ಧವಾದ ಉಕ್ತಿ. ಪ್ರಾರ್ಥನಾ ಶಕ್ತಿಯ ಒಂದು ಪರಿಮಿತ ಕಲ್ಪನೆಯಷ್ಟೇ ನಮಗಿರತಕ್ಕದ್ದು ಎಂಬುದು ಈ ಮಾತಿನ ಅಭಿಪ್ರಾಯ. ಆದರೆ ಅಷ್ಟಾದರೂ ಇದೆಯೆಂಬುದು ಸಂದೇಹಾಸ್ಪದ. ಆಧುನಿಕ ಪ್ರಪಂಚಕ್ಕೆ ಪ್ರಾರ್ಥನೆಯಲ್ಲಿ ನಂಬಿಕೆಯಿಲ್ಲವೆಂಬುದು ಸ್ಪಷ್ಟ. ವಾಸ್ತವವಾಗಿ ಪ್ರಾರ್ಥನೆಯೊಂದು ಅಮೋಘ ಶಕ್ತಿ; ಅದಕ್ಕೆ ಯಾವುದೂ ಅಸಾಧ್ಯವಲ್ಲ: ಅದೇ ನಿಜವಾದ ಕಾಮಧೇನು, ಕಲ್ಪವೃಕ್ಷ.

ಪ್ರಾರ್ಥನೆ ಎಂದರೇನು ? ಗಾಂಧೀಜಿ ಅದನ್ನು ಹೀಗೆ ಲಕ್ಷಣೀಕರಿಸುತ್ತಾರೆ : ''ಪ್ರಾರ್ಥನೆಯೆಂದರೆ ಗೌರವಪೂರ್ವಕವಾಗಿ ದೇವರಿಂದ ಏನನ್ನಾದರೂ ಬೇಡುವುದು.'' ಆಧುನಿಕ ಮಾನವನ ದುರ್ದೈವವೇನೆಂದರೆ, ಅವನು ಭಗವಂತನನ್ನು ಪ್ರಾರ್ಥಿಸುವುದಿಲ್ಲ, ದೈನ್ಯದಿಂದ ಮಾನವರನ್ನು ಬೇಡುತ್ತಾನೆ ಅಥವಾ ಹಕ್ಕುಗಳ ನೆಪದಲ್ಲಿ ಬೇಡಿಕೆಗಳನ್ನು (demands) ಮಂಡಿಸುತ್ತಾನೆ. ಯಾಚನೆ, ಬೇಡಿಕೆ ಎರಡೂ ಪ್ರಾರ್ಥನೆ ಯಾಗುವುದಿಲ್ಲ, ಅಲ್ಲದೆ, ಮಂದಿ ಏನು ಕೊಟ್ಟೀತು ? ಮಹಾದೇವ ಕೊಡಬೇಕು, ಮನಸ್ಸು ತಣಿಯಬೇಕು. ಜನಪದ ಹಾಡಿಲ್ಲವೆ ? ''ಮಂದೇನ ಕೊಟ್ಟೀತ, ಮನವೇನು ದಣಿದೀತ, ಮುಂಜಾನದಾನ ಗಿರಿಮಲ್ಲ ಕೊಟ್ಟರೆ ಮನೆ ತುಂಬಿ, ನಮ್ಮ ಮನ ತುಂಬಿ.''

ಪ್ರಾರ್ಥನೆಗೆ ಮೂಲ ಬುದ್ಧಿಯಲ್ಲ, ಶ್ರದ್ಧೆ; ಬಹುಕಾಲ ಬೇಸರವಿಲ್ಲದೆ ಕಾಯಬಲ್ಲ ಶ್ರದ್ಧೆ. ಅಂತಃಕರಣಪೂರ್ವಕವಾದ ಶ್ರದ್ಧಾನ್ವಿತವೂ ಶುದ್ಧವೂ ಆದ ಪ್ರಾರ್ಥನೆ ವಿಫಲವಾಗುವುದಿಲ್ಲ. ಯೇಸು ಕ್ರಿಸ್ತನ ಈ ಆಶ್ವಾಸನೆಯನ್ನು ನೆನೆಯಬಹುದು : "Ask, and it shall be given you; seek, and ye shall find; knock, and it shall be opend unto you". ''ಬಾಗಿಲು ತಟ್ಟಿ ; ತೆರೆದುಕೊಳ್ಳುತ್ತದೆ.'' ಹೌದು. ಆದರೆ ನಾವು ದೇವಾಲಯದ ಬಾಗಿಲು ತಟ್ಟುವದಿಲ್ಲ; ಯಾರು ಯಾರದೋ ಮನೆಯ ಬಾಗಿಲು ತಟ್ಟುತ್ತೇವೆ ! ತೆರೆದುಕೊಳ್ಳಬಹುದು, ದುರಂತದ ಹೆಬ್ಬಾಗಿಲು.

ಈಗ ಪ್ರಶ್ನೆಯೊಂದು ಉದ್ಭವಿಸುತ್ತದೆ : ಪ್ರಾರ್ಥನೆಯಿಂದ ಏನು ಬೇಕಾದರೂ ಸಿಕ್ಕುತ್ತದೆ ಎನ್ನುವುದಾದರೆ, ನೀಚವೂ ಕ್ಷುದ್ರವೂ ಆದುದನ್ನು ಕೇಳಿಕೊಂಡಾಗ ಅದೂ ಸಿಕ್ಕುತ್ತದೆಯೇ ? ಸಿಕ್ಕಬಹುದು. ಆದರೆ ಅದು ಅನರ್ಥಕವಾಗುತ್ತದೆ, ಶ್ರೇಯಸ್ಕರ ವಾಗುವುದಿಲ್ಲ. ಆಸ್ಕರ್ ವೈಲ್ಡ್ ಒಂದೆಡೆ ಹೇಳುತ್ತಾನೆ : ''ದೇವತೆಗಳು ನಮ್ಮನ್ನು ಶಿಕ್ಷಿಸಬಯಸಿದಾಗ, ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾರೆ.'' ಇಲ್ಲಿ ನೆನಪಿಡಬೇಕಾದ

ಪ್ರಮುಖಾಂಶವೇನೆಂದರೆ, ಪ್ರಾರ್ಥನೆ ಮತ್ತು ಕೆಟ್ಟದ್ದು ಜೊತೆಯಾಗಿ ಸಾಗುವುದು ಸಾಧ್ಯವಿಲ್ಲ. ದೇವರ ಮುಂದೆ ನಿಂತು ಕೆಟ್ಟದ್ದನ್ನು ಕರುಣಿಸು ಎಂದು ಬೇಡುವುದು ಸಾಧ್ಯವೇ ? ಶಿವನ ಮುಂದೆ ಅಶಿವಭಿಕ್ಷೆಯೇ ?

ಅತ್ಯುನ್ನತವಾದುದನ್ನು ಪ್ರಾರ್ಥಿಸಿ ಪಡೆಯುವ ಸಾಧ್ಯತೆಯಿರುವಾಗ, ಅನೇಕರು ಅಲ್ಪವನ್ನು ಪಡೆದು ಸಂತೃಪ್ತರಾಗುತ್ತಾರೆ. ಕುಮಾರವ್ಯಾಸಭಾರತದಲ್ಲಿ ಬರುವ ಅರ್ಜುನನ ಒಂದು ನುಡಿ ನೆನಪಾಗುತ್ತದೆ. ಅವನು ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ, ಪಾಶುಪತಾಸ್ತ್ರ ಸಂಪಾದಿಸುತ್ತಾನಷ್ಟೆ. ಶಿವ ಅತ್ತ ಹೋದ ಮೇಲೆ ಪಶ್ಚಾತ್ತಾಪ ಪಡುತ್ತಾನೆ, ಅರ್ಜುನ : ''ಹರನನೀ ಚರ್ಮಾಕ್ಷಿಯಲಿ ಗೋಚರಿಸೆ ಬೇಡಿದುದಂಬು ಮರ್ತ್ಯದೊಳಿರವು ಮಝು ಭಾಪು !'' ಪರಮಪುರುಷಾರ್ಥವಾದ ಮೋಕ್ಷವನ್ನೇ ಬೇಡಬಹುದಿತ್ತಲ್ಲ, ಬೇಡಲಿಲ್ಲವಲ್ಲ ಎಂದು ಅವನ ವಿಷಾದ. ಅರ್ಜುನ ಎಷ್ಟೋ ಮೇಲು, ಜಯದ್ರಥನಿಗೆ ಹೋಲಿಸಿದಾಗ ಭೀಮನಿಂದ ಪರಾಭಗೊಂಡ ಜಯದ್ರಥ ಉಗ್ರತಪಸ್ಸಿನಿಂದ ಶಿವನನ್ನು ಒಲಿಸುತ್ತಾನೆ. ಶಿವ ಪ್ರತ್ಯಕ್ಷನಾಗಿ, ವರವನ್ನು ಕೇಳೆಂದಾಗ 'ಪಾಂಡವರನ್ನು ಒಂದು ದಿವಸದ ಮಟ್ಟಿಗೆ ಸೋಲಿಸುವ ವರವನ್ನು ಕೊಡು' ಎಂದು ಕೋರುತ್ತಾನೆ. ಈ ಕೋರಿಕೆ ಎಷ್ಟು ಲಘುವಾದುದೆಂದರೆ, ''ಭಾರಿಯ ವರವ ಹೆಸರಿಸಿದನು ಜಯದ್ರಥ !'' ಎಂದು ಶಿವನೆ ಪಾರ್ವತಿಯೊಡನೆ ನಗೆಯಾಡುವುದನ್ನು ನೋಡುತ್ತೇವೆ.

ಎಷ್ಟೋ ಸಲ ನಾವು ಬೇಡಿದ್ದನ್ನೆಲ್ಲ ದೇವರು ಕೊಡದಿರಲೂಬಹುದು. ಈ ನಿರಾಕರಣ ನಿಷ್ಕರುಣದ ಕುರುಹು ಎಂಬ ನಿರ್ಧಾರಕ್ಕೆ ನಾವು ತಟಕ್ಕನೆ ನೆಗೆಯ ಬೇಕಾಗಿಲ್ಲ. ಇನ್ನೂ ಉತ್ತಮವಾದುದನ್ನು ಪಡೆಯುವ ಅವಕಾಶವೊದಗಿಸುವುದಕ್ಕಾಗಿ, ನಮ್ಮನ್ನು ಅನುಗ್ರಹ ಯೋಗ್ಯರನ್ನಾಗಿಸುವುದಕ್ಕಾಗಿ, ಒಟ್ಟಾರೆ ನಮ್ಮ ಹಿತಕ್ಕಾಗಿಯೇ ದೇವರು ನಮ್ಮ ಬೇಡಿಕೆಯನ್ನು ತಳ್ಳಿ ಹಾಕಬಹುದು. ಪುರಸ್ಕಾರ ಹೇಗೋ ಹಾಗೆ ತಿರಸ್ಕಾರವೂ ಭಗವತ್ಕೃಪೆಯ ಒಂದು ಭಂಗಿಯಾಗಬಹುದೆಂಬುದು ಪೂರ್ಣದೃಷ್ಟಿಗೆ ವೇದ್ಯ. ಅಂತೆಯೇ ಪ್ರಾರ್ಥನೆಯಿಂದ ದಿಢೀರ್ ಪವಾಡಗಳನ್ನೂ ನಿರೀಕ್ಷಿಸಬಾರದು ; ಅದು ದೀರ್ಘಸೂತ್ರಿಯಾಗಿ– ಆದರೆ ತಪ್ಪದೆ–ಕೆಲಸ ಮಾಡುತ್ತದೆ.

ಪ್ರಾರ್ಥನೆಯ ಪ್ರಯೋಜನ ನಮ್ಮ ಬಯಕೆಯನ್ನು ಈಡೇರಿಸುವುದರಲ್ಲಿರ ಬಹುದು ; ಹಾಗೆಯೆ, ಆ ಬಯಕೆಯೆ ಲಯಹೊಂದುವಂತೆ ಮಾಡುವುದರಲ್ಲೂ ಇರಬಹುದು. ಅಭಿಲಾಷೆಗಳ ಪೂರೈಕೆ, ನಿರಸನ ಎರಡೂ ಸುಖಕರವೇ; ಎರಡನೆಯದು ಅತ್ಯಂತ ಸುಖಾವಹ. ಎಂತಲೇ ಸಕಾಮ ಪ್ರಾರ್ಥನೆಗಿಂತ ನಿಷ್ಕಾಮ ಪ್ರಾರ್ಥನೆ ಉದಾತ್ತವಾದದ್ದು ; ಲೌಕಿಕ ಲಾಭಕ್ಕಿಂತ ಅಲೌಕಿಕ ಲಾಭ ಅಪೇಕ್ಷಣೆಯವಾದದ್ದು. ಅಲೌಕಿಕ ಲಾಭವೆಂದರೆ ಮರಣೋತ್ತರ ಮೋಕ್ಷವೇ ಆಗಬೇಕಿಲ್ಲ; ದೈಹಿಕ–ಮಾನಸಿಕ ಆರೋಗ್ಯ, ಚಿತ್ತ ಶಾಂತಿ, ಆತ್ಮ ಸಂತೋಷ–ಇವಕ್ಕಿಂತ ಮಿಗಿಲಾದ ಮೋಕ್ಷ ಯಾವುದಿದ್ದೀತು ?

ಪ್ರಾರ್ಥನೆಯೊಂದು ಪ್ರಚಂಡ ಶಕ್ತಿಯಾದ್ದರಿಂದ, ಅದರ ದುರುಪಯೋಗದ ವಿರುದ್ಧ ಸದಾ ಜಾಗರೂಕತೆ ಅವಶ್ಯ. ಇಲ್ಲಿ ಕತೆಯೊಂದು ಜ್ಞಾಪಕಕ್ಕೆ ಬರುತ್ತದೆ. ಪಯಣಿಗನೊಬ್ಬ ನೀರಡಿಕೆ ಹಸಿವು ಬಳಲಿಕೆಗಳಿಂದ ಬೆಂಡಾಗಿ ಒಂದು ಮರದ ನೆರಳಿಗೆ ಬಂದ. ಅದು ಕಲ್ಪವೃಕ್ಷ ಎಂಬುದು ಅವನಿಗೆ ಗೊತ್ತಿಲ್ಲ. 'ಈಗ ಕುಡಿಯುವುದಕ್ಕಿಷ್ಟು ನೀರು ಸಿಕ್ಕಿದರೆ !' ಎಂದು ಆಲೋಚಿಸಿದ. ಕೂಡಲೇ ನೀರು ಹಾಜರಾಯಿತು, ಕುಡಿದ. 'ಒಳ್ಳೆಯ ಭೋಜನ ಸಿಕ್ಕಿದರೆ !' ಎಂದು ಆಲೋಚಿಸಿದ. ಅದೂ ಬಂತು; ಉಂಡ. ಇಷ್ಟಾದ ಮೇಲೆ ಸುಮ್ಮನಿರಬೇಡವೆ ? 'ಈಗ ಒಂದು ಹುಲಿ ನನ್ನ ಮೇಲೆ ಬಿದ್ದರೆ ಹೇಗಿರುತ್ತದೆ !' ಎಂದು ಯೋಚಿಸಿದ. ಆ ಕ್ಷಣವೇ ಒಂದು ಹುಲಿ ಅವನ ಮೇಲೆರಗಿ ತಿಂದುಹಾಕಿತು. ಯಾರೂ ಇಂಥ ಗಾಂಪರಾಗಬಾರದು ; ಸಿಕ್ಕಿದ ಸ್ಪರ್ಶಮಣಿಯನ್ನು ಸಾಮಾನ್ಯ ಶಿಲೆಯೆಂದು ಬಿಸಾಡುವುದೂ ಬೆಪ್ಪುತನ.

ಪ್ರಾರ್ಥನೆ ತೀವ್ರತರವಾದರೆ ತಪಸ್ಸಾಗುತ್ತದೆ. ತಪಸ್ಸು ಎಲ್ಲರಿಗೂ ಸಾಧ್ಯವಿಲ್ಲ; ಸಾಂಪ್ರದಾಯಿಕ ಅರ್ಥದಲ್ಲಂತೂ ಅದನ್ನು ಆಚರಿಸಬಲ್ಲವರು ಎಲ್ಲೋ ಕೆಲವರು. ಉಳಿದವರಿಗೆ, ಸಾಮಾನ್ಯರಿಗೆ ಪ್ರಾರ್ಥನೆ ಸಾಕು.

''ಪ್ರಾರ್ಥನೆ ಎಂದರೆ ಪ್ರೀತಿಸುವುದು'' ಎನ್ನುವ ಸ್ವಾಮಿ ವಿವೇಕಾನಂದರ ಅಭಯವಾಣಿಯಿದು : ''ಕರುಣಾಳು', ಬಾ ಬೆಳಕೆ ಎಂದು ಪ್ರಾರ್ಥಿಸೋಣ : ಕತ್ತಲೆಯಲ್ಲಿ ಕಿರಣವೊಂದು ಬರುತ್ತದೆ, ಮಾರ್ಗದರ್ಶನ ಮಾಡಿಸಲು ಹಸ್ತವೊಂದು ಚಾಚಿಕೊಳ್ಳುತ್ತದೆ.'' 'ಕರುಣಾಳು, ಬಾ ಬೆಳಕೆ' ('Lead, Kindly Light') ಎನ್ನುವುದು ನ್ಯೂಮನ್ ಕವಿಯ ಪ್ರಸಿದ್ಧ ಕವನ. ತಾನು ಯಾನ ಮಾಡುತ್ತಿದ್ದ ಹಡಗು ಅಪಘಾತಕ್ಕೀಡಾಗಿ ಮುಳುಗುವುದರಲ್ಲಿದ್ದಾಗ, ಅವನು ಅದನ್ನು ರಚಿಸಿದನಂತೆ. ಅವನ ಪ್ರಾರ್ಥನಾ ಬಲದಿಂದಲೋ ಏನೊ ಹಡಗು ಮುಳುಗಲಿಲ್ಲ. ಎಂತಲೇ ಇದು ಮಹತ್ವದ ಕವನ.

''ಪ್ರಾರ್ಥನೆಯೆಂದರೆ ಭಗವಂತನೊಡನೆ ಸಂವಾದ'' ಎಂದು ಯಾರೋ ಹೇಳಿದ್ದಾರೆ. ದಿಟ. ಅದು ವಾದವಾಗಬಾರದು, ವಿವಾದವಾಗಬಾರದು ; ಸಂವಾದ ವಾಗಬೇಕು.

■■

೨೮. ಸುಖ-ದುಃಖ

ಲಿಯೊ ಟಾಲ್‌ಸ್ಟಾಯ್ ಅವರ ಸುಪ್ರಸಿದ್ಧ ಕಾದಂಬರಿಯೊಂದು ಈ ಹೇಳಿಕೆಯಿಂದ ಮೊದಲಾಗುತ್ತದೆ : ''ಸುಖೀ ಕುಟುಂಬಗಳೆಲ್ಲ ಒಂದೇ ತೆರನಾಗಿರುತ್ತವೆ ; ಅಸುಖಿಯಾದ ಪ್ರತಿಯೊಂದು ಕುಟುಂಬವೂ ತನ್ನದೇ ರೀತಿಯಲ್ಲಿ ಅಸುಖಿಯಾಗಿರುತ್ತದೆ.'' ಈ ಹೇಳಿಕೆಗೆ ಎಷ್ಟು ಬೇಕಾದರೂ ವ್ಯಾಖ್ಯಾನ ಮಾಡ ಬಹುದು. ಇದರ ತಾತ್ಪರ್ಯವಿಷ್ಟೆ : ಸುಖದ ಸ್ವರೂಪ ಒಂದು ; ದುಃಖದ ಸ್ವರೂಪ ಅನೇಕ, ಅನಂತ. ಸುಖವನ್ನು ರೂಪಿಸುವ ಅಂಶಗಳನ್ನು ಪಟ್ಟಿಮಾಡಬಹುದು; ದುಃಖದ ಪ್ರಕಾರಗಳನ್ನು ಪಟ್ಟಿಮಾಡಿ ಮುಗಿಸುವುದು ಶಕ್ಯವಿಲ್ಲ.

ಸುಖವನ್ನು ಲೌಕಿಕ, ಅಲೌಕಿಕ ಎಂದು ಎರಡು ವರ್ಗ ಮಾಡಬಹುದು. ಪ್ರಾಪಂಚಿಕವಾದುದನ್ನೆಲ್ಲ ತ್ಯಜಿಸಿ, ಪಾರಮಾರ್ಥಿಕ ಸುಖವನ್ನು ಪಡೆದು ತಣಿಯುವುದು ಎಲ್ಲರಿಗೂ ಸಾಧ್ಯವಿಲ್ಲ. ಅಂಥವರು ಲಕ್ಷಕ್ಕೊಬ್ಬರು ಅಥವಾ ಕೋಟಿಗೊಬ್ಬರು. ಆ ಪರಿಯ ಸುಖ ನಮಗೆ ಪ್ರಕೃತವಲ್ಲ. ''ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ'' ಎಂಬ ಗೀತೋಕ್ತಿಗೆ ಅರ್ಹರಾದವರ ವಿಷಯವೂ ನಮಗೆ ಅಪ್ರಸಕ್ತ. ಪ್ರಾಪಂಚಿಕವಾದ ನಿಲುವಿನಿಂದ ಸುಖ ಎಂದರೇನು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಆದರೆ ಸುಖ ದುಃಖ ವಿವೇಚನೆ ಸರಳಸುಲಭವಾದುದಲ್ಲ ಎಂಬುದನ್ನು ಮೊದಲೇ ಒಪ್ಪಿಕೊಳ್ಳಬೇಕು. ಸುಖವಾಗಲಿ, ದುಃಖವಾಗಲಿ ಮೂಲಭೂತವಾಗಿ ವ್ಯಕ್ತಿನಿಷ್ಠವಾದುದು. ಆದರೆ ಅದರಲ್ಲಿ ವಸ್ತು ನಿಷ್ಠತೆಯ ಪಾಲು ಉಂಟೇ ಉಂಟು.

ಐಹಿಕ ಸುಖವನ್ನೇ ನಾವು ತೆಗೆದುಕೊಂಡರೂ ಅದು 'ಸುಖ' ಎನಿಸಿಕೊಳ್ಳ ಬೇಕಾದರೆ ಆಮುಷ್ಮಿಕ ಸುಖದ ಒಂದು ಅಂಶ ಅದರಲ್ಲಿ ಇರಬೇಕು : ಅದು ಚಿತ್ತ ಸಂತೃಪ್ತಿ. ತೃಪ್ತಿಯೇ ಸುಖ, ಅತೃಪ್ತಿಯೇ ದುಃಖ ಎಂದು ಸೂತ್ರಪ್ರಾಯವಾಗಿ ಹೇಳಬಹುದು. ಮನಸ್ಸಿನಲ್ಲಿ ತೃಪ್ತಿ ಇಲ್ಲದಿದ್ದರೆ ಹೊರಗಿನ ಯಾವ ಸಾಧನ ಸಂಪತ್ತುಗಳೂ ಸುಖದಾಯಕವಾಗಲಾರವು; ತೃಪ್ತಿಯಿದ್ದರೆ ಬಾಹ್ಯ ಸಾಮಗ್ರಿಗಳ ಅರಕೆ ಸುಖಕ್ಕೆ ಅಡ್ಡಿಯಾಗಲಾರದು. (ಸಂಸ್ಕೃತ) ಸುಭಾಷಿತ ಒಂದು ಸೊಗಸಾದ ಹೋಲಿಕೆಯ ಮೂಲಕ ಹೇಳುತ್ತದೆ :

ತುಷ್ಟ ಮಾನಸವುಳ್ಳ ನರನಿಗೆ ಸಕಲ ಸಂಪತ್ತಿರುವುದು :
ಪಾದರಕ್ಷೆಯ ಧರಿಸಿದವನಿಗೆ ಭೂಮಿಯೇ ಚರ್ಮಾವೃತ !

ಆದರೆ ಮನಸ್ಸು ತುಷ್ಟವೂ ತೃಪ್ತವೂ ಆಗಿರಬೇಕಾದರೆ ಕೆಲವು ಕನಿಷ್ಠ ಆವಶ್ಯ ಕತೆಗಳಾದರೂ ಪೂರೈಕೆಗೊಳ್ಳಬೇಕಾಗುತ್ತದೆ; ಸಾಕಷ್ಟು ಧನ, ಆರೋಗ್ಯ, ಸಾಂಸಾರಿಕ

ಕ್ಲೇಶಗಳಾಗಲಿ ಸಮಸ್ಯೆಗಳಾಗಲಿ ಇಲ್ಲದಿರುವಿಕೆ ಇತ್ಯಾದಿ. ತದ್ವಿರುದ್ಧವಾಗಿ, ದಾರಿದ್ರ್ಯ, ರೋಗರುಜಿನಗಳು, ನಾನಾ ತಾಪತ್ರಯಗಳು ಮನಶ್ಶಾಂತಿಯನ್ನು ಕಲಕಿ ದುಃಖಹೇತುಗಳಾಗುತ್ತವೆ. ಐಶ್ವರ್ಯವೊಂದರಿಂದಲೆ ಸುಖ ಲಭಿಸುತ್ತದೆಂದು ಯಾರಾದರೂ ತಿಳಿದಿದ್ದರೆ ಅದು ದಡ್ಡತನವಷ್ಟೆ. ಆರೋಗ್ಯವಿಲ್ಲದವನಿಗೆ ಐಶ್ವರ್ಯದಿಂದೇನು ಫಲ? ಆದ್ದರಿಂದಲೆ, 'ಆರೋಗ್ಯವೇ ಭಾಗ್ಯ' ಎನ್ನುವುದು. ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಎರಡೂ ಸುಖಕಾರಿಗಳು. ಇಂತಹ ಸುಖವನ್ನು ಐಶ್ವರ್ಯ ಹೆಚ್ಚಿಸಬಹುದಷ್ಟೆ. ಅದೇ ಸುಖವಾಗಲಾರದು ಅಥವಾ ಸುಖವನ್ನು ತಂದುಕೊಡಲಾರದು.

ಕೆಲವರ ದುಃಖ ಬಾಹ್ಯಕಾರಣಗಳಿಂದ ಉಂಟಾಗತಕ್ಕದ್ದು; ಹಣದ ಅಭಾವ, ಪರಿಹಾರವಿಲ್ಲದ ವ್ಯಾಧಿ ಇತ್ಯಾದಿಗಳಿಗೆ ತುತ್ತಾದವರು ನಿಜವಾಗಿಯೂ ದುಃಖಿಗಳು. ಅದಕ್ಕೆ ಅವರು ಜವಾಬ್ದಾರರಲ್ಲ. ಇನ್ನು ಕೆಲವರ ದುಃಖ ಸ್ವಯಂಕೃತವೂ, ಕೃತಕವೂ ಆದದ್ದು. ಇರುವ ಸಂಪತ್ತು ಸಾಲದು, ಮತ್ತಷ್ಟು ಬೇಕು, ಅದು ಬೇಕು, ಇದು ಬೇಕು – ಹೀಗೆ 'ಬ್ರೇಕಿಲ್ಲದ ಬೇಕು'ಗಳನ್ನು ಬೆನ್ನಟ್ಟುವ ದುರಾಶಾಪಿಶಾಚಗ್ರಸ್ತರಿಗೆ ಸುಖ ಮೃಗಜಲವಾಗುತ್ತದೆ. ಇದ್ದುದರಲ್ಲಿ ತೃಪ್ತಿಪಟ್ಟುಕೊಳ್ಳುವುದೇ ಸುಖಸಂಪಾದನೆಯ ರಹಸ್ಯ. ಈ ಸೂಕ್ತಿಯನ್ನು ಲಕ್ಷಿಸಬಹುದು :

ಹೇರಾಸೆ ಯಾರದೋ ಅವನೇ ದರಿದ್ರನಾಗಿರಲಿ.
ಶ್ರೀಮಂತನಾರು ಬಡವನು ಯಾರು - ತೃಪ್ತಿಯಿರೆ ಮನದಿ ?

ಅಲ್ಪಸಂತೃಪ್ತಿ ಮತ್ತು ಅತ್ಯಾಶೆಯ ವರ್ಜನ ಸಿರಿತನಕ್ಕೂ ಬಡತನಕ್ಕೂ ಇರುವ ಭೇದವನ್ನು ತೊಡೆದುಹಾಕುತ್ತವೆ. ಅವುಗಳಿಂದ ಬರುವ ಆನಂದವೇ ಮಾನವನ ಪಾಲಿಗೆ ಅತ್ಯಮೂಲ್ಯವಾದ ಆಸ್ತಿ. ಈ ಸುಭಾಷಿತವನ್ನೂ ಪರಿಭಾವಿಸಬಹುದು :

ಸರ್ಪಗಳು ಗಾಳಿಯನು ಕುಡಿಯುವುವು, ಆದರೂ ದೌರ್ಬಲ್ಯವಿಲ್ಲ;
ಒಣಹುಲ್ಲ ತಿನ್ನುವುವು ಆನೆಗಳು, ಆದರೂ ಬಲಶಾಲಿಯಹವು;
ಬರಿ ಗೆಡ್ಡೆ ಗೆಣಸುಗಳನೇ ತಿಂದು ಮುನಿವರರು ಕಾಲಹಾಕುವರು;
ಸಂತೋಷವೊಂದೆ ಮಾನವನ ಪಾಲಿಗೆ ಪರಮ ನಿಧಿಯಾಗಿರುವುದು.

ತಮಗಿಂತ ಮೇಲಿರುವವರನ್ನು ಕಂಡು, ನಾನೂ ಹಾಗಾಗಲಿಲ್ಲವಲ್ಲ ಎಂದು ಅಸುಖಿಗಳಾಗುವುದು ಜನರ ಸ್ವಭಾವ. ತಮಗಿಂತ ಹೀನ ಸ್ಥಿತಿಯಲ್ಲಿರುವವರನ್ನು ನೋಡಿ ಅವರು ತಾವೇ ಭಾಗ್ಯವಂತರೆಂದುಕೊಳ್ಳುವುದನ್ನು ಕಲಿಯಬೇಕು. ಯಾರೋ ಒಬ್ಬ ಹೇಳಿದ್ದಾನೆ : ''ನನ್ನ ಕಾಲಿಗೆ ಬೂಟುಗಳಿಲ್ಲವೆಂದು ಕೊರಗುತ್ತಿದ್ದೆ, ಆದರೆ ಕಾಲೇ ಇಲ್ಲದವನನ್ನು ಒಮ್ಮೆ ಕಂಡಾಗ ನಾನು ಎಷ್ಟು ಅದೃಷ್ಟಶಾಲಿ ಎಂಬುದು ತಿಳಿಯಿತು''.

ಅಂತೂ ಲೋಕದಲ್ಲಿ ಸುಖವೂ ಇದೆ; ದುಃಖವೂ ಇದೆ. ದುಃಖದ ಪ್ರಮಾಣವೇ ನಿಸ್ಸಂಶಯವಾಗಿ ಅಧಿಕ. ಸುಖ ದುಃಖಕ್ಕೆ ದಾರಿಯಾಗದಂತೆ ನೋಡಿಕೊಳ್ಳಬೇಕು; ದುಃಖವನ್ನು ಅಳಿಸುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ನಿಜವಾದ ದುಃಖವನ್ನು

ನಿವಾರಿಸಬಹುದೇನೊ ; ಆದರೆ ಕೃತಕವಾದ ದುಃಖಕ್ಕೆ ಔಷಧವಿಲ್ಲ. ಅಲ್ಲದೆ, ಸುಖದುಃಖಗಳ ಕಲ್ಪನೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಸಾಧಾರಣೀಕರಣ ಪ್ರಾಯಃ ಸಾಧ್ಯವಿಲ್ಲ.

ಇನ್ನೊಂದು ದೃಷ್ಟಿಯಿಂದ ನೋಡಿದರೆ, ಒಂದಲ್ಲ ಒಂದು ದುಃಖ–ಸಣ್ಣದೋ ದೊಡ್ಡದೋ–ಪ್ರತಿಯೊಬ್ಬರಿಗೂ ಇದ್ದೇ ಇರುತ್ತದೆ. ಪರಿಪೂರ್ಣ ಸುಖಭಾಜನರು ವಿರಳ. ''ಎಲ್ಲರ ಮನೆಯ ದೋಸೆಯೂ ತೂತೇ'' ಎಂಬ ಗಾದೆ ಅರ್ಥವತ್ತಾದುದು. ಅದಕ್ಕೆ ಯಾರೋ ಇನ್ನೊಂದು ಮಾತು ಸೇರಿಸಿದ್ದಾರೆ : 'ಕೆಲವರ ಮನೆಯ ಕಾವಲಿಯೆ ತೂತು.' ಕಾವಲಿಯ ತೂತನ್ನು ಸರಿಪಡಿಸಬಹುದು; ಆದರೆ ದೋಸೆಯ ತೂತನ್ನು ಮುಚ್ಚುವಂತಿಲ್ಲ: ಅದರ ಸ್ವಭಾವವೇ ಹಾಗೆ.

'ಚಕ್ರಾರಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ' ಎಂಬ ಸೂಕ್ತಿಯೂ ಈ ಸಂದರ್ಭದಲ್ಲಿ ನೆನಪಾಗುತ್ತದೆ. ಜೀವನದಲ್ಲಿ ಸುಖ–ದುಃಖಗಳು, ಏಳು–ಬೀಳುಗಳು ಸಹಜ. ಸುಖವಾಗಲಿ ದುಃಖವಾಗಲಿ ಹುಟ್ಟಿನಿಂದ ಸಾವಿನವರೆಗೆ ಏಕಪ್ರಕಾರವಾಗಿ ಉಳಿಯಲಾರದು. ಯೋಗಿಯಾಗುವುದು ಎಲ್ಲರಿಗೂ ಸಾಧ್ಯವಿಲ್ಲವಾದರೂ ಆದಷ್ಟು ಮಟ್ಟಿಗೆ ಸ್ಥಿತಪ್ರಜ್ಞರಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅದರಿಂದ ತಕ್ಕಮಟ್ಟಿಗಾದರೂ ಸುಖವನ್ನು ಸಾಧಿಸಬಹುದು.

ಪರಿಪೂರ್ಣ ಸುಖ ಎಂಬುದಿಲ್ಲ ಎಂದೆವಲ್ಲವೆ ? "call no man happy till he dies" (ಸಾಯುವತನಕ ಮನುಷ್ಯನಿಗೆ ಸುಖವಿಲ್ಲ) ಎಂಬ ಗ್ರೀಕ್ ನಾಟಕಕಾರನೊಬ್ಬನ ಪ್ರಸಿದ್ಧವಾದ ಹೇಳಿಕೆ ನೆನಪಿಗೆ ಬರುತ್ತದೆ. ಸತ್ತಮೇಲಾದರೂ ಸುಖವಿದೆಯೆ ? ಅದೂ ಖಚಿತವಲ್ಲ. ಹುಟ್ಟದಿರುವುದೇ ಸುಖ ಎನ್ನಬಹುದು. ಆದರೆ ಅದು ನಮ್ಮ ಕೈಯಲ್ಲಿಲ್ಲವಲ್ಲ! ಬಹು ವಿಚಿತ್ರ, ಮಾನವನ ಬದುಕು.

■■

೨೯. ಪರೀಕ್ಷೆ

ಪರೀಕ್ಷೆ ಎಂದಕೂಡಲೆ ನೆನಪಿಗೆ ಬರತಕ್ಕವು ವರ್ಷಕ್ಕೊಮ್ಮೆ ಅಥವಾ ಇಮ್ಮೆ ನಡೆಯುವ ಶೈಕ್ಷಣಿಕ ಪರೀಕ್ಷೆಗಳು. ಆದರೆ ಬದುಕಿನಲ್ಲಿ ಯಾವಾಗ ಬೇಕಾದರೂ ಪರೀಕ್ಷೆಗಳು ಬರಬಹುದು : ಇವು ಜೀವನ ಪರೀಕ್ಷೆಗಳು. ಶೈಕ್ಷಣಿಕ ಪರೀಕ್ಷೆಗಳಿಗೊಂದು ವೇಳಾಪಟ್ಟಿ ಇರುತ್ತದೆ; ಅವು ಅನಿರೀಕ್ಷಿತವಾಗಿ ಬರುವುದಿಲ್ಲ. ಆದರೆ ಜೀವನಪರೀಕ್ಷೆಗಳು ಹೇಳದೆ ಕೇಳದೆ ಅನಿರೀಕ್ಷಿತವಾಗಿ ಸಂಭವಿಸುತ್ತವೆ. ನಮ್ಮ ಶಿಕ್ಷಣಪದ್ಧತಿ ಎಂಥದೆಂದರೆ, ಹಿಂದಿನ ಎರಡು ಮೂರು ವರ್ಷಗಳ ಪ್ರಶ್ನಪತ್ರಿಕೆಗಳನ್ನು ನೋಡಿ, ಈ ವರ್ಷ ಯಾವ ಪ್ರಶ್ನೆಗಳನ್ನು ಕೊಡುತ್ತಾರೆಂಬುದನ್ನು ಊಹಿಸುವುದು ಸಾಧ್ಯ. ಆ ಪ್ರಶ್ನೆಗಳು ಎಲ್ಲರಿಗೂ ಸಮಾನ; ಪ್ರಶ್ನೆಗಳಿಗೆ ಬರೆಯಬೇಕಾದ ಉತ್ತರಗಳ ಸ್ವರೂಪವೂ ಒಂದೇ. ಆದರೆ ಜೀವನ ಪರೀಕ್ಷೆಗಳು ಹೀಗಲ್ಲ; ಅವುಗಳಲ್ಲಿ ಪ್ರಶ್ನೆಗಳನ್ನು ಮುಂದಾಗಿ ಊಹಿಸುವುದು ಸಾಧ್ಯವೇ ಇಲ್ಲ. ಆ ಪ್ರಶ್ನೆಗಳು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಎದುರಾಗುತ್ತವೆ ; ಒಬ್ಬರಿಗೆ ಬಂದ ಪ್ರಶ್ನೆ ಮತ್ತೊಬ್ಬರಿಗೆ ಬರದಿರಬಹುದು. ಪ್ರಶ್ನೆಗಳಿಗೆ ತಕ್ಕಂತೆ ಉತ್ತರಗಳೂ ಬೇರೆಬೇರೆಯಾಗುವುದು ಅನಿವಾರ್ಯ. ಅಂತೂ ತಲೆಗೆಲ್ಲ ಒಂದೇ ಮಂತ್ರ ಎನ್ನುವುದು ಶೈಕ್ಷಣಿಕ ಪರೀಕ್ಷೆಗಳಿಗೆ ಅನ್ವಯಿಸುತ್ತದೆ, ಜೀವನ ಪರೀಕ್ಷೆಗಳಿಗಲ್ಲ.

ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ಸಲ ಪರೀಕ್ಷೆಗೆ ಗುರಿಯಾಗುತ್ತಾರೆ. ಒಮ್ಮೆಯಾದರೂ ಪರೀಕ್ಷೆಗೀಡಾಗದ ವ್ಯಕ್ತಿಯಾರೂ ಇರಲಿಕ್ಕಿಲ್ಲ. ಕೆಲವು ಪರೀಕ್ಷೆಗಳು ಸಾಮಾನ್ಯವಾದವು. ಅವುಗಳಲ್ಲಿ ತೇರ್ಗಡೆಯಾಗುವುದು ಅಶಕ್ಯವಲ್ಲ. ಮತ್ತೆ ಕೆಲವಾದರೋ ಅಗ್ನಿಪರೀಕ್ಷೆಗಳು; ವ್ಯಕ್ತಿಯ ಎಲ್ಲ ಶಕ್ತಿ ಶ್ರದ್ಧೆಗಳನ್ನು ಒರೆಗೆ ಹಚ್ಚುವಂಥ ಕಠಿಣ ಸವಾಲುಗಳು. ಇವು 'ತನುವನಲ್ಲಾಡಿಸಿ ನೋಡುವ', 'ಮನವನಲ್ಲಾಡಿಸಿ ನೋಡುವ' ಬಿರುಗಾಳಿಗಳು. ಇವು ಬಂದಾಗ, ಬೆದರದೆ ಬೆಚ್ಚದೆ ಅಲ್ಲಾಡದೆ ಮಲ್ಲರಾಗಿ ನಿಲ್ಲುವವರು ಅಪುರೂಪ. ಈ ವರ್ಗದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಅಸಾಧ್ಯವಲ್ಲದಿದ್ದರೂ ಕಷ್ಟ ಸಾಧ್ಯ. ಅಸಾಮಾನ್ಯ ಚೇತನಗಳು ಮಾತ್ರ ಈ 'ದಿವ್ಯ'ಗಳಲ್ಲಿ ಗೆಲ್ಲುತ್ತವೆ; ಸಾಮಾನ್ಯ ಚೇತನಗಳು ಸೋಲುತ್ತವೆ ; ಸುಟ್ಟು ಹೋಗುತ್ತವೆ,

ಈ ಬದುಕೇ ಒಂದು ಅಗ್ನಿ ಪರೀಕ್ಷೆ, ಇದರಿಂದ ಪಾರಾಗುವ ಮಾತೇ ಇಲ್ಲ ಎನ್ನುತ್ತದೆ ಒಂದು (ಸಂಸ್ಕೃತ) ಸುಭಾಷಿತ :

ಸಂಸಾರದಲಿ ಸಿಕ್ಕಿಬಿದ್ದವರ ಕುಶಲವನು ಏನು ಕೇಳುವುದು ?-
ಅಗ್ನಿ ಪತಿತನಿಗೇಕೆ 'ಸುಟ್ಟುಹೋದೆಯೊ ಇಲ್ಲವೋ' ಎಂಬ ಪ್ರಶ್ನೆ ?

ನಿಜ, 'ತಾಪ'ತ್ರಯಗಳು ಎಲ್ಲರಿಗೂ ಇದ್ದವೇ. ಹಾಗೆಂದು ಎಲ್ಲರೂ ವಿರಕ್ತರಾಗುವುದು ಸಾಧ್ಯವಿಲ್ಲ. ಈ ಸಂಸಾರದಲ್ಲಿದ್ದುಕೊಂಡೂ ಬೆಂದುಹೋಗದಂತೆ ಬಾಳುವುದು ಹೇಗೆಂಬುದನ್ನು ನಾವು ಯೋಚಿಸಬೇಕಷ್ಟೆ.

ಎಂಥ ದುರ್ಭರ ಪ್ರಸಂಗವೇ ಆಗಲಿ, ಅದನ್ನು ಎದುರಿಸುತ್ತೇನೆಂಬ ಕೆಚ್ಚುನೆಚ್ಚುಗಳನ್ನು, ಅದಮ್ಯವಾದ ಶ್ರದ್ಧೆಯನ್ನು, ಆಶಾವಾದವನ್ನು ವ್ಯಕ್ತಿ ಬೆಳೆಯಿಸಿಕೊಳ್ಳಬೇಕು. ಎಂತಹ ವಿಷಮ ಪರಿಸ್ಥಿತಿಯಲ್ಲೂ ನಿರಾಶೆ, ವ್ಯಥೆಗೆ ಎಡೆಗೊಡಬಾರದು. ಈ (ಸಂಸ್ಕೃತ) ಸೂಕ್ತಿ ಗಮನಾರ್ಹವಾಗಿದೆ :

ಮನದೊಳು ವಿಷಾದವನು ತಳೆಯಬಾರದು, ಅದುವೆ
ದೋಷಯುತವಹುದು;
ಕೊಲುವುದು ವಿಷಾದ ನರನನು, ಕ್ರುದ್ಧ ಸರ್ಪ
ಬಾಲಕನನೆಂತಂತು.

ಕಾಳರಾತ್ರಿಗೂ ಒಂದು ಕಡೆಯುಂಟು ಎಂಬುದು ನಮ್ಮ ನೆನಪಿನಲ್ಲಿರಬೇಕು. ಸೀತೆಯನ್ನು ಕಳೆದುಕೊಂಡಾಗ ಶ್ರೀರಾಮನಂಥವನೂ ತಾತ್ಕಾಲಿಕವಾಗಿ ದುಃಖ ವಿವಶನಾದ. ಆಗ ಲಕ್ಷ್ಮಣ ಅವನನ್ನು ಸಂತೈಸಬೇಕಾಯಿತು. ಅವನಾಡಿದ ಮಾತು ಒಂದು ಆಣಿಮುತ್ತು : ''ಏತಿ ಜೀವಂತಮಾನಂದೋ ನರಂ ವರ್ಷ ಶತಾದಪಿ'' (ಬದುಕಿದ್ದರೆ, ನೂರು ವರ್ಷವಾದ ಮೇಲಾದರೂ ಮನುಷ್ಯನಿಗೆ ಆನಂದ ಲಭಿಸುತ್ತದೆ). ಹೌದು, ಜೀವಂತವಾಗಿರಬೇಕು. ದುಃಖದಿಂದ ಪ್ರಾಣ ಕಳೆದುಕೊಂಡರೆ ಏನು ಬಂತು ಭಾಗ್ಯ ?

ಜೀವನದಲ್ಲಿ ಪರೀಕ್ಷೆಗಳು ಬರುವುದು ಎಷ್ಟೋ ಸಲ ಒಳ್ಳೆಯದು, ಅವು ಸ್ವಾಗತಾರ್ಹ ಎನಿಸುತ್ತದೆ. ಅವು ಮಾನವನ ಸುಪ್ತ ಸತ್ತ್ವವನ್ನು ಎಚ್ಚರಿಸಿ, ಎತ್ತಿ ತೋರುತ್ತವೆ ಮಾತ್ರವಲ್ಲ, ಆ ಸತ್ತ್ವದ ಸಂವರ್ಧನಕ್ಕೂ ನೆರವಾಗುತ್ತವೆ. ಈ ಸಂದರ್ಭದಲ್ಲಿ ಬಸವಣ್ಣನವರ ವಚನವೂ ನೆನಪಿಗೆ ಬರುತ್ತದೆ :

ಅರೆದು ನೋಡುವ ಚಂದನದಂತೆ,
ಅರಿದು ನೋಡುವ ಕಬ್ಬಿನ ಕೋಲಿನಂತೆ,
ಒರೆದು ನೋಡುವ ಸುವರ್ಣದ ಚಿನ್ನದಂತೆ....

ಇದು ಭಕ್ತರಿಗೆ ಮಾತ್ರವಲ್ಲ, ಭವಿಗಳಿಗೂ ಅನ್ವಯಿಸುತ್ತದೆ. ತೇದಾಗಲೆ ಚಂದನದ ಪರಿಮಳ ಹೊಮ್ಮುವುದು, ಕತ್ತರಿಸಿದಾಗಲೆ ಕಬ್ಬು ರಸ ಸೂಸುವುದು, ಒರೆ ಹಚ್ಚಿದಾಗಲೆ ಚಿನ್ನದ ನೈಜವಾದ ಬಣ್ಣ ವ್ಯಕ್ತವಾಗುವುದು. ಮಿದ್ದಿದಷ್ಟೂ ಮಣ್ಣು ಹದಗೊಳ್ಳುತ್ತದೆ; ಸಮಸ್ಯೆಗಳಿಂದ ಗುದ್ದಿಸಿಕೊಂಡಷ್ಟೂ ಬಲ ಹೆಚ್ಚುತ್ತದೆ. ಮೂಸೆಗೆ ಹಾಕಿದ ಹೊನ್ನು ತನ್ನ ಕಾಳಿಕೆಯನ್ನು ನೀಗಿಕೊಂಡು ಪರಿಶುದ್ಧವಾಗುತ್ತದೆ.

ಒಮ್ಮೊಮ್ಮೆ ಪರೀಕ್ಷೆಯಲ್ಲಿ ಸೋಲೊದಗಬಹುದು. ''ಮರಳಿ ಯತ್ನವ ಮಾಡು'' ಎಂಬ ಸೂತ್ರ ಆಗ ತಾರಕವಾಗಬೇಕು. ನಪಾಸಾದ ವಿದ್ಯಾರ್ಥಿ ಮತ್ತೆ

ಪರೀಕ್ಷೆಗೆ ಕುಳಿತರೆ ತೇರ್ಗಡೆಯಾಗಬಹುದು, ಪ್ರಥಮದರ್ಜೆಯಲ್ಲೆ ಆಗಬಹುದು ಅಥವಾ ಪುನಃ ನಪಾಸಾಗಲೂಬಹುದು. ಅಂತೂ ಯಾವಾಗಲೂ ಜಯ ಕಟ್ಟಿಟ್ಟದ್ದು ಎಂದೇನೂ ಹೇಳುವಂತಿಲ್ಲ; ಅಪಜಯ ಅನಿವಾರ್ಯವಾಗಲೂಬಹುದು. ಆದರೆ ಗೆಲ್ಲುವ ಪ್ರಯತ್ನವನ್ನೇ ಮಾಡದೆ ಸುಲಭವಾಗಿ ಸೋಲನ್ನೊಪ್ಪಿಕೊಳ್ಳುವುದು ತಪ್ಪು. ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿಯೂ ಕೈಮೀರಿದ ಕಾರಣಗಳಿಂದ ಸೋತರೆ ಅದರಲ್ಲೇನೂ ದೋಷವಿಲ್ಲ. ಗುರಿ ಮುಟ್ಟದಿದ್ದರೂ ಮಾರ್ಗಕ್ರಮಣಕ್ಕೆ ಅದರ ಬೆಲೆಯುಂಟೇ ಉಂಟು; ಸಿದ್ಧಿಯಲ್ಲಿ ವೈಫಲ್ಯವುಂಟಾದರೂ ಸಾಧನೆ ವ್ಯರ್ಥವೇನೂ ಅಲ್ಲ. ಡಿ.ವಿ.ಜಿ. ಅವರು ಹೇಳುವಂತೆ,

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು
ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೇಂ ?
ಮುಟ್ಟಿ ನೋಡುವನ ಮೈಕಟ್ಟು ಕಬ್ಬಿಣಗಟ್ಟಿ :
ಗಟ್ಟಿತನ ಗರಡಿಫಲ-ಮಂಕುತಿಮ್ಮ.

ಇಷ್ಟಂತೂ ಖಚಿತ : ಎಂತಹ ಸನ್ನಿವೇಶದಲ್ಲೇ ಆಗಲಿ, ಯಾವ ಸಮಸ್ಯೆಗೇ ಆಗಲಿ ಸಾವು ಸಮರ್ಪಕ ಪರಿಹಾರವಲ್ಲ. ಉತ್ತರ ಪತ್ರಿಕೆಯ ಬದಲು ಖಾಲಿ ಹಾಳೆ ಕೊಟ್ಟು ಬಂದರೆ ಸಿಕ್ಕುವ ಸೊನ್ನೆ ಯಾರಿಗೂ ಭೂಷಣವಲ್ಲ.

■■

೩೦. ಮಾತು

''ಮಾತೆಂಬುದು ಜ್ಯೋತಿರ್ಲಿಂಗ'' ಎಂಬ ಅಲ್ಲಮಪ್ರಭುವಿನ ಸೂತ್ರಪ್ರಾಯವಾದ ನುಡಿ ಮಾತಿನ ಮಹತಿಯನ್ನು ಬಿತ್ತರಿಸುತ್ತದೆ. ಭೌತಿಕ ಹಾಗೂ ಆಧ್ಯಾತ್ಮಿಕ ಸ್ತರಗಳಲ್ಲಿ ಭಾಷೆಯ ಪಾತ್ರವನ್ನು ಪ್ರಭು ಇಲ್ಲಿ ಧ್ವನಿಸಿದ್ದಾನೆ. ಭಾಷೆ ಬೆಳಕೂ ಹೌದು, ಭಗವಂತನೂ ಹೌದು. ದಂಡಿಯ ಈ ಹೇಳಿಕೆಯನ್ನೂ ನೋಡಬಹುದು :

ವಾಚಾಮೇವ ಪ್ರಸಾದೇನ ಲೋಕಯಾತ್ರಾ, ಪ್ರವರ್ತತೇ
ಇದುಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಾನ್ನ ದೀಪ್ಯತೇ

(ಭಾಷೆಗಳ ಅನುಗ್ರಹದಿಂದ ಮಾತ್ರವೇ ಲೋಕವ್ಯವಹಾರ ಸಾಗುತ್ತಿದೆ. ಮಾತೆಂಬ ಜ್ಯೋತಿ ಸಂಸಾರದ ಉದ್ದಕ್ಕೂ ಬೆಳಗದೆ ಇದ್ದರೆ ಅಶೇಷ ಭುವನತ್ರಯವೂ ಕಗ್ಗತ್ತಲಾಗಿಬಿಟ್ಟೀತು).

ಮನುಷ್ಯ ಮನುಷ್ಯನಾಗಿರುವುದು ಮಾತಿನಿಂದ, ಕೇವಲ ಮತಿಯಿಂದಲ್ಲ. ಮತಿ ಪ್ರಾಣಿಗಳಲ್ಲೂ ಅಷ್ಟಿಷ್ಟು ಉಂಟು. ಆದರೆ ಮಾತು ಮನುಷ್ಯನದೇ ಆಸ್ತಿ, ಭಾಷೆಯಿಂದ ಮಾನವ ಶಿಷ್ಟನೂ ವಿಶಿಷ್ಟನೂ ಆಗಿದ್ದಾನೆ, ಮೃಗಗಳಿಗಿಂತ ಮೇಲಾಗಿದ್ದಾನೆ ; ಮಾತ್ರವಲ್ಲ, ಅವನು ದೈವತ್ವಕ್ಕೇರುವುದೂ ಭಾಷೆಯ ನೆರವಿನಿಂದಲೇ. ''ವ್ಯಾಕರಣದಿಂದೆ ಪದಂ, ಆ ವ್ಯಾಕರಣದ ಪದದಿನರ್ಥಂ, ಅರ್ಥದೆ ತತ್ತ್ವಾಲೋಕಂ, ತತ್ತ್ವಾಲೋಕದಿಂ ಆಕಾಂಕ್ಷಿಪ ಮುಕ್ತಿಯಕ್ಕುಂ'' ಎಂದು ಕೇಶಿರಾಜ ವ್ಯಾಕರಣಕ್ಕೂ ಮೋಕ್ಷಕ್ಕೂ ಸಂಬಂಧ ಕಲ್ಪಿಸಿರುವುದು ಅರ್ಥರಹಿತವೇನಲ್ಲ.

ಅಂತೂ ಮನುಕುಲದ ನಾಗರಿಕತೆ, ಸಂಸ್ಕೃತಿ, ಧರ್ಮಗಳಿಗೆಲ್ಲ ಭಾಷೆಯೆ ಬುನಾದಿ. ಆದ್ದರಿಂದಲೇ ನಮ್ಮವರು ಅದನ್ನು ಸರಸ್ವತಿ ಎಂದರು. ''ಪರಮ ಜಿನೇಂದ್ರವಾಣಿಯೆ ಸರಸ್ವತಿ, ಬೇಱದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು'' ಎಂಬ ಪಂಪನ ಮಾತು ಗಮನಾರ್ಹವಾದುದು : ಒಳ್ಳೆಯವರ ಮಾತು, ಒಳ್ಳೆಯ ಮಾತು ಸಾಕ್ಷಾತ್ ಸರಸ್ವತಿ.

ಹೀಗೆ ಮಾನವನಿಗೆ ವರಪ್ರಾಯವಾಗಿರುವ ಭಾಷೆ ಸದುಪಯೋಗಗೊಳ್ಳಬೇಕು, ದುರುಪಯೋಗಗೊಳ್ಳಬಾರದು, ಅಪವ್ಯಯವಾಗಬಾರದು. ''ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು'' ಎಂಬ ಗಾದೆ ಈ ಅಪವ್ಯಯದ ವಿರುದ್ಧ ಎಚ್ಚರಿಕೆಯಾಗಿದೆ. ಮಾತಿನ ದುರುಪಯೋಗ ಅಪಾಯಕರವೂ ಅಹುದು. ''ಮಾತೇ ಮುತ್ತು, ಮಾತೇ ಮಿತ್ತು'' ಎಂಬ ಗಾದೆ ಇದನ್ನು ಹೇಳುತ್ತಿದೆ. ಆಡುವ ಮಾತಿನಿಂದ ಪ್ರಯೋಜನವಾಗಬೇಕು, ಒಳಿತಾಗಬೇಕು, ಕೆಡುಕಾಗಬಾರದು–ಹಾಗೆ ಮಾತನ್ನು ಬಳಸಬೇಕು.

ಮಾತು ಸಾರ್ಥಕವಾಗಿ ಬಳಕೆಗೊಂಡಾಗ ಕಾವ್ಯವಾಗುತ್ತದೆ, ವ್ಯರ್ಥವಾಗಿ ಬಳಕೆಗೊಂಡಾಗ ಹರಟೆಯಾಗುತ್ತದೆ, ದುರುಪಯೋಗಕ್ಕೀಡಾದಾಗ ಬೈಗುಳವಾಗುತ್ತದೆ. ಕಾವ್ಯ ನಮ್ಮ ಗಮ್ಯವಾಗಬೇಕು ; ಹರಟೆಯಲ್ಲ, ಬೈಗುಳವಲ್ಲ. ಭಾಷೆಯ ಅತ್ಯುನ್ನತ ಹಂತವೇ ಕಾವ್ಯ, ಅದು ಆಡುಮಾತಿನಲ್ಲಿ ಕಂಡುಬರುವಂಥದಲ್ಲ ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಆದರೆ ದಿನದಿನದ ಮಾತೂ ಒಂದು ಮಿತಿಯಲ್ಲಿ ಕಾವ್ಯವಾಗದಿದ್ದರೆ ಅದಕ್ಕೆ ಬೆಲೆಯಿಲ್ಲ. ಇಷ್ಟಕ್ಕೂ ಕಾವ್ಯ ಎಂದರೇನು ? ಕೋಲ್‌ರಿಜ್ ಪ್ರಕಾರ, ಅದು "Best words in the best order." ನಮ್ಮ ದೈನಂದಿನ ಭಾಷೆಯೂ ಹೀಗೆಯೇ ಇರಬೇಕಲ್ಲವೆ ? ಉಚಿತವಾದ ಮಾತು ಉಚಿತವಾದ ಕ್ರಮದಲ್ಲಿ ಹೊಮ್ಮ ಬೇಕು. ''ಹಿತಮಿತ ಮೃದು ವಚನ'' ಯಾರಿಗೆ ತಾನೆ ಆದರ್ಶವಲ್ಲ? ''ಮೃದುವಚನವೇ ಸಕಲ ತಪಂಗಳಯ್ಯ'' ಎಂಬ ಬಸವಣ್ಣನವರ ನುಡಿಯನ್ನು ಲಕ್ಷಿಸಬೇಕು. ಮಾತಿನ ರೀತಿಯೂ ಒಂದು ಬಗೆಯ ತಪಸ್ಸು; ಅದನ್ನು 'ವಾಙ್ಮಯ ತಪ' ಎಂದಿದೆ ಭಗವದ್ಗೀತೆ. ಮಾತಿನ ಹಿಂದೆ ಒಂದು ಮನಸ್ಸಿರುತ್ತದೆ; ಎಂತಲೇ ಮಾತಿಗೆ ಇಷ್ಟೊಂದು ಪ್ರಾಮುಖ್ಯ.

ಹೇಗಿರಬೇಕು ಆಡುವ ಮಾತು ? ಅದರಲ್ಲಿ ಸತ್ಯವಿರಬೇಕು, ಸೌಂದರ್ಯವಿರ ಬೇಕು. ಎರಡೂ ಇದ್ದಲ್ಲಿ ಶಿವವೂ ಇರುತ್ತದೆ. ''ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್, ನ ಬ್ರೂಯಾತ್ ಸತ್ಯಮಪ್ರಿಯಂ'' ಎಂಬುದೊಂದು ಆರ್ಷ ಸೂತ್ರ. ಸತ್ಯವನ್ನು ಹೇಳಬೇಕು, ಪ್ರಿಯವಾಗಿ ಹೇಳಬೇಕು; ಅದೇ ಕಾವ್ಯ. ಸತ್ಯವನ್ನು ಅಪ್ರಿಯವಾಗಿ ಹೇಳಕೂಡದು; ಹಾಗೆ ಹೇಳಿದಲ್ಲಿ ಅದು ನಿಂದೆಯ ಒಂದು ಪ್ರಕಾರವಾಗಬಹುದು.

ಹೇಗೆ ನುಡಿಯಬೇಕೆಂಬುದನ್ನು ಬಸವಣ್ಣನವರೂ ಸೊಗಸಾಗಿ ಉಪದೇಶಿಸಿದ್ದಾರೆ :

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗ ಮೆಚ್ಚಿ ಅಹುದೆನ್ನಬೇಕು.

ಮುತ್ತು, ಮಾಣಿಕ್ಯ, ಸ್ಫಟಿಕಗಳ ಗುಣಗಳೆಲ್ಲ ಮಾತಿನಲ್ಲಿ ಮೇಳವಿಸಿರಬೇಕು. ಅದು ಅತ್ಯುತ್ತಮವಾದ ಮಾತಿನ ಬಗೆ. ಅದನ್ನು ದೇವರು ಮೆಚ್ಚುತ್ತಾನೆ. ಅಂತಿಮವಾಗಿ ಭಗವಂತನನ್ನು ಮೆಚ್ಚಿಸುವುದೆ ಮಾನವನ ಗುರಿಯಾಗಬೇಕು, ಲೋಕವನ್ನು ಮೆಚ್ಚಿಸುವುದಲ್ಲ; ಅದು ಪೂರ್ತಿ ಸಾಧ್ಯವೂ ಇಲ್ಲ. ಮಾತಿನ ವಿಷಯಕ್ಕೂ ಇದು ಅನ್ವಯಿಸುತ್ತದೆ.

ಮಾನವ ಶರೀರ ಸ್ಥೂಲವಾದುದು, ಮೃಣ್ಮಯವಾದುದು; ಮಾತು ಅದರಲ್ಲಿ ಮನೆ ಮಾಡಿಕೊಂಡಿದ್ದರೂ ಅಚೆಗಿರುವ ಸೂಕ್ಷ್ಮ ಚಿನ್ಮಯ ಶಕ್ತಿ. ಅದರ ದಿವ್ಯತೆಗೆ

ನಮ್ಮಿಂದ ಯಾವ ವಿಧದಲ್ಲೂ ಅಪಚಾರವಾಗಬಾರದು. 'ಮಾತು ಬೆಳ್ಳಿ, ಮೌನ ಬಂಗಾರ' ಎಂಬ ಉಕ್ತಿಯೊಂದಿದೆ. 'ಧ್ಯಾನ ವಜ್ರ' ಎಂಬುದನ್ನು ಇದಕ್ಕೆ ಸೇರಿಸಬಹುದು. ಮೌನ, ಧ್ಯಾನಗಳು ತುಂಬ ದುಬಾರಿ. ಅವುಗಳನ್ನು ಕೆಲವರ ಪಾಲಿಗೆ ಬಿಡೋಣ. ಸಾಮಾನ್ಯರು ಮಾತಿನ ಬೆಳ್ಳಿಯನ್ನು, ಅವಲೋಹದ ಮಟ್ಟಕ್ಕಿಳಿಯದಂತೆ ಉಳಿಸಿಕೊಂಡರೆ ಸಾಕು. ಆದ್ದರಿಂದ ಮಾತಿನಲ್ಲಿ ಬೆಳ್ಳಿತನ, ಒಳ್ಳೆತನ ಇರಲಿ; ಅದು ನಿಷ್ಕಳಂಕವಾದ Stainless steel ಆಗಿರಲಿ.

■■

೩೧. ವೈರಾಗ್ಯ

ಮಾನವನ ಬದುಕು, ಅದರಲ್ಲೂ ಇಂದಿನ ದಿನಗಳಲ್ಲಿ, ದುಃಖಗಳ ಒಂದು ಪುಂಖಾನುಪುಂಖ ಸರಣಿಯಾಗಿ ಪರಿಣಮಿಸಿದೆ. ಇದಕ್ಕೆ ಪರಿಹಾರವೆಂಬಂತೆ ಭರ್ತೃಹರಿ ಬಹಳ ಹಿಂದೆಯೆ ಅಭಯದ ಒಂದು ಮಾತನ್ನಾಡಿದ್ದಾನೆ :

ಭೋಗೇ ರೋಗಭಯಂ ಕುಲೇ ಚ್ಯುತಿಭಯಂ ವಿತ್ತೇ ನೃಪಾಲಾದ್ಭಯಂ
ಮಾನೇ ದೈನ್ಯಭಯಂ ಬಲೇ ರಿಪುಭಯಂ ರೂಪೇ ಜರಾಯಾ ಭಯಂ
ಶಾಸ್ತ್ರೇ ವಾದಿಭಯಂ ಗುಣೇ ಖಲಭಯಂ ಕಾಯೇ ಕೃತಾಂತಾದ್ಭಯಂ
ಸರ್ವಂ ವಸ್ತು ಭಯಾನ್ವಿತಂ ಭುವಿ ನೃಣಾಂ ವೈರಾಗ್ಯಮೇವಾಭಯಂ

''ಭೋಗದಲ್ಲಿ ರೋಗದ ಭಯವಿದೆ'' ಇತ್ಯಾದಿಯಾಗಿ ಹೇಳಿ ''ವೈರಾಗ್ಯವೊಂದೇ ಅಭಯಪ್ರದವಾದುದು'' ಎನ್ನುತ್ತಾನೆ ಕವಿ. ವೈರಾಗ್ಯದ ಮಾತು ನಮಗೇಕೆ ಎಂದು ನಾವು ಮುಖ ತಿರುಗಿಸಬಾರದು. ವೈರಾಗ್ಯವೆಂದರೆ ಸರ್ವಸಂಗ ಪರಿತ್ಯಾಗ ಮಾಡಿ ಕಾಡಿಗೋಡುವುದೆಂದಲ್ಲ. ಹಿಂದೆ ರಾಜ್ಯಕೋಶಗಳನ್ನು ತೊರೆದು ಅರಣ್ಯಕ್ಕೆ ತೆರಳಿದವರುಂಟು. ನಮಗಿಂದು ತ್ಯಜಿಸುವುದಕ್ಕೆ ರಾಜ್ಯಕೋಶಗಳಿಲ್ಲ, ಆಶ್ರಯಿಸುವುದಕ್ಕೆ ಅರಣ್ಯವಿಲ್ಲ. ಆದರೂ ವೈರಾಗ್ಯವೆಂಬುದು ಒಂದು ಹಂತದಲ್ಲಿ, ಪರಿಮಿತಿಯಲ್ಲಿ ಬೇಕಾದದ್ದೇ; ಅದರಿಂದಲೇ ನಿಜವಾದ ಸುಖದ ಸಂಪಾದನೆ. ಲೌಕಿಕ, ಅಲೌಕಿಕ ಎಂದು ಜೀವನವನ್ನು ಎರಡು ಬಿಡಿ ಬಂಡಿಗಳನ್ನಾಗಿ (compartments) ಮಾಡುವುದು ಸಾಧ್ಯವಿಲ್ಲ; ಅವು ಆದಾನ ಪ್ರದಾನ ಸಂಬಂಧವನ್ನುಳ್ಳ ಎರಡು ಮುಖಗಳಾಗಿರಬೇಕಷ್ಟೆ. ಬಾಳಿನಲ್ಲಿ ತ್ಯಾಗ–ಭೋಗ, ರಾಗ–ವಿರಾಗಗಳು ಪರಸ್ಪರ ವ್ಯತಿರಿಕ್ತವಾಗದಂತೆ, ಪೂರಕವಾಗುವಂತೆ ಹೊಂದಿಸುವುದು ಅತ್ಯವಶ್ಯ. ವೈರಾಗ್ಯ ಮುಂತಾದ ಆರ್ಷಮೌಲ್ಯಗಳನ್ನು ಇಂದು ನಾವು ಕಾಲಕ್ಕೆ ತಕ್ಕಂತೆ ಪುನರ್‌ಮೌಲ್ಯ ಮಾಪನಕ್ಕೆ ಒಳಪಡಿಸಿ ಅಳವಡಿಸಿಕೊಳ್ಳಬೇಕಾಗಿದೆ. ಅವುಗಳ ನಿರಾಕರಣದಿಂದ ಪಡೆಯಬಹುದಾದ ಲಾಭವೇನೂ ಇಲ್ಲ; ನಷ್ಟವೇ ಆದೀತು.

ಪ್ರಾಣಿಗಳಿಗೂ ಆಸೆಯಿದೆ, ಮನುಷ್ಯನಿಗೂ ಇದೆ. ಆದರೆ ಅವನ ಆಸೆಗೆ ಇತಿಮಿತಿಯಿಲ್ಲ, ಲಂಗು ಲಗಾಮಿಲ್ಲ. ಈ ಆಶಾತಿರೇಕವೆ ಅವನ ದುಃಖಕ್ಕೆ ತಾಯಿ ಬೇರು. ಇದಕ್ಕೆ ಬೆನ್ನೀರು ಹೊಯ್ದು ಬತ್ತಿಸಬೇಕಿಲ್ಲ; ಆದರೆ ಅದು ವಟಸದೃಶವಾದ ವಿಷವೃಕ್ಷವಾಗಿ ವ್ಯಾಪಿಸದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಬದುಕು ಯಾವುದೋ ಘಟ್ಟದಲ್ಲಿ ದುರ್ಭರವಾದ ಮುಳ್ಳಿನ ಹಾಸಿಗೆಯಾಗುತ್ತದೆ. ಮನುಷ್ಯ ಗಗನಕುಸುಮಕ್ಕೆ ಏಣಿ ಹಾಕಿದಾಗ, ಅದನ್ನು ಸಾಧಿಸುವ ಪ್ರಯತ್ನದಲ್ಲಿ ಎದುರಿಸ ಬೇಕಾದ ಕ್ಲೇಶ ಕೋಟಲೆಗಳು, ಸಮಸ್ಯೆ ಸಂಕಷ್ಟಗಳು ಎಷ್ಟು ! ಅದು ಕೈಗೆಟುಕದಿದ್ದರೆ

ಉಂಟಾಗುವ ನೈರಾಶ್ಯ ಘೋರವಾದದ್ದು. ಬಯಸಿದ್ದು ಹಸ್ತಗತವಾಯಿತೆಂದೆ ಇಟ್ಟುಕೊಳ್ಳೋಣ. ಅದು ತರುವ ಸಮಸ್ಯೆಗಳು ಮತ್ತೂ ತೀವ್ರವಾದವು. ಅದರೊಡನೆಯೆ ಅಪಾಯಗಳು, ಅನರ್ಥಗಳು ಉದ್ಭವಿಸುತ್ತವೆ. ಗಳಿಸುವುದು ದುಃಖಕರ, ಗಳಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ದುಃಖಕರ. ಅಂತೂ ನೆಮ್ಮದಿಗೆ ಸೊನ್ನೆ. ''ಅಪೇಕ್ಷಿಸಿದ್ದು ಸಿಕ್ಕದಿರುವುದು ಒಂದು ದುರಂತವಾದರೆ, ಸಿಕ್ಕಿಬಿಡುವುದು ಇನ್ನೊಂದು ದುರಂತ!'' ಎಂದು ಯಾರೋ ಸೊಗಸಾಗಿ ಹೇಳಿದ್ದಾರೆ. (ಭೂಮವಾದುದಕ್ಕೆ ಗುರಿಯಿಡುವುದು ಬೇರೆ ವಿಷಯ. ಅಲ್ಲಿ ಸಾಧನೆ, ಸಿದ್ಧಿ ಎಲ್ಲವೂ ಸುಖಪ್ರದವೇ.)

ಆದ್ದರಿಂದ, ಮಾನವ ತನ್ನ ಆಸೆಗಳಿಗೆ ಕಡಿವಾಣ ಹಾಕಬೇಕು; ಕಾಮನೆಗಳನ್ನು ಒಂದು ಹದ್ದುಬಸ್ತಿನಲ್ಲಿಡಬೇಕು. ತಾನಾಗಿ ಏನು ಬರುತ್ತದೋ, ಒಳ್ಳೆಯ ದಾರಿಯಲ್ಲಿ ಯಾವುದು ಬರುತ್ತದೋ ಅದು ಬರಲಿ; ಬೇಡ ಎಂದು ತ್ಯಾಗದ ಸೋಗು ಹಾಕಬೇಕಾಗಿಲ್ಲ. ಆದರೆ ತನ್ನ ಮತ್ತು ಇತರರ ದುಃಖದಿಂದ ಹುಟ್ಟತಕ್ಕದ್ದು, ತನಗೆ ಮತ್ತು ಇತರರಿಗೆ ದುಃಖವನ್ನು ತರತಕ್ಕದ್ದು ಬೇಡ. ಬಹುಶಃ ವೈರಾಗ್ಯದ ಅರ್ಥ ಈ ಹೊತ್ತು ಇದೇ.

ಆಸೆಗಳು, ಭೋಗಗಳು ದುಃಖದಾಯಕ ಮಾತ್ರವಲ್ಲ, ಆತ್ಮಲಾಘವವನ್ನು ಅವು ಉಂಟುಮಾಡುತ್ತವೆ. ಬಯಕೆಗಳ ತೃಪ್ತಿಗಾಗಿ ಯಾರು ಯಾರನ್ನು, ಎಂಥೆಂಥವರನ್ನು ಬೇಡಬೇಕು! ಕಾಳಿದಾಸ ಹೇಳುವಂತೆ, ''ಯಾಚ್ಞಾ ಮೋಘಾ ವರಮಧಿಗುಣೇ ನಾಧಮೇ ಲಬ್ಧ ಕಾಮಾ'' (ಅಧಮರನ್ನು ಕೇಳಿ ಪಡೆಯುವುದಕ್ಕಿಂತ ಉತ್ತಮರನ್ನು ಕೇಳಿ 'ಇಲ್ಲ' ಎನಿಸಿಕೊಳ್ಳುವುದು ಮೇಲು). ಲೋಕದಲ್ಲಿ ಉತ್ತಮರು ಎಷ್ಟು ಮಂದಿ ಇದ್ದಾರು? ಅಧಮರೆ ಅಧಿಕರಲ್ಲವೆ? ಅಂಥವರ ಹಂಗು ದುಃಖಕರವಾದದ್ದು. ಅವರನ್ನು ಯಾಚಿಸುವಾಗ ಆಗುವ ಅಭಿಮಾನಹಾನಿ ಸಾವಿಗೆ ಕಡಮೆಯಲ್ಲ. ಒಂದು ಜಾನಪದ ತ್ರಿಪದಿ ನೆನಪಾಗುತ್ತದೆ:

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣ ಕಲ್ಯಾಣ ಬಸವಣ್ಣ ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ

ಇಲ್ಲಿ ಜನಪದ 'ಪ್ರಾಣವನ್ನು ಕಾಯಿ' ಎಂದು ಪ್ರಾರ್ಥಿಸಿಲ್ಲ, 'ಅಭಿಮಾನ ರಕ್ಷಣೆ ಮಾಡು' ಎಂದು ಪ್ರಾರ್ಥಿಸಿದೆ. ಪ್ರಾಣ, ಅಭಿಮಾನ ಎರಡನ್ನೂ ಉಳಿಸಿಕೊಳ್ಳುವುದು ಒಮ್ಮೊಮ್ಮೆ ಸಾಧ್ಯವಾಗದಿರಬಹುದು. ವಿರಕ್ತ ಸಾವಿಗಂಜುವುದಿಲ್ಲ.

''ವೈರಾಗ್ಯಮೇವಾಭಯಂ'' ಎಂದ ಅದೇ ಭರ್ತೃಹರಿ ಎದೆ ಸೆಟೆಸಿ ಕೇಳುತ್ತಾನೆ:

ನ ನಟಾ ನ ವಿಟಾ ನ ಗಾಯಕಾ
ನ ಚ ಸಭ್ಯೇತರವಾದಚುಂಚವಃ
ನೃಪಮೀಕ್ಷಿತುಮತ್ರ ಕೇ ವಯಂ
ಸ್ತನಭಾರನಮಿತಾ ನ ಯೋಷಿತಃ

(ನಾವು ನಟರಲ್ಲ, ವಿಟರಲ್ಲ, ಗಾಯಕರಲ್ಲ; ನಕಲಿ ಶಾಮರಲ್ಲ; ಸ್ತನಭಾರ ದಿಂದ ಬಾಗಿದ ಹೆಣ್ಣುಗಳೂ ಅಲ್ಲ: ಅರಸರ ಹತ್ತಿರ ನಮಗೇನು ಕೆಲಸ?) ಬಸವಣ್ಣನವರೂ ಕೇಳಿದ್ದಾರೆ : ''ಆರು ಮುನಿದು ನಮ್ಮನೇನು ಮಾಡುವರು ? ಊರು ಮುನಿದು ನಮ್ಮನೇನು ಮಾಡುವುದು ?'' ಈ ದಿಟ್ಟತನ ಎಲ್ಲರಿಗೂ ಬೇಕು. ಆದರೆ ಆಸೆಗಳನ್ನು ಅನಂತವಾಗಿ ಕಟ್ಟಿಕೊಂಡವರಿಗೆ ಅದು ಶಕ್ಯವಿಲ್ಲ; ತಕ್ಕಮಟ್ಟಿಗಾದರೂ ಬಿಟ್ಟವರಿಗೆ ಮಾತ್ರ ಶಕ್ಯ. ''ತೇನ ತ್ಯಕ್ತೇನ ಭುಂಜೀಥಾಃ'' (ತ್ಯಾಗದಿಂದ ಸುಖ ಪಡೆಯಿರಿ) ಎಂಬ ಆರ್ಷವಚನ ವಿರೋಧಾಭಾಸವಾಗಿ ಕಂಡರೂ ಅರ್ಥ ವತ್ತಾದುದು, ಅಮೂಲ್ಯವಾದುದು. ರಾಗ ಬೇಕು, ಜೊತೆಗೆ ವಿರಾಗವೂ ಬೇಕು; ಇಲ್ಲದಿದ್ದರೆ ರೋಗ ತಪ್ಪದು.

■■

೩೨. ಸಾವು

ಹುಟ್ಟು–ಸಾವುಗಳ ನಡುವೆ ನಡೆದಿದೆ, ನಮ್ಮ ಬದುಕು. ಹುಟ್ಟು ವಿಸ್ಮಯ ಕರವಾದದ್ದು; ಸಾವಾದರೋ ವಿಸ್ಮಯ, ಭಯ ಎರಡನ್ನೂ ಚೋದಿಸತಕ್ಕದ್ದು. ಹುಟ್ಟನ್ನು ಅರ್ಥಮಾಡಿಕೊಳ್ಳಬಹುದು ; ಸಾವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ; ಅದರಾಚೆಗೇನಿದೆಯೋ ತಿಳಿಯದು. ಹುಟ್ಟು ಆಕಸ್ಮಿಕವಲ್ಲ; ಸಾವು ಕೆಲವೊಮ್ಮೆ ಆಕಸ್ಮಿಕವೆಂಬಂತೆ ತೋರುತ್ತದೆ. ಹುಟ್ಟುವುದನ್ನು ತಡೆಗಟ್ಟಬಹುದು ; ಸಾಯುವುದನ್ನು ತಡೆಗಟ್ಟುವುದು ಅಸಾಧ್ಯ. ''ಜಾತಸ್ಯ ಮರಣಂ ಧ್ರುವಂ'' (ಹುಟ್ಟಿದವರಿಗೆ ಸಾವು ತಪ್ಪದು). ವಾಸ್ತವವಾಗಿ, ಹುಟ್ಟಿದಾಗಲೇ ಜೀವಿಯನ್ನು ಸಾವು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ; ಶ್ರೀ ಹರ್ಷನ ಈ ಪದ್ಯವನ್ನು ನೋಡಿ :

ಕ್ರೋಡೀಕರೋತಿ ಪ್ರಥಮಂ ಯದಾ ಜಾತಮನಿತ್ಯತಾ
ಧಾತ್ರೀವ ಜನನೀ ಪಶ್ಚಾತ್ತದಾ ಶೋಕಸ್ಯ ಕಃ ಕ್ರಮಃ

ಲೋಕದ ದೃಷ್ಟಿಯಲ್ಲಿ ತಾಯಿ ಎನಿಸಿಕೊಳ್ಳುವವಳು ದಾದಿಯಿದ್ದ ಹಾಗೆ, ಮೃತ್ಯುವೇ ನಿಜವಾದ ತಾಯಿ ಎಂಬುದು ಇದರ ತಾತ್ಪರ್ಯ. ತಾಯ ಗರ್ಭದಿಂದ ಹುಟ್ಟಿದ ಜೀವಿ ತಾಯ ಗರ್ಭದಲ್ಲೇ ವಿಲೀನವಾಗುವುದರಲ್ಲಿ ಏನಾಶ್ಚರ್ಯ ? ಅನಿವಾರ್ಯವಾದದ್ದು ಈ ಸಾವು ; ಯಾರನ್ನೂ ಇದು ಬಿಟ್ಟದ್ದಲ್ಲ. ನಿಜವಾದ ಸಮತಾವಾದಿ ಎಂದರೆ ಸಾವು.

ಮನುಷ್ಯನ ಎಲ್ಲ ವಿಶೇಷ ಚಟುವಟಿಕೆಗಳೂ ಸಾವನ್ನು ಗೆಲ್ಲುವುದರತ್ತಲೇ ಪ್ರವೃತ್ತವಾಗಿವೆ. ಧರ್ಮ, ಕಲೆ, ವಿಜ್ಞಾನ–ಈ ಎಲ್ಲವೂ ಅಂತಿಮವಾಗಿ ಮರಣ ವಿಜಯವನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡಿವೆ. ಯಾವುದೂ ತನ್ನ ಪ್ರಯತ್ನದಲ್ಲಿ ಪೂರ್ಣ ಯಶಸ್ಸನ್ನು ಪಡೆದಿಲ್ಲ ಎನ್ನಬೇಕಾಗುತ್ತದೆ. ಪ್ರಾಯಃ ಸಾವನ್ನು ನೇರವಾಗಿ ಎದುರಿಸಿ ಗೆಲ್ಲುವ ಯಾವ ಮಾರ್ಗವೂ ಇಲ್ಲ; ಪರೋಕ್ಷವಾಗಿ ಅದನ್ನು ಗೆಲ್ಲಬೇಕಷ್ಟೆ. ಈ ಗೆಲುವಿನ ವಿಧಾನ ಸರಳವಾದದ್ದು: ಚೆನ್ನಾಗಿ ಬದುಕುವುದು, ಸಾರ್ಥಕವಾಗಿ ಬದುಕುವುದು–ಇದೇ ಮೃತ್ಯುವನ್ನು ಗೆಲ್ಲುವ ಉಪಾಯ. ಜೀವನ ಉತ್ತಮವಾದಾಗ ಸಾವು ನಿಕೃಷ್ಟವಾಗುತ್ತದೆ. ಚೆನ್ನಾಗಿ ಬಾಳುವ ವ್ಯಕ್ತಿ ಸಾವಿಗಂಜುವುದಿಲ್ಲ; ಅದನ್ನು ಸಂತೋಷದಿಂದ ಸ್ವಾಗತಿಸುತ್ತಾನೆ ; ಬಸವಣ್ಣನಂತೆ ಅವನು 'ಮರಣವೇ ಮಹಾನವಮಿ', 'ನಾಳೆ ಬಪ್ಪುದು ನಮಗಿಂದೇ ಬರಲಿ' ಎಂದು ಉಗ್ಗಡಿಸಬಲ್ಲ. ಸಾವಿಗಂಜಿದರೆ ಸಾವು ಗೆದ್ದಂತೆ ; ಅಂಜದಿದ್ದರೆ, ನಾವು ಗೆದ್ದಂತೆ ! ಪ್ರೀತಿಯಿದ್ದಲ್ಲಿ ಭೀತಿಯಿರುವುದಿಲ್ಲ. ಜೀವನವನ್ನು, ಜಗತ್ತನ್ನು ಪ್ರೀತಿಸುವವನು ಸಾವನ್ನೂ

ಪ್ರೀತಿಸುತ್ತಾನೆ, ತನ್ಮೂಲಕ ಅದನ್ನು ಗೆಲ್ಲುತ್ತಾನೆ. ಲೋಕದಲ್ಲಿ ಬದುಕಿಯೂ ಸತ್ತವರ ಸಂಖ್ಯೆ ಅಗಾಧ; ಸತ್ತೂ ಬದುಕಿದವರು ಕೆಲವರಾದರೂ ಉಂಟು. ಅವರೇ ಮೃತ್ಯುಂಜಯರು; ಅಮೃತಪುತ್ರರು. ಹೀಗಾಗಿ, ಜೀವನಕ್ಕೆ ಸಾವು ಒರೆಗಲ್ಲಾಗುತ್ತದೆ. ''ಶರಣರನ್ನು ಮರಣದಲ್ಲಿ ಕಾಣು'' ಎನ್ನುವುದು ಅರ್ಥಪೂರ್ಣವಾದ ಸೂಕ್ತಿ. ಸಾವು ನಿತ್ಯವಾದುದು, ಅಜೇಯವಾದುದು ಎಂಬುದರ ಅರಿವಿದ್ದರೂ ಜನ ಚಿರಂಜೀವಿಗಳೆಂಬಂತೆ ವರ್ತಿಸುವುದು, ಸ್ವಾರ್ಥ ಪರಾಯಣರಾಗಿ ಅನಾಚಾರಮಗ್ನರಾಗಿ ಮೆರೆಯುವುದು ಸಾವಿಗಿಂತಲೂ ಸೋಜಿಗದ ಸಂಗತಿ. ಭರ್ತೃಹರಿ ಉದ್ಗರಿಸುತ್ತಾನೆ :

> ವ್ಯಾಘ್ರೀವ ತಿಷ್ಠತಿ ಜರಾ ಪರಿತರ್ಜಯಂತೀ
> ರೋಗಾಶ್ಚ ಶತ್ರವ ಇವ ಪ್ರಹರಂತಿ ದೇಹಂ
> ಆಯುಃ ಪರಿಸ್ರವತಿ ಭಿನ್ನಘಟಾದಿವಾಂಭೋ
> ಲೋಕಸ್ತಥಾಪ್ಯಹಿತಮಾಚರತೀತಿ ಚಿತ್ರಂ

(ಮುಪ್ಪು ಹೆಣ್ಣು ಹುಲಿಯಂತೆ ಹೆದರಿಸುತ್ತಿದೆ, ವ್ಯಾಧಿಗಳು ವೈರಿಗಳಂತೆ ಬಾಧಿಸುತ್ತಿವೆ, ತೂತು ಮಡಕೆಯಿಂದ ನೀರು ಸೋರುವಂತೆ ಆಯುಷ್ಯ ಸೋರಿ ಹೋಗುತ್ತಿದೆ. ಹೀಗಿದ್ದರೂ ಜನ ಅನ್ಯರಿಗೆ ಕೇಡು ಮಾಡುತ್ತಾರೆ. ಏನು ವಿಚಿತ್ರ!) ಇಂಥವರು ಮರಣವನ್ನು ದ್ವೇಷಿಸುತ್ತಾರೆ; ಅದಕ್ಕೆ ಹೆದರುತ್ತಾರೆ. ಇವರು ಮರಣವನ್ನು ಮಣಿಸಲಾರರು.

ಆದರೆ ಮಾನವ ತಾನು ಚಿರಂಜೀವಿಯೆಂದು ಭ್ರಮಿಸುವಂತೆ ಅವನನ್ನು ಮಾಯಾವರಣ ಕವಿಯುವುದು ಒಂದು ರೀತಿಯಲ್ಲಿ ಒಳ್ಳೆಯದೇ; ಏಕೆಂದರೆ ದಿನದ ಇಪ್ಪತ್ತ ನಾಲ್ಕು ಗಂಟೆಯೂ ಸಾವಿನ ಪ್ರಜ್ಞೆ ಕಾಡುತ್ತಿದ್ದರೆ ಏನನ್ನೂ ಮಾಡುವುದು ಸಾಧ್ಯವಾಗುವುದಿಲ್ಲ. ಸಾವಿನ ವಿಷಯದಲ್ಲಿ ಸದಾ ಭಯವಿಹ್ವಲತೆ ಸಾಧುವೇನೂ ಅಲ್ಲ. ಆದರೆ ಮೃತ್ಯುಪ್ರಜ್ಞೆ ಸ್ಥಾಯಿಯಾಗಿರದಿದ್ದರೂ ಸಂಚಾರಿಯಾಗಿರಬೇಕು ; ಸದಾಚಾರ ಪ್ರೇರಕವಾಗಬೇಕು.

ಬದುಕಿನಲ್ಲಿ ಒಳ್ಳೆಯದು, ಕೆಟ್ಟದ್ದು ಎರಡೂ ಇವೆ. ಈ ದ್ವಂದ್ವ ಅಗತ್ಯವೆಂದೇ ತೋರುತ್ತದೆ. ಕೆಟ್ಟದ್ದು ಇದೆಯೆಂದೇ ಒಳ್ಳೆಯದಕ್ಕೆ ಬೆಲೆಯಿರುವುದು. ದುಃಖವಿಲ್ಲದೆ ಸುಖದ ಕಲ್ಪನೆಯಿಲ್ಲ, ರೋಗವಿಲ್ಲದೆ ಆರೋಗ್ಯದ ಕಲ್ಪನೆಯಿಲ್ಲ. ಬಾಯಾರಿದವನಿಗೆ ಗೊತ್ತು ನೀರಿನ ಸವಿ. ಸಾವು ಎಂಬುದು ಇರುವುದರಿಂದಲೇ ನಮಗೆ ಜೀವನ ಇಷ್ಟು ಪ್ರಿಯವೂ ಮಧುರವೂ ಆಗಿರತಕ್ಕದ್ದು; ಬದುಕಿನ ಒಂದೊಂದು ಕ್ಷಣವೂ ಆಸ್ವಾದನೀಯವಾಗಿರತಕ್ಕದ್ದು. ಮರಣವೇ ಇರದಿದ್ದ ಪಕ್ಷದಲ್ಲಿ ಬದುಕು ಸಮಸ್ಯಾತ್ಮಕವೂ ನೀರಸಯಾಂತ್ರಿಕವೂ ಎಷ್ಟೋ ಜನರ ಪಾಲಿಗೆ ಅಸಹನೀಯವೂ ಆಗಬಹುದಿತ್ತು. ಬದುಕಿನಲ್ಲಿ ಎಂತೆಂತಹ ನೋವುಗಳಿವೆಯೆಂದರೆ, ಅವುಗಳಿಗೆ ತುತ್ತಾದವರ ಪಾಲಿಗೆ ಸಾವು, ಸಾಮಾನ್ಯಾರ್ಥದಲ್ಲೆ, ಸೌಖ್ಯದ ಬಾಗಿಲನ್ನು ತೆರೆಯುತ್ತದೆ. ಸಾವು ಬರುವುದಕ್ಕೆ

ಮುನ್ನ ತಾವಾಗಿಯೇ ಸಾವಿನತ್ತ ಧಾವಿಸುವವರು ಎಷ್ಟೋ ಮಂದಿ. ಸಾವನ್ನು ಗೆಲ್ಲುವುದಕ್ಕೆ ಮೊದಲು ನೋವನ್ನು ಗೆಲ್ಲಬೇಕಾಗಿದೆ.

ಒಟ್ಟಿನಲ್ಲಿ ಸಾವು ಬೇಕು. ಆದರಿಂದಲೇ ಜೀವನಕ್ಕೆ ಮೌಲ್ಯ ಮತ್ತು ಮಹತ್ತ್ವ. ಏನೇನನ್ನೊ ಸಾಧಿಸುತ್ತಿರುವ ವಿಜ್ಞಾನ ಮುಂದೊಮ್ಮೆ ಸಾವನ್ನು ಗೆದ್ದುಬಿಡಲೂ ಬಹುದು. ಆದರೆ ಆಗ ಬದುಕಿನಲ್ಲಿ ಈಗಿನಷ್ಟು ಸ್ವಾರಸ್ಯ ಉಳಿಯುವುದಿಲ್ಲವೆಂಬುದು ಮಾತ್ರ ಖಚಿತ.

■■

೩೩. ಬದುಕಿನ ಕಲೆ

ಕಲೆಗಳಲ್ಲಿ ಹಲವು ಪ್ರಕಾರಗಳನ್ನು ಕಲ್ಪಿಸಲಾಗಿದೆಯಷ್ಟೆ. ಆದರೆ ಇವೆಲ್ಲಕ್ಕಿಂತಲೂ ಮುಖ್ಯವಾದದ್ದು, ಶ್ರೇಷ್ಠವಾದದ್ದು, ಇವೆಲ್ಲಕ್ಕೂ ಆಕರದಂತಿರತಕ್ಕದ್ದು ಬೇರೊಂದಿದೆ : ಜೀವನಕಲೆ. ಕಲಾನಿರ್ಮಿತಿಯಲ್ಲಿ ಅಭಿಜ್ಞರಾದವರನ್ನು ಕಲಾವಿದರೆಂದು ಕರೆಯಲಾಗುತ್ತದೆ ; ಜೀವನ ಕಲಾಪರಿಣತರು ಮಹಾಪುರುಷರೆನಿಸುತ್ತಾರೆ. ಮಹಾತ್ಮರ ಜೀವನವೇ ಕಲಾತ್ಮಕವಾಗಿರುತ್ತದೆ, ಕಲೆಯಾಗಿರುತ್ತದೆ. ಒಬ್ಬನೇ ವ್ಯಕ್ತಿ ಕಲಾವಿದನೂ ಮಹಾತ್ಮನೂ ಆಗಿದ್ದಲ್ಲಿ, ಅದು 'ಭುವನದ ಭಾಗ್ಯ'ವಾಗುತ್ತದೆ; ಆದರೆ ಇಂಥ ಏಕೀಕರಣ ವಿರಳ.

ಕಲೆ ಎಂದರೇನು ? ಎರಡು ಸ್ತರಗಳಲ್ಲಿ ಅದನ್ನು ಲಕ್ಷಣೀಕರಿಸಬೇಕು. ಮೊದಲನೆಯದಾಗಿ, ಮೂಲಭೂತವಾಗಿ ಕಲೆ ಎಂದರೆ ವ್ಯವಸ್ಥೆ, ಅಚ್ಚುಕಟ್ಟು, ಸಮನ್ವಯ ಮತ್ತು ಸಮದರ್ಶನ. ಇವಿಲ್ಲದೆ ಕಲೆಯೇ ಆಗುವುದಿಲ್ಲ. ಈ ಬಗ್ಗೆ ಚರ್ಚೆಗೆ ಎಡೆಯಿಲ್ಲ. ಆದರೆ ಕಲೆ ಉನ್ನತವಾಗುವುದು ಹೇಗೆ ಎಂಬ ಪ್ರಶ್ನೆ ಹುಟ್ಟಿದಾಗ, ಅದು ಆದರ್ಶದ ಚಿತ್ರಣವಾಗಿರಬೇಕು, ಮೌಲ್ಯನಿರೂಪಣೆಯಾಗಿರಬೇಕು, ವ್ಯಕ್ತಿ ಹಾಗೂ ಸಮಾಜವನ್ನು ಸನ್ಮಾರ್ಗದಲ್ಲಿ ಕರೆದೊಯ್ಯುವಂತಿರಬೇಕು ಎಂದು ಹೇಳಬಹುದು–ಈ ಲಕ್ಷಣೀಕರಣ ಚರ್ಚಾಸ್ಪದವಾಗಬಹುದಾದರೂ.

ಮಹಾಪುರುಷರ ಬದುಕಿನಲ್ಲಿ ಕಲೆಯ ಈ ಎರಡೂ ಅರ್ಥಗಳು ಸಂಗತವಾಗುತ್ತವೆ. ಸುಸಂಬದ್ಧತೆ, ನಿಯಮ ನಿಷ್ಠೆ, ಶಿಸ್ತು ಮಹಾತ್ಮರ ಬದುಕಿನ ಮುಖ್ಯ ಗುಣಗಳು. ಅವರು ಮೇಲು ಕೀಳು ಭೇದಭಾವವಿಲ್ಲದೆ ಎಲ್ಲಕ್ಕೂ ಸಮಾನ ಪ್ರಾಶಸ್ತ್ಯ ಕೊಡುತ್ತಾರೆ ; ಯಾವುದನ್ನೂ ತಾತ್ಸಾರಗೈಯುವುದಿಲ್ಲ. ದೊಡ್ಡ ದೊಡ್ಡ ವಿಷಯಗಳಲ್ಲಿ ಮಾತ್ರವಲ್ಲದೆ ಸಣ್ಣ ಸಣ್ಣ ಸಂಗತಿಗಳಲ್ಲಿ ಅವರು ಪರಿಪೂರ್ಣತೆ ಸಾಧಿಸಲು ಪ್ರಯತ್ನಿಸುತ್ತಾರೆ.

ಕೋಣೆಯಷ್ಟೇ ಶೌಚ ಕೊಠಡಿಯನ್ನೂ ಅವರು ಶುದ್ಧವಾಗಿರಿಸುತ್ತಾರೆ. ಇದೆಲ್ಲ ಎಷ್ಟೇ ಮಹತ್ವದ್ದಾಗಿದ್ದರೂ ಬದುಕಿನ ಬಹಿರಂಗ ಎನ್ನಬಹುದು. ಇದಕ್ಕಿಂತ ಮುಖ್ಯವಾದುದು ಅಂತರಂಗ. ಮಹಾಪುರುಷರ ಬಾಳು ಧ್ಯೇಯಾದರ್ಶ ಸಮನ್ವಿತವಾದುದು ; ತ್ರಿಕರಣ ಪೂರ್ವಕವಾದುದು; ಸ್ವಾರ್ಥವನ್ನು ಕಳಚಿ ಸಮಾಜದ ಒಳಿತಿಗಾಗಿ ನೋಂಪಿ ತೊಟ್ಟದ್ದು. ಕಲೆ ಏನೇನನ್ನು ಸಂಕಲ್ಪಿಸುತ್ತದೋ, ಸಂಕೇತಿಸುತ್ತದೋ ಅದೆಲ್ಲದರ ಜೀವಂತ ಮೂರ್ತ ರೂಪವಾಗಿರುತ್ತದೆ, ಮಹಾತ್ಮರ ಜೀವನ. ಈ ಅರ್ಥದಲ್ಲಿ ಅದು ಕಲೆಯಿಂದ ಅಭಿನ್ನ.

ಕ್ರಿಸ್ತ, ಬುದ್ಧ, ಬಸವ, ಶ್ರೀ ರಾಮಕೃಷ್ಣಪರಮಹಂಸ, ವಿವೇಕಾನಂದ, ಗಾಂಧಿ, ವಿನೋಬಾ–ಇಂಥ ಮಹನೀಯರ ಜೀವನವೆ ಮಹಾಕಾವ್ಯ ಸದೃಶವಾದುದು. ಈ ಕಾರಣದಿಂದಲೆ ಅವರಾಡಿದ ಅಥವಾ ಬರೆದ ಮಾತುಗಳು, ಸಾಹಿತ್ಯವಾಗಬೇಕೆಂದು ಉದ್ದಿಷ್ಟವಾಗದಿದ್ದರೂ, ಸಾಹಿತ್ಯದ ಸಾರಗುಣಗಳನ್ನು ಸಹಜವಾಗಿ ಮೈಗೂಡಿಸಿ ಕೊಂಡಿರುತ್ತವೆ. ಅಂಥವರು ಏನೂ ಬರೆಯದೆ ಇದ್ದರೂ ದೊಡ್ಡ ಕವಿಗಳೇ. ''ಎಂದೂ ಪದ್ಯ ರಚಿಸದ ಅತ್ಯುತ್ತಮ ಕವಿಗಳಿದ್ದಾರೆ ; ಕವಿನಾಮಧೇಯಕ್ಕೆ ಯೋಗ್ಯರಲ್ಲದ ಅಸಂಖ್ಯ ಪದ್ಯರಚಕರಿದ್ದಾರೆ'' ಎಂಬ ಫಿಲಿಪ್ ಸಿಡ್ನಿಯ ಉಕ್ತಿ ತಥ್ಯಪೂರ್ಣವಾದುದು.

ಕಲೆಯಿಂದ ಸಾಮಾನ್ಯ ಜನತೆಗಾಗುವ ಪ್ರಯೋಜನ ಕಡಿಮೆ ಎಂದೇ ಹೇಳಬೇಕು. ಮನೋರಂಜನದ, ಆನಂದಪ್ರಾಪ್ತಿಯ ಮಟ್ಟದಲ್ಲೇ ಅದರ ಲಾಭ ನಿಂತುಬಿಡುವುದು ಹೆಚ್ಚು ಸಂಭವನೀಯ. ಆದರೆ ಮಹಾವ್ಯಕ್ತಿಗಳ ಜ್ಯೋತಿರ್ಮಯ ಜೀವನ ಜನತೆಯನ್ನು ಪ್ರಭಾವಿಸುತ್ತದೆ, ಪರಿವರ್ತಿಸುತ್ತದೆ; ವ್ಯಾಪಕ ಪರಿಣಾಮಗಳನ್ನು ಸಮಾಜದ ಮೇಲೆ ಬೀರುತ್ತದೆ. ಕಲಾನುಸಂಧಾನುದಿಂದ ತನ್ನ ಉದ್ಧಾರವಾಯಿತು ಎಂದು ಹೇಳಿಕೊಳ್ಳಬಲ್ಲವರ ಸಂಖ್ಯೆ ಅತ್ಯಲ್ಪ ; ಆದರೆ ಮಹಾತ್ಮರ ಸಾನ್ನಿಧ್ಯ ಸಂಸರ್ಗ ಪ್ರಭಾವಗಳಿಂದ ಅಸಂಖ್ಯ ಜನ ಉದ್ಧಾರಗೊಂಡುದಕ್ಕೆ ಇತಿಹಾಸದಲ್ಲಿ ವಿಪುಲ ಸಾಕ್ಷ್ಯವಿದೆ. ಒಂದು ವೇಳೆ ಕಲೆಯಿಂದ ವೈಯಕ್ತಿಕವಾಗಿ ಮನಃ ಪರಿವರ್ತನೆಯಾಗಬಹುದು ; ಆದರೆ ಸಾಮೂಹಿಕ ಪರಿವರ್ತನೆ ಸಾಧ್ಯವಾಗುವುದು ಮಹಾಪುರುಷರಿಂದ. ಅವರು ಮಾತ್ರ ಕ್ರಾಂತಿಗಳನ್ನೆಸಗಬಲ್ಲರು ; ಸಮಾಜದ ನೇತಾರರಾಗಿ ನಿಲ್ಲಬಲ್ಲರು. ಅಂಥವರ ಜೀವನೋಪದೇಶಗಳನ್ನು ಕಲಾವಿದರು ತಮ್ಮ ಕೃತಿಗಳ ವಸ್ತುವಿಷಯಗಳನ್ನಾಗಿ ಮಾಡಿಕೊಳ್ಳುತ್ತಾರೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೇನೆಂದರೆ, ದಾರಿದ್ರ್ಯ ನಿರಕ್ಷರತೆ ಗಳು ತುಂಬಿರುವ ನಮ್ಮ ದೇಶದಂತಹ ದೇಶಗಳಲ್ಲಿ ಕಲೆ ಕೇವಲ ಭೋಗವಸ್ತು ವಾಗಿದೆ ; ಎಲ್ಲರಿಗೂ ಅದು ಲಭ್ಯವಿಲ್ಲ. ಕಾವ್ಯ ಓದುವವರು, ಅರ್ಥಮಾಡಿಕೊಳ್ಳ ಬಲ್ಲವರು ಎಷ್ಟು ಮಂದಿ ಇದ್ದಾರು ? ಆದ್ದರಿಂದ, ಕಾವ್ಯದ ಮೂಲಕ ಕ್ರಾಂತಿ ಮಾಡುತ್ತೇವೆ ಎನ್ನುವುದು ಬಹುಶಃ ಭ್ರಮೆಯಷ್ಟೆ. ಕ್ರಾಂತಿ ಮಾಡಬೇಕಾದ್ದು ಬದುಕಿನಿಂದ. ಬದುಕನ್ನೆ ಕಲೆಯನ್ನಾಗಿಸಿಕೊಳ್ಳಬೇಕು. ಆಗ ಕಡೆಯ ಪಕ್ಷ ಒಬ್ಬ ವ್ಯಕ್ತಿಯ ಉದ್ಧಾರವಾದರೂ ಖಚಿತ.

ಕಲೆಯನ್ನು ಸೃಷ್ಟಿಸುವುದು ಸಾಮಾನ್ಯವಲ್ಲ, ಒಪ್ಪೋಣ ; ಆದರೆ ಕಲೆಯನ್ನು ಬದುಕುವುದು ಅದಕ್ಕಿಂತ ದೊಡ್ಡದು. ಕಲೆಗೂ ಬದುಕಿಗೂ ನಡುವೆ ಕಂದರ ಬಾಯ್ದೆರೆಯುತ್ತಿರುವ ಇಂದಿನ ದಿನಗಳಲ್ಲಿ ಇದು ಮರೆಯಬಾರದ ಸತ್ಯ.

■■

೩೪. ನಾಟಕ

ನಮ್ಮಲ್ಲಿ ಭಗವಂತನನ್ನು 'ಲೀಲಾನಾಟಕ ಸೂತ್ರಧಾರಿ' ಎಂದು ಕರೆಯುವುದುಂಟು. ಈ ಜಗತ್ತೊಂದು ರಂಗಸ್ಥಲ, ಜೀವನವೊಂದು ನಾಟಕ, ಮಾನವ ಜೀವಿಗಳೆಲ್ಲ ನಟನಟಿಯರು ಎಂಬ ಕಲ್ಪನೆ ಇದರಲ್ಲಿ ಇಂಗಿತವಾಗಿದೆ. ಎಲ್ಲರೂ ಮಾಯಾಪರವಶರಾಗಿ ಸ್ವಸ್ವರೂಪವನ್ನು ಮರೆತು ಪಾತ್ರಾಭಿನಯದಲ್ಲಿ ಮಗ್ನರಾಗಿದ್ದಾರೆ ; ರಂಗವನ್ನುಳಿದು ನೇಪಥ್ಯಕ್ಕೆ ಮರಳಿದಾಗಲೇ ಎಲ್ಲರಿಗೂ ತಮ್ಮತನದ ಅರಿವಾಗುವುದು. ಈ ಕಲ್ಪನೆ ತಾತ್ತ್ವಿಕ ಅಥವಾ ದಾರ್ಶನಿಕವಾದುದು. ಲೋಕವೆಲ್ಲ ಒಂದು ರಂಗಭೂಮಿ, ಗಂಡು ಹೆಣ್ಣುಗಳೆಲ್ಲ ಕೇವಲ ಪಾತ್ರಧಾರಿಗಳು ಎಂಬ ಷೇಕ್ಸ್‌ಪಿಯರ್ ಕವಿಯ ರೂಪಕೋಕ್ತಿಯಲ್ಲಿ ಕಾವ್ಯಾತ್ಮವಾದ ಕಲ್ಪನೆಯಿದೆ.

ಈ ಎರಡೂ ಕಲ್ಪನೆಗಳ ಪ್ರಕಾರ, ನಾಟಕದಲ್ಲಿ ಭಾಗವಹಿಸುವುದು ಮತ್ತು ಅಭಿನಯಿಸುವುದು ಪ್ರತಿಯೊಬ್ಬರಿಗೂ ಅನಿವಾರ್ಯವಾದದ್ದು. ಸ್ವಾರಸ್ಯವೇನೆಂದರೆ, ಬಹಳ ಜನ ಈ ಎರಡು ನಾಟಕಗಳಲ್ಲಿ ಮಾತ್ರವಲ್ಲದೆ ಮೂರನೆಯ ನಾಟಕವೊಂದರಲ್ಲಿ ಪಾತ್ರ ಧಾರಿಗಳಾಗುತ್ತಾರೆ; ಅವರಿಗೆ ಈ ನಾಟಕವೆ ಪರಮಪ್ರಧಾನವಾದದ್ದು. ಇದನ್ನು ವ್ಯಾವಹಾರಿಕ ನಾಟಕವೆನ್ನಬಹುದು. ಇಲ್ಲಿನ ಚಟುವಟಿಕೆಗೆ 'ಅಭಿನಯ' ಎಂಬುದಕ್ಕಿಂತ 'ನಟನೆ' ಎಂಬ ಮಾತು ಸಮುಚಿತವಾಗಿ ಒಪ್ಪುತ್ತದೆ. ಮೊದಲು ಹೇಳಿದ ಎರಡು ನಾಟಕಗಳಲ್ಲಿ ಅಭಿನಯ ಅಪ್ರಜ್ಞಾಪೂರ್ವಕವಾಗಿದ್ದರೆ, ಈ ವ್ಯಾವಹಾರಿಕ ನಾಟಕದಲ್ಲಿ ಅದು ಪ್ರಜ್ಞಾಪೂರ್ವಕ. ಇಲ್ಲಿ ಪಾತ್ರ ಧಾರಿಯೆ ಸೂತ್ರಧಾರಿಯೂ ಹೌದು.

ಈ ವ್ಯವಹಾರ ನಾಟಕದ ಸ್ವರೂಪವನ್ನು ತುಸು ನೋಡೋಣ. ''ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'' ಎಂದರಲ್ಲವೆ ದಾಸರು ? ಈ ನಿಲುವಿನಿಂದ ಹಲವರು ನಾಟಕವಾಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಅದು ಅವಶ್ಯವಾಗಲೂಬಹುದು ; ಎಂತಲೇ ಒಂದು ಮಿತಿಯಲ್ಲಿ ಕ್ಷಮ್ಯವೆನಿಸಲೂಬಹುದು. ''ಉದರ ನಿಮಿತ್ತಂ ಬಹುಕೃತವೇಷಃ''. ಆದರೆ ಮಾನವನ ಆಸೆ ಹೊಟ್ಟೆ, ಬಟ್ಟೆಗಳ ಹಂತದಲ್ಲೆ ನಿಲ್ಲುವುದಿಲ್ಲ; ಹನುಮದ್ ಬಾಲದಂತೆ ಬೆಳೆಯುತ್ತ ಹೋಗುತ್ತದೆ. ಅದು ತಣಿಯದ ಬಡಬಾನಲ. ಹಣ ಬೇಕು, ಅಧಿಕಾರ ಬೇಕು, ಸ್ಥಾನಮಾನಗಳು ಬೇಕು, ಕೀರ್ತಿ ಬೇಕು, ಅವು ಇಷ್ಟು ಸಿಕ್ಕಿದರೆ ಮತ್ತಷ್ಟು ಬೇಕು ಎಂಬುದು ಬಹುಮಂದಿಯ ಹಂಬಲ. ಇದಕ್ಕಾಗಿ ಅವರು ಏನೆಲ್ಲ ನಾಟಕ ಆಡುವುದಕ್ಕೂ ತಯಾರು. ಸರಿ, ಹುಲಿ ಹಸುವಿನ ಸೋಗು ಹಾಕುತ್ತದೆ; ರಾವಣ ದುರ್ಯೋಧನ ದುಶ್ಶಾಸನ ಕೀಚಕರು ಯುಧಿಷ್ಠಿರ ಹರಿಶ್ಚಂದ್ರ ರಾಮಚಂದ್ರರ ವೇಷ ಹಾಕುತ್ತಾರೆ ; ದೆವ್ವಗಳು ಪವಿತ್ರ

ಗ್ರಂಥಗಳಿಂದ ಉದ್ಧರಿಸುತ್ತವೆ. ಒಳಗೊಂದು, ಹೊರಗೊಂದು ; ಮನಸ್ಸು ಬೇರೆ, ಮಾತು ಬೇರೆ. 'ಜಿಹ್ವಾಗ್ರೇ ಮಧು ತಿಷ್ಠತಿ, ಹೃದಯೇ ತು ಹಾಲಾಹಲಂ', 'ನಾಲಗೆ ಬೆಲ್ಲ, ಹೃದಯ ಕತ್ತರಿ', 'ಗೋಮುಖವ್ಯಾಘ್ರ' ಮುಂತಾದ ಉಕ್ತಿಗಳು ಇಂಥ ನಟರನ್ನೆ ಕುರಿತು ಹುಟ್ಟಿದವು. ಕೆಲವರಂತೂ ನಟಸಾರ್ವಭೌಮರು, ನಟಭಯಂಕರರು. ಆದರೆ ಈ ಸತ್ಯ ಗೊತ್ತಾಗುವ ವೇಳೆಗೆ ಕಾಲ ಮಿಂಚಿರುತ್ತದೆ ; ಅವರ ಸ್ವಾರ್ಥದ ಕುಣಿಕೆಗೆ ಮುಗ್ಧ ಜನ ಬಲಿಪಶುಗಳಾಗಿರುತ್ತಾರೆ. ನಿರುಪದ್ರವಿಯಾಗಿ ಕಂಡ ಮರದ ಕೊರಡು ವಾಸ್ತವವಾಗಿ ಹೆಬ್ಬಾವು ಎಂದು ತಿಳಿದುಬರುವ ಹೊತ್ತಿಗೆ ಅದು ಬೇಟೆಯನ್ನು ನುಂಗಿ ಮರಕ್ಕೆ ಸುತ್ತು ಹಾಕಿಕೊಂಡು ಮೈ ಮುರಿಯುತ್ತಿರುತ್ತದೆ.

ಇಂಥ ನಾಟಕದ ವ್ಯಕ್ತಿಗಳಿಗೆ ಸ್ಥಾಯಿ ಎಂಬುದಿಲ್ಲ; ಎಲ್ಲ ವ್ಯಭಿಚಾರಿ ಭಾವಗಳೇ. ಇವರು ಸಮಯಸಾಧಕರು, ಸ್ವಾರ್ಥದ ಆರಾಧಕರು ; ಅನುಕೂಲಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವ ಗೋಸುಂಬೆಗಳು. ಯಾರಿಂದಲಾದರೂ ಕೆಲಸವಾಗಬೇಕು ಎಂದಾಗ ಅವರನ್ನು ಇಂದ್ರ ಚಂದ್ರ ಎಂದು ಕೈವಾರಿಸುತ್ತಾರೆ. ತಮ್ಮ ಕೆಲಸವಾದಮೇಲೆ ಅವರನ್ನು ಮೆಲ್ಲಗೆ ನಿವಾರಿಸುತ್ತಾರೆ. (ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇಕೆ ?) ಅಷ್ಟು ಮಾತ್ರವಲ್ಲ, ಬಾಯಿಗೆ ಬಂದಂತೆ ನಿಂದಿಸುವುದಕ್ಕೂ ಹೇಸುವುದಿಲ್ಲ. ಮುಂದೆ ಪರಾಕು ಹೇಳಿ, ಹಿಂದೆ ಬಯ್ಯುವುದೂ ಉಂಟು.

ಪ್ರಪಂಚವನ್ನೆಲ್ಲ ಪ್ರೀತಿಸುವುದು ಎಲ್ಲರಿಗೂ ಸಾಧ್ಯವಾಗಲಿಕ್ಕಿಲ್ಲ; ರಾಗದ್ವೇಷಗಳಿಂದ ಬಿಡುಗಡೆಗೊಂಡವರು ವಿರಳ. ಆ ಪ್ರೀತಿಯ ಅಥವಾ ದ್ವೇಷದ ಧೋರಣೆ ಪ್ರಬಲ ಕಾರಣವಿಲ್ಲದೆ ಮೇಲಿಂದ ಮೇಲೆ ಪಲ್ಲಟಗೊಳ್ಳಬಾರದು ಅಥವಾ ಹಾಗೆ ತೋರಬಾರದು. ವ್ಯಕ್ತಿ ಕೆಟ್ಟವನಾಗಿರುವುದು ತಪ್ಪು, ಒಪ್ಪೋಣ ; ಆದರೆ ಒಳ್ಳೆಯತನವನ್ನು ನಟಿಸುವುದು ಇನ್ನೂ ದೊಡ್ಡ ತಪ್ಪು. ಮೊದಲನೆಯದಕ್ಕಿಂತ ಎರಡನೆಯದು ಅನರ್ಥಕಾರಿ.

''ಮನುಷ್ಯನಿಗೆ ಮುಖ್ಯವಾಗಿ ಬೇಕಾದುದು ಪ್ರಾಮಾಣಿಕತೆ ; ಆಲೋಚನೆ, ನುಡಿ, ನಡೆಗಳ ಸಾಮರಸ್ಯ. ಅದಕ್ಕೆ ಆಕರ ಆತ್ಮ ಸಾಕ್ಷಿ. ತನ್ನ ಆತ್ಮಸಾಕ್ಷಿಯನ್ನು ಹಚ್ಚಿಕೊಳ್ಳದವನು ಅಥವಾ ಅಡಗಿಸಿಬಿಡುವವನು ಯಾವುದೇ ಅಳುಕಿಲ್ಲದೆ ವೇಷಧಾರಿಯಾಗ ತೊಡಗುತ್ತಾನೆ. ಈ ಸೋಗು ಎರಡು ರೂಪಗಳಲ್ಲಿ ಪ್ರವರ್ತಿಸಬಹುದು : ದೈನ್ಯಪೂರ್ಣವಾದ ಭಟ್ಟಂಗಿತನವಾಗಿ ಅಥವಾ ತಾನು ಮಹಾಸಂಪನ್ನ, ಸದ್ಗುಣಿ, ವಿದ್ವನ್ಮಣಿ ಎಂಬ ಪ್ರದರ್ಶನ ಪಟುತ್ವವಾಗಿ. ಅತಿವಿನಯವಂತೂ ನಿಸ್ಸಂಶಯವಾಗಿ ಧೂರ್ತಲಕ್ಷಣ.

ಸರ್ವವ್ಯಾಪಿಯಾದದ್ದು ಈ ನಾಟಕಪ್ರವೃತ್ತಿ. ವ್ಯಕ್ತಿ ಜೀವನದಿಂದ ತೊಡಗಿ ರಾಷ್ಟ್ರ ಜೀವನದವರೆಗೆ ಅದರ ಹರವು. ಸ್ವರ್ಗವನ್ನೆ ಭೂಮಿಗಿಳಿಸುತ್ತೇವೆಂದು ಭರವಸೆ ಕೊಡುವ ಭಗೀರಥ ವೇಷಧಾರಿಗಳ ಅತ್ಯುನ್ನತ ಮಟ್ಟದಿಂದ ಹಿಡಿದು, ಹುಲಿಯ ಚರ್ಮ ಹೊದ್ದ ಕತ್ತೆಯ, ವೇದಾಂತ ನುಡಿದು ವಂಚಿಸಿದ ಹುಲಿಯ ಅಥವಾ ಮಾರ್ಜಾಲ ಸಂನ್ಯಾಸಿಯ ಕೆಳಹಂತದವರೆಗೆ ಸರ್ವತ್ರ ಕಂಡುಬರುತ್ತದೆ, ನಟನವಿಲಾಸ.

ಲೋಕ ಡಾಂಭಿಕತೆಗೆ ಸುಲಭವಾಗಿ ಮರುಳಾಗುತ್ತದೆ; ಸತ್ವಕ್ಕಿಂತ ಸೋಗಿಗೆ, ಹೂರಣಕ್ಕಿಂತ ತೋರಿಕೆಗೆ ಮಾರುಹೋಗುತ್ತದೆ. ಕಳ್ಳಿ ಹಾಲನ್ನು ಹಾಲೆಂದೆ ಅದು ಭ್ರಮಿಸುತ್ತದೆ. ವಿಭೂತಿಗಿಂತ ಆಷಾಢಭೂತಿ ಅದರ ಗೌರವಾದರಗಳಿಗೆ ಪಾತ್ರನಾಗುತ್ತಾನೆ. ಸಮಸ್ಯೆ ಇರುವುದಿಲ್ಲಿ.

ದಾರ್ಶನಿಕ ಅಥವಾ ಕಾವ್ಯಾತ್ಮಕ ನಾಟಕದಲ್ಲಿ ನಾವೆಲ್ಲ ಪಾಲ್ಗೊಳ್ಳಬೇಕು ಮಾತ್ರವಲ್ಲ, ನಮ್ಮ ನಮ್ಮ ಪಾತ್ರಗಳನ್ನು ತಲ್ಲೀನತೆಯಿಂದ ಅತ್ಯುತ್ತಮವಾಗಿ ನಿರ್ವಹಿಸಬೇಕು. ಆದರೆ ವ್ಯವಹಾರ ಭೂಮಿಕೆಯ ನಾಟಕ ಸಲ್ಲದು. ನಾಟಕದೊಳಗಿನ ನಾಟಕ ಅನಪೇಕ್ಷಣೀಯ ಮಾತ್ರವಲ್ಲ, ಅಪಾಯ ಪೂರ್ಣ ಕೂಡ – ಆಯಾ ಅನುಕರ್ತನಿಗಲ್ಲದಿದ್ದರೆ ಸಾಮಾಜಿಕರಿಗೆ. ಸಮಾಜ ಇಂತಹ ಬೂಟಾಟಿಕೆ, ಡೋಂಗಿತನಗಳನ್ನು ಗುರುತಿಸಿ, ಎಚ್ಚರದಿಂದಿರಬೇಕು.

■■

೩೫. ಅಸೂಯೆ

ಆಹಾರ, ನಿದ್ರೆ, ಭಯ, ಮೈಥುನಗಳು ಮಾನವರಿಗೂ ಪ್ರಾಣಿಗಳಿಗೂ ಸಮಾನವೆಂದು ಹೇಳಲಾಗಿದೆ. ಅಂತೆಯೇ ಎರಡೂ ವರ್ಗಗಳ ನಡುವೆ ಗಣನೀಯವಾದ ಭಿನ್ನತೆಗಳೂ ಉಂಟು. ಕೆಲವಂಶಗಳಲ್ಲಿ ಮೃಗಗಳಿಗಿಂತ ಮಾನವ ಮೇಲಾಗಿದ್ದರೂ ಅಥವಾ ಹಾಗೆನಿಸಿಕೊಂಡಿದ್ದರೂ ಇನ್ನು ಕೆಲವಂಶಗಳಲ್ಲಿ ಅವನು ಮೃಗಗಳಿಗಿಂತ ಕೀಳೆಂದೇ ಹೇಳಬೇಕಾಗುತ್ತದೆ. ಮಾನವನಲ್ಲಿ ಮನೆ ಮಾಡಿಕೊಂಡಿರುವ ಷಡ್ ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಲ್ಲವೂ ಪಶುಗಳಲ್ಲಿರುವುದಿಲ್ಲ. ಉದಾಹರಣೆಗೆ, ಮಾತ್ಸರ್ಯ ಮನುಷ್ಯನಿಗೇ ಮೀಸಲಾದ ಸಹಜ ಪ್ರವೃತ್ತಿ ಅಥವಾ ದುರ್ಗುಣವೆಂದು ತೋರುತ್ತದೆ. ಈ ಬಗ್ಗೆ ಡಿ.ವಿ.ಜಿ. ಅವರ ಈ ಮಾತು ಗಮನಾರ್ಹವಾದುದು :

ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ
ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್
ಹೊಟ್ಟೆ ತುಂಬಿದ ತೋಳ ಮಲಗೀತು; ನೀಂ ಪರರ
ದಿಟ್ಟಿಸುತ ಕರುಬುವೆಯೊ–ಮಂಕುತಿಮ್ಮ.

ತುಂಬ ಹುರುಳುಳ್ಳ ನುಡಿಗಳಿವು. ಅಸೂಯೆ ಅಥವಾ ಮಾತ್ಸರ್ಯ ಎಂಬುದಕ್ಕೆ ಸಮಾನಾರ್ಥಕವಾದ ಕನ್ನಡ ಪದ 'ಹೊಟ್ಟೆ ಕಿಚ್ಚು' ಅಥವಾ 'ಹೊಟ್ಟೆಉರಿ'. ಇದು ಆ ಗುಣದ ಸ್ವರೂಪ ಹಾಗೂ ಪರಿಣಾಮವನ್ನು ಧ್ವನಿಸುವ ಶಕ್ತಿವತ್ತಾದ ಶಬ್ದ. ಮೊದಲೇ ಮನುಷ್ಯನ ಜಠರಾಗ್ನಿ ದುರ್ದಮ್ಯವಾದುದು, ಬಡಬಾನಲ ಸದೃಶವಾದುದು. ಅದರೊಡನೆ ಹೊಟ್ಟೆಯ ಕಿಚ್ಚೂ ಮೇಳವಿಸಿದರೆ ಏನು ಗತಿ? ಅದರಿಂದಾಗುವ ಅನಾಹುತ ಪರಂಪರೆಗೆ ಎಲ್ಲೆಯುಂಟೆ, ಎಣೆಯುಂಟೆ ?

ಈ ಸಂದರ್ಭದಲ್ಲಿ ಬಸವಣ್ಣನವರ ಉಕ್ತಿಯೊಂದು ಜ್ಞಾಪಕಕ್ಕೆ ಬರುತ್ತದೆ : ''ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು, ಕೂಡಲಸಂಗಮದೇವಾ.'' ಇಲ್ಲಿ 'ಮನೆಯೊಳಗಣ ಕಿಚ್ಚು' ಎಂದರೆ ಹೊಟ್ಟೆ ಕಿಚ್ಚು ಎಂದಿಟ್ಟುಕೊಂಡರೆ ತಪ್ಪಾಗದೇನೋ. ಬಸವಣ್ಣನವರು ಕೊಟ್ಟಿರುವ ಎಚ್ಚರಿಕೆ ಸರ್ವರೂ ಲಕ್ಷಿಸಬೇಕಾದುದು. ನಮ್ಮ ಮನೆಯನ್ನು ಆವರಿಸಿದ ಬೆಂಕಿ ಮೊದಲು ನಮ್ಮ ಮನೆಯನ್ನು ಸುಟ್ಟು, ಭಸ್ಮಾವಶೇಷಗೊಳಿಸಿ, ಅನಂತರ ನೆರೆಮನೆಗಳಿಗೆ ಹಬ್ಬಿ ಹಾನಿಹೇತುವಾಗುತ್ತದೆ. ಆದರೆ ನಮ್ಮ ಹೊಟ್ಟೆ ಕಿಚ್ಚು ಅನ್ಯರಿಗೆ ಕೇಡು ಮಾಡುತ್ತದೋ ಇಲ್ಲವೋ, ನಮಗಂತೂ ಅದರಿಂದ ಕೆಡುಕು ಕಟ್ಟಿಟ್ಟದ್ದು. ಹೊಟ್ಟೆಯುರಿಗೆ ತುತ್ತಾದ ಚಿತ್ತ ಶಾಂತಿಗೆ ಎರವಾಗುತ್ತದೆ ; ನರಕೋಪಮ ಹಿಂಸೆಗೆ ಗುರಿಯಾಗಿ, ಅದರಿಂದ

ಸುಖಬಾಹಿರವಾಗುತ್ತದೆ. ಹೊಟ್ಟೆಯುರಿ ಎಂಬುದು ಇಬ್ಬಾಯ ಕತ್ತಿ; ಪ್ರಯೋಗಿಸುವವನನ್ನೂ ಅದು ಬಲಿತೆಗೆದುಕೊಳ್ಳುತ್ತದೆ. ಇಲ್ಲಿ 'ಉರಿ' ಎಂಬುದು ಬರಿಯ ರೂಪಕವಲ್ಲ, ಅಕ್ಷರಶಃ ಸತ್ಯ. ಮನಸ್ಸಿನಲ್ಲಿ ಭಾವಗಳು ತೀವ್ರವಾಗಿ ಕೆರಳಿದಾಗ, ಜಠರದಲ್ಲಿ ಹಲವು ರಸಗಳು ಸ್ರವಿಸಿ ಹುಣ್ಣುಗಳಿಗೆ ಕಾರಣವಾಗುತ್ತವೆ ಎಂದು ವೈದ್ಯರು ಹೇಳುತ್ತಾರೆ. ಆದ್ದರಿಂದ ದ್ವೇಷಾಸೂಯೆಗಳು ಇತರರಿಗಿರಲಿ, ಆಯಾ ವ್ಯಕ್ತಿಗೇ ಅಪಾಯಕರ, ಆದಕಾರಣ ತ್ಯಾಜ್ಯ ಎಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೆ, ಎಷ್ಟು ಜನ ಇದುವರೆಗೆ ಈ ಹಿತವಚನವನ್ನು ಹೇಳಿಲ್ಲ!

ಆದರೆ ಅಸೂಯೆಯನ್ನು ಬಿಡುವುದು ಅಷ್ಟು ಸುಲಭವೆ ? ಸಾಮಾನ್ಯರಿರಲಿ, ಜ್ಞಾನಿಗಳಿಗೂ ಅದರಿಂದ ಬಿಡುಗಡೆಯಿಲ್ಲ: ''ಬೋದ್ಧಾರೋ ಮತ್ಸರಗ್ರಸ್ತಾಃ''. ಇದು ಮನುಕುಲದಷ್ಟೆ ಪುರಾತನವಾದ ಪ್ರವೃತ್ತಿ. ನಮ್ಮ ರಾಷ್ಟ್ರೀಯ ಮಹಾಕಾವ್ಯವಾದ ಮಹಾಭಾರತದ ಕತೆಯೆ ಅಸೂಯಾಮೂಲವಾದುದು ; ಇಡೀ ಕಾವ್ಯ ಅಸೂಯೆಯ ದಾರುಣ ದುರಂತಕ್ಕೆ ಹಿಡಿದ ಹೆಗ್ಗನ್ನಡಿ. ಕುಂತಿ ಐವರು ಮಕ್ಕಳನ್ನು ಹಡೆದಳೆಂದು ಕೇಳಿದ ಗಾಂಧಾರಿ, ಸೈರಿಸಲಾರದೆ ಅಸೂಯಾವಿಷ್ಟಳಾಗಿ ತನ್ನ ಗರ್ಭವನ್ನು ಕಿವುಚಿ ಕೊಂಡದ್ದರ ಫಲವಾಗಿ ಹುಟ್ಟಿದ ಕೌರವರು ತಾಯಿ ಸಮೆದ ಅಸೂಯಾಪಥದಲ್ಲೆ ಉದ್ದಕ್ಕೂ ನಡೆದು ನಾಶಗೊಂಡರು. ಸಕಲ ವೈಭವ ಸಂಪತ್ತುಗಳಿದ್ದರೂ ಅವರಿಗೆ ನೆಮ್ಮದಿಯಿತ್ತೆಂದು ಹೇಳುವಂತಿಲ್ಲ. ಅವರ ಕಾಟದಿಂದಾಗಿ ಪಾಂಡವರಿಗೂ ಸುಖ ಮರು ಮರೀಚಿಕೆಯಾಯಿತು. ''ಕಡೆಗುಂ ಪೊಲಸಾಯ್ತು ಭಾರತಂ''.

ಮಾನವನಲ್ಲಿ ಏತಕ್ಕೆ ಹುಟ್ಟುತ್ತದೆ ಅಸೂಯೆ? ಒಂದು ಕಾರಣವನ್ನೇನೋ ಊಹಿಸಬಹುದು. ಅದು ನೈಚ್ಯಾನುಸಂಧಾನ (inferiority complex). ತನಗಿಂತ ವಿದ್ಯೆಯಲ್ಲಿ ಐಶ್ವರ್ಯದಲ್ಲಿ ಅಧಿಕಾರದಲ್ಲಿ ಮೇಲಿರುವವರನ್ನು ಕಂಡರೆ, ಕೆಳಗಿರುವವರಿಗೆ ಅಸೂಯೆ ಮೂಡುವುದು ಸ್ವಾಭಾವಿಕ. ಇದಕ್ಕೆ ಪರಿಹಾರವುಂಟು. ಕೆಳಗಿನವರೂ ಆ ಎತ್ತರಕ್ಕೆ ಪ್ರಯತ್ನ ಪೂರ್ವಕವಾಗಿ ಏರಿ, ಅಸೂಯಾಭೂತದಿಂದ ಪಾರಾಗಬಹುದು. ಶಕ್ತಿಸಂಚಯ, ಸಾಧನೆ, ಸಿದ್ಧಿಗಳು ಮಾತ್ಸರ್ಯದಿಂದ ಮುಕ್ತಿಯನ್ನು ದೊರಕಿಸಬಲ್ಲವು. ಆದರೆ ನಿರ್ನಿಮಿತ್ತವಾಗಿ ಅಸೂಯೆ ಪಡುವವರಿಗೆ ಏನು ಮಾಡುವುದು? ದುರ್ಯೋಧನಾದಿಗಳಿಗೆ ಯಾವ ಕೊರತೆಯಿತ್ತು? ಪಾಂಡವರನ್ನು ಕುರಿತು ಅವರು ಕರುಬಲು ಪ್ರಬಲ ಕಾರಣವೇನೂ ಇರಲಿಲ್ಲ, ಇಂಥ ಅಸೂಯಾವ್ಯಾಧಿಗೆ ಮದ್ದಿಲ್ಲ; ಅಂಥವರ ಸಾವಿನೊಡನೆಯೆ ಅದರ ಇತಿಶ್ರೀಯಾಗಬೇಕು.

ಅಸೂಯಾಗ್ರಸ್ತರಲ್ಲಿ ಬಹುಶಃ ಮೂರು ವಿಧ. ತಮ್ಮಷ್ಟಕ್ಕೆ ಸುಮ್ಮನೆ ಅಸೂಯೆ ಪಟ್ಟುಕೊಳ್ಳುವವರದು ಒಂದು ವರ್ಗ. ಇವರು ತಮ್ಮಲ್ಲಿ ಅಸೂಯೆಯನ್ನು ಚೋದಿಸಿದ ವ್ಯಕ್ತಿಯ ತಂಟೆಗೆ ಹೋಗುವುದಿಲ್ಲ ; ಅವನು ಹಾಳಾಗಲೆಂದು ಬಯಸುವುದಿಲ್ಲ, ಇವರನ್ನು ಮಧ್ಯಮ ವರ್ಗದವರೆಂದು ಕರೆಯಬಹುದು. ಇವರು ಎಷ್ಟೋ ವಾಸಿ. ಇನ್ನೊಂದು ವರ್ಗದವರಿರುತ್ತಾರೆ : ಅವರು ತಮ್ಮ ಮಾತ್ಸರ್ಯಕ್ಕೆ

ಗುರಿಯಾದ ವ್ಯಕ್ತಿಗೆ ಅನಿಷ್ಟವನ್ನು ಹಾರೈಸುತ್ತಾರೆ ಮಾತ್ರವಲ್ಲ, ಅವನಿಗೆ ಹೇಗಾದರೂ, ಏನಾದರೂ ಕೇಡು ಮಾಡಲು, ಅವನನ್ನು ಕೆಳಕ್ಕೆಳೆಯಲು ಯತ್ನಿಸುತ್ತಾರೆ. ಇಂಥವರು ಅಧಮರು. ಮತ್ತೆ ಕೆಲವರು ಅಸೂಯೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅಹಂಕಾರವನ್ನು ಬೆಳೆಯಿಸಿಕೊಳ್ಳುತ್ತಾರೆ ; ಇವರಿಂದ ಅಪಾಯವಿಲ್ಲ. ಇಂಥವರನ್ನು ಬೇಕಾದರೆ ತೌಲನಿಕವಾಗಿ ಉತ್ತಮವರ್ಗ ಎಂದು ಕರೆಯಬಹುದೇನೋ. ಆದರೆ ಅಸೂಯೆ, ಅಹಂಕಾರಗಳಲ್ಲಿ ಔತ್ತಮ್ಯದ ಪ್ರಶ್ನೆ ಎಲ್ಲಿ ಬಂತು ?

ಮಾನವನ ಮನಸ್ಸು ಸಮುದ್ರದಂತೆ. ಇದನ್ನು ಸತ್ ಮತ್ತು ಅಸತ್ ಶಕ್ತಿಗಳು ಸದಾ ಕಡೆಯುತ್ತಿರುತ್ತವೆ. ಅಸೂಯೆ, ಕೋಪ ಮುಂತಾದ ವಿಷ ಪದಾರ್ಥಗಳೇ ಮೊದಲು ಹುಟ್ಟತಕ್ಕವು. ಇವುಗಳನ್ನು ಆಯಾ ವ್ಯಕ್ತಿಯೆ ನುಂಗಿಕೊಂಡು, ನಂಜುಂಡ ನಾಗಬೇಕು ; ಶಿವನಾಗಬೇಕು. ಅನಂತರ ಅಮೃತೋದ್ಭವ. ಅದನ್ನು ಸಮಾಜಕ್ಕೆ ಕೊಡಬೇಕು.

ಅಸೂಯಾರಾಹಿತ್ಯ ಬಹು ದೊಡ್ಡ ಗುಣ; ವಿರಳವಾದುದೂ ಹೌದು. ನಮ್ಮ ಸಾಂಪ್ರದಾಯಿಕ ಹೆಸರುಗಳಲ್ಲಿ 'ಅನಸೂಯಾ' ಎಂಬುದೊಂದು. ಅಕಾಮ. ಅಕ್ರೋಧ, ಅಹಿಂಸಾ ಇತ್ಯಾದಿ ಹೆಸರುಗಳನ್ನು ನಾವು ಕೇಳಿಲ್ಲ; 'ಅನಸೂಯಾ' ಎಂಬುದು ಮಾತ್ರ ಬಹಳ ಪರಿಚಿತ. ನಮ್ಮ ಆರ್ಷ ಪರಂಪರೆ ಅನಸೂಯಾ ಪ್ರವೃತ್ತಿಗೆ ಕೊಟ್ಟ ಪ್ರಾಶಸ್ತ್ಯ ಇದರಿಂದ ಪ್ರಕಟವಾಗುತ್ತದೆಯಲ್ಲವೆ ? ಉಳಿದ ಎಲ್ಲ ಶೀಲ ಸದ್ಗುಣಗಳಿಗೂ ಅದು ಮೂಲಭೂತವಾದುದು. ಮಾನವ ಮಾತ್ಸರ್ಯವನ್ನು ಗೆದ್ದರೆ, ಹೊಟ್ಟೆ ಕಿಚ್ಚೊಂದನ್ನು ನಂದಿಸಿದರೆ ಮತ್ತಾವುದೂ ಅವನಿಗೆ ಅಸಾಧ್ಯವಾಗಲಾರದು.

''ಕರುಬರಿದ್ದೂರಿಂದ ಕಾಡೊಳ್ಳಿತು'' ಎಂಬುದು ನಮ್ಮ ಕವಿಯೊಬ್ಬನ ಮಾತು. ಈಗ ಕಾಡಿಲ್ಲ; ಆದ್ದರಿಂದ ಊರುಗಳನ್ನು ನಾವು ಬಿಡುವಂತಿಲ್ಲ. ಆದರೆ ಮನಸ್ಸಿದ್ದರೆ ಊರುಗಳ ನಡುವೆಯೆ ತಪೋವನಗಳನ್ನೂ ಆಶ್ರಮಗಳನ್ನೂ ನಿರ್ಮಿಸಿಕೊಳ್ಳ ಬಹುದು. ಅವು ನಿಜವಾಗಿ ಇರಬೇಕಾದುದು ಹೊರಗಲ್ಲ, ಒಳಗೆ. ''ಮಾ ವಿದ್ವಿಷಾವಹೈ''. ನಮ್ಮಲ್ಲಿ ದ್ವೇಷವಿಲ್ಲದಿರಲಿ, ಮಾತ್ಸರ್ಯವಿಲ್ಲದಿರಲಿ, ನಾವು ಸುಮನಸರಾಗೋಣ.

■■

೩೬. ಕೀರ್ತಿಕಾಮನೆ

ಕಾಲ ಕೆಟ್ಟು ಹೋಯಿತು ಎಂಬ ಉದ್ಗಾರವನ್ನು ಆಗಾಗ ಕೇಳುತ್ತೇವೆ. ಇದು ದಿಟವೆ ? ವಾಸ್ತವವಾಗಿ ಕಾಲ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ; ಅದು ನಿರ್ಲಿಪ್ತವೂ ನಿರ್ಗುಣವೂ ಪರಿವರ್ತನರಹಿತವೂ ಆದ ಅನಂತವಾಹಿನಿ. ಜನರ ಸ್ವಭಾವವನ್ನು ನಾವು ಕಾಲಕ್ಕೆ ಆರೋಪಿಸುತ್ತೇವೆ ; sleepless night ಎಂದ ಹಾಗೆ ಇದೊಂದು transferred epithet. ಜನತೆಯ ಅಭಿರುಚಿ ಮನೋಧರ್ಮಗಳು, ಜೀವನ ಮೌಲ್ಯಗಳು ಸದಾ ಒಂದೇ ರೀತಿ ಇರುವುದಿಲ್ಲ; ಆಗಾಗ ಬದಲಾಗುತ್ತವೆ. ಉನ್ನತಿ ಅವನತಿಗಳನ್ನು ಪಡೆಯುತ್ತವೆ. ತದನುಸಾರವಾಗಿ ನಾವು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಕಾಲವನ್ನು ವಿಶೇಷಿಸುತ್ತೇವೆ. ಹಾಗೆ ನೋಡಿದರೆ, ಕಾಲ ಒಂದು ದೃಷ್ಟಿಯಿಂದ ಈಗ ಕೆಟ್ಟಿಲ್ಲ, ಉತ್ತಮಗೊಂಡಿದೆ, ಕೆಟ್ಟುಹೋಗಿರತಕ್ಕವರು ಮನುಷ್ಯರೇ ಎಂದು ಹೇಳಬಹುದೇನೋ. ಒಂದು ನಿದರ್ಶನ ಕೊಡಬಹುದು. ಹಿಂದೆ ಪರಿಹಾರವನ್ನೇ ಕಾಣದಿದ್ದ ಎಷ್ಟೋ ರೋಗಗಳ ನಿವಾರಣೋಪಾಯ ವಿಜ್ಞಾನದ ಕೃಪೆಯಿಂದ ಈಗ ಗೊತ್ತಿದೆ; ಕೆಲವು ರೋಗಗಳಂತೂ ನಾಮಾವಶೇಷವಾಗಿವೆ. ಇದು ಕಾಲಮಹಿಮೆಯೆನ್ನಬಹುದು. ಆದರೆ ವೈದ್ಯನೊಬ್ಬ ಧನದಾಹದಿಂದ ಸರಿಯಾಗಿ ಚಿಕಿತ್ಸೆ ನೀಡದೆ ರೋಗಿಯ ಸಾವಿಗೆ ಕಾರಣನಾದರೆ, ಅದು ಕಾಲದ ತಪ್ಪೆ ?

ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಕುರಿತು ಹಿಂದಿನವರ ಮತ್ತು ಇಂದಿನವರ ಮನೋಭಾವ ಎಂಥದು, ಅಂತರವೇನಾದರೂ ಇದೆಯೇ ಎಂಬುದನ್ನು ತುಸು ನೋಡೋಣ. ಕೀರ್ತಿ ಯಾರಿಗೆ ಬೇಡ ? ''ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'' ಎಂದರು ದಾಸರು ; ಜೊತೆಗೆ ಪ್ರಸಿದ್ಧಿಗಾಗಿ ಎಂಬುದನ್ನೂ ಸೇರಿಸಬಹುದು. ಈ ಖ್ಯಾತಿಯ ಹಂಬಲ ಮಾನವನ ಉಳಿದೆಲ್ಲ ಹಂಬಲಗಳಿಗಿಂತಲೂ ದೊಡ್ಡದು ಎಂದು ಡಿ.ವಿ.ಜಿ. ಹೇಳುತ್ತಾರೆ :

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣು ಗಂಡೊಲವು
ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ
ತಿನ್ನುವುದದಾತ್ಮವನೆ-ಮಂಕುತಿಮ್ಮ

ಎಂಥವರನ್ನೂ ಅದು ಬಿಟ್ಟದ್ದಲ್ಲ; ಮಿಲ್ಟನ್ ಹೇಳುವಂತೆ, ಅದು "last infirmity of the noble minds" (ಉದಾತ್ತ ಚೇತನಗಳ ಕಟ್ಟಕಡೆಯ ದೌರ್ಬಲ್ಯ).

ಪ್ರಸಿದ್ಧಿಗಾಗಿ ಬಹುಜನ ಏನು ಮಾಡುವುದಕ್ಕೂ ತಯಾರು. ಯಾವ ಮಾರ್ಗ ಹಿಡಿಯುವುದಕ್ಕೂ ಅವರು ಹೇಸುವುದಿಲ್ಲ. ಅಂಥವರನ್ನು ಗೇಲಿಮಾಡುವ ಒಂದು ಸಂಸ್ಕೃತ ಪದ್ಯವಿದು :

ಘಟಂ ಭಿಂದ್ಯಾತ್ ಪಟಂ ಭಿಂದ್ಯಾತ್
ಕುರ್ಯಾದ್ವಾ ಗಾರ್ದಭ ಸ್ವನಂ
ಯೇನ ಕೇನ ಪ್ರಕಾರೇಣ
ಪ್ರಸಿದ್ಧ ಪುರುಷೋ ಭವೇತ್

(ಗಡಿಗೆಯನ್ನು ಒಡೆದು ಹಾಕು, ಬಟ್ಟೆಯನ್ನು ಹರಿದುಹಾಕು, ಕತ್ತೆಯಂತೆ ಕಿರುಚು–ಒಟ್ಟಿನಲ್ಲಿ ಯಾವ ಬಗೆಯಲ್ಲಾದರೂ ಪ್ರಸಿದ್ಧ ಪುರುಷನಾಗು).

ಈ ಮಾತುಗಳು ಹಿಂದಿನವರಿಗಿಂತ ಇಂದಿನವರಿಗೆ ಮಿಗಿಲಾಗಿ ಅನ್ವಯಿಸುತ್ತವೆ. ಈ ಹೊತ್ತು ಉಳಿದ ರಂಗಗಳಿರಲಿ, ಸಾಹಿತ್ಯ ರಂಗದಲ್ಲಿ ಖ್ಯಾತಿಯ ಖಯಾಲಿ ಉಲ್ಬಣಾವಸ್ಥೆಯಲ್ಲಿರುವುದನ್ನು ಕಾಣುತ್ತಿದ್ದೇವೆ. ತಮ್ಮ ಸ್ವಂತ ತುತ್ತೂರಿಯನ್ನೆ ಅನೇಕರು ಊದುತ್ತಾರೆ. ಒಂದು ಪದ್ಯ ಬರೆದರೆ ಸಾಕು, ಅದಕ್ಕಿಂತಲೂ ದಪ್ಪಕ್ಷರಗಳಲ್ಲಿ ಹೆಸರು ಅಚ್ಚಾಗಬೇಕೆಂಬ ಹುಚ್ಚು ಹಲವರಿಗೆ; ಎಲ್ಲರ ಕಣ್ಣಿಗೂ ಕಿವಿಗೂ ನಮ್ಮ ಹೆಸರು ಬೀಳಬೇಕು, ಎಲ್ಲರ ಬಾಯಿಮಾತಾಗಬೇಕು ಎಂಬ ಆಸೆಯಿಲ್ಲದವರೆ ಅಪುರೂಪ. ಈ ಆಸೆ ತಪ್ಪೇನೂ ಅಲ್ಲ; ಆದರೆ ಅದರ ಈಡೇರಿಕೆಗಾಗಿ ಗುಂಪುಗಾರಿಕೆ, ರಾಜಕೀಯ, ವಾಮಮಾರ್ಗಾನುಸರಣ ತಪ್ಪು, ಅಷ್ಟೆ. ಸತ್ತ್ವ, ಸಿದ್ಧಿಗಳು ಹಿಂದೆ ಬಿದ್ದು ಕೀರ್ತಿಕಾಮನೆಯೆ ಪ್ರಧಾನವಾಗುತ್ತಿರುವುದು ಇಂದಿನ ಶೋಚನೀಯ ಪರಿಸ್ಥಿತಿ.

ಕೆಲವು ಪ್ರಾಚೀನ ಕೃತಿಗಳಿವೆ; ಅವುಗಳನ್ನು ಬರೆದವರು ತಮ್ಮ ಹೆಸರುಗಳನ್ನೆ ಹೇಳಿಕೊಂಡಿಲ್ಲ, ಇನ್ನು ಕೆಲವರು ತಮ್ಮ ಕೃತಿಗಳನ್ನು ದೊಡ್ಡವರ ಹೆಸರಿನಲ್ಲಿ ಸಾಗಿಸಿಬಿಟ್ಟಿದ್ದಾರೆ, ಅವರ ಹೆಸರಿನ ಬಲದಿಂದಾದರೂ ಅವು ಬದುಕಿಕೊಳ್ಳಲಿ ಎಂದು. ಕಾಳಿದಾಸ, ಶಂಕರಾಚಾರ್ಯ ಮುಂತಾದವರಿಗೆ ಅವರು ರಚಿಸದಿರುವ ಎಷ್ಟೋ ಕೃತಿಗಳು ಆರೋಪಿತವಾಗಿವೆ. ಪಾಶ್ಚಾತ್ಯರಲ್ಲೂ ಇಂಥ ವಿದ್ಯಮಾನವುಂಟು. ಈ ಪ್ರವೃತ್ತಿಗೆ ಏನೆನ್ನೋಣ ? ಇಂದಿನದು ತದ್ವಿರುದ್ಧ ಪ್ರವೃತ್ತಿ : ದೊಡ್ಡವರಿಂದ ಕದ್ದು ಅದಕ್ಕೆ ತಮ್ಮ ಹೆಸರು ಹಾಕಿಸಿಕೊಂಡು ತನ್ಮೂಲಕ ಪ್ರಸಿದ್ಧಿ ಗಳಿಸಬಯಸುವವರು ಎಷ್ಟೋ ಮಂದಿ ಇದ್ದಾರೆ. ಅನ್ಯರ ಹೆಸರಿನಲ್ಲಿ ತಮ್ಮ ಹೆಸರನ್ನು ಅಳಿಸಿಕೊಳ್ಳುತ್ತಿದ್ದ ಪ್ರಾಚೀನರಿಗೂ ಅನ್ಯರ ಕೃತಿಯನ್ನು ಬಂಡವಾಳ ಮಾಡಿಕೊಂಡು ಹೆಸರು ಗಳಿಸಿಕೊಳ್ಳುವ ಅರ್ವಾಚೀನರಿಗೂ ಇರುವ ಈ ಭೇದ ಎದ್ದು ಕಾಣುವಂಥದು. ಆದರೆ ಈ ಮಾತು ಎಲ್ಲರಿಗೂ ಅನ್ವಯಿಸುವುದಿಲ್ಲ. ಹಿಂದೆಯೂ ಕೃತಿ ಚೋರರಿದ್ದರು; ಇಂದಿಗೂ ಸ್ವೋಪಜ್ಞರಿದ್ದಾರೆ.

ಇಷ್ಟಾಗಿಯೂ ಹಿಂದಿನ ಕೆಲವರ ಅಕೀರ್ತಿಧೋರಣೆ ಆಶ್ಚರ್ಯಗೊಳಿಸುತ್ತದೆ. ಐವತ್ತೇಳು ಅಡಿ ಎತ್ತರದ ಜಗದ್ಭವ್ಯ ಗೊಮ್ಮಟ ವಿಗ್ರಹವನ್ನು ಕಡೆದ ಶಿಲ್ಪಿವರೇಣ್ಯನ ಹೆಸರೇ ನಮಗೆ ತಿಳಿದು ಬಂದಿಲ್ಲ. ಮನಸ್ಸು ಮಾಡಿದ್ದರೆ ಅವನು ಆ ಬೃಹದ್ ವಿಗ್ರಹದ ಯಾವುದೋ ಒಂದು ಭಾಗದಲ್ಲಿ ತನ್ನ ಹೆಸರನ್ನು ಕೆತ್ತಬಹುದಿತ್ತು; ಅವನಿಗದು ಬೇಕೆನಿಸಲಿಲ್ಲ. ಅವನ ಹೆಸರು ಈಗ ಅಜ್ಞಾತವಾಗಿದೆ ; ಉಸಿರು ಮಾತ್ರ ಉದಾತ್ತವಾಗಿ ಉಳಿದುಕೊಂಡಿದೆ.

ಈ ಸಂದರ್ಭದಲ್ಲಿ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನ'ದ ಒಂದು ಪ್ರಸಂಗ ನೆನಪಾಗುತ್ತದೆ. ರಾಮ ಲಕ್ಷ್ಮಣ ಸೀತೆಯರು ಕಾಡಿಗೆ ಹೋದಮೇಲೆ, ಲಕ್ಷ್ಮಣನ ಪತ್ನಿ ಊರ್ಮಿಳೆ ಸರಯೂ ತೀರದಲ್ಲಿ ತಪೋಮಗ್ನಳಾಗುತ್ತಾಳೆ. ಅವರು ವನವಾಸದಿಂದ ಹಿಂದಿರುಗಿದಾಗ, ಊರ್ಮಿಳೆಯ ತಂಗಿ ಮಾಂಡವಿ ಬಂದು "ಬೇಗಮೇಳ್, ಪೋಗವೇಳ್ಕುಮಾ ಸ್ವಾಮಿ ತಪಮಿರ್ಪ ನಂದಿ ಗ್ರಾಮದಾಶ್ರಮಕೆ" ಎನ್ನುತ್ತಾಳೆ. ಅದಕ್ಕೆ ಊರ್ಮಿಳೆಯ ಉತ್ತರ : "ಮೀಯದುಡದೆಯೆ ತೊಡದೆ ಪೋಪುದೇನವರೆಡೆಗೆ, ತಂಗೆ? ಮಂಗಳಮಲ್ತು!" ಆಗ ಮಾಂಡವಿ ಕೇಳುತ್ತಾಳೆ: "ನೋಡಬಾರದೆ ಅವರ್ ನಿನ್ನ ನಿಡು ಕಡು ನೋಂಪಿಯಂ ?" ಮುಂದೆ ಊರ್ಮಿಳೆ ಆಡುವ ಮಾತುಗಳು ಲೋಕೋತ್ತರ : "ಚಿಃ ! ಕಡಲ್ಗಿದಿರ್ ಪನಿಗೇಂ ಪ್ರದರ್ಶನಂ ? ದೇವರ ತಪಕ್ಕಿದಿರ್ ನಮ್ಮದೊರ್ ತೃಣಮಲ್ತೆ!...ತನ್ನ ತಾನ್ ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ ; ಮೇಣ್ ತಪಕೆ ಕೇಳ್, ತಂಗೆ, ಪರಮ ಪ್ರಯೋಜನಂ !" ಈ ಕಾಲದಲ್ಲಿ ಕೆಲವರ ಚರ್ಯೆಯನ್ನು ನೋಡಿದಾಗ, 'ತನ್ನ ತಾನೆಲ್ಲಗೈವುದೆ' ಇವರ ಗುರಿಯೇನೊ ಅನಿಸುತ್ತದೆ. ಅಂತೂ ಕಡಲಿನ ಮುಂದೆ ಹನಿಗಳ, ಕಾಡಿನ ಮುಂದೆ ಎಲೆಗಳ, ಸೂರ್ಯನ ಮುಂದೆ ಸೊಡರುಗಳ ಪ್ರದರ್ಶನ ಪ್ರಿಯತೆಯನ್ನು ಕಾಣುತ್ತಿದ್ದೇವೆ.

ಪ್ರಸಿದ್ಧಿ ತ್ಯಾಜ್ಯವಲ್ಲ. ಹೆಸರೇ ಬೇಡ ಎಂಬ ಎತ್ತರಕ್ಕೆ ಏರಿದವರ ಮಾತು ಬೇಡ; ಅವರು ಜೀವನ್ಮುಕ್ತರು. ಸಾಮಾನ್ಯರಿಗೆ ಹೆಸರು ಬೇಕು; ಆದರೆ ಅದು ನ್ಯಾಯವಾದ ಮಾರ್ಗದಿಂದ ಬರಬೇಕು, ನಿಜವಾದ ಸಾಧನೆ ಅದರ ಬೆನ್ನಿಗಿರಬೇಕು. ಒಳ್ಳೆಯ ಕೆಲಸ ಮಾಡಿದವರಿಗೆ ಕೀರ್ತಿ ತಾನಾಗಿ ಇಂದಲ್ಲ ನಾಳೆ ಸಿಕ್ಕಿಯೇ ಸಿಗುತ್ತದೆ ; ಮನ್ನಣೆ ಲಭಿಸಿಯೇ ಲಭಿಸುತ್ತದೆ. ಭವಭೂತಿ ಹೇಳಿದಂತೆ "ಕಾಲ ನಿರವಧಿಯಾದುದು, ಪೃಥ್ವಿ ವಿಪುಲವಾದುದು." ಆದರೆ ಕೀರ್ತಿಯ ಮೇಲೆ ಕಣ್ಣಿಟ್ಟುಕೊಂಡು ಕೆಲಸ ಮಾಡಿದರೆ, ಕೆಲಸವೂ ಮುಕ್ಕಾಗಬಹುದು, ಕೀರ್ತಿಯೂ ಕಲುಷಿತವಾಗಬಹುದು. "ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ" (ಕರ್ಮದಲ್ಲೇ ನಿನಗೆ ಅಧಿಕಾರ, ಫಲದಲ್ಲಿ ಆಸಕ್ತಿ ಬೇಡ) ಎಂದಿದೆ ಭಗವದ್ಗೀತೆ. ಆ ಮಾತನ್ನೆ ತುಸು ಬದಲಿಸಿ ಹೇಳಿಕೊಳ್ಳಬಹುದುಃ "ಕರ್ಮದಲ್ಲೆ ನಿನಗೆ ಅಧಿಕಾರ, ಕೀರ್ತಿಯಲ್ಲಿ ಆಸಕ್ತಿ ಬೇಡ".

■■

೩೭. ದೋಷಾನ್ವೇಷಣೆ

ಊರ್ಧ್ವಮುಖತೆಗಿಂತ ಮಿಗಿಲಾಗಿ ಅಧೋಮುಖತೆಯೆ ಮಾನವಚೇತನದ ಪ್ರವೃತ್ತಿ; ಅದು ಕೆಟ್ಟದ್ದರ ಕಡೆಗೆ ತೂಗುವಷ್ಟು ಸುಲಭವಾಗಿ ಸಹಜವಾಗಿ ಒಳ್ಳೆಯದರ ಕಡೆಗೆ ತೂಗುವುದಿಲ್ಲ. ಗುಣದೋಷಗಳನ್ನು ಗುರುತಿಸುವುದರ ವಿಷಯದಲ್ಲೂ ಈ ಮಾತು ದಿಟ. ನಾವು ಇತರರ ದೋಷಗಳನ್ನು ಗುರುತಿಸುವಲ್ಲಿ ತೋರುವಷ್ಟು ಆಸಕ್ತಿಯನ್ನು ಗುಣಗ್ರಹಣದಲ್ಲಿ ತೋರುವುದಿಲ್ಲ.

ಪ್ರಪಂಚದಲ್ಲಿ ಪರಿಪೂರ್ಣತೆ ಎಂಬುದಿಲ್ಲ; ಯಾರಲ್ಲೆ ಆಗಲಿ, ಯಾವುದರಲ್ಲೆ ಆಗಲಿ ಗುಣದೋಷಗಳೆರಡೂ ಯಾವುದೋ ಪ್ರಮಾಣದಲ್ಲಿ ಬೆರೆತುಕೊಂಡಿರುತ್ತವೆ. ನಮ್ಮ ಮೊದಲ ಕರ್ತವ್ಯ ಗುಣವನ್ನು ಮೆಚ್ಚಿಕೊಳ್ಳುವುದು, ಎತ್ತಿ ಹೇಳುವುದು. ಹೀಗೆಂದರೆ ದೋಷವನ್ನು ಮರೆಯಿಸಬೇಕೆಂದು ಅರ್ಥವಲ್ಲ, ಮೆರೆಯಿಸಬಾರದು ಎಂದಷ್ಟೆ. ಎಷ್ಟೋ ಸಂದರ್ಭಗಳಲ್ಲಿ, ಕಾಳಿದಾಸ ಹೇಳುವಂತೆ, ''ಏಕೋ ಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ'' (ದೋಷಾಂಶ ಗುಣಸಮುದಾಯದಲ್ಲಿ ಮುಳುಗಿಹೋಗುತ್ತದೆ, ಚಂದ್ರನ ಕಲೆ ಚಂದ್ರಿಕೆಯಲ್ಲಿ ಹೇಗೋ ಹಾಗೆ.) ಅದನ್ನೆ ಹೆಕ್ಕಿ, ಡಂಗುರ ಬಾರಿಸುತ್ತ ಸಾರುವುದು ಜಾಣತನದ ಲಕ್ಷಣವಲ್ಲ, ಸದಭಿರುಚಿಯಲ್ಲ.

ಹಾಗೆ ನೋಡಿದರೆ, ಯಾರಲ್ಲಿ ದೋಷವಿಲ್ಲ ? ಮರ್ಯಾದಾ ಪುರುಷೋತ್ತಮನೆಂದು ನಾವು ಕೊಂಡಾಡುವ ಶ್ರೀ ರಾಮನಲ್ಲಿರಲಿಲ್ಲವೆ ? ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಆರಂಭದಲ್ಲಿ ರಾಮನಿಗೆ ಹಚ್ಚಿರುವ ವಿಶೇಷಣ ಮಾಲಿಕೆಯಲ್ಲಿ ''ಸ್ವದೋಷ ಪರದೋಷವಿತ್'' (ತನ್ನ ಮತ್ತು ಇತರರ ದೋಷಗಳನ್ನು ಬಲ್ಲವನು) ಎಂಬುದೊಂದು. ರಾಮ ನಿರ್ದೋಷನಾಗಿದ್ದರೆ ವಾಲ್ಮೀಕಿಗಳು 'ಸ್ವದೋಷವಿತ್' ಎಂದೇಕೆ ಹೇಳುತ್ತಿದ್ದರು. ? ಅವನ ವ್ಯಕ್ತಿತ್ವದಲ್ಲೂ ಕೊರತೆಗಳಿದ್ದಿರಬೇಕು ; ಆದರೆ ಅವು ಇತರರ ಗಮನಕ್ಕೆ ಬರದಷ್ಟು ಅಲ್ಪವಾದವು, ಅವನಿಗೆ ಮಾತ್ರ ಗೊತ್ತಿದ್ದವು. ಇಂದು ನಾವು ಅವುಗಳನ್ನು ಶ್ರಮಪೂರ್ವಕವಾದ ಸಂಶೋಧನೆಯಿಂದ ಕಂಡುಹಿಡಿದು, ದೊಡ್ಡದು ಮಾಡಿ, ರಾಮನಲ್ಲಿ ಇಂಥಿಂಥ ದೋಷಗಳಿದ್ದವು, ಅವನು ಮಹಾತ್ಮನಲ್ಲ, ಸಾಮಾನ್ಯ ಮನುಷ್ಯ ಎಂದು ಸಿದ್ಧಾಂತ ಮಾಡಿದರೆ ಗಾಂಪರಾಗುತ್ತೇವೆ. ಅವನ ಗುಣ ಗಣವನ್ನು ಅಲ್ಲಗಳೆದ ಪಕ್ಷದಲ್ಲಿ ಭಾರತೀಯ ಸಂಸ್ಕೃತಿಯ ಆಧಾರಸ್ತಂಭವೊಂದು ಕುಸಿದುಬೀಳುತ್ತದೆ.

ರಾಮನಿಗೆ ತನ್ನ ದೋಷಗಳು ತಿಳಿದಿದ್ದುವು ; ಅವನು ಮಹಾವ್ಯಕ್ತಿಯಾಗಿರುವುದಕ್ಕೆ ಅದೂ ಒಂದು ಕಾರಣ. ಆದರೆ ಲೋಕದಲ್ಲಿ ಬಹುಜನರಿಗೆ ತಮ್ಮ ದೋಷಗಳು

ಗಮನಕ್ಕೆ ಬರುವುದೇ ಇಲ್ಲ; ಇತರರ ದೋಷಗಳು ಮಾತ್ರ ಗೋಚರಿಸುತ್ತವೆ ; ಅವು ಸಣ್ಣ ಪುಟ್ಟವಾಗಿದ್ದರೂ ಅವರಿಗೆ ಭೂತಾಕಾರವಾಗಿ ಭಾಸವಾಗುತ್ತದೆ. ಇಂಥವರನ್ನು ದುರ್ಜನರೆನ್ನಬೇಕಾಗುತ್ತದೆ. (ಸಂಸ್ಕೃತ) ಸುಭಾಷಿತವೊಂದು ಹೀಗೆ ಹೇಳುತ್ತದೆ :

ಪರದೋಷ ಸಾಸಿವೆಯ ಗಾತ್ರದಷ್ಟಿದ್ದರೂ ಕಾಣುವನು ದುಷ್ಟ;
ತನ್ನ ದೋಷವೊ ಬಿಲ್ವ ಗಾತ್ರದಷ್ಟಿದ್ದರೂ, ಕಂಡರೂ ಕಾಣ !

ಕಣ್ಣಿಗೆ ತನ್ನ ಕಾಡಿಗೆ ಕಾಣದಿರುವುದು ಸಹಜವೇ. ತಮ್ಮದೇ ನಾಯಿಬಾಲ ವಾಗಿರುವಾಗ ಇಂಥ ಮಂದಿ ಕುದುರೆಯ ಬಾಲವನ್ನು 'ಛೆ ; ಚೆನ್ನಾಗಿಲ್ಲ' ಎಂದು ಟೀಕಿಸುತ್ತಾರೆ.

ಅಂತೂ ಜಗತ್ತಿನಲ್ಲಿ ಬಹಳ ಜನ ದೋಷೈಕರತಿಯುಳ್ಳವರು ; ಪರರ ದೋಷಗಳಲ್ಲಿ ರಮಿಸುವುದರಲ್ಲೆ ಅವರು ಪರಮಸುಖ ಸಂತೃಪ್ತಿಗಳನ್ನು ಕಂಡುಕೊಳ್ಳುತ್ತಾರೆ; ಗುಣಗಳಿಂದ ಅವರಿಗೆ ಸಂತೋಷವಿಲ್ಲ. ಕಸ್ತೂರಿಯನ್ನು ಕಡೆಗಣಿಸಿ, ಕಸವನ್ನು ಆಘ್ರಾಣಿಸುವ ಈ ಬಗೆಯ ಜನ ಸರ್ವಜ್ಞನ ವಚನವೊಂದನ್ನು ನೆನಪಿಗೆ ತರುತ್ತಾರೆ :

ಗಂಧವನು ತೇವಲ್ಲಿ ಒಂದು ನೊಣವನು ಕಾಣೆ
ಸಂಧಿಸಿ ಮಲವ ಬಿಡುವಲ್ಲಿ ನೊಣ ಮುತ್ತು-
ವಂದವನು ನೋಡು ಸರ್ವಜ್ಞ.

ಇದಕ್ಕಿಂತ ಪರಿಣಾಮಕಾರಿಯಾಗಿ ವಿಡಂಬಿಸುವುದು ಸಾಧ್ಯವಿಲ್ಲ.

ಗುಣಗ್ರಾಹಿಗಳು ಸಮಾಜದಲ್ಲಿ ಇಲ್ಲವೇ ಇಲ್ಲವೆಂದಲ್ಲ; ತೀರ ವಿರಳವಷ್ಟೆ. ಇದೊಂದು (ಸಂಸ್ಕೃತ) ಸೂಕ್ತಿ:

ಗುಣಿಯ ನಿರ್ಗುಣಿ ತಿಳಿಯಲಾರನು, ಗುಣಿಗೆ ಗುಣಿಯೊಳು ಮತ್ಸರ;
ಗುಣಿಗಳಾಗಿಹ, ಗುಣವ ಮೆಚ್ಚುವ ಸರಳಜನಗಳು ಸುವಿರಳ

ಇಂತಹ ವಿರಳರು ಸಣ್ಣ ಪ್ರಮಾಣದ ಗುಣವನ್ನೂ ದೊಡ್ಡದು ಮಾಡಿ ಪ್ರಶಂಸಿಸುವ ಸಜ್ಜನರು. ಅಂಥವರು ನಮಸ್ಕಾರ್ಯರು :

ಪರಗುಣಶೀಕರಮುದಧಿಂ ಕೃತ್ವಾ ತತ್ರೈವ ಖೇಲದ್ಭ್ಯಃ
ಅಜ್ಞಾತ ಮತ್ಸರೇಭ್ಯಃ ತೇಭ್ಯಃ ಸದ್ಭ್ಯೋ ನಮೋಸ್ತು ವಿದ್ವದ್ಭ್ಯಃ

(ಅಸೂಯೆಯನ್ನರಿಯದ ವಿದ್ವಾಂಸರು ಅವರು; ಇತರರ ಗುಣದ ಒಂದು ಒಂದು ಹನಿಯನ್ನು ಸಮುದ್ರವನ್ನಾಗಿ ಮಾಡಿ ಅದರಲ್ಲಿ ಓಲಾಡುವ ಸಜ್ಜನರು ಅವರು; ಅವರಿಗೆ ವಂದನೆ).

ಇನ್ನು ಕೆಲವರಿರುತ್ತಾರೆ. ಅವರಿಗೆ ಗುಣಗಳೂ ದೋಷಗಳಾಗಿ ತೋರುತ್ತವೆ. ಅನ್ಯರ 'ಸ್ವಧರ್ಮ' ಅವರ ಪಾಲಿಗೆ 'ಅಧರ್ಮ'ವಾಗುತ್ತದೆ. ಹಕ್ಕಿ ಈಜುವುದಿಲ್ಲ, ಮೀನು ಹಾರುವುದಿಲ್ಲ, ಚಂದ್ರ ಸುಡುವುದಿಲ್ಲ ಇತ್ಯಾದಿಯಾಗಿ ಅವರು ಆಕ್ಷೇಪಿಸುತ್ತಾರೆ. ಇದು ದೋಷೈಕದೃಷ್ಟಿಯ ಅತಿರೇಕದಶೆ.

ನಾವು ದೋಷಗಳನ್ನು ಬಚ್ಚಿಡಬೇಕಾಗಿಲ್ಲ; ಆದರೆ ಅವಕ್ಕೆ ಎರಡನೆಯ ಸ್ಥಾನ ಕೊಡೋಣ ; ಅವು ಗೌಣವಾಗಲಿ. ಪ್ರಧಾನ ಸ್ಥಾನ ಸಲ್ಲಬೇಕಾದುದು ಗುಣಗಳಿಗೆ; ಹಾಗೆಂದು, ಇಲ್ಲದ ಗುಣಗಳನ್ನು ಕಲ್ಪಿಸಬೇಕಾಗಿಲ್ಲ. ಇರುವ ಗುಣಗಳನ್ನು ತಿರಸ್ಕರಿಸದೆ ಪುರಸ್ಕರಿಸಿದರೆ ಸಾಕು. ಗುಣವನ್ನು ಒಂದು ವೇಳೆ ಉತ್ಪ್ರೇಕ್ಷಿಸಿದರೂ ತಪ್ಪಲ್ಲ; ಆದರೆ ಅದರ ಉಸಾಬರಿಗೇ ಹೋಗದೆ, ದೋಷವನ್ನು ಮಾತ್ರ ಉದ್ಘಾಟಿಸಿದರೆ ಅದರಿಂದ ಅಪಾಯವುಂಟು. ದೋಷಗಳು ಆಯಾ ವ್ಯಕ್ತಿಗೇ ಗೊತ್ತಿರುವ ಸಾಧ್ಯತೆಯಿದೆ ; ಆದರೆ ಗುಣಗಳು ಗೊತ್ತಿಲ್ಲದಿರಬಹುದು. ಅವುಗಳನ್ನು ಬೇರೆಯವರು ತೋರಿಸಿಕೊಡಬೇಕು. ಗುಣಸ್ತವನದಿಂದ ಒಬ್ಬ ವ್ಯಕ್ತಿಗೆ ಸ್ಫೂರ್ತಿ, ಉತ್ತೇಜನಗಳನ್ನು ಕೊಟ್ಟಂತಾಗುತ್ತದೆ; ಕೃತಾರ್ಥತೆಯ ಭಾವನೆಯನ್ನು ಮೂಡಿಸಿದಂತಾಗುತ್ತದೆ; ಅವನ ಬೆಳವಣಿಗೆಗೆ ಇಂಬು ನೀಡಿದಂತಾಗುತ್ತದೆ. ಕೇವಲ ದೋಷಸಂಕೀರ್ತನದಿಂದ ವ್ಯಕ್ತಿಯ ಮನಸ್ಸನ್ನು ಜಗ್ಗಿ ಕುಗ್ಗಿಸಿದಂತಾಗುತ್ತದೆ. ಅವನ ಬೆಳವಣಿಗೆ ಅದರಿಂದ ಮುರುಟಿಹೋಗಬಹುದು. ಸುಕುಮಾರ ಮನಸ್ಸುಗಳಂತೂ ಬರಿಯ ಟೀಕೆಗಳಿಂದ ಆಘಾತಕ್ಕೀಡಾಗುತ್ತವೆ.

ಧನಕನಕಗಳನ್ನು ಕೊಡುವುದು ನಮ್ಮಿಂದಾಗದಿರಬಹುದು; ಆದರೆ ಒಳ್ಳೆಯ ಮಾತನ್ನಾದರೂ ಆಡಿ ಹುರುಪು ಹುಮ್ಮಸ್ಸುಗಳನ್ನುಂಟುಮಾಡುವುದು ಸಾಧ್ಯವಿಲ್ಲವೆ ?–

ಸರ್ವಜಂತುಗಳು ತುಷ್ಟಿಗೊಳ್ಳುವುವು ಪ್ರಿಯವಾಕ್ಯವನಾಡಿದರೆ;
ಅದರಿಂ ಪ್ರಿಯವನೆ ನುಡಿಯುವುದೆಲ್ಲರು-ಬಡತನ ಮಾತಿನೊಳೇಕೆ ?

ಒಳ್ಳೆಯ ಮಾತಿಗೂ ಕ್ಷಾಮವೆ ? ನಾಲ್ಕು ಹೊಗಳಿಕೆಯ ನುಡಿಗಳನ್ನಾಡಿದರೆ ನಾವು ಕಳೆದುಕೊಳ್ಳುವ ಗಂಟಾದರೂ ಏನು ? ಹಾಗೆಂದು ಅಸತ್ಯವನ್ನಾಡಬೇಕಾಗಿಲ್ಲ, ಔಚಿತ್ಯವನ್ನು ಮೀರಬೇಕಾಗಿಲ್ಲ. ಸತ್ಯ, ಔಚಿತ್ಯಗಳ ಚೌಕಟ್ಟಿನೊಳಗಿದ್ದುಕೊಂಡೆ ಒಬ್ಬ ವ್ಯಕ್ತಿಯನ್ನು ಶ್ಲಾಘಿಸಿ ಅವನಿಗೆ ಹಿತವನ್ನೆಸಗಬಹುದು ; ಉನ್ನತ ಸಾಧನೆಗಳಿಗೆ ಅವನನ್ನು ಪ್ರೇರಿಸಬಹುದು. ಹೊಗಳಿಕೆಯಿಂದ ಹನುಮಂತ ಹಿಗ್ಗಿ ಸಮುದ್ರ ಹಾರಲಿಲ್ಲವೆ ?

''ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ'' ಎಂದರು ಬಸವಣ್ಣನವರು. ಮೊದಲು ನಮ್ಮ ಡೊಂಕನ್ನು ಕಂಡುಕೊಂಡು, ತಿದ್ದಿಕೊಳ್ಳಬೇಕು, ಅನಂತರ ಲೋಕದ ಡೊಂಕನ್ನು ಕಂಡು ತಿದ್ದಲು ಯತ್ನಿಸಿದರೆ ತಪ್ಪೇನಿಲ್ಲ. ಲೋಕವೆಲ್ಲ ಡೊಂಕು ಎಂಬ ಪೂರ್ವಗ್ರಹ ಮಾತ್ರ ಬೇಡ ; ಅದರ ಋಜುತ್ವವನ್ನೂ ಮುಕ್ತ ಮನಸ್ಸಿನಿಂದ, ಮುಕ್ತ ಕಂಠದಿಂದ ಒಪ್ಪಿಕೊಳ್ಳೋಣ. ದೋಷಾನ್ವೇಷಣೆಯಲ್ಲ, ಗುಣೋಪಾಸನೆ ನಮ್ಮ ಆದರ್ಶ ವಾಗಿರಲಿ.

■■

೩೮. ಅಸ್ಪೃಶ್ಯತೆ

ಅಸ್ಪೃಶ್ಯತೆ ಮತ್ತು ಅದರ ನಿವಾರಣೆ ಈಚೆಗೆ ಮೇಲಿಂದ ಮೇಲೆ ಕೇಳಿಬರುತ್ತಿರುವ ಮಾತು. ಹಿಂದಿನಿಂದಲೂ–ಮಹಾತ್ಮ ಗಾಂಧಿಯವರ ಕಾಲದಿಂದಲೂ– ಇದು ಕೇಳಿಬರುತ್ತಲೇ ಇದೆ ; ಈಗ ಇದಕ್ಕೆ ರಾಜಕೀಯದ ಬಣ್ಣ ಬೇರೆ ಸೇರಿಕೊಂಡಿರುವುದೊಂದು ವಿಶೇಷ. ಏನೇ ಇರಲಿ, ಭರತಖಂಡಕ್ಕೆ ಒಡ್ಡಿನಿಂತ ಬಹು ದೊಡ್ಡ ಸಮಸ್ಯೆ ಅಸ್ಪೃಶ್ಯತೆ ; ಇದು ನಿರವಶೇಷವಾಗಿ ತೊಡೆದು ಹೋಗುವವರೆಗೂ ದೇಶಕ್ಕೆ ಉದ್ಧಾರವಿಲ್ಲ; ಸರ್ವೋದಯವಿಲ್ಲ.

ಅಸ್ಪೃಶ್ಯತೆಯೆಂದರೇನು ? ಗಾಂಧೀಜಿ ಒಂದೆಡೆ ಅದನ್ನು ಹೀಗೆ ಲಕ್ಷಣೀಕರಿಸಿದ್ದಾರೆ : "Untouchability means pollution by the touch of certain persons by reason of their birth in a particular state or family." (ಒಂದು ನಿರ್ದಿಷ್ಟ ಸ್ಥಿತಿಯಲ್ಲಿ ಅಥವಾ ಕುಟುಂಬದಲ್ಲಿ ಹುಟ್ಟಿದ ಕಾರಣದಿಂದಾಗಿ ಕೆಲವರು ವ್ಯಕ್ತಿಗಳು ಮುಟ್ಟುವುದರಿಂದುಂಟಾಗುವ ಮಾಲಿನ್ಯ). ಇಲ್ಲಿ ಹುಟ್ಟಿನ ಕಾರಣ ಎಂಬುದು ಮುಖ್ಯ. ಏಕೆಂದರೆ ಅಸ್ಪೃಶ್ಯತೆ, ಮೈಲಿಗೆ, ಸೂತಕ ಮುಂತಾದ ಮಾತುಗಳಿಗೆ ಅರ್ಥವಿಲ್ಲದಿಲ್ಲ; ಆದರೆ ಅವಕ್ಕೂ ಒಬ್ಬ ವ್ಯಕ್ತಿಯ ಹುಟ್ಟಿಗೂ ಯಾವುದೇ ಸಂಬಂಧವಿಲ್ಲ. ಉದಾಹರಣೆಗೆ, ಅಂಟುಜಾಡ್ಯವುಳ್ಳ ವ್ಯಕ್ತಿಯನ್ನು ಮುಟ್ಟಬಾರದು; ಅದರಿಂದ ಇತರರಿಗೂ ರೋಗ ಹರಡುವ ಸಂಭವವಿರುತ್ತದೆ. ಅಂಥ ರೋಗಿಗಳು ಅಸ್ಪೃಶ್ಯರೇ ಹೌದು. ಆದರೆ ಆ ಅಸ್ಪೃಶ್ಯತೆ ಜನ್ಮತಃ ಬಂದುದಲ್ಲ. ಆದರೆ ಭರತಖಂಡದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಸಮಾಜದ ಒಂದು ದೊಡ್ಡ ವರ್ಗವನ್ನು ಕೇವಲ ಹುಟ್ಟಿನ ನಿಮಿತ್ತದಿಂದ ಅಸ್ಪೃಶ್ಯರೆಂದು ಹೆಸರಿಸಿ ಊರಿಂದ ಹೊರಗಿರಿಸಲಾಗಿದೆ; ದೂರೀಕರಿಸಲಾಗಿದೆ. ಮತ್ತಾವ ದೇಶದಲ್ಲೂ ಇಲ್ಲದ, ಭಾರತಕ್ಕೇ ವಿಶಿಷ್ಟವಾದ ಈ ಪಿಡುಗಿನಿಂದ ಈ ದೇಶದ ವೈಭವಪೂರ್ಣ ಚರಿತ್ರೆ ಕಲುಷಿತವಾಗಿದೆ. ಅಸ್ಪೃಶ್ಯತೆ ಭಾರತೀಯ ಸಮಾಜಕ್ಕೆ ಅಂಟಿ ಬಂದ ಕರಾಳ ಕಳಂಕ, ಘೋರಶಾಪ ; ಅದಕ್ಕೆ ಮಾರಕವಾಗಿರುವ ಅರ್ಬುದ ವ್ರಣ. ಇದೊಂದು ಅತಾರ್ಕಿಕವಾದ ಅಮಾನುಷ ಪದ್ಧತಿ; ಇಂದಿನ ವೈಜ್ಞಾನಿಕ ಯುಗದಲ್ಲಂತೂ ಹಾಸ್ಯಾಸ್ಪದವಾದುದು.

ಅಸ್ಪೃಶ್ಯತೆಯನ್ನು ಕುರಿತು ಮಾತನಾಡುವಾಗ, ಗಾಂಧೀಜಿಯ ಹೆಸರನ್ನೆತ್ತದಿರುವುದು ಸಾಧ್ಯವಿಲ್ಲ; ಈ ಸಮಸ್ಯೆಯ ಬಗೆಗೆ ಅವರಷ್ಟು ಆಲೋಚಿಸಿದವರು, ಅದರ ನಿರ್ಮೂಲನಕ್ಕಾಗಿ ಅವರಷ್ಟು ಶ್ರಮಿಸಿದವರು ಇನ್ನೊಬ್ಬರಿಲ್ಲ. ಅಸ್ಪೃಶ್ಯತೆಯನ್ನು ಅವರು 'ಹಿಂದೂ ಧರ್ಮಕ್ಕೆ ಹತ್ತಿದ ಗೆದ್ದಲು', 'ಹಿಂದೂ ಧರ್ಮಕ್ಕೆ

೩೭. ದೋಷಾನ್ವೇಷಣೆ

ಊರ್ಧ್ವಮುಖತೆಗಿಂತ ಮಿಗಿಲಾಗಿ ಅಧೋಮುಖತೆಯೆ ಮಾನವಚೇತನದ ಪ್ರವೃತ್ತಿ; ಅದು ಕೆಟ್ಟದ್ದರ ಕಡೆಗೆ ತೂಗುವಷ್ಟು ಸುಲಭವಾಗಿ ಸಹಜವಾಗಿ ಒಳ್ಳೆಯದರ ಕಡೆಗೆ ತೂಗುವುದಿಲ್ಲ. ಗುಣದೋಷಗಳನ್ನು ಗುರುತಿಸುವುದರ ವಿಷಯದಲ್ಲೂ ಈ ಮಾತು ದಿಟ. ನಾವು ಇತರರ ದೋಷಗಳನ್ನು ಗುರುತಿಸುವಲ್ಲಿ ತೋರುವಷ್ಟು ಆಸಕ್ತಿಯನ್ನು ಗುಣಗ್ರಹಣದಲ್ಲಿ ತೋರುವುದಿಲ್ಲ.

ಪ್ರಪಂಚದಲ್ಲಿ ಪರಿಪೂರ್ಣತೆ ಎಂಬುದಿಲ್ಲ; ಯಾರಲ್ಲೇ ಆಗಲಿ, ಯಾವುದರಲ್ಲೇ ಆಗಲಿ ಗುಣದೋಷಗಳೆರಡೂ ಯಾವುದೋ ಪ್ರಮಾಣದಲ್ಲಿ ಬೆರೆತುಕೊಂಡಿರುತ್ತವೆ. ನಮ್ಮ ಮೊದಲ ಕರ್ತವ್ಯ ಗುಣವನ್ನು ಮೆಚ್ಚಿಕೊಳ್ಳುವುದು, ಎತ್ತಿ ಹೇಳುವುದು. ಹೀಗೆಂದರೆ ದೋಷವನ್ನು ಮರೆಯಿಸಬೇಕೆಂದು ಅರ್ಥವಲ್ಲ, ಮೆರೆಯಿಸಬಾರದು ಎಂದಷ್ಟೆ. ಎಷ್ಟೋ ಸಂದರ್ಭಗಳಲ್ಲಿ, ಕಾಳಿದಾಸ ಹೇಳುವಂತೆ, ''ಏಕೋ ಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ'' (ದೋಷಾಂಶ ಗುಣಸಮುದಾಯದಲ್ಲಿ ಮುಳುಗಿಹೋಗುತ್ತದೆ, ಚಂದ್ರನ ಕಲೆ ಚಂದ್ರಿಕೆಯಲ್ಲಿ ಹೇಗೋ ಹಾಗೆ.) ಅದನ್ನೆ ಹೆಕ್ಕಿ, ಡಂಗುರ ಬಾರಿಸುತ್ತ ಸಾರುವುದು ಜಾಣತನದ ಲಕ್ಷಣವಲ್ಲ, ಸದಭಿರುಚಿಯಲ್ಲ.

ಹಾಗೆ ನೋಡಿದರೆ, ಯಾರಲ್ಲಿ ದೋಷವಿಲ್ಲ? ಮರ್ಯಾದಾ ಪುರುಷೋತ್ತಮ ನೆಂದು ನಾವು ಕೊಂಡಾಡುವ ಶ್ರೀ ರಾಮನಲ್ಲಿರಲಿಲ್ಲವೆ? ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಆರಂಭದಲ್ಲಿ ರಾಮನಿಗೆ ಹಚ್ಚಿರುವ ವಿಶೇಷಣ ಮಾಲಿಕೆಯಲ್ಲಿ ''ಸ್ವದೋಷ ಪರದೋಷವಿತ್'' (ತನ್ನ ಮತ್ತು ಇತರರ ದೋಷಗಳನ್ನು ಬಲ್ಲವನು) ಎಂಬುದೊಂದು. ರಾಮ ನಿರ್ದೋಷನಾಗಿದ್ದರೆ ವಾಲ್ಮೀಕಿಗಳು 'ಸ್ವದೋಷವಿತ್' ಎಂದೇಕೆ ಹೇಳುತ್ತಿದ್ದರು. ? ಅವನ ವ್ಯಕ್ತಿತ್ವದಲ್ಲೂ ಕೊರತೆಗಳಿದ್ದಿರಬೇಕು ; ಆದರೆ ಅವು ಇತರರ ಗಮನಕ್ಕೆ ಬರದಷ್ಟು ಅಲ್ಪವಾದವು, ಅವನಿಗೆ ಮಾತ್ರ ಗೊತ್ತಿದ್ದವು. ಇಂದು ನಾವು ಅವುಗಳನ್ನು ಶ್ರಮಪೂರ್ವಕವಾದ ಸಂಶೋಧನೆಯಿಂದ ಕಂಡುಹಿಡಿದು, ದೊಡ್ಡದು ಮಾಡಿ, ರಾಮನಲ್ಲಿ ಇಂಥಿಂಥ ದೋಷಗಳಿದ್ದವು, ಅವನು ಮಹಾತ್ಮನಲ್ಲ, ಸಾಮಾನ್ಯ ಮನುಷ್ಯ ಎಂದು ಸಿದ್ಧಾಂತ ಮಾಡಿದರೆ ಗಾಂಪರಾಗುತ್ತೇವೆ. ಅವನ ಗುಣ ಗಣವನ್ನು ಅಲ್ಲಗಳೆದ ಪಕ್ಷದಲ್ಲಿ ಭಾರತೀಯ ಸಂಸ್ಕೃತಿಯ ಆಧಾರಸ್ತಂಭವೊಂದು ಕುಸಿದುಬೀಳುತ್ತದೆ.

ರಾಮನಿಗೆ ತನ್ನ ದೋಷಗಳು ತಿಳಿದಿದ್ದುವು ; ಅವನು ಮಹಾವ್ಯಕ್ತಿಯಾಗಿರುವುದಕ್ಕೆ ಅದೂ ಒಂದು ಕಾರಣ. ಆದರೆ ಲೋಕದಲ್ಲಿ ಬಹುಜನರಿಗೆ ತಮ್ಮ ದೋಷಗಳು

ಗಮನಕ್ಕೆ ಬರುವುದೇ ಇಲ್ಲ; ಇತರರ ದೋಷಗಳು ಮಾತ್ರ ಗೋಚರಿಸುತ್ತವೆ ; ಅವು ಸಣ್ಣ ಪುಟ್ಟವಾಗಿದ್ದರೂ ಅವರಿಗೆ ಭೂತಾಕಾರವಾಗಿ ಭಾಸವಾಗುತ್ತದೆ. ಇಂಥವರನ್ನು ದುರ್ಜನರೆನ್ನಬೇಕಾಗುತ್ತದೆ. (ಸಂಸ್ಕೃತ) ಸುಭಾಷಿತವೊಂದು ಹೀಗೆ ಹೇಳುತ್ತದೆ :

ಪರದೋಷ ಸಾಸಿವೆಯ ಗಾತ್ರದಷ್ಟಿದ್ದರೂ ಕಾಣುವನು ದುಷ್ಟ;
ತನ್ನ ದೋಷವೊ ಬಿಲ್ವ ಗಾತ್ರದಷ್ಟಿದ್ದರೂ, ಕಂಡರೂ ಕಾಣ !

ಕಣ್ಣಿಗೆ ತನ್ನ ಕಾಡಿಗೆ ಕಾಣದಿರುವುದು ಸಹಜವೇ. ತಮ್ಮದೇ ನಾಯಿಬಾಲವಾಗಿರುವಾಗ ಇಂಥ ಮಂದಿ ಕುದುರೆಯ ಬಾಲವನ್ನು 'ಛೆ ; ಚೆನ್ನಾಗಿಲ್ಲ' ಎಂದು ಟೀಕಿಸುತ್ತಾರೆ.

ಅಂತೂ ಜಗತ್ತಿನಲ್ಲಿ ಬಹಳ ಜನ ದೋಷೈಕರತಿಯುಳ್ಳವರು ; ಪರರ ದೋಷಗಳಲ್ಲಿ ರಮಿಸುವುದರಲ್ಲೇ ಅವರು ಪರಮಸುಖ ಸಂತೃಪ್ತಿಗಳನ್ನು ಕಂಡುಕೊಳ್ಳುತ್ತಾರೆ; ಗುಣಗಳಿಂದ ಅವರಿಗೆ ಸಂತೋಷವಿಲ್ಲ. ಕಸ್ತೂರಿಯನ್ನು ಕಡೆಗಣಿಸಿ, ಕಸವನ್ನು ಆಘ್ರಾಣಿಸುವ ಈ ಬಗೆಯ ಜನ ಸರ್ವಜ್ಞನ ವಚನವೊಂದನ್ನು ನೆನಪಿಗೆ ತರುತ್ತಾರೆ :

ಗಂಧವನು ತೀವಲ್ಲಿ ಒಂದು ನೊಣವನು ಕಾಣೆ
ಸಂಧಿಸಿ ಮಲವ ಬಿಡುವಲ್ಲಿ ನೊಣ ಮುತ್ತು-
ವಂದವನು ನೋಡು ಸರ್ವಜ್ಞ.

ಇದಕ್ಕಿಂತ ಪರಿಣಾಮಕಾರಿಯಾಗಿ ವಿಡಂಬಿಸುವುದು ಸಾಧ್ಯವಿಲ್ಲ.

ಗುಣಗ್ರಾಹಿಗಳು ಸಮಾಜದಲ್ಲಿ ಇಲ್ಲವೇ ಇಲ್ಲವೆಂದಲ್ಲ; ತೀರ ವಿರಳವಷ್ಟೆ. ಇದೊಂದು (ಸಂಸ್ಕೃತ) ಸೂಕ್ತಿ:

ಗುಣಿಯ ನಿರ್ಗುಣಿ ತಿಳಿಯಲಾರನು, ಗುಣಿಗೆ ಗುಣಿಯೊಳು ಮತ್ಸರ;
ಗುಣಿಗಳಾಗಿಹ, ಗುಣವ ಮೆಚ್ಚುವ ಸರಳಜನಗಳು ಸುವಿರಳ

ಇಂತಹ ವಿರಳರು ಸಣ್ಣ ಪ್ರಮಾಣದ ಗುಣವನ್ನೂ ದೊಡ್ಡದು ಮಾಡಿ ಪ್ರಶಂಸಿಸುವ ಸಜ್ಜನರು. ಅಂಥವರು ನಮಸ್ಕಾರ್ಯರು :

ಪರಗುಣಶೀಕರಮುದಧಿಂ ಕೃತ್ವಾ ತತ್ರೈವ ಖೇಲದ್ಭ್ಯಃ
ಅಜ್ಞಾತ ಮತ್ಸರೇಭ್ಯಃ ತೇಭ್ಯಃ ಸದ್ಭ್ಯೋ ನಮೋಸ್ತು ವಿದ್ವದ್ಭ್ಯಃ

(ಅಸೂಯೆಯನ್ನರಿಯದ ವಿದ್ವಾಂಸರು ಅವರು; ಇತರರ ಗುಣದ ಒಂದು ಒಂದು ಹನಿಯನ್ನು ಸಮುದ್ರವನ್ನಾಗಿ ಮಾಡಿ ಅದರಲ್ಲಿ ಓಲಾಡುವ ಸಜ್ಜನರು ಅವರು; ಅವರಿಗೆ ವಂದನೆ).

ಇನ್ನು ಕೆಲವರಿರುತ್ತಾರೆ. ಅವರಿಗೆ ಗುಣಗಳೂ ದೋಷಗಳಾಗಿ ತೋರುತ್ತವೆ. ಅನ್ಯರ 'ಸ್ವಧರ್ಮ' ಅವರ ಪಾಲಿಗೆ 'ಅಧರ್ಮ'ವಾಗುತ್ತದೆ. ಹಕ್ಕಿ ಈಜುವುದಿಲ್ಲ, ಮೀನು ಹಾರುವುದಿಲ್ಲ, ಚಂದ್ರ ಸುಡುವುದಿಲ್ಲ ಇತ್ಯಾದಿಯಾಗಿ ಅವರು ಆಕ್ಷೇಪಿಸುತ್ತಾರೆ. ಇದು ದೋಷೈಕದೃಷ್ಟಿಯ ಅತಿರೇಕದಶೆ.

ಅಮರಿಕೊಂಡಿರುವ ಪಿಶಾಚ', 'ಸಹಸ್ರಮುಖ ಸರ್ಪ' ಮುಂತಾದ ನುಡಿಗಳಿಂದ ಬಣ್ಣಿಸಿದ್ದಾರೆ. ಅದು ''ಹಿಂದೂ ಧರ್ಮದ ಜೀವವನ್ನು ತಿನ್ನುತ್ತಿದೆ'' ಎಂದು ವಿಷಾದಿಸಿದ್ದಾರೆ. ಅದು ''ದೇವರ ಮತ್ತು ಮಾನವನ ವಿರುದ್ಧ ಎಸಗಿದ ಪಾಪ''ವೆಂದು ಖಂಡಿಸಿದ್ದಾರೆ. ''ನನಗೆ ಮೋಕ್ಷ ಬೇಕು, ಪುನರ್ಜನ್ಮ ಬೇಕಿಲ್ಲ. ಮತ್ತೆ ನಾನು ಹುಟ್ಟಲೇಬೇಕಾದಲ್ಲಿ ಅಸ್ಪೃಶ್ಯನಾಗಿ ಹುಟ್ಟಬೇಕು'' ಎಂದಿದ್ದಾರೆ. ಅಸ್ಪೃಶ್ಯರ ದುರವಸ್ಥೆಯನ್ನು ಕುರಿತು ಅವರ ಮರುಕಕ್ಕೆ, ಅವರ ಉದ್ಧಾರವನ್ನು ಕುರಿತು ಅವರ ಕಳಕಳಿಗೆ ಇದು ಸಾಕ್ಷಿ.

ಗಾಂಧೀಜಿಯ ಪ್ರಕಾರ ಅಸ್ಪೃಶ್ಯತೆ ಹಿಂದೂ ಧರ್ಮದ ಒಂದು ಅಂಗವಲ್ಲ. ''ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ । ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ'' (ಗೀತೆ, ೫.೧೮) (ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಮಾಂಸವನ್ನು ತಿನ್ನುವವನು—ಎಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳು) ಎನ್ನುವ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲ. ಆದರೂ ಸಮದರ್ಶನ ಹಿಂದೆ ಬಿದ್ದು, ಆ ದುಷ್ಟಪದ್ಧತಿ ಹೇಗೋ ಬೆಳೆದುಕೊಂಡು ಬಂದು ಬೇರೂರಿತು. ಕೆಲವು ಸಂಕುಚಿತ ಶಾಸ್ತ್ರಗಳೂ ಸ್ಮೃತಿಗಳೂ ಅಸ್ಪೃಶ್ಯತೆಯನ್ನು ಸೃಜಿಸಿದಂತೆ ತೋರುತ್ತದೆ. ಗಾಂಧೀಜಿ ಹೇಳುತ್ತಾರೆ. ''ಸಂಸ್ಕೃತದಲ್ಲಿ ಬರೆದಿಟ್ಟದ್ದೆಲ್ಲ ಶಾಸ್ತ್ರವಲ್ಲ; ಅದಕ್ಕೆ ನಾವು ಬದ್ಧರಾಗಬೇಕಿಲ್ಲ''. ಈ ಸಂದರ್ಭದಲ್ಲಿ ಕುವೆಂಪು ಅವರ ಕೆಲವು ಕವನ ಪಂಕ್ತಿಗಳನ್ನು ಸ್ಮರಿಸಬಹುದು.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು !

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು ?

ಅಸ್ಪೃಶ್ಯತೆ ಜಾತಿ ಪದ್ಧತಿಯ ಫಲವಲ್ಲವೆಂದೂ ಉಚ್ಚ-ನೀಚ ಭೇದದ ಫಲವೆಂದೂ ಹೇಳುತ್ತಾರೆ, ಗಾಂಧೀಜಿ. ಆದರೆ ಜಾತಿ ಪದ್ಧತಿಗೂ ಅಸ್ಪೃಶ್ಯತೆಗೂ ಸಂಬಂಧವುಂಟೇ ಉಂಟು. ವಾಸ್ತವವಾಗಿ, ಜಾತಿಪದ್ಧತಿಯೆ ಭರತಖಂಡದ ಎಲ್ಲ ಅರಿಷ್ಟಗಳಿಗೂ ಮೂಲ. ವರ್ಣವ್ಯವಸ್ಥೆಯ ಹೆಸರಿನಲ್ಲಿ ಜಾತಿವ್ಯವಸ್ಥೆಯನ್ನು ಗಾಂಧೀಜಿ ಸಮರ್ಥಿಸಿರುವುದು ಅವರ ವಿಚಾರಧಾರೆಯಲ್ಲಿ ಕಂಡು ಬರುವ ಒಂದು ವಿರೋಧಾಭಾಸ. ಅಂತೂ ಅವರ ಪಾಲಿಗೆ ''ಅಸ್ಪೃಶ್ಯತಾ ನಿರೋಧ ಅಂತಿಮವಾಗಿ ಮಾನವ ಭ್ರಾತೃತ್ವದ ಸಾಕ್ಷಾತ್ಕಾರ ಪ್ರಯತ್ನ''.

ಒಬ್ಬ ವ್ಯಕ್ತಿ ಅಸ್ಪೃಶ್ಯನಾಗುವುದು ತನ್ನ ಹುಟ್ಟಿನಿಂದಲ್ಲ, ಆಚಾರದಿಂದ. ನಿಜವಾದ ಅಸ್ಪೃಶ್ಯರೆಂದರೆ ದುರ್ಜನರು; ನಿಜವಾಗಿ ಅಸ್ಪೃಶ್ಯವಾದವು ಮನಸ್ಸಿನ ಕೆಟ್ಟ ಭಾವನೆಗಳು. ಅಸ್ಪೃಶ್ಯರೆನಿಸಿಕೊಂಡವರು ಕೆಲವು ದುರಭ್ಯಾಸಗಳನ್ನು ಬಿಡಬೇಕೆಂದು ಗಾಂಧೀಜಿ ಕರೆಯಿತ್ತಿರುವುದು ಗಮನಾರ್ಹ. ತಾವು ಅಸ್ಪೃಶ್ಯರು, ಕೀಳಾದವರು ಎಂಬ ಮನೋಭಾವವನ್ನು ಅವರು ತೊರೆದು, ಆತ್ಮ ಪ್ರತ್ಯಯವನ್ನು ಬೆಳೆಸಿಕೊಂಡು ಮೇಲುವರ್ಗದವರೊಡನೆ ಸೌಹಾರ್ದಯುತವಾದ ಸ್ಪರ್ಧೆಯಲ್ಲಿ ತೊಡಗಬೇಕು. ಸ್ಪರ್ಧೆಯೆಂದರೆ ದ್ವೇಷವೆಂದು ಅರ್ಥವಲ್ಲ. ಮೇಲು ವರ್ಗದವರೂ ಕಾಲ ಧರ್ಮಕ್ಕೆ ಹೊಂದಿಕೊಂಡು ಅಸ್ಪೃಶ್ಯರೆನಿಸಿಕೊಂಡವರನ್ನು ಸರಿ ಸಮಾನವಾಗಿ ಪರಿಗಣಿಸಿ, ಮುಂದಕ್ಕೆ ಬರುವ ಎಲ್ಲ ಅವಕಾಶಗಳನ್ನೂ ಅವರಿಗೆ ಕಲ್ಪಿಸಿಕೊಡಬೇಕು. ''ಅಸ್ಪೃಶ್ಯತೆ ತೊಲಗಿದೆ ಎಂಬ ಭರವಸೆ ನನಗಿದೆ'' ಎಂದಿದ್ದರು, ಗಾಂಧೀಜಿ. ಆದರೆ ಅದು ತೊಲಗಿಲ್ಲ. ಇನ್ನಾದರೂ ಅದನ್ನು ತೊಲಗಿಸಬೇಕಾಗಿದೆ. ಇದು ಹೃದಯ ಪರಿವರ್ತನೆಯಿಂದ ಆಗಬೇಕೇ ಹೊರತು ಕಾನೂನಿನ ಬಲದಿಂದಲ್ಲ. ಇತಿಹಾಸವನ್ನು ಅಥವಾ ಅದರ ಕೆಲವು ಭಾಗಗಳನ್ನು ಮರೆತು, ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವಗಳ ಆಧಾರದ ಮೇಲೆ ಸುಖೀ ಸಮಾಜವೊಂದನ್ನು ನಾವು ನಿರ್ಮಿಸಬೇಕಾಗಿದೆ. ಅಸ್ಪೃಶ್ಯತೆ, ಮೇಲು ಕೀಳು ಭಾವನೆ ಅಳಿಯುವವರೆಗೆ ಸರ್ವೋದಯದ ಆದರ್ಶ ಬರಿಯ ಬಾಯಿಮಾತಾಗಿ ಅಥವಾ ನಿರ್ಜೀವ ಬರಹವಾಗಿ, ವೇದಿಕೆಯ ಮೇಲಿನ ಘೋಷಣೆಯಾಗಿ ಉಳಿಯುತ್ತದೆಯಷ್ಟೆ. ಆದರೆ ಸರ್ವೋದಯವನ್ನು ಅಹಿಂಸಾತ್ಮಕ ವಿಧಾನದಿಂದ, ರಕ್ತ ರಹಿತ ಕ್ರಾಂತಿಯ ಮೂಲಕ ಸಾಧಿಸಬೇಕೆಂಬುದನ್ನು ನಾವು ಮರೆಯಬಾರದು. ಸಂಘರ್ಷ ರಕ್ತಪಾತಗಳಿಗೆ ಎಡೆಗೊಟ್ಟಲ್ಲಿ, ಭರತಖಂಡ ಹಿಂದೆ ಎದುರಿಸಿದ ಅಪಾಯಗಳಿಗಿಂತ ಭಯಂಕರವಾದ ಅಪಾಯಗಳ ಸುಳಿಗೆ ಸಿಕ್ಕುವದರಲ್ಲಿ ಸಂದೇಹವಿಲ್ಲ.

ಮಾನವರೆಲ್ಲರೂ ದೇವರ ಮಕ್ಕಳು; ಎಲ್ಲರೂ ಸಹೋದರರು, ಸಮಾನರು. ಹುಟ್ಟಿನಿಂದ ಯಾರೂ ಅಸ್ಪೃಶ್ಯರಲ್ಲ. ಹಾಗೆ ನೋಡಿದರೆ, ಅಸ್ಪೃಶ್ಯ ಒಬ್ಬನೇ ಒಬ್ಬ: ದೇವರು! ಅವನು ಅಸ್ಪೃಶ್ಯ ಮಾತ್ರವಲ್ಲ, ಅದೃಶ್ಯ ಮತ್ತು ಅಗಮ್ಯ ಕೂಡ.

■■

೩೯. ಪರಂಪರೆ-ನವ್ಯತೆ

ಯಾವಾಗಲೂ ಎಲ್ಲ ಕ್ಷೇತ್ರಗಳಲ್ಲೂ ಹಳತು ಹೊಸತರ ನಡುವೆ ಸಂಘರ್ಷ ನಡೆಯುತ್ತಲೇ ಇರುತ್ತದೆ. ಸಾಮಾನ್ಯವಾಗಿ ಹಳೆಯದನ್ನು ಕುರಿತು ತಾತ್ಸಾರ ತಿರಸ್ಕಾರಗಳು ವ್ಯಕ್ತವಾಗುತ್ತವೆ; ಹೊಸತಾದುದಕ್ಕೆ ಪುರಸ್ಕಾರ ಸಲ್ಲುತ್ತದೆ. ತದ್ವಿರುದ್ಧವಾದ ವಿದ್ಯಮಾನವೂ ಒಮ್ಮೊಮ್ಮೆ ಕಂಡು ಬರುವುದುಂಟು: ಹಳೆಯದೆಲ್ಲ ಹೊನ್ನು, ಹೊಸದು ಹುರುಳಿಲ್ಲದ್ದು ಎಂದು ಭಾವಿಸುವವರೂ ಇರಬಹುದು. ಆದರೂ ಹಿಂದಿನದನ್ನು, ಅರ್ಥಾತ್ ಪರಂಪರೆಯನ್ನು ಇಂದಿನವರು ನಿಕೃಷ್ಟವಾಗಿ ಪರಿಗಣಿಸುವುದೇ ಹೆಚ್ಚು. ಈ ಹೊತ್ತು ಈ ಪ್ರವೃತ್ತಿ ವಿಶೇಷವಾಗಿ ತೋರಿದೆ. ನವ್ಯತೆಯ ಹೆಸರಿನಲ್ಲಿ ಪರಂಪರೆಯನ್ನು ಕುರಿತ ಅವಜ್ಞೆಯನ್ನು, ಪರಂಪರಾವಿಮುಖತೆಯನ್ನು ನೋಡುತ್ತಿದ್ದೇವೆ. ವಾಸ್ತವವಾಗಿ, ಈ ಎರಡೂ ಪ್ರವೃತ್ತಿಗಳು – ಎಂದರೆ ಹಳೆಯದು ಮಾತ್ರ ಶ್ರೇಷ್ಠವೆಂದು ಕೊಂಡಾಡುವುದು, ಇಲ್ಲವೆ ಹೊಸತು ಮಾತ್ರ ಪರಮೋತ್ಕೃಷ್ಟವೆಂದು ಪೂಜಿಸುವುದು–ಸರಿಯಲ್ಲವೆಂದು ಹೇಳಬೇಕಾಗುತ್ತದೆ.

ಈ ಸಂದರ್ಭದಲ್ಲಿ ಕಾಳಿದಾಸ ಒಂದೆಡೆ ಆಡಿರುವ ಮಾತನ್ನು ನೆನೆಯಬಹುದು : ''ಪುರಾಣಮಿತ್ಯೇವ ನ ಸಾಧು ಸರ್ವಂ''. ಅವನ ಪೂರ್ತಿ ಹೇಳಿಕೆಯ ಅನುವಾದವಿದು :

ಹಳೆಯದೆಂದೇ ಎಲ್ಲವೂ ಒಳ್ಳಿತಲ್ಲ ;
ಹೊಸತೆಂದ ಮಾತ್ರಕ್ಕೆ ಕೃತಿ ದುಷ್ಟವಲ್ಲ-
ಸಜ್ಜನರು ಪರಿಕಿಸಿಯೆ ಒಂದನಾಯುವರು ;
ಮೂಢನಾದರೊ ಪರರ ಮತವ ಹಿಡಿಯುವನು

ಯಾವುದೇ ಆಗಲಿ, ಹಳೆಯದೆಂಬ ಕಾರಣದಿಂದಲೆ ಮಾನ್ಯವಾಗುವುದಿಲ್ಲ; ಅದರಲ್ಲಿ ಸತ್ತ್ವವಿದ್ದರೆ ಖಂಡಿತ ಉಪಾದೇಯವಾಗುತ್ತದೆ. ಅಂತೆಯೆ, ಹೊಸತೆಂಬ ಕಾರಣದಿಂದಲೆ ಯಾವುದೂ ಉತ್ತಮವಾಗುವುದಿಲ್ಲ; ಅದರಲ್ಲಿ ತಿರುಳಿದ್ದರೆ ಸ್ವೀಕಾರ್ಯವಾಗುತ್ತದೆ, ನಿರ್ಗುಣವಾಗಿದ್ದರೆ ಅಗ್ರಾಹ್ಯವೇ. ಈ ಸತ್ಯವನ್ನು ಅನೇಕರು ಮರೆಯುತ್ತಾರೆ. ದೂರಗತವಾದದ್ದು ಆಗಾಗ ಸಾರವತ್ತಾಗಿ ತೋರಬಹುದು, ''ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯಂತೆ. ಆದರೆ ನಮ್ಮ ಕಣ್ಣ ಮುಂದಿರತಕ್ಕದ್ದು, ವರ್ತಮಾನ ಸೀಮಿತವಾದದ್ದು ಸಾಮಾನ್ಯವಾಗಿ ನಮ್ಮ ಗಮನ ಸೆಳೆಯುತ್ತದೆ, ಗೌರವಾದರಗಳಿಗೆ ಪಾತ್ರವಾಗುತ್ತದೆ ; ಕಣ್ಣೆದುರಿಗಿಲ್ಲದ್ದು ಔದಾಸೀನ್ಯಕ್ಕೆ ಪಕ್ಕಾಗುತ್ತದೆ, "out of sight, out of mind" ಎನ್ನುವ ಹಾಗೆ. ಹೀಗಾಗಿ ಪರಂಪರೆ ವಿಸ್ಮೃತವಾಗುತ್ತದೆ ಅಥವಾ ತಿರಸ್ಕಾರ ಭಾಜನವಾಗುತ್ತದೆ. ಈ ದಿಟವನ್ನು ಟಿ.ಎಸ್. ಎಲಿಯಟ್ ಸೊಗಸಾಗಿ

ಹೇಳಿದ್ದಾನೆ : ''ನಮ್ಮ ಕಾಲದಲ್ಲಿ ಒಂದು ಬಗೆಯ ಪ್ರಾಂತೀಯತೆ ಬೆಳೆಯುತ್ತಿದೆ. ಇದು ದೇಶ ಸಂಬಂಧವಾದುದಲ್ಲ, ಕಾಲಸಂಬಂಧವಾದುದು. ಬದುಕಿರುವವರಿಗೆ ಮಾತ್ರ ಇದರಲ್ಲಿ ಸ್ಥಾನ, ಸತ್ತವರಿಗಿಲ್ಲ.'' ಇಂದು ಎಲ್ಲೆಡೆ ಕಂಡುಬರುತ್ತಿರುವ ಪರಂಪರೆಯ ಬಗೆಗಿನ ಅಲಕ್ಷ್ಯ ಅನಾದರಗಳನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಸೂಚಿಸುವುದು ಸಾಧ್ಯವಿಲ್ಲವೆನಿಸುತ್ತದೆ.

ಮಾನವನ ಬದುಕು ನಿಂತ ನೀರಲ್ಲ; ಸದಾ ಪ್ರವಹಿಸುವ ಜೀವನದಿ. ಇದಕ್ಕೆ ಆಗಿಂದಾಗ ಹೊಸ ನೀರು ಬಂದು ಸೇರುತ್ತಲೇ ಇರಬೇಕು. ಆದ್ದರಿಂದ ಜೀವನದಲ್ಲಿ ಕ್ರಾಂತಿ ಪ್ರಗತಿಗಳು ಆವಶ್ಯಕ ಮಾತ್ರವಲ್ಲ, ಅನಿವಾರ್ಯ. ಆದರೆ ಈ ಕ್ರಾಂತಿ ಪ್ರಗತಿಗಳು ಪರಂಪರೆಯ ತಳಹದಿಯ ಮೇಲೆಯೆ ಘಟಿಸಬೇಕೆಂಬುದನ್ನು ಮರೆಯಲಾಗದು. ಹಾಗೆ ಪರಂಪರೆಯ ಪ್ರಜ್ಞೆ ಇಲ್ಲದಿದ್ದಲ್ಲಿ, ನಿಜವಾದ ಪ್ರಗತಿಯಾಗುವುದಿಲ್ಲ; ಅದರ ಆಭಾಸವಾಗಬಹುದು, ಇಲ್ಲವೆ ನವ್ಯತೆಯ ಮುಸುಕಿನಲ್ಲಿ ವಿಕೃತಿಯಾಗ ಬಹುದು. ಪರಂಪರೆಯ ಹಿನ್ನೆಲೆಯಿಲ್ಲದೆ ಶೂನ್ಯದಿಂದ ಯಾವುದನ್ನೂ ಸೃಜಿಸುವುದು ಸಾಧ್ಯವಿಲ್ಲ; ಪರಂಪರೆಯ ಬೆನ್ನೆಲುಬಿಲ್ಲದೆ ಬದುಕಿಲ್ಲ. ಇಲ್ಲಿ ಪರಂಪರೆಯೆಂದರೆ ಶುಷ್ಕ ಕಂದಾಚಾರಗಳು, ಅಂಧ ರೂಡಿಗಳು, ಜಡ ಪದ್ಧತಿಗಳು, ಮೂಢ ನಂಬಿಕೆಗಳು ಎಂದರ್ಥವಲ್ಲ. ಅಂಥವು ಸಂಪೂರ್ಣವಾಗಿ ನಿರುಪಯುಕ್ತ; ಎಂತಲೇ ವರ್ಜನೀಯ. ಯಾವ ಯಾವುದು ತ್ರಿಕಾಲಾಬಾಧಿತವಾದ ಸತ್ತ್ವವನ್ನು ಧಾರಣ ಮಾಡಿ ಕೊಂಡಿರುತ್ತದೊ, ಯಾವ ಯಾವುದು ಬದುಕಿಗೆ ಚಿರಂತನವಾದ ತುಷ್ಟಿಪುಷ್ಟಿಗಳನ್ನೀಯ ಬಲ್ಲುದೊ, ಯಾವ ಯಾವುದು ಅವಿನಾಶಿಯೊ ಅದು ಮಾತ್ರ ಪರಂಪರೆಯನ್ನು ರೂಪಿಸುತ್ತದೆ. ಅದರಲ್ಲಿ ಹಳತು ಹೊಸತು ಎಂಬ ಭೇದವಿಲ್ಲ; ಹಾಗೆ ಭೇದ ಬಗೆಯುವುದು ಹೊಲ್ಲ. ಇಂಥ ಪರಂಪರೆ ಬದುಕಿನ ತಾಯಿಬೇರು.

ನಮ್ಮ ದುರಂತವೇನೆಂದರೆ, ನಾವು ವರ್ತಮಾನದಲ್ಲಿ ಬದುಕುತ್ತೇವೆ ; ಭೂತ ಭವಿಷ್ಯಗಳತ್ತ ದೃಷ್ಟಿ ಹರಿಸುವುದಿಲ್ಲ. ವಾಸ್ತವವಾಗಿ ವರ್ತಮಾನವೆಂಬುದು ಪ್ರತ್ಯೇಕವಾದ, ಸ್ವಯಂಪೂರ್ಣ ಘಟಕವಲ್ಲ; ಅದಕ್ಕೆ ಭೂತದ ಹಿನ್ನೆಲೆಯಿರುತ್ತದೆ, ಭವಿಷ್ಯದ ಮುನ್ನೆಲೆಯಿರುತ್ತದೆ. ಅದು ಭೂತದಿಂದ ಬೇರ್ಪಡುವುದಂತೂ ಶಕ್ಯವೇ ಇಲ್ಲ. ಆದ್ದರಿಂದ ಹಿಂದು ಇಂದು ಮುಂದುಗಳನ್ನು ಬೆಸೆಯುವ ಪೂರ್ಣದೃಷ್ಟಿ ನಮಗೆ ಬೇಕಾಗಿದೆ. ಅದರ ಅಭಾವವೆ ಬಹುಶಃ ಬದುಕಿನ ಸಮಸ್ಯೆಗಳಿಗೆ ಕಾರಣ. ನಾವು ಹಿಂದಕ್ಕೆ ನೋಟ ಚಾಚಿ ಅದರ ಸಾರವನ್ನು ಹೀರಿಕೊಂಡು, ಇಂದಿನ ಬದುಕಿಗೆ ಅಳವಡಿಸಿಕೊಳ್ಳಬೇಕು ; ಅದರ ಬಲದಿಂದ ಮುಂದು ಮುಂದಕ್ಕೆ ಸಾಗಬೇಕು.

ಎಷ್ಟೋ ಸಲ ಮೇಲುನೋಟಕ್ಕೆ ಹೊಸತು ಎಂದು ಕಾಣಿಸತಕ್ಕದ್ದು ಒಳಹೊಕ್ಕು ನೋಡಿದಾಗ ಸಾರತಃ ಹಳೆಯದೆ ಆಗಿರುತ್ತದೆ ಎಂಬುದನ್ನು ಗಮನಿಸಬೇಕು. ದ್ರವ, ದ್ರವ್ಯ ಹಳೆಯದು ; ಸೀಸೆ ಹೊಸತು, ಭಾಷೆ ಪರಿಭಾಷೆಗಳು ಹೊಸವು, ಅಷ್ಟೆ. ನಾವು ಇಂದಿಗೆ ಸೇರಿದವರು, ನವಮಾನವರು ಎಂದುಕೊಳ್ಳುತ್ತೇವೆ. ಇದು ನಿಜವೆ ? ನಮ್ಮ

ಮೈಯಲ್ಲಿ ಹರಿಯುತ್ತಿರುವ ರಕ್ತದಲ್ಲಿ ಎಷ್ಟೊಂದು ಪ್ರಾಚ್ಯ ಸಂಸ್ಕಾರಗಳು, ವಾಸನೆಗಳು ನೆಲೆಗೊಂಡಿಲ್ಲ! ನಮ್ಮ ಬದುಕು ಹೊಸದೊ, ಹಳೆಯದೊ? ಎರಡೂ ಹೌದು. ಈ ಸಂದರ್ಭದಲ್ಲಿ ಕಾವ್ಯವನ್ನು ಕುರಿತ ಪಂಪನ ಒಂದು ಉಕ್ತಿ ನೆನಪಿಗೆ ಬರುತ್ತದೆ: ''ನಿಚ್ಚಂ ಪೊಸತು, ಅರ್ಣವಂಬೊಲ್, ಅತಿ ಗಂಭೀರಂ''. ಸಮುದ್ರ ಹಳೆಯದೋ ಹೊಸದೋ? ಅದಕ್ಕೆ ಪ್ರತಿನಿತ್ಯವೂ ಹಲವಾರು ಹೊಳೆಗಳು ಬಂದು ಸೇರುತ್ತವೆ; ಎಂತಲೇ ಅದು ''ನಿಚ್ಚಂ ಪೊಸತು.'' ಅದು ಗಂಭೀರವೂ ಹೌದು; ಆ ಗಾಂಭೀರ್ಯದಲ್ಲಿ ಅದರ ಹಳಮೆಯೂ ಇದೆ. ಎಂದರೆ ಸಾಗರ ಎಷ್ಟು ನೂತನವೊ ಅಷ್ಟೇ ಪುರಾತನ. ನಮ್ಮ ಜೀವನವೂ ಹಾಗೆಯೆ ಎಂದ ಮೇಲೆ ಪರಂಪರೆ ಹೇಗೆ ತ್ಯಾಜ್ಯವಾದೀತು? ಹಳತು–ಹೊಸತುಗಳಲ್ಲಿ ಯಾವುದೇ ಒಂದನ್ನು ಹೊಗಳುವುದಾಗಲಿ ತೆಗಳುವುದಾಗಲಿ ಹೇಗೆ ಉಚಿತವಾದೀತು? ಸನಾತನ–ನೂತನಗಳ, ಪರಂಪರೆ–ನವ್ಯತೆಗಳ ಸಮನ್ವಯ ಸಾಮರಸ್ಯಗಳೆ ಸಮ್ಯಗ್ ಜೀವನದ ಸ್ವರೂಪ; ಎರಡರ ಸಾರಸಂಗಮದಿಂದಲೇ ಶ್ರೇಯಸ್ಸು. ನಾವು ನೆನಪಿಡಬೇಕು: ಬದುಕಿನ ಯಶಸ್ಸಿನ ಕೀಲಿಯಿರುವುದು ಸಮನ್ವಯದಲ್ಲಿ, ಪೂರ್ಣದೃಷ್ಟಿಯಲ್ಲಿ; ಅತಿರೇಕಗಳಲ್ಲಲ್ಲ, ಖಂಡ ದೃಷ್ಟಿಯಲ್ಲಲ್ಲ.

ಒಂದು ದೃಷ್ಟಾಂತ ಕೊಟ್ಟು ಮುಗಿಸಬಹುದು. ಅಜ್ಜನ ಹೆಗಲ ಮೇಲೆ ಒಬ್ಬ ಮೊಮ್ಮಗ ಕುಳಿತಿದ್ದಾನೆ. ಅಜ್ಜನಿಗೆ ಕಾಣಸದಿರುವ ಎಷ್ಟೋ ವಸ್ತುಗಳು ಅವನಿಗೆ ಸಹಜವಾಗಿಯೇ ಗೋಚರಿಸುತ್ತವೆ. ಅವನು ಅಜ್ಜನ ಹೆಗಲ ಮೇಲೆ ಕುಳಿತಿರುವುದೇ ಅದಕ್ಕೆ ಕಾರಣ ಎಂಬುದನ್ನು ಮರೆಯಕೂಡದು. ಅಜ್ಜನಿಗೆ ಅವು ಕಾಣಸದಿರುವುದು ಸಹಜವೆ. ಆದ್ದರಿಂದ ಮೊಮ್ಮಗ ಅಹಂಕಾರಪಡಬೇಕಾಗಿಯೂ ಇಲ್ಲ, ಅಜ್ಜ ಅವಮಾನಗೊಳ್ಳಬೇಕಾಗಿಯೂ ಇಲ್ಲ. ಇಲ್ಲಿ ಅಜ್ಜ ಪರಂಪರೆಯನ್ನೂ ಮೊಮ್ಮಗ ನವ್ಯತೆಯನ್ನೂ ಪ್ರತಿನಿಧಿಸುತ್ತಾರೆ. ಇಬ್ಬರ ನಡುವೆ ಕಳಚಲಾಗದ ಕೊಂಡಿಯಿದೆ. ಇಬ್ಬರೂ ಒಂದು ಅಖಂಡ ನಿರಂತರ ವಾಹಿನಿಯ ಭಾಗವಾಗಿದ್ದಾರೆ; ಅದು ಅವಿಚ್ಛಿನ್ನವಾದ ಸಂಬಂಧ. ವಿಚ್ಛೇದನ ಎಲ್ಲಿಯೂ ಸಲ್ಲದು.

■■

೪೦. ವಿದ್ಯೆ

ಮಾನವನನ್ನು ಮೃಗಗಳಿಂದ ಬೇರ್ಪಡಿಸತಕ್ಕದ್ದು ಅವನಿಗೆ ದೈವದತ್ತವಾಗಿರುವ ಆಲೋಚನಾಶಕ್ತಿ; ಅದರಿಂದ ಅವನು ಆರ್ಜಿಸಬಹುದಾದ ವಿದ್ಯೆ. ಈ ಕಾರಣ ದಿಂದಲೆ, ವಿದ್ಯಾವಿಹೀನನಾದ ಮನುಜ ಪಶುವಿಗೆ ಸಮಾನ ಎಂದಿದ್ದಾರೆ ಹಿಂದಿನವರು.

ವಿದ್ಯೆಯೆಂದರೇನು ? ಅದು ಬರಿಯ ವಿಷಯಸಂಗ್ರಹವಲ್ಲ; ಕೇವಲ ಮಾಹಿತಿಗಳ ಮೊತ್ತವಲ್ಲ, ಅದೊಂದು ಆತ್ಮಸಂಸ್ಕಾರ, ಮನಃ ಪರಿಪಾಕ, ಚಿತ್ತದ ಆರ್ದ್ರತೆ. ಸಾಕ್ಷರತೆಯೆ ವಿದ್ಯೆಯೆಂದು ನಾವು ಸಾಂಪ್ರದಾಯಿಕವಾಗಿ ತಿಳಿದಿದ್ದೇವೆ ; ಆದರೆ ಇಷ್ಟೇ ಪೂರ್ಣ ವಿದ್ಯೆಯಾಗುವುದಿಲ್ಲ. ನಿಜವಾದ ವಿದ್ಯೆಗೆ ಸೋಪಾನ ಮಾತ್ರವಾಗಬಹುದು. ಮನುಷ್ಯನಲ್ಲಿರುವ ಪಾಶವೀ ಪ್ರವೃತ್ತಿಗಳನ್ನು, ಅಳಿಸಿ, ಅವನ ಹೃದಯವನ್ನು ಪರಿಷ್ಕರಿಸಿ, ಸಂಸ್ಕರಿಸಿ, ಮಾನವೀಯತೆಯನ್ನು ಪ್ರತಿಷ್ಠಾಪಿಸತಕ್ಕದ್ದು ನಿಜವಾದ ವಿದ್ಯೆ. ಸಾಂಪ್ರದಾಯಿಕಾರ್ಥದ ವಿದ್ಯೆ ಈ ಕೆಲಸವನ್ನು ಮಾಡಬಹುದು, ಮಾಡದಿರಬಹುದು.

ಭಾರತೀಯ ಪರಂಪರೆಯಲ್ಲಿ 'ವಿದ್ಯೆ' ಎಂಬ ಮಾತಿಗೆ ವಿಶಾಲತಮವಾದ ಅರ್ಥವಿದೆ. ''ಸಾ ವಿದ್ಯಾ ಯಾ ವಿಮುಕ್ತಯೇ'' ಎಂಬುದೊಂದು ಆರ್ಷಸೂಕ್ತಿ. ಇದರ ಪ್ರಕಾರ, ಮಾನವನನ್ನು ಸಂಸಾರಬಂಧನದಿಂದ ಬಿಡುಗಡೆಗೊಳಿಸಿ, ದೈವತ್ವಕ್ಕೇರಿಸಿ, ಮೋಕ್ಷವನ್ನು ದೊರಕಿಸತಕ್ಕದ್ದೇ ವಿದ್ಯೆ. ಈ ದೃಷ್ಟಿಯಿಂದ ಪರಿಭಾವಿಸಿದಾಗ ವಿದ್ಯೆಯೆಂದರೆ ಜ್ಞಾನ ; ಅವಿದ್ಯೆಯೆಂದರೆ ಅಜ್ಞಾನ, ಮಾಯೆ. ಈ ಅರ್ಥದಲ್ಲಿ ವಿದ್ಯಾವಂತರ ಸಂಖ್ಯೆ ಅತಿ ವಿರಳವೆನ್ನಬೇಕಾಗುತ್ತದೆ.

ಅಂತೂ ಕೇವಲ ಹೊಟ್ಟೆಪಾಡಿಗಾಗಿ ಕಲಿಯುವ ಓದು ಬರಹವಷ್ಟೆ ವಿದ್ಯೆಯಾಗದು. ಅಂಥ ಸಾಕ್ಷರತೆಯಿಂದ ಒಳಿತಾಗುವುದರ ಬದಲು ಅಪಾಯವೆ ಆಗಬಹುದು. ''ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ'' (ಸಾಕ್ಷರರು ವಿಪರೀತರಾದರೆ ರಾಕ್ಷಸರಾಗುತ್ತಾರೆ) ಎಂಬುದು ಬರಿಯ ಚಮತ್ಕಾರೋಕ್ತಿಯಲ್ಲ, ಸತ್ಯಸ್ಯ ಸತ್ಯ.

ಸಂಕುಚಿತಾರ್ಥದಲ್ಲಾಗಲಿ ವ್ಯಾಪಕಾರ್ಥದಲ್ಲಾಗಲಿ ವಿದ್ಯೆ ಮಾನವನ ಒಂದು ಅತ್ಯಮೂಲ್ಯವಾದ ಆಸ್ತಿ. ಅದರ ಹಿರಿಮೆ ಗರಿಮೆಗಳನ್ನು ಪ್ರತಿಪಾದಿಸುವ ಅನೇಕ ಸುಭಾಷಿತಗಳು ಸಂಸ್ಕೃತದಲ್ಲಿವೆ. ''ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ'' (ಇಂದ್ರಿಯಗಳಲ್ಲೆಲ್ಲ ಕಣ್ಣು ಪ್ರಧಾನ) ಎಂದು ಹೇಳುತ್ತಾರೆ ; ಅಂತೆಯೆ ''ವಿದ್ಯಾಧನಂ ಸರ್ವಧನ ಪ್ರಧಾನಂ'' (ಎಲ್ಲ ಧನಗಳಿಗಿಂತ ವಿದ್ಯಾಧನ ಪ್ರಧಾನ). ಕಣ್ಣು ಬಾಹ್ಯಚಕ್ಷುವಾದರೆ ವಿದ್ಯೆ ಅಂತಶ್ಚಕ್ಷು. ಈ ವಿದ್ಯಾಧನದ ವೈಶಿಷ್ಟ್ಯವೆಂದರೆ, ಅದನ್ನು

ಕಳ್ಳರು ಕದಿಯಲಾರರು, ರಾಜರು ಕಿತ್ತುಕೊಳ್ಳಲಾರರು, ಸೋದರರು ಹಂಚಿಕೊಳ್ಳಲಾರರು ; ಅಷ್ಟೇ ಅಲ್ಲ ಖರ್ಚು ಮಾಡಿದಷ್ಟೂ ಅದು ವೃದ್ಧಿಸುತ್ತ ಹೋಗುತ್ತದೆ. ವಿದ್ಯೆಯಿಂದ ಸಂಪತ್ತನ್ನು ಆರ್ಜಿಸಬಹುದು, ಆದರೆ ಸಂಪತ್ತಿನಿಂದ ವಿದ್ಯೆಯನ್ನು ಆರ್ಜಿಸುವ ಭರವಸೆಯಿಲ್ಲ. ಎಂತಲೇ ವಿದ್ಯಾಧನ ಸರ್ವೋತ್ತಮವಾದುದು.

ವಿದ್ಯೆ ಕಲ್ಪವೃಕ್ಷದಂತೆ ಏನೇನನ್ನು ಸಾಧಿಸುತ್ತದೆ ಎಂಬುದನ್ನು ನಿರೂಪಿಸುತ್ತದೆ, ಈ (ಸಂಸ್ಕೃತ) ಸೂಕ್ತಿ:

ಮಾತೆಯೊಲು ಕಾಯುವುದು, ಪಿತನಂತೆ ಹಿತದಿ ಯೋಜಿಪುದು,
ಕಾಂತೆಯೊಲು ದುಃಖವನು ನೀಗಿ ಸಂತೋಷಗೊಳಿಸುವುದು,
ದಿಕ್ಕುದಿಕ್ಕಿಗೆ ಕೀರ್ತಿಯನು ಹರಡುವುದು, ಸುಖವ ತಹುದು-
ಕಲ್ಪಲತೆಯೊಲು ವಿದ್ಯೆ ಯಾವಯಾವುದನು ಸಾಧಿಸದು ?

ವಿದ್ಯೆಯಿಂದ ಏನು ತಾನೆ ಸಿದ್ಧಿಸದು ? ಇಹಪರಗಳೆರಡರ ಲಾಭವೂ ಉಂಟು ಆದರಿಂದ :

ವಿದ್ಯೆ ವಿನಯವನೀಯುವುದು, ಆ ವಿನಯದಿಂದ ಯೋಗ್ಯತೆಯು ಬಹುದು,
ಯೋಗ್ಯತ್ವದಿಂದ ಧನ, ಧನದಿಂದ ಧರ್ಮ, ಆ ಧರ್ಮದಿಂ ಸೌಖ್ಯ.

ವಿದ್ಯೆ ಎಲ್ಲಕ್ಕಿಂತಲೂ ಮಿಗಿಲಾದ ಆಭರಣ :

ನಕ್ಷತ್ರಗಳಿಗೆ ಭೂಷಣ ಚಂದ್ರ, ಸತಿಯರಿಗೆ ಪತಿ ಭೂಷಣ,
ಧರೆಗೆ ಭೂಷಣ ರಾಜ, ವಿದ್ಯೆಯಾದರೊ ಎಲ್ಲಕೂ ಭೂಷಣ.

ವಿದ್ಯಾಶಾಲಿಗಳಿಗೆ ವಸ್ತ್ರಾಭರಣವಿಲೇಪನಾದಿಗಳ ಆಡಂಬರದ ಅಗತ್ಯವಿಲ್ಲ, ಆದ್ದರಿಂದಲೇ ;

ವಿದ್ಯೆಯನು ಪರಿಕಿಪುದು ; ಅಂಬರಾಡಂಬರದೊಳೇನು ?-
ಶಂಭು ಅಂಬರಹೀನನಾದರೂ ಸರ್ವಜ್ಞನಹುದು.

ವಿದ್ಯೆಯಿಲ್ಲದಿದ್ದಲ್ಲಿ ಉಚ್ಚಕುಲ, ರೂಪ, ಯೌವನ ಎಲ್ಲವೂ ವ್ಯರ್ಥ ; ಅಂಥ ಜನ ಮುತ್ತುಗದ ಹೂವುಗಳ ಹಾಗೆ ಎಂದು ಹೇಳಲಾಗಿದೆ :

ದೊಡ್ಡ ಕುಲದೊಳು ಹುಟ್ಟಿ, ರೂಪಯೌವನಗಳನು ಪಡೆದು,ವಿದ್ಯೆಯನು
ಪಡೆಯದಿಹ ಜನ ಗಂಧಹೀನ ಮುತ್ತುಗದ ಹೂಗಳೊಲು ಶೋಭಿಸರು.

ಮುತ್ತುಗದ ಹೂವು ಅಗಲವಾಗಿರುತ್ತದೆ ; ನೋಡುವುದಕ್ಕೆ ಚೆನ್ನು, ಆದರೆ ನಿಷ್ಪ್ರಯೋಜಕ : ಮಾನವರಿಗೂ ಸಲ್ಲದು, ದೇವರಿಗೂ ಸಲ್ಲದು.

ವಿದ್ಯೆಯನ್ನು ಅತ್ಯಲ್ಪ ಕಾಲದಲ್ಲಿ ಸಂಪಾದಿಸುವುದು ಸಾಧ್ಯವಿಲ್ಲ; ಅದು ಶ್ರದ್ಧಾಪೂರ್ವಕವಾಗಿ ಸಾವಕಾಶವಾಗಿ ಸಾಧಿಸಬೇಕಾದ ವಸ್ತು :

ದಾರಿಯನು ಕನ್ನೆಯನು ಬೆಟ್ಟದುದಿಯನು ವಿದ್ಯೆಯನು ಸಂಪದವನು-
ಈ ಐದನೂ ಮನುಜ ದುಡುಕದೆಯೆ ಮೆಲ್ಲ ಮೆಲ್ಲನೆ ಸಾಧಿಸುವುದು.

ಧನವನ್ನು ಕ್ಷಣಕ್ಷಣವಾಗಿಯೂ ವಿದ್ಯೆಯನ್ನು ಕಣಕಣವಾಗಿಯೂ ಸಂಚಯಿಸಬೇಕಂತೆ.

ಚಣಚಣವಾಗಿಯೆ ವಿದ್ಯೆಯ ಗಳಿಪುದು, ಕಣಕಣವಾಗಿಯೆ ಅರ್ಥವನು ;
ಚಣವನು ಬಿಟ್ಟರೆ ವಿದ್ಯೆಯದೆಲ್ಲಿದೆ, ಕಣವಿಲ್ಲದೆ ಅರ್ಥವದುಂಟೆ ?

ಹನಿಗೂಡಿ ಹಳ್ಳ, ನಿಜ. ಆದರೆ ಇದು ಹಿಂದಿನ ಕಾಲದ ಮಾತಾಯಿತು ; ಈ ಕಾಲಕ್ಕೆ ಇದು ಪೂರ್ತಿ ಅನ್ವಯಿಸಲಾರದು. ಇಂದು ಲಾಟರಿಯೆ ಮೊದಲಾದ ವಿಧಾನಗಳಿಂದ ವ್ಯಕ್ತಿ ದಿಢೀರನೆ ಶ್ರೀಮಂತನಾಗಿಬಿಡಬಹುದು ; ಆದರೆ ದಿಢೀರ್ ಪಾಂಡಿತ್ಯ ಇಂದಿಗೂ ಸಾಧ್ಯವಿಲ್ಲ. ಜ್ಞಾನಾರ್ಜನೆಗೆ ಈಗ ಹಿಂದಿಗಿಂತ ಹೆಚ್ಚು ಸೌಲಭ್ಯಗಳಿವೆ; ಹಲಬಗೆಯ ಕೋಶಗಳು ಬೇಕಾದ ಮಾಹಿತಿಯನ್ನು ತತ್‌ಕ್ಷಣವೇ ಒದಗಿಸುತ್ತವೆ. ಆದರೂ ಹಣವನ್ನು ಆರ್ಜಿಸುವಷ್ಟು ಸುಲಭವಾಗಿ ವಿದ್ಯೆಯನ್ನು ಆರ್ಜಿಸುವುದು ಈಗಲೂ ಅಶಕ್ಯ. ನಿರಂತರ ಶ್ರದ್ಧೆ ನಿಷ್ಠೆ ತದೇಕಚಿತ್ತಗಳಿಂದಲೇ ಪರಿಪೂರ್ಣ ವಿದ್ಯಾಸಂಪಾದನೆ. ವಿದ್ಯಾಸಾಧನೆಗೆ ನಿರಂತರ ಪ್ರಯತ್ನಶೀಲತೆ ಬೇಕೆಂಬುದನ್ನು ಈ ಸೂಕ್ತಿಯೂ ತಿಳಿಸುತ್ತದೆ :

ನೆಲವ ತೋಡುತ್ತ ತೋಡುತ್ತ ನರನೆಂತು ನೀರನು ಪಡೆವನೊ,
ಅಂತು ಗುರುವಿನೊಳಿರುವ ವಿದ್ಯೆಯನು ಶುಶ್ರೂಷೆಯಿಂ ಗಳಿಪನು.

ಒಟ್ಟಿನಲ್ಲಿ ಸದಸದ್ ವಿವೇಚನೆ, ಸದಾಚಾರ, ಮಾನವೀಯತೆಗಳನ್ನು ಒಳಗೊಳ್ಳುತ್ತದೆ, ಸಮೀಚೀನವಾದ ವಿದ್ಯೆ. ಅದು ಒಣ ವಿದ್ವತ್ತಷ್ಟೆ ಆಗಬಾರದು ; ಪ್ರದರ್ಶನಸಾಮಗ್ರಿಯಾಗಬಾರದು. ಸ್ವಾಮಿ ವಿವೇಕಾನಂದರು ಲೋಕಕ್ಕೆ ನೀಡಿದ ಸಂದೇಶವನ್ನಿಲ್ಲಿ ಸ್ಮರಿಸಬಹುದು : ''ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'' (ವ್ಯಕ್ತಿಯ ಮೋಕ್ಷಕ್ಕಾಗಿ, ಜಗತ್ತಿನ ಹಿತಕ್ಕಾಗಿ). ವಿದ್ಯೆಯ ಧ್ಯೇಯವೂ ಇದೇ. ಅದು ವ್ಯಕ್ತಿಯನ್ನು ಉದ್ಧರಿಸಬೇಕು ; ಸಮಾಜದ ಹಿತವನ್ನೂ ಸಾಧಿಸಬೇಕು. ಆಗ ಮಾತ್ರವೇ ಅದು ಸಾರ್ಥಕವಾಗುವುದು. ಕೇವಲ ಸ್ವಾರ್ಥಸಾಧಕವಾಗುವ ವಿದ್ಯೆ ನಿಜವಾದ ವಿದ್ಯೆಯಲ್ಲ ; ಅದು ಅವಿದ್ಯೆ ಅಥವಾ ಕುವಿದ್ಯೆಯಷ್ಟೆ.

■■

೪೧. ದೈವ-ಪುರುಷಕಾರ

ಈ ಸೃಷ್ಟಿಯ ಹಿಂದೆ, ಅತೀತವಾಗಿ ಯಾವುದೋ ಒಂದು ಶಕ್ತಿ, ಅರ್ಥಾತ್ ದೈವ ಎಂಬುದು ಉಂಟೆ ಅಥವಾ ಇಲ್ಲವೆ, ಇದ್ದರೆ ಅದಕ್ಕೂ ಮಾನವನಿಗೂ ಏನು ಸಂಬಂಧ, ಬದುಕಿನಲ್ಲಿ ದೈವದ ಪಾತ್ರ ಎಷ್ಟು, ಪುರುಷಕಾರದ ಪಾಲೆಷ್ಟು ಮುಂತಾದುವು ಅನಾದಿ ಕಾಲದಿಂದಲೂ ಮಾನವನನ್ನು ಕಾಡುತ್ತ ಬಂದಿರುವ ಪ್ರಶ್ನೆಗಳು. ಈ ಹೊತ್ತಿಗೂ ಇವಕ್ಕೆ ಸರ್ವಸಮ್ಮತವಾದ ಉತ್ತರ ಸಿಕ್ಕಿಲ್ಲ; ಮುಂದೆ ಸಿಕ್ಕುವ ಸಂಭವವೂ ಇಲ್ಲ. ಕಡೆಗೂ ಇದು ಅವರವರ ಅನುಭವಕ್ಕೆ ಸಂಬಂಧಿಸಿದ ವಿಷಯವಾಗಿಯೆ ಉಳಿದೀತು.

ದೈವವನ್ನೆ ನಂಬದ ನಾಸ್ತಿಕ ಯಾವ ಮಾನಸಿಕ ಹೋರಾಟಕ್ಕೂ ಗುರಿಯಾಗ ಬೇಕಿಲ್ಲ; ಅವನು ಹೆನ್ಲಿ ಕವಿಯಂತೆ, "I am the master of my fate. I am the captain of my soul" ಎಂದು ಆತ್ಮಪ್ರತ್ಯಯದಿಂದ ಉಗ್ಗಡಿಸಬಹುದು. ಸಮಸ್ಯೆಗಳಿಗೆ, ತಾಕಲಾಟಕ್ಕೆ ಗುರಿಯಾಗತಕ್ಕದ್ದು ದೇವರನ್ನು ನಂಬುವ ಆಸ್ತಿಕ ಚೇತನ. ದೈವ ದೊಡ್ಡದೆ, ಪುರುಷಕಾರ ದೊಡ್ಡದೆ, ಎರಡಕ್ಕೂ ಇರುವ ಸಂಬಂಧ ಎಂತಹುದು–ಇವೇ ಮೊದಲಾದ ಪ್ರಶ್ನೆಗಳು ಅದಕ್ಕೆ ಎದುರಾಗುತ್ತವೆ ; ಶ್ರದ್ಧೆ–ಸಂಶಯಗಳ ನಡುವೆ ತೂಗಾಡುವಂತೆ ಮಾಡುತ್ತವೆ.

ಭಾರತೀಯ ಜ್ಞಾನದ ತವನಿಧಿಯಾದ ಸಂಸ್ಕೃತದಲ್ಲಿ ಈ ಬಗ್ಗೆ ಬೇಕಾದಷ್ಟು ಸುಭಾಷಿತ, ಮುಕ್ತಕಗಳು ಸಿಗುತ್ತವೆ. ಇವುಗಳಲ್ಲಿ ಮೂರು ವರ್ಗ : ದೈವದ ಪಾರಮ್ಯವನ್ನೂ ಅನುಲ್ಲಂಘನೀಯ ಸಾಮರ್ಥ್ಯವನ್ನೂ ಬಿತ್ತರಿಸತಕ್ಕವು ಕೆಲವು; ಪುರುಷಕಾರದ ಮಹಿಮೆಯನ್ನು ಎತ್ತಿ ಹೇಳತಕ್ಕವು ಇನ್ನು ಕೆಲವು ; ಸುವರ್ಣ ಮಧ್ಯಮ ಸೂತ್ರವನ್ನು ಸಾರತಕ್ಕವು ಮತ್ತೆ ಕೆಲವು. ಪ್ರಾಯಶಃ ಇಂದು ನಮಗೆ ಹೆಚ್ಚು ಉಪಾದೇಯವೂ ಮಾರ್ಗದರ್ಶಕವೂ ಆಗತಕ್ಕವು ಮೂರನೆಯ ವರ್ಗದ ಸೂಕ್ತಿಗಳು ; ಪೂರ್ಣಸತ್ಯ ಅವುಗಳಲ್ಲಿದೆ ಎನಿಸುತ್ತದೆ.

ಪುರುಷಕಾರದ ನಿಷ್ಫಲತೆಯನ್ನೂ ದೈವದ ಪ್ರಾಬಲ್ಯವನ್ನೂ ನಿದರ್ಶನ ಪೂರ್ವಕವಾಗಿ ನಿರೂಪಿಸುತ್ತದೆ ಈ ಸೂಕ್ತಿ :

ರವಿಶಶಿಗಳಿಗೆ ಕೂಡ ಗ್ರಹಪೀಡೆಯುಂಟು ;
ಗಜಭುಜಂಗಮಗಳಿಗೆ ಕೂಡ ಸೆರೆಯುಂಟು ;
ಬುದ್ಧಿವಂತರಿಗೆ ದಾರಿದ್ರ್ಯ-ಇದ ನೋಡಿ,
ತಿಳಿಯುವೆನು ವಿಧಿಯೆ ಬಹು ಬಲಿಶಾಲಿಯೆಂದು.

ಅಂತೆಯೇ ಪೌರಾಣಿಕ ಪ್ರತಿಮೆಯೊಂದನ್ನು ಬಳಸಿಕೊಂಡಿರುವ ಈ ಸೂಕ್ತಿಯೂ ಗಮನಾರ್ಹ.

ಎಲ್ಲೆಲ್ಲಿಯೂ ಫಲಿಸುವುದು ದೈವ, ವಿದ್ಯೆ ಪೌರುಷಗಳಲ್ಲ :
ಕಡಲ ಕಡೆಹದಿ ಹರಿಗೆ ಲಕ್ಷ್ಮಿ ಸಿಕ್ಕಿದಳು, ವಿಷ ಹರನಿಗಾಯ್ತು.

ಇಂಥ ಮಾತುಗಳಲ್ಲಿ, ದೈವಬಲದ ಮುಂದೆ ಮನುಷ್ಯಪ್ರಯತ್ನ ನಿರರ್ಥಕವೆಂಬ ಹತಾಶೆಯ ನಿಟ್ಟುಸಿರಿದ್ದರೆ, ಮುಂದಿನ ಸೂಕ್ತಿಯಲ್ಲಿ ಪುರುಷಕಾರದ ಜಯ ಘೋಷವಿದೆ :

ಉದ್ಯೋಗಶೀಲನಹ ಪುರುಷನಿಗೆ ಒಲಿಯುವಳು ಲಕ್ಷ್ಮಿ!
ದೈವದಿಂ ಬಹುದೆಂದು ಹೇಳುವುದು ಕಾಪುರುಷವಚನ :
ದೈವವನು ಮೆಟ್ಟುತ್ತೆ ಸ್ವಶಕ್ತಿಯೊಳು ಪೌರುಷವನೆಸಗು !
ಯತ್ನಿಸಿಯು ಸಿದ್ಧಿಸದೆ ಹೋದರೇನುಂಟಲ್ಲಿ ದೋಷ ?

ಈ ದಿಶೆಯಲ್ಲಿ ಈ ನುಡಿಯನ್ನೂ ಲಕ್ಷಿಸಬಹುದು :

ಸ್ವಪ್ರಯತ್ನದಿ ಹಿಂದೆ ಗೈದ ಕರ್ಮವನೆ ಜನ ವಿಧಿಯೆಂಬರು !
ಆದರಿಂದ, ಸತ್ಪ್ರಯತ್ನವ ಗೈದು ವಿಧಿಯ ನರ ತೊಡೆಯಬಲ್ಲ

ಇದುತನಕ ನಾವು ನೋಡಿದವು ಎರಡು ವಿಭಿನ್ನ ಪಕ್ಷಗಳು. ನಮಗೆ ಬೇಕಾದದ್ದು ಇವುಗಳ ಹೊಂದಾಣಿಕೆ. ವಾಸ್ತವವಾಗಿ, ದೈವ ಕೃಪೆ ಮತ್ತು ಪುರುಷಕಾರ ಪರಸ್ಪರ ಪೂರಕವಾದವು. ಎರಡು ಕೈ ಸೇರಿ ಹೇಗೆ ಚಪ್ಪಾಳೆಯೋ ಹಾಗೆ ದೈವ ಬಲ–ಪುರುಷಕಾರಗಳ ಸಂಗಮವೆ ಮನುಷ್ಯ ಜೀವನ. ದೈವ ಎಲ್ಲವನ್ನೂ ಮೀರಿದ್ದು, ದೈವ ಸಂಕಲ್ಪವಿಲ್ಲದೆ ಯಾವುದೂ ಆಗದು, ನಿಜ; ಹಾಗೆಂದು ಮಾನವ ಸ್ವಪ್ರಯತ್ನವನ್ನು ಬಿಟ್ಟು, ಕೈಕಟ್ಟಿ ಕುಳಿತುಕೊಳ್ಳುವುದು ಸಲ್ಲದು :

ದೈವೇಚ್ಛೆಯಂತಾಗಲೆಂದು ಉದ್ಯೋಗವನು ಬಿಡಬಾರದು :
ಯತ್ನ ಮಾಡದೆ ಯಾರು ಎಳ್ಳಿನಿಂದೆಣ್ಣೆಯನು ಪಡೆಯಬಹುದು ?

ನರ ದೈವವನ್ನು ನಂಬಬೇಕು ; ದೈವೀಕೃಪೆಗಾಗಿ ಹಾರೈಸಿ ಪ್ರಾರ್ಥಿಸಬೇಕು ; ಜೊತೆ ಜೊತೆಯಲ್ಲೆ ತನ್ನಿಂದ ಸಾಧ್ಯವಾದುದನ್ನೆಲ್ಲ ಮಾಡಬೇಕು ಪರಮಾವಧಿ ಪುರುಷಕಾರವನ್ನು ಮೆರೆಯಬೇಕು. ಸನ್ಮಾರ್ಗದಲ್ಲಿ ಪ್ರಯತ್ನ ಪರನಾದವನಿಗೆ ದೇವರು ಒಲಿಯದಿರುವುದಿಲ್ಲ.

ಪುರುಷಕಾರ ಹಾಗೂ ದೈವದ ಅನ್ಯೋನ್ಯತೆಯನ್ನು ಸೊಗಸಾಗಿ ತಿಳಿಸುತ್ತದೆ, ಈ ಸೂಕ್ತಿ :

ಒಂದೆ ಚಕ್ರದಲಿ ರಥ ಚಲಿಸಲಾರದದೆಂತು,
ಪುರುಷಕಾರವನುಳಿದು ದೈವ ಸಿದ್ಧಿಸದಂತು

ದೈವ–ಪುರುಷಕಾರಗಳ ಸಾಮರಸ್ಯವನ್ನು ಮುಂದಿನ ಸುಭಾಷಿತವೂ ಮನಂಬುಗುವಂತೆ ತಿಳಿಸುತ್ತದೆ :

ಪುರುಷಕಾರವೆ ಕ್ಷೇತ್ರ, ದೈವವೇ ಬೀಜ ;
ಕ್ಷೇತ್ರ-ಬೀಜ ಸಮಾಗಮದಿ ಬೆಳೆಯ ಹುಲುಸು

ಬೆಳೆ ಬರಬೇಕಾದರೆ ಕ್ಷೇತ್ರ, ಬೀಜ ಎರಡೂ ಬೇಕು; ಒಂದನ್ನುಳಿದು ಮತ್ತೊಂದಿಲ್ಲ. ಈ ಎರಡನ್ನೂ ಹೊಂದಿಸಿಕೊಂಡಾಗ ಮಾನವ ಸುಖಿಯಾಗುತ್ತಾನೆ, ಯಶಸ್ವಿಯಾಗುತ್ತಾನೆ. ಜೀವನ ರಹಸ್ಯದ ಕೀಲಿಕೈ ಬಹುಶಃ ಈ ಸಮನ್ವಯದಲ್ಲಿದೆ.

■■

೪೨. ಧರ್ಮ-ಅರ್ಥ

ಮನುಷ್ಯನ ದುರ್ದೈವವೆಂದರೆ, ಅವನ ಬುದ್ಧಿಭಾವಗಳ ನಡುವೆ ಸಂಪೂರ್ಣವಾದ ಹೊಂದಾಣಿಕೆ ಸಾಧ್ಯವಾಗುವುದಿಲ್ಲ ಎಂಬುದು. ಬುದ್ಧಿಗತವಾದದ್ದು ಭಾವಗತವಾಗುವುದಿಲ್ಲ; ಮೆದುಳು ಒಪ್ಪಿದುದನ್ನು ಹೃದಯ ಸ್ವೀಕರಿಸುವುದಿಲ್ಲ; ಒಂದು ಏರಿಗೆಳೆದರೆ ಇನ್ನೊಂದು ನೀರಿಗೆಳೆಯುತ್ತದೆ.

ಈ ಶರೀರ ನಿತ್ಯವಲ್ಲ, ಐಹಿಕ ಸುಖ ಭೋಗ ವಿಭವಗಳು ಅಶಾಶ್ವತ ಎಂಬುದನ್ನು ಇದುವರೆಗೆ ಎಷ್ಟು ಜನ ಬೋಧಿಸಿಲ್ಲ! ಯಾರಿಗೆ ತಾನೆ ಈ ಸತ್ಯ ಗೊತ್ತಿಲ್ಲ? ಆದರೆ ಹಾಗೆಂದು ಹೃತ್ಪೂರ್ವಕವಾಗಿ ನಂಬಿ, ವೈರಾಗ್ಯ ತಾಳಿ, ಸಂಸಾರವನ್ನು ತೊರೆದವರು ಎಷ್ಟು ಮಂದಿ? ಅಂಥವರ ಸಂಖ್ಯೆಯನ್ನು ಬೆರಳುಗಳಿಂದ ಎಣಿಸಿ ಬಿಡಬಹುದೇನೋ. ಶೇಕಡ ತೊಂಬತ್ತೊಂಬತ್ತು ಮಂದಿ ಈ ದೇಹ ನಿತ್ಯವೆಂಬಂತೆ, ಬದುಕಿನ ಸುಖ ಸಂಪತ್ತುಗಳು ಸ್ಥಿರವೆಂಬಂತೆ ವರ್ತಿಸುವವರೆ. ಹೊನ್ನು ಹೆಣ್ಣು ಮಣ್ಣುಗಳು ಬೇಕು, ಅಧಿಕಾರ ಬೇಕು, ಕೀರ್ತಿ ಬೇಕು–ಈ ಬಯಕೆಗಳು ಯಾರನ್ನು ತಾನೆ ಬಿಟ್ಟಿವೆ?

ಆದರೆ ಇವೆಲ್ಲ ನಿಲ್ಲತಕ್ಕವಲ್ಲ, ನಿಜವಾದ ಸುಖವೆಂಬುದು ಇವುಗಳಾಚೆಗಿದೆ ಎಂಬುದನ್ನು ಅನೇಕ ಮಹನೀಯರು ತಮ್ಮ ತಮ್ಮ ವಿಶಿಷ್ಟ ರೀತಿಯಲ್ಲಿ ಸಾರಿದ್ದಾರೆ; ಇತರರಿಗೆ ದಾರಿ ತೋರಿದ್ದಾರೆ. ಅಂಥವರ ಕೆಲವು ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಐಹಿಕವಾದುದೆಲ್ಲ ಅನಿತ್ಯ ಎಂಬುದನ್ನು ಪಂಪಕವಿ ಹೃದ್ಯವಾಗಿ ಉದ್ಘೋಷಿಸಿದ್ದಾನೆ: ''ಅಮರೇಂದ್ರೋನ್ನತಿ, ಖೇಚರೇಂದ್ರ ವಿಭವಂ, ಭೋಗೀಂದ್ರ ಭೋಗಂ, ಮಹೇಂದ್ರ ಮಹೈಶ್ವರ್ಯಂಗಳಿವೆಲ್ಲಮಧ್ರುವಂ''. ಕಾಲರಾಯ ಎಲ್ಲವನ್ನೂ ನುಂಗಿ ನೊಣೆಯುತ್ತಾನೆ ಎಂಬ ಕಟುಸತ್ಯವನ್ನು ಭರ್ತೃಹರಿ ಸ್ವಾರಸ್ಯಪೂರ್ಣವಾಗಿ ನಿರೂಪಿಸುವ ರೀತಿಯಿದು:

ಸಾ ರಮ್ಯಾ ನಗರೀ ಮಹಾನ್ಸ ನೃಪತಿಸ್ಸಾಮಂತಚಕ್ರಂ ಚ ತ-
ತ್ಪಾರ್ಶ್ವೇ ತಸ್ಯ ಚ ಸಾ ವಿದಗ್ಧ ಪರಿಷತ್ತಾಶ್ಚಂದ್ರ ಬಿಂಬಾನನಾ
ಉದ್ವೃತ್ತಸ್ಸ ಚ ರಾಜಪುತ್ರ ನಿವಹಸ್ತೇ ಬಂದಿನಸ್ತಾ ಕಥಾ
ಸರ್ವಂ ಯಸ್ಯ ವಶಾದಗಾತ್ ಸ್ಮೃತಿಪಥಂ ಕಾಲಾಯ ತಸ್ಮೈ ನಮಃ

(ಆ ಸುಂದರ ನಗರೀ, ಆ ದೊರೆ, ಆ ಸಾಮಂತರು, ಆ ರಾಜನ ಪಕ್ಕದ ವಿದ್ವಾಂಸರ ಗೋಷ್ಠಿ, ಆ ಚಂದ್ರವದನೆಯರು, ಆ ಉದ್ಧತ ರಾಜಪುತ್ರರು, ಆ ವಂದಿಮಾಗಧರು, ಆ ಕಥೆಗಳು–ಎಲ್ಲವೂ ಯಾರ ದೆಸೆಯಿಂದ ಕೇವಲ ನೆನಪುಗಳಾದುವೋ ಆ ಕಾಲನಿಗೆ ನಮಸ್ಕಾರ.)

ನಾವು ನೆಚ್ಚಿಕೊಂಡಿರುವ ಈ ಶರೀರ ಹೇಯವಾದುದು, ಕ್ಷಣ ಭಂಗುರವಾದುದು : ಇದು ಎಂದಿದ್ದರೂ ಮೃತ್ಯುವಿಗೆ ತುತ್ತಾಗಲೇ ಬೇಕು. ಇದನ್ನು ರಕ್ಷಿಸಿಕೊಳ್ಳುತ್ತೇವೆ ಎನ್ನುವುದು ಮರುಳತನ. ಈ ತಥ್ಯವನ್ನು ಒಂದು ಸ್ವಾರಸ್ಯಯುತ ವಾದ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುತ್ತದೆ, ಈ ಸುಭಾಷಿತ :

ಸಾವು ನಗುವುದು ದೇಹರಕ್ಷಕನ ಕಂಡು ;
ಧನರಕ್ಷಕನ ಕಂಡು ನಗೆ ವಸುಂಧರೆಗೆ ;
ಮಕ್ಕಳಲಿ ವಾತ್ಸಲ್ಯದಳೆದ ಗಂಡನನು
ಕಂಡು ನಗುವಳು ದುಶ್ಚರಿತೆಯಾದ ಹೆಣ್ಣು

ಮೃತ್ಯು ಯಾರನ್ನೂ ಬಿಡುವುದಿಲ್ಲ; ನಿಜವಾದ ಸಮತಾವಾದಿ ಯಮನೊಬ್ಬನೆ. ಮಕ್ಕಳು ತರುಣರು ವೃದ್ಧರು ಎನ್ನದೆ ಎಲ್ಲರನ್ನೂ ವಿಧಿ ಬಲಿ ತೆಗೆದುಕೊಳ್ಳುತ್ತದೆಂಬ ದಿಟವನ್ನು ನಾಗಚಂದ್ರಕವಿ ಗಿಡಮರಗಳ ಹಾಗೂ ಮದ್ದಾನೆಯ ರೂಪಕಗಳಿಂದ ಪ್ರಕಟಿಸುತ್ತಾನೆ :

ಯುವ ಸಪ್ತಚ್ಛದಮಂ ವಯಃ ಪರಿಣತ ಶ್ರೀಖಂಡಮಂ ಬಾಳ ಶಾ
ಳಿವನ ಶ್ರೇಣಿಗಳಂ ಪಡಲ್ವಡಿಸಿ ನಾನಾ ದೇಹಭೂಜಂಗಳಂ
ಕವಳಂಗೊಂಡು ಕಲಂಕಿದತ್ತು ಪಲವುಂ ಪಾತಾಳ ಕಾಸಾರಮಂ
ಭವಕಾಂತಾರದೊಳದ್ಭುತಂ ವಿಧಿಮದೋನ್ಮತ್ತೇಭವಿಕ್ರೀಡಿತಂ

''ಜಾತಸ್ಯ ಮರಣಂ ಧ್ರುವಂ'' (ಹುಟ್ಟಿದವನಿಗೆ ಸಾವು ತಪ್ಪದು) ಎಂಬ ಮಾತು ಸುಪರಿಚಿತ. ಇದನ್ನೆ ಶ್ರೀ ಹರ್ಷಕವಿ ಕಾವ್ಯಾತ್ಮಕವಾಗಿ ಹೇಳುತ್ತಾನೆ :

ಹುಟ್ಟಿದಾಗಲೆ ಬಂದು ಮಗುವನು ತಬ್ಬಿಕೊಳುವುದನಿತ್ಯತೆ ;
ಬಳಿಕ ತಾಯಪ್ಪುವಳು ದಾದಿಯ ತೆರದಿ-ಶೋಕಿಪುದೇತಕೆ ?

ವಾಸ್ತವವಾಗಿ ಮೃತ್ಯುವೇ ನಮ್ಮ ತಾಯಿ ; ನಾವು ತಾಯಿ ಎಂದು ತಿಳಿಯತಕ್ಕವಳು ದಾದಿ ಮಾತ್ರ.

ಇದೆಲ್ಲ ಸರಿ. ಯಾವುದೂ ಶಾಶ್ವತವಲ್ಲ, ನಿಜ. ಹಾಗಾದರೆ ಏನು ಮಾಡಬೇಕು ? ಎಲ್ಲರೂ ಸಂಸಾರವನ್ನು ತ್ಯಜಿಸಿ ಕಾಡಿಗೆ ಹೋಗುವುದು ಸಾಧ್ಯವೇ ಅಥವಾ ಸಾಧುವೆ ? ಈಗ ಕಾಡು ತಾನೆ ಎಲ್ಲಿದೆ ? ಆದ್ದರಿಂದ ದಾಸರು ಹೇಳಿದಂತೆ, ''ಈಸಬೇಕು, ಇದ್ದು ಜೈಸಬೇಕು.'' ನಾವು ಮಾಡಬಹುದಾದ್ದು ಇಷ್ಟೆ : ಪುರುಷಾರ್ಥ ಗಳಲ್ಲಿ ಧರ್ಮ ಪ್ರಧಾನವೆಂದು ಭಾವಿಸಿ, ಅದನ್ನು ಆಚರಿಸುವುದು ; ಧರ್ಮಕ್ಕೆ ವಿರುದ್ಧವಾಗದ ರೀತಿಯಲ್ಲಿ ಅರ್ಥ, ಕಾಮಗಳನ್ನು ಅನುಭವಿಸುವುದು ; ತನ್ಮೂಲಕ, ಸಾಧ್ಯವಾದಮಟ್ಟಿಗೆ ಇಹಪರಗಳ ಸಮನ್ವಯವನ್ನು ಸಾಧಿಸುವುದು. ಸುಖ ಬೇಡವೆಂದಲ್ಲ; ಆದರೆ ಧರ್ಮವನ್ನು ಮರೆಯಕೂಡದು. ಬದುಕಿನ ಈ ಗುಟ್ಟನ್ನು ಅರ್ಥಗರ್ಭಿತವಾಗಿ ಅರುಹುವ ಸುಭಾಷಿತವೊಂದಿದೆ :

ಮುಪ್ಪು ಸಾವುಗಳು ತನಗಿಲ್ಲವೆನುವಂತೆ
ವಿದ್ಯೆ ಧನಗಳ ಪ್ರಾಪ್ತಿ ಚಿಂತಿಸಲುಬೇಕು;
ಮೃತ್ಯು ಕೇಶವ ಹಿಡಿದು ಎಳೆವುದೆನುವಂತೆ
ಬದುಕಿನಲಿ ಧರ್ಮವನು ಆಚರಿಸಬೇಕು

ಇದನ್ನು ಹೇಳುವುದೇನೊ ಸುಲಭ ; ಆದರೆ ಅನುಷ್ಠಾನಕ್ಕೆ ತರುವುದು ಕಷ್ಟ. ಸಾವು ದುಃಖ ಮುಂತಾದುವೆಲ್ಲ ಬೇರೆಯವರಿಗೆ, ನಮಗಲ್ಲ ಎಂದೇ ತಿಳಿಯುತ್ತೇವೆ– ನಮಗೇ ಅವು ಬರುವತನಕ. ಈ ಸೂಕ್ತಿ ರತ್ನವನ್ನು ಪರಿಭಾವಿಸಬಹುದು :

ದಿನದಿನವು ಪ್ರಾಣಿಗಳು ಅಂತಕಾಲಯವನು ಪ್ರವೇಶಿಸುತ್ತಿಹವು;
ಉಳಿದವರು ನಿತ್ಯತೆಯನೆಳಸುವರು-ಇದಕಿಂತ ಚೋದ್ಯವಿನ್ನೇನು ?

ಹೌದು. ಇದಕ್ಕಿಂತ ಸೋಜಿಗ ಇನ್ನಾವುದಿದೆ ? ಇದಕ್ಕಲ್ಲವೇ ಮಾಯೆ ಎನ್ನುವುದು ?

■■

೪೩. "ಸಂಭವಾಮಿ ಯುಗೇ ಯುಗೇ"

ಉಪನಿಷತ್ತಿನ ಈ ಪ್ರಾರ್ಥನೆ ಆದಿಕಾಲದ ಸಮಸ್ತ ಮನುಕುಲದ ಪ್ರಾರ್ಥನೆಯೂ ಅಹುದು :

ಅಸತೋ ಮಾ ಸದ್ಗಮಯ ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ

(ಅಸತ್ತಿನಿಂದ ಸತ್ತಿಗೆ, ಕತ್ತಲೆಯಿಂದ ಬೆಳಕಿಗೆ, ಸಾವಿನಿಂದ ಅಮರತೆಗೆ ಕರೆದೊಯ್ಯಿ.)

ಮನಃಪೂರ್ವಕವಾದ ಪ್ರಾರ್ಥನೆ ಹಾರೈಕೆಗಳು ಫಲಿಸದಿರುವುದಿಲ್ಲ, ಮಾನವೇತಿಹಾಸದ ಸುದೀರ್ಘಪಥವನ್ನು ಅವಲೋಕಿಸಿದಾಗ, ಅಸತ್ತಿನಿಂದ ಸತ್ತಿನೆಡೆಗೆ, ತಮಸ್ಸಿನಿಂದ ಜ್ಯೋತಿಯೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ನರನ ಯಾತ್ರೆ ಮಂದಗತಿಯಲ್ಲಾದರೂ ನಡೆದಿರುವುದು ಕಂಡುಬರುತ್ತದೆ. ಎಂತಲೇ ಇಂದು ಮನುಜವರ್ಗದ ಸ್ಥಿತಿಗತಿಗಳು ಹಿಂದಿನ ಕಾಲದಲ್ಲಿ ಇದ್ದುದಕ್ಕಿಂತ ಉತ್ತಮವಾಗಿವೆ ಎಂದು ಧಾರಾಳವಾಗಿ ಹೇಳಬಹುದು. ಈಗ ಕಾಲ ಕೆಟ್ಟುಹೋಗಿದೆ, ಹಿಂದಿನ ಕಾಲವೇ ಚೆನ್ನಾಗಿತ್ತು ಎಂದು ಗೊಣಗುವವರು ಇರಬಹುದು; ಅವರ ಮಾತಿನಲ್ಲಿ ಅಷ್ಟಿಷ್ಟು ಸತ್ಯಾಂಶವೂ ಇದ್ದೀತು. ಆದರೂ ಒಟ್ಟಿನಲ್ಲಿ ತೌಲನಿಕವಾಗಿ ನೋಡಿದಾಗ ಇವು ಒಳ್ಳೆಯ ದಿನಗಳು, ಇದು ಪ್ರಗತಿಪರವಾದ ಕಾಲ ಎಂಬುದರಲ್ಲಿ ಸಂದೇಹವಿಲ್ಲ.

ಸರ್ವೋದಯ ಇಂದಿನ ಯುಗಧರ್ಮ ; ಎಲ್ಲರೂ, ಎಲ್ಲವೂ ಉದ್ಧಾರಗೊಳ್ಳಬೇಕು ಎಂಬುದು ಇಂದಿನ ಅಭೀಪ್ಸೆ. ಈ ಶತಮಾನದ ಮಹಾಕಾವ್ಯ, ಕನ್ನಡದ 'ಶ್ರೀ ರಾಮಾಯಣ ದರ್ಶನಂ' ಈ ಯುಗಧರ್ಮವನ್ನು ಅಮೋಘವಾಗಿ ಪ್ರತಿಮಿಸುತ್ತದೆ : "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹರಚನೆಯೊಳ್" ಎಂಬ ಮಾತಿನಲ್ಲಿ ಆ ಯುಗಧರ್ಮ ವಾಚ್ಯವಾಗಿಯೂ ಅಭಿವ್ಯಕ್ತಿಗೊಂಡಿದೆ. ಪಾಪಿಗಳಿಗೆ ಮಾತ್ರವಲ್ಲ, ದೀನದಲಿತರಿಗೂ ಉದ್ಧಾರ ಉತ್ಥಾನಗಳುಂಟು. ಈ ಮನ್ವಂತರದಲ್ಲಿ ಇದು ತತ್ತ್ವ ಮಾತ್ರವಾಗಿ ಉಳಿಯದೆ ಅನುಷ್ಠಾನರೂಪ ತಳೆದಿರುವುದನ್ನು, ತಳೆಯುತ್ತಿರುವುದನ್ನು ಎಲ್ಲೆಡೆ ನೋಡುತ್ತಿದ್ದೇವೆ. ಸರ್ವೋದಯ ಆಗಿಯೇ ಬಿಟ್ಟಿದೆಯೆಂದಲ್ಲ; ಆ ನಿಟ್ಟಿನಲ್ಲಿ ದೃಢವಾದ ಹೆಜ್ಜೆಗಳನ್ನು ಗುರುತಿಸುವುದು ಸಾಧ್ಯ. ಆದ್ದರಿಂದ, ಪರಿಪೂರ್ಣವಾದ ಸರ್ವೋದಯ ಸರ್ವೋದ್ಧಾರಗಳು ಮುಂದೆ ಸಿದ್ಧಿಸುತ್ತವೆ. ಕೆಟ್ಟುದು ಪೂರ್ತಿ ನಾಶಗೊಂಡು ಲೇಸು ನೆಲಸುತ್ತದೆ ಎನಿಸುವುದು ಸಹಜ.

ಆದರೆ ಈ ನಂಬಿಕೆಯನ್ನು ತುಸು ಅಲ್ಲಾಡಿಸುವಂತಿದೆ, ಶ್ರೀ ಮದ್ಭಗವದ್ಗೀತೆಯ ಈ ವಾಣಿ :

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ (೪.೭-೮)

(ಯಾವಾಗ ಧರ್ಮದ ಅವನತಿಯಾಗುವುದೋ, ಅಧರ್ಮದ ಉನ್ನತಿ ಯಾಗುವುದೋ ಆಗ ನಾನು ಅವತಾರ ಮಾಡುತ್ತೇನೆ. ಸಾಧುಗಳ ರಕ್ಷಣೆಗಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಧರ್ಮದ ಸಂಸ್ಥಾಪನೆಗಾಗಿಯೂ ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ.)

ಈ ಭಗವದ್ವಾಕ್ಯಗಳಲ್ಲಿರತಕ್ಕದ್ದು ಅಭಯವಾಣಿ ; ಇಲ್ಲಿ ಮೊಳಗುತ್ತಿರುವುದು ಭರವಸೆಯ ಕಹಳೆ, ನಿಜ. ಆದರೆ ''ಸಂಭವಾಮಿ ಯುಗೇ ಯುಗೇ'' ಎಂಬ ಮಾತನ್ನು ಚೆನ್ನಾಗಿ ಗಮನಿಸಿದಾಗ, ಕೆಲವು ಸಂಶಯಗಳು ಸೂಕ್ಷ್ಮವಾಗಿ ಕಾಡತೊಡಗುತ್ತವೆ. ಭಗವಂತ ಯುಗಯುಗದಲ್ಲೂ ಸಂಭವಿಸಬೇಕಾದರೆ, ಪ್ರತಿಯೊಂದು ಯುಗದಲ್ಲೂ ಅಂಥ ಸಂಭವದ ಆವಶ್ಯಕತೆ ಇರುತ್ತದೆ ಎಂಬುದು ಇದರ ಅರ್ಥವೇ ? ಎಂದರೆ, ಯುಗಯುಗದಲ್ಲೂ ಧರ್ಮಗ್ಲಾನಿಯಾಗುತ್ತಲೇ ಇರುತ್ತದೆಯೆ ? ಲೋಕಕ್ಕೆ ಸ್ಥಾಯಿ ಯಾದ ಉದ್ಧಾರವಿಲ್ಲವೆ ? ಕೆಟ್ಟದ್ದು ಸಂಪೂರ್ಣವಾಗಿ ಅಳಿದು, ಒಳಿತು ಶಾಶ್ವತವಾಗಿ ಬೇರೂರುವುದಿಲ್ಲವೆ ? ಸರ್ವೋದಯ ನಿತ್ಯವಾಗಿ ಸಾಧಿತವಾಗುವುದಿಲ್ಲವೆ ? ಸೂರ್ಯೋದಯ ಆಗಾಗ ಗ್ರಹಣಕ್ಕೆ ತುತ್ತಾಗುತ್ತಲೇ ಇರಬೇಕೆ ? ಯಾವುದೋ ಪ್ರಮಾಣದಲ್ಲಿ ಕೆಡುಕು, ಕತ್ತಲು ಸದಾ ಇರುತ್ತದೆಯೆ ? ನೆಳಲು–ಬೆಳಕುಗಳ ಆಟ ನಿರಂತರವಾಗಿ ಜರುಗುತ್ತಿರುತ್ತದೆಯೆ ? ಸದಸತ್ತುಗಳ ಹೋರಾಟವೆ ದೈವೀಲೀಲೆಯೆ? ಎಂದ ಮೇಲೆ, 'ರಾಮರಾಜ್ಯ'ಸ್ಥಾಪನೆ ಎಂಬುದು ಬರಿಯ ಕನಸೆ ?

ದೈವವಾಣಿಯೆ ಇಷ್ಟೆಲ್ಲ ಪ್ರಶ್ನೆಗಳಿಗೆ ಎಡೆಗೊಡುವಂತಿದೆ. ಆದರೆ ಇದೆಲ್ಲ ನಮ್ಮ ವೃಥಾ ಸಂಶಯವಿರಬಹುದು. ದೈವಸಂಕಲ್ಪವನ್ನು ಯಾರು ಬಲ್ಲರು ? ಶ್ರೀ ಕೃಷ್ಣ ಪರಮಾತ್ಮನೆ ಹೇಳಿದ್ದಾನೆ, ''ಸಂಶಯಾತ್ಮಾ ವಿನಶ್ಯತಿ'' ಎಂದು. ಆದ್ದರಿಂದ, ಇಲ್ಲಸಲ್ಲದ ಸಂಶಯಗಳನ್ನು ಏಕೆ ತಲೆಯಲ್ಲಿ ಹೊಗಿಸಿಕೊಳ್ಳಬೇಕು ? ''ನ ಮೇ ಭಕ್ತಃ ಪ್ರಣಶ್ಯತಿ''(ನನ್ನ ಭಕ್ತನಿಗೆ ನಾಶವಿಲ್ಲ), ''ಯೋಗ ಕ್ಷೇಮಂ ವಹಾಮ್ಯಹಂ'' (ಯೋಗಕ್ಷೇಮದ ಹೊಣೆ ನನ್ನದು) ಎಂಬ ಭಗವಂತನ ಭಾಷೆಯನ್ನು ಗಟ್ಟಿಯಾಗಿ ನಂಬೋಣ ; ಅದಮ್ಯವಾದ ಆಶಾವಾದದಿಂದ ಎಂದಿನಂತೆ ಪ್ರಾರ್ಥನೆ ಸಲ್ಲಿಸೋಣ, ಆ ಪರಾಶಕ್ತಿಗೆ : ''ಅಸತೋ ಮಾ ಸದ್ಗಮಯ ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ''

■■

೪೪. ಗಾಂಧೀ ಪ್ರಭಾವ

ಮಹಾತ್ಮ ಗಾಂಧೀಜಿ ಭಾರತಕ್ಕೆ, ತನ್ಮೂಲಕ ವಿಶ್ವಕ್ಕೆ ಕೊಟ್ಟ ಕೊಡುಗೆಯೇನೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಶತಮಾನದ ಅತ್ಯಂತ ಮಹತ್ವಪೂರಿತ ಘಟನೆಗಳು ಎರಡು : ಒಂದು, ಭಾರತದ ಸ್ವಾತಂತ್ರ್ಯ ಸಂಪಾದನೆ; ಇನ್ನೊಂದು ಚಂದ್ರಗ್ರಹದ ಮೇಲೆ ಮಾನವನ ಪದಾರ್ಪಣೆ. ಇವುಗಳಲ್ಲಿ ಪ್ರಾಯಃ ಮೊದಲನೆಯದೇ ಎರಡನೆಯದಕ್ಕಿಂತ ದೊಡ್ಡಸಾಧನೆ. ಚಂದ್ರಗ್ರಹ ಯಾತ್ರೆಯಲ್ಲಿ ಮಾನವನ ಧೀಶಕ್ತಿಯ ವಿಜೃಂಭಣವಿದ್ದರೆ, ಭಾರತದ ಸ್ವಾತಂತ್ರ್ಯ ಪ್ರಾಪ್ತಿಯಲ್ಲಿ ಮಾನವನ ಆತ್ಮಶಕ್ತಿಯ ನಿರಾಡಂಬರ ಸಿದ್ಧಿಯಿದೆ. ಆ ಆತ್ಮಶಕ್ತಿಯ ಪ್ರತೀಕವೂ ಪ್ರತಿನಿಧಿಯೂ ಆಗಿದ್ದಾರೆ, ಗಾಂಧೀಜಿ. ಅವರು ಹಿಂಸೆಯ ಹಿರಣ್ಯಕಶಿಪುವನ್ನು ನಖದಂಷ್ಟ್ರಗಳಿಂದ ಸೀಳಿದ ನರಸಿಂಹನಲ್ಲ. ಅವರೊಂದು ಹೊಸ ಅವತಾರ : ಅತ್ಯಂತ ಸಾಮಾನ್ಯವಾದ ನರರೂಪದಲ್ಲೆ ಮೈದೋರಿದ ನಾರಾಯಣ ; ಸತ್ಯ ಅಹಿಂಸೆಗಳ ನೀರವ ದುರ್ದಮ್ಯ ಬಲದಿಂದ ಹಿಂಸಾಪಶುವನ್ನು ಮಣಿಸಿದ ತಪೋಧನ ; ತನ್ನ ಪ್ರಭಾವ ಶ್ರೀವಲಯಕ್ಕೆ ಬಂದ ಪ್ರತಿಯೊಂದು ಮಾನವ ಹೃದಯದಲ್ಲೂ ದೇವಭಾವವನ್ನು ಎಚ್ಚರಗೊಳಿಸಿ ಲೋಕ ಸಮಸ್ತವನ್ನು ಬೆರಗುಗೊಳಿಸಿದ ಪವಾಡ ಪುರುಷ ; ಸರ್ವೋದಯದ ಹರಿಕಾರ ; ಕುರಿಗಳಲ್ಲಿ ಹರಿತನವನ್ನು ಆವಾಹನೆ ಮಾಡಿದ ಮಾಂತ್ರಿಕ.

ಗಾಂಧೀಜಿಯ ಬಹುಮುಖ ಸಾಧನೆಯೇನೆಂಬುದನ್ನು ಖ್ಯಾತ ಇತಿಹಾಸತಜ್ಞ ದಿವಂಗತ ಕೆ. ಎಂ. ಪಣಿಕ್ಕರ್ ಅವರು ಹೀಗೆ ಸಂಗ್ರಹಿಸಿದ್ದಾರೆ : ''ಭಾರತ ಸ್ವಾತಂತ್ರ್ಯಾರ್ಜನೆಗೆ ಗಾಂಧೀಜಿಯ ಕಾಣಿಕೆಯನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿದೆ. ಭಾರತೀಯ ರಾಷ್ಟ್ರೀಯತೆಯನ್ನು–ಬುದ್ಧಿಜೀವಿ ಮಧ್ಯಮವರ್ಗಗಳಿಗೆ ಸೀಮಿತವಾಗಿದ್ದ ಒಂದು ಚಳವಳಿಯನ್ನು –ಒಂದು ಕ್ರಾಂತಿಕಾರಿ ಸಾಮೂಹಿಕ ಸಂಗ್ರಾಮವನ್ನಾಗಿ ಪರಿವರ್ತಿಸಿದವರು ಅವರು. ಅದರ ವ್ಯವಸ್ಥೆಯನ್ನೂ ಶಿಸ್ತನ್ನೂ ಬೆಳೆಸಿ, ಪರಿಣಾಮಕಾರಿ ಕ್ರಿಯಾ ವಿಧಾನವೊಂದನ್ನು ಅದಕ್ಕೆ ಒದಗಿಸಿಕೊಟ್ಟವರು ಅವರು. ಇದೆಲ್ಲಕ್ಕಿಂತ ಮಿಗಿಲಾಗಿ, ಸಾಮಾಜಿಕ ನ್ಯಾಯದ ಮತ್ತು ಸಮಾನತೆಯ ತೀವ್ರ ಆಕಾಂಕ್ಷೆಯನ್ನು ಅದಕ್ಕುಂಟುಮಾಡಿ, ಸಮಾಜದ ದಲಿತ ವರ್ಗಗಳ ಮತ್ತು ಹೆಚ್ಚು ಸೌಲಭ್ಯಗಳಿಲ್ಲದ ಇತರ ಪಂಗಡಗಳ ಪರಿಸ್ಥಿತಿಗೆ ಭಾರತದ ಆತ್ಮಸಾಕ್ಷಿ ಕಣ್ಣು ತೆರೆಯುವಂತೆ ಮಾಡಿದ ಕೀರ್ತಿ ಅವರದು. ಗ್ರಾಮೀಣ ಭಾರತದ ಮೇಲೆ ಅವರು ಹಾಕಿದ ಒತ್ತು ಮತ್ತು ಅಸ್ಪೃಶ್ಯರ ಉದ್ಧಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಚಳುವಳಿಗೆ ಅವರಿತ್ತ ನೈತಿಕ ಉತ್ಸಾಹ–ಇವು ಕೂಡ ಗಾಂಧೀ ಚಳವಳಿಯ ಮುಖ್ಯ ಮುಖಗಳಾಗಿದ್ದವು.''[೧]

---

೧. K.M. Panikkar, 'The Foundations of New India,' P. 179-80

ಇಷ್ಟು ಹೇಳಿದ ಮೇಲೆ ಪಣಿಕ್ಕರ್ ಅವರು ಅತ್ಯಂತ ಪ್ರಕೃತವಾದ ವಿಷಯಕ್ಕೆ ಬರುತ್ತಾರೆ : ''ಪ್ರಶ್ನೆಯೇನೆಂದರೆ, ಗಾಂಧೀಜಿ ತಮ್ಮ ಜೀವಿತ ಕಾಲದಲ್ಲಿ ಬೀರಿದ ಪ್ರಭಾವವೇನು ಎಂಬುದಲ್ಲ, ಅದು ಸ್ವತಂತ್ರ ಭಾರತದಲ್ಲಿ ಎಷ್ಟರ ಮಟ್ಟಿಗೆ ಮುಂದುವರಿಯುತ್ತಿರುವ ಪ್ರಕ್ರಿಯೆಯಾಗಿದೆ ಎಂಬುದು.''[೨] ಇದು ಈಗ ಇಡೀ ರಾಷ್ಟ್ರದ ಮುಂದೆ ನಿಂತಿರುವ ಪ್ರಶ್ನೆ, ಉತ್ತರಿಸಲು ಕಠಿಣವಾದ ಪ್ರಶ್ನೆ, ಪ್ರತಿಯೊಬ್ಬರನ್ನೂ ಆತ್ಮಪರೀಕ್ಷೆಗೆ ಪ್ರೇರಿಸುವ ಪ್ರಶ್ನೆ. ಗಾಂಧೀಜಿಯವರ ಉತ್ತರಾಧಿಕಾರಿಗಳೆನಿಸಿಕೊಂಡ ನಾವು ಅವರ ತತ್ತ್ವಗಳನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದೇವೆ, ಅವರು ತೋರಿದ ದಾರಿಯಲ್ಲಿ ಎಷ್ಟು ದೂರ ನಡೆದಿದ್ದೇವೆ ಎಂದು ಈ ಹೊತ್ತು ನಮ್ಮನ್ನೆ ನಾವು ಕೇಳಿಕೊಳ್ಳಬೇಕಾಗಿದೆ. ಪೆಚ್ಚು ಮೌನವೇ ಇದಕ್ಕೆ ಉತ್ತರ. ಬಾಯಿಬಿಟ್ಟು ಉತ್ತರಿಸಿದರೂ ಅದು ನಿರಾಶಾತ್ಮಕ, ನೇತ್ಯಾತ್ಮಕ ಉತ್ತರವಾಗುವುದು ಅನಿವಾರ್ಯ. ಗಾಂಧೀಜಿ ಇಂದು ಬರಿಯ ಹೆಸರಾಗಿ ಉಳಿದಿದ್ದಾರೆ, ಹಸುರಾಗಿ ಉಳಿದಿಲ್ಲ; ಅವರ ತತ್ತ್ವ ನೀತಿಗಳೆಲ್ಲ ಸುಂದರವಾದ ಪುಸ್ತಕಗಳಲ್ಲಿ ಮುದ್ರಿತವಾಗಿವೆ ; ನಾವು ನಿದ್ರಿತರಾಗಿದ್ದೇವೆ. ಗಾಂಧೀಜಿಯ ನಿರ್ದೇಹ ಪ್ರೇತ ಒಮ್ಮೊಮ್ಮೆ ದುಃಸ್ವಪ್ನವಾಗಿ ನಮ್ಮನ್ನು ಕಾಡಬಹುದಷ್ಟೆ ; ಆದರೆ ಕಾಪಾಡಲು ನಾವು ಅವಕಾಶ ಕೊಡುತ್ತಿಲ್ಲ; ನಮ್ಮ ಪಾಲಿಗೆ ಅವರು ದಿವ್ಯಚೇತನವಾಗಿ, ಪುಣ್ಯಾತ್ಮವಾಗಿ ಪರಿಣಮಿಸಿಲ್ಲ ಎಂಬುದು ಎದುರಿಸಲೇಬೇಕಾದ ಕಟುಸತ್ಯ. ಪಣಿಕ್ಕರ್ ಹೇಳುವಂತೆ, ''ಸ್ವಾತಂತ್ರ್ಯೋತ್ತರ ಭಾರತದ ಸಾಧನೆಗಳು ಗಾಂಧೀತತ್ತ್ವಗಳಿಗಿಂತ ಬೇರೆಯಾದ ತತ್ತ್ವಗಳನ್ನು ಆಧರಿಸಿದಂತೆ ತೋರುತ್ತವೆ.''[೩]

ಸ್ವಾತಂತ್ರ್ಯೋತ್ತರ ಭಾರತದ ಮೇಲೆ ಗಾಂಧೀಜಿಯ ಪ್ರಭಾವ ಏನೇನೂ ಆಗಿಯೆ ಇಲ್ಲ ಎನ್ನುವುದು ತಪ್ಪಾದೀತು. ಮತ್ತೆ ಪಣಿಕ್ಕರ್ ಅವರು ಹೇಳುತ್ತಾರೆ : ''ಗಾಂಧೀಜಿಯ ಕೆಲವು ಬೋಧನೆಗಳು ಭಾರತದ ಸಾಧಾರಣ ಪರಂಪರೆಯಲ್ಲಿ ಸೇರಿಹೋಗಿವೆಯೆಂದು ಹೇಳಬಹುದು; ಆದರೆ ಅವರು ಪರಮ ಪ್ರಾಧಾನ್ಯವಿತ್ತಿದ್ದ ಅಹಿಂಸೆ, ಸತ್ಯಾಗ್ರಹ, ಐಚ್ಛಿಕ ಬಡತನ ಮುಂತಾದವುಗಳಲ್ಲ ಎಂಬುದು ಸಾಕಷ್ಟು ವಿಚಿತ್ರವಾಗಿದೆ.''[೪]

ಭರತಖಂಡಕ್ಕೆ ಸ್ವಾತಂತ್ರ್ಯ ಬಂದು ಮೂರು ದಶಕಗಳಾದುವು. ಆದರೆ ಗಾಂಧೀಜಿಯ ಕನಸಿನ 'ರಾಮರಾಜ್ಯ' ಇನ್ನೂ ನನಸಾಗಿಲ್ಲ; ಸದ್ಯದಲ್ಲಿ ಆಗುವ ಲಕ್ಷಣಗಳೂ ಕಂಡುಬರುತ್ತಿಲ್ಲ. ಗಾಂಧೀಜಿ ಕಟ್ಟಬಯಸಿದ 'ಗ್ರಾಮೀಣ ಭಾರತ' ಎಂದು ಅಸ್ತಿತ್ವಕ್ಕೆ ಬರುತ್ತದೋ ಭಗವಂತನೇ ಬಲ್ಲ. ಸ್ವಾತಂತ್ರ್ಯ ಪೂರ್ವದ ಹಳ್ಳಿಗಳಿಗೂ ಸ್ವಾತಂತ್ರ್ಯಾನಂತರದ ಹಳ್ಳಿಗಳಿಗೂ ಮೂಲಭೂತವಾಗಿ ಯಾವುದೇ

---

೨. ಅಲ್ಲೇ.

೩. ಅದೇ, ಪು. ೧೮೦,

೪. ಅದೇ, ಪು. ೧೮೮.

ವ್ಯತ್ಯಾಸ ತೋರಿಬರುತ್ತಿಲ್ಲ; ಕೆಲವಂಶಗಳಲ್ಲಿ ಈಗ ಇನ್ನಷ್ಟು ಅವನತಿಯಾಗಿದ್ದರೆ ಆಶ್ಚರ್ಯವಿಲ್ಲ. ಹಳ್ಳಿಗಳ ರಕ್ತವೆಲ್ಲ ನಗರಗಳಿಗೆ ಪೂರೈಕೆಯಾಗುತ್ತಿದೆ. ಪರಿಣಾಮವಾಗಿ, ಪಟ್ಟಣಗಳು ಕೊಬ್ಬುತ್ತಿವೆ; ಗ್ರಾಮಗಳಲ್ಲಿ ಅಜ್ಞಾನ ದಾರಿದ್ರ್ಯ ನಿರುದ್ಯೋಗಗಳು ಹಬ್ಬುತ್ತಿವೆ. ಸ್ವಾತಂತ್ರ್ಯ ಬಂದ ಮೇಲೆ ದೇಶದ ಯಾವುದೇ ಪ್ರಮುಖ ಸಮಸ್ಯೆ ಸಂಪೂರ್ಣವಾಗಿ, ಸಮರ್ಪಕವಾಗಿ ಬಗೆಹರಿದಿದೆಯೆಂದು ಎದೆತಟ್ಟಿ ಹೇಳುವಂತಿಲ್ಲ.

ಇದಕ್ಕೆಲ್ಲ ಕಾರಣವೇನು ? ಗಾಂಧೀಜಿಯವರಿಗೆ, ಅವರ ತತ್ತ್ವಗಳಿಗೆ ನಾವು ವಿಮುಖರಾದುದು. ಪ್ರತಿಯೊಂದು ಸಮಸ್ಯೆಗೂ ಗಾಂಧೀಜಿ ಪರಿಹಾರವನ್ನು ಸೂಚಿಸಿದ್ದರು. ಆ ಪರಿಹಾರ ಕ್ರಮಗಳು ಕಾಲಾನುಗುಣವಾದ ಅಲ್ಪಸ್ವಲ್ಪ ಮಾರ್ಪಾಟುಗಳೊಡನೆ ಇಂದಿಗೂ ಉಪಾದೇಯವಾಗತಕ್ಕವು. ಆದರೆ ಅವುಗಳನ್ನು ನಾವು ಮರೆತಿದ್ದೇವೆ, ಅಥವಾ ಅಲಕ್ಷಿಸಿದ್ದೇವೆ ಎಂಬುದು ದುರ್ದೈವದ ಸಂಗತಿ.

ಗಾಂಧೀಜಿಯ ಪ್ರಬಾವ ಸಂಪೂರ್ಣವಾಗಿ ಅಸ್ತಂಗತವಾಗಿಲ್ಲ, ಸ್ವಲ್ಪಮಟ್ಟಿಗಾದರೂ ಜೀವಂತವಾಗಿದೆ ಎಂಬುದು ದೇಶದಲ್ಲಿ ಇತ್ತೀಚೆಗೆ ಜರುಗಿದ ಕೆಲವು ವಿದ್ಯಮಾನಗಳಿಂದ ವ್ಯಕ್ತವಾಗಿದೆ. ಇದು ತುಸು ಸಮಾಧಾನದ ಸಂಗತಿ. ಹಾಗೆಯೆ, ದೇಶದಲ್ಲಿ ತಾಂಡವವಾಡುತ್ತಿರುವ ಹಿಂಸಾಚಾರ ತಳಮಳಗೊಳಿಸುವಂಥದು. ಎಂತಲೇ "ಗಾಂಧೀಜಿಯ ಪ್ರಭಾವ ಮುಂದುವರೆಯುತ್ತದೆಯೇ ಎಂಬುದು ಅನಿಶ್ಚಿತ"[೫] ಎಂಬ ಪಣಿಕ್ಕರ್ ಅವರ ವಿಷಾದ ಪೂರ್ವಕ ಉದ್ಗಾರದಲ್ಲಿ ಹುರುಳಿಲ್ಲದಿಲ್ಲ. ನಾವು, ಭಾರತದ ಪ್ರಜೆಗಳು, ಈ ಅನಿಶ್ಚಿತತೆಯನ್ನು ತೊಲಗಿಸಲು ಸಂಕಲ್ಪಿಸಬೇಕಾಗಿದೆ; ಸರ್ವತಾರಕವಾದ ಗಾಂಧೀ ಮಾರ್ಗವನ್ನು ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕಾಗಿದೆ. ಗಾಂಧೀಜಿಯವರನ್ನೂ ಅವರ ತತ್ತ್ವಗಳನ್ನೂ ಸಂಪೂರ್ಣವಾಗಿ ಮರೆತಂದು ಈ ನಾಡು ದುರಂತದತ್ತ ಧಾವಿಸುತ್ತದೆ, ಆತ್ಮಹತ್ಯೆ ಮಾಡಿಕೊಳ್ಳುತ್ತದೆ ಎಂಬುದರಲ್ಲಿ ಇನಿತೂ ಸಂಶಯವಿಲ್ಲ. ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡಲು ಗಾಂಧೀಜಿ ಯಾವ ವಿಧಾನವನ್ನು ಅನುಸರಿಸಿದರೊ ಆ ವಿಧಾನದಿಂದಲೇ ನಾವು ಸ್ವಾತಂತ್ರ್ಯದ ಫಲಗಳನ್ನೂ ಸಾಧಿಸಬೇಕಾಗಿದೆ, ಅನ್ಯಗತಿಯಿಲ್ಲ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಅಡಿಗಲ್ಲಿನ ಮೇಲೆ ನವಭಾರತದ ನಿರ್ಮಾಣವಾಗಬೇಕು. ಗಾಂಧೀಜಿಯನ್ನು ಬರಿಯ ಹೆಸರಾಗಿ ಉಳಿಸದೆ, ಪ್ರತಿಯೊಬ್ಬರೂ ಗಾಂಧೀತನವನ್ನು ತಮ್ಮ ಉಸಿರಿನ ಒಂದು ಭಾಗವನ್ನಾಗಿ ಮಾಡಿಕೊಳ್ಳಬೇಕು. ಆಗ ಗಾಂಧೀಜಿಯ ಆತ್ಮಕ್ಕೆ ಶಾಂತಿ, ತೃಪ್ತಿ. ಅವರ ಎರಡು ಕಣ್ಣುಗಳಾಗಿದ್ದ ಸತ್ಯ, ಅಹಿಂಸೆಗಳ ಶ್ರದ್ಧಾನ್ವಿತ ಆಚರಣೆಯಲ್ಲಿ ಭಾರತದ ಕಲ್ಯಾಣ ಮಾತ್ರವಲ್ಲ, ಜಗತ್ತಿನ ಕಲ್ಯಾಣವೂ ಇದೆ.

■■

---

೫. ಅಲ್ಲೇ

೪೫. ಧರ್ಮ-ವಿಜ್ಞಾನ

ಇದು ವಿಜ್ಞಾನ ಪ್ರಧಾನವಾದ ಯುಗ. ಎಲ್ಲೆಲ್ಲಿಯೂ ವಿಜ್ಞಾನದ್ದೇ ವಿಜೃಂಭಣೆ. ಈ ಕಾಲದಲ್ಲಿ ಧರ್ಮ ಎನ್ನುವುದು ಇದೆಯೇ, ಇದ್ದರೆ ಅದರ ಸ್ಥಾನವೇನು ಎಂಬ ಪ್ರಶ್ನೆ ಒಮ್ಮೊಮ್ಮೆ ಹುಟ್ಟಿಕೊಳ್ಳುತ್ತದೆ. ಮೇಲು ನೋಟಕ್ಕೆ ಈ ಹೊತ್ತು ಧರ್ಮ ತನ್ನ ಅಸ್ತಿತ್ವವನ್ನೆ ಕಳೆದುಕೊಂಡಿರುವಂತೆ ತೋರಿದರೆ ಸೋಜಿಗವಿಲ್ಲ. ಆದರೆ ಧರ್ಮದ ಮೂಲಾರ್ಥವನ್ನು ಲಕ್ಷಿಸಿದರೆ ಅದೊಂದು ನಿತ್ಯ ಶಕ್ತಿಯೆಂಬುದು ತಿಳಿದುಬರುತ್ತದೆ. ವಾಸ್ತವವಾಗಿ, ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದಿರಲಿ, ಸರ್ವವೂ ತನ್ನ ಅಸ್ತಿತ್ವಕ್ಕಾಗಿ ಅದನ್ನೆ ಅವಲಂಬಿಸಿದೆಯೆಂದು ಹೇಳಬೇಕಾಗುತ್ತದೆ. 'ಧರ್ಮ' ಎಂಬ ಮಾತಿಗೆ 'ಧರಿಸಿಕೊಂಡಿರತಕ್ಕದ್ದು' ಎಂದರ್ಥ : ''ಧಾರಣಾತ್ ಧರ್ಮಂ ಇತ್ಯಾಹುಃ''. ಆದ್ದರಿಂದ ಧರ್ಮವೆಂಬುದು ನಾವು ನಿಂತಿರುವ ನೆಲದ ಹಾಗೆ. ಅದರ ಅರಿವು ನಮಗೆ ಇರದಿರಬಹುದು ; ಆದರೆ ಅದು ಉಂಟೇ ಉಂಟು, ಸನಾತನವಾಗಿ ಮತ್ತು ಚಿರನೂತನವಾಗಿ. ಒಂದು ವೇಳೆ ದೇವರನ್ನು ನಿರಾಕರಿಸಬಹುದು ; ಆದರೆ ಧರ್ಮವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಧರ್ಮವನ್ನೂ ದೇವರನ್ನೂ ಪ್ರತ್ಯೇಕಿಸಿದರೆ – ಹಾಗೆ ಮಾಡುವುದು ಶಕ್ಯವಾದಲ್ಲಿ–ಧರ್ಮವೆ ದೇವರಾಗುತ್ತದೆ.

ಧರ್ಮ–ವಿಜ್ಞಾನಗಳು ಪರಸ್ಪರ ವಿರುದ್ಧವೆಂದು ಮೇಲ್ಮೈ ನೋಟಕ್ಕೆ ಭಾಸವಾಗಬಹುದು. ವಸ್ತುತಃ ಹಾಗೇನಲ್ಲ. ಅವೆರಡೂ ಪರಸ್ಪರ ಪೂರಕ, ಅಭ್ಯುದಯಕಾರಕ; ಒಂದನ್ನುಳಿದು ಮತ್ತೊಂದು ಅಪೂರ್ಣ. ಜೀವನದ ಸುಖ ಶ್ರೇಯಗಳಿಗೆ ಎರಡೂ ಅವಶ್ಯಕ, ಅನಿವಾರ್ಯ. ವಿಜ್ಞಾನಿಯೊಬ್ಬರ ಈ ಹೇಳಿಕೆ ಅರ್ಥವತ್ತಾದುದು : ''ವಿಜ್ಞಾನವಿಲ್ಲದ ಧರ್ಮ ಕುಂಟು; ಧರ್ಮವಿಲ್ಲದ ವಿಜ್ಞಾನ ಕುರುಡು.''(ಐನ್‌ಸ್ಟೀನ್)

ಕಾವ್ಯ, ರಾಜಕಾರಣ, ವಿಜ್ಞಾನ, ಧರ್ಮ ಅಥವಾ ಅಧ್ಯಾತ್ಮ ಇವೆಲ್ಲ ಹೇಗೆ ಒಂದೇ ವಸ್ತುವನ್ನು ನೋಡುವ ವಿವಿಧ ದೃಷ್ಟಿ ಕೋನಗಳೆಂಬುದನ್ನು ಡಿ.ವಿ.ಜಿ. ಅವರು ಸೊಗಸಾಗಿ ಹೇಳಿ, ತನ್ಮೂಲಕ ಅವು ಪರಸ್ಪರ ಸಂಬದ್ಧವಾಗಿರುವುದನ್ನು ಹೀಗೆ ಮನಗಾಣಿಸುತ್ತಾರೆ :

ರಾಮಣೀಯಕವೆಂದು ಬಿಸುಸುಯ್ಯಲದು ಕವಿತೆ;
ಭೂಮಿಗದನೆಟಕಿಸುವೆನೆಂಬೆಸಕ ರಾಷ್ಟ್ರಕತೆ ;
ಆಮೂಲಮದರಿರವನರಸಲದು ವಿಜ್ಞಾನ ;
ಸಾಮಗ್ರ್ಯದಿಂದದನು ಕಾಣೆ ದಿವ್ಯಜ್ಞಾನ

ಒಂದು ವಸ್ತುವನ್ನು ಅಖಂಡವಾಗಿ ಪರಿಭಾವಿಸಿದಾಗ ಅದು ಧರ್ಮವಾಗುತ್ತದೆ; ವಿಶ್ಲೇಷಿಸಿ ನೋಡಿದಾಗ ವಿಜ್ಞಾನವಾಗುತ್ತದೆ. ಎರಡರ ಗುರಿಯೂ ಒಂದೆ : ಸತ್ಯದರ್ಶನ.

ಧರ್ಮ ಬೇರೆ, ಮತ ಬೇರೆ ಎಂಬುದನ್ನು ಅವಶ್ಯವಾಗಿ ಮನಗಾಣಬೇಕು. ಎರಡೂ ಅಭಿನ್ನವೆಂಬ ತಪ್ಪು ತಿಳುವಳಿಕೆಯಿಂದಾಗಿರುವ ಅನರ್ಥ ಪರಂಪರೆ ಮನುಕುಲದ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಇಂದಿಗೂ ಅದರಿಂದ ಬಿಡುಗಡೆ ಇಲ್ಲ. ಧರ್ಮ ಒಂದು, ಮತಗಳಾದರೊ ಹಲವಾರು; ಧರ್ಮದ ಸ್ವರೂಪ ಒಂದು, ಮತದ ರೂಪ ವಿರೂಪಗಳು ನೂರಾರು. ಯಾವುದೇ ಧರ್ಮದ ಚರಿತ್ರೆಯನ್ನು ಗಮನಿಸಿದರೆ, ಧರ್ಮದ ಜೀವನದಿ ಕಡೆ ಕಡೆಗೆ ಮತದ ಮರುಭೂಮಿಯಲ್ಲಿ ಇಂಗಿಹೋಗುವ ದುರಂತವನ್ನು ಕಾಣುತ್ತೇವೆ. ಮತದ ಬಂದಳಿಕೆ ಧರ್ಮವೃಕ್ಷವನ್ನು ಶೋಷಿಸುವ ಶೋಚನೀಯ ಸಂಗತಿಯನ್ನು ಕಾಣುತ್ತೇವೆ. ನಿರ್ಮಲವಾದ ಧರ್ಮದ ಕೊಳವನ್ನು ಮತದ ಪಾಚಿ ಆವರಿಸುತ್ತದೆ. ಮತವೆಂದರೆ ಅರ್ಥ ಕಳೆದುಕೊಂಡ ಆಚರಣೆಗಳ ಸಮುದಾಯ, ಮೂಢನಂಬಿಕೆಗಳ ಮೊತ್ತ, ಕಂದಾಚಾರಗಳ ಕಗ್ಗ. ''ಧರ್ಮಕ್ಕೆ ಮತದ ಆವರಣ ಬೇಕು, ಅಕ್ಕಿಗೆ ಹೊಟ್ಟು ಹೇಗೋ ಹಾಗೆ. ಬರಿಯ ಅಕ್ಕಿಯನ್ನು ಬಿತ್ತಿದರೆ ಬೆಳೆಯುವುದಿಲ್ಲ'' ಎನ್ನುತ್ತಾರೆ, ಶ್ರೀ ರಾಮಕೃಷ್ಣಪರಮಹಂಸರು. ದಿಟ, ಆದರೆ ಸಿಪ್ಪೆಯೆ ಅಕ್ಕಿಯ ಸ್ಥಾನವನ್ನು ಆಕ್ರಮಿಸಿ ಸರ್ವಸ್ವವಾಗಬಾರದು. ಮತಾಂಶ ಯಾವುದೋ ಒಂದು ಮಿತಿಯಲ್ಲಿ ಬೇಕಾಗಬಹುದು ; ಆದರೆ ಅದೇ ಧರ್ಮವೆಂದು ಭ್ರಮಿಸಿದರೆ ಸಮಾಜ ವ್ಯಾಧಿಗ್ರಸ್ತವಾಗುತ್ತದೆ. ಇಂಥ ಪರಿಸ್ಥಿತಿಯನ್ನು ಇಂದು ನೋಡುತ್ತಿದ್ದೇವೆ. ಧರ್ಮದ ಹೆಸರಿನಲ್ಲಿ ಏನೇನು ಅನಿಷ್ಟಗಳು ಜರುಗುತ್ತಿವೆ, ಗೊಡ್ಡಾಟಗಳು ನಡೆಯುತ್ತಿವೆ ಎಂಬುದು ಸರ್ವವಿದಿತ. ಧರ್ಮವನ್ನು, ದೇವರನ್ನು ನಂಬಬಹುದು ; ಬದುಕಿನ ಧ್ರುವತಾರೆಗಳನ್ನಾಗಿ ಮಾಡಿಕೊಳ್ಳಬಹುದು ; ಆದರೆ ದೇವಾಲಯಕ್ಕೆ ಹೋಗಲೇಬೇಕೆಂದಿಲ್ಲ. ಆರಂಭದ ಹಂತದಲ್ಲಿ ದೇವಾಲಯ, ವಿಗ್ರಹಾರಾಧನೆ ಅವಶ್ಯಕವಾಗಬಹುದು ; ಆದರೆ ಪ್ರಬುದ್ಧದಶೆಯಲ್ಲಿ ಅವು ಅನಗತ್ಯ; ಬರಿಯ ಕಾಟಾಚಾರಗಳಾದರಂತೂ ಸಂಪೂರ್ಣ ವರ್ಜ್ಯ, ನಿಷಿದ್ಧ. ಮತ ಒಂದು ಚೇತನವನ್ನು ಕೇವಲ ಕಂಬಳಿ ಹುಳುವಿನ ಅವಸ್ಥೆಯಲ್ಲೇ ಉಳಿಸುತ್ತದೆ ; ಧರ್ಮವಾದರೆ ಅದನ್ನು ವಿಕಾಸಗೊಳಿಸಿ, ಸುಂದರವಾದ ಚಿಟ್ಟೆಯ ಸ್ತರಕ್ಕೇರಿಸುತ್ತದೆ.

ವಿಜ್ಞಾನ ವಿರೋಧಿಸುವುದು ಮತವನ್ನೇ ಹೊರತು ಧರ್ಮವನ್ನಲ್ಲ. ಯಾವುದೋ ಅತೀತ ಶಕ್ತಿಯ ಇರವನ್ನು ವಿಜ್ಞಾನವೂ ಒಪ್ಪುತ್ತದೆ. ಸೃಷ್ಟಿಯ ರಹಸ್ಯವೆಲ್ಲ ವಿಜ್ಞಾನಕ್ಕೆ ಕರಗತವಾಗಿಲ್ಲ, ಆಗುವ ಸಂಭಾವ್ಯತೆಯೂ ಇಲ್ಲ. ಸಾಗರ ತೀರದಲ್ಲಿ ಕುಳಿತು ಕಪ್ಪೆ ಚಿಪ್ಪುಗಳನ್ನು ಸಂಗ್ರಹಿಸುವ ಮಕ್ಕಳ ಸ್ಥಿತಿಯಲ್ಲೇ ನಾವಿನ್ನೂ ಇದ್ದೇವೆ ಎಂದು ಲೋಕವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಉದ್ಗರಿಸಿರುವುದು ಅತ್ಯಂತ ಗಮನಾರ್ಹ. ಸಾಗರ ತಳದಲ್ಲಿ ಅನರ್ಘ್ಯವಾದ ಮುತ್ತುರತ್ನಗಳಿವೆ. ಅವಿನ್ನೂ ವಿಜ್ಞಾನಕ್ಕೆ ಲಭ್ಯವಾಗಿಲ್ಲ; ಅವುಗಳ ಪ್ರಾಪ್ತಿಗೆ ಧರ್ಮವೇ ಶರಣು.

ವಿಜ್ಞಾನ ಎಂಬುದು ಮೂಲಭೂತವಾಗಿ ಒಂದು ದೃಷ್ಟಿ; ಎಲ್ಲವನ್ನೂ ಬುದ್ಧಿಯ ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸುವ ಒಂದು ವಿಧಾನ. ಪ್ರಶ್ನಿಸದೆ, ಪರಿಶೀಲಿಸದೆ ಏನನ್ನೂ

ಒಪ್ಪಿಕೊಳ್ಳುವುದಿಲ್ಲ ಎಂಬುದು ಅದರ ನಿಲುವು. ಮತಿಪ್ರಧಾನವಾದ ಈ ನಿಲುವಿನಿಂದ ಮತ ಮತ್ತು ಅದರ ಸಹಚರ ಸಾಮಗ್ರಿ ಎಗರಿಹೋಗುತ್ತದೆ ; ಧರ್ಮಕ್ಕೇನೂ ಬಾಧಕವಿಲ್ಲ. ಕೊಳೆ, ಧೂಳು ಹಾರಿಹೋಗಬಹುದು ; ಆದರೆ ಭೂಮಿ ಎಲ್ಲಿಗೆ ಹೋಗುತ್ತದೆ ?

ವೈಜ್ಞಾನಿಕ ದೃಷ್ಟಿ ಪಶ್ಚಿಮದಿಂದ ಬಂದುದು ಎಂಬುದು ಎಲ್ಲರಿಗೂ ಗೊತ್ತು. ಆದರೆ ಒಂದು ಕಾಲದಲ್ಲಿ, ಬಹಳ ಹಿಂದೆ, ಭಾರತದಲ್ಲೂ ಇಂತಹ ದೃಷ್ಟಿಯಿತ್ತು ಎಂಬುದನ್ನು ಮರೆಯಬಾರದು. ''ಕಸ್ಮೈ ದೇವಾಯ ಹವಿಷಾ ವಿಧೇಮ'' (ಯಾವ ದೇವರಿಗೆ ಹವಿಸ್ಸನ್ನು ಸಲ್ಲಿಸೋಣ ?) ಎಂದು ಕೇಳಿದ ಉಪನಿಷತ್ತಿನ ಋಷಿ ಪ್ರಾಯಶಃ ನಮ್ಮ ಪ್ರಥಮ ವಿಜ್ಞಾನಿ. ಅವನ ಈ ಧೀರ ಪ್ರಶ್ನೆಯಲ್ಲಿ ವೈಚಾರಿಕ ಧೋರಣೆ ಮೂರ್ತವಾಗಿದೆ :

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ
ತತ್ ತ್ವಂ ಪೂಷನ್ನಪಾವೃಣು ಸತ್ಯ ಧರ್ಮಾಯ ದೃಷ್ಟಯೇ

(ಹೇ ಸೂರ್ಯ, ಚಿನ್ನದ ಮುಚ್ಚಳದಿಂದ ಸತ್ಯದ ಮುಖ ಮುಚ್ಚಿ ಹೋಗಿದೆ. ಸತ್ಯ ಧರ್ಮಗಳ ಕಾಣ್ಕೆಗಾಗಿ ಅದನ್ನು ತೆಗೆ) ಮುಂತಾದ ಮಾತುಗಳಲ್ಲೂ ಇದೇ ವೈಚಾರಿಕತೆ ಜ್ವಲಿಸುತ್ತಿದೆ. ಆದರೆ ಈಚೆಗೆ ಭಾರತದಲ್ಲಿ ಈ ವೈಜ್ಞಾನಿಕ ಮನೋಭಾವ ಹಿಂದೆ ಬಿದ್ದು ಮತೀಯ ಭಾವನೆಗಳು ಮೇಲುಗೈಯಾದುವು. ವಿಜ್ಞಾನವನ್ನು ನಾವು ಪಶ್ಚಿಮದಿಂದ ಆಮದು ಮಾಡಿಕೊಳ್ಳಬೇಕಾಯಿತು.

ಧರ್ಮ ಕಿಲುಬುಗಟ್ಟದಂತೆ, ತುಕ್ಕುಹಿಡಿಯದೆ ಉಕ್ಕಾಗಿ ಉಳಿಯುವಂತೆ ನೋಡಿಕೊಳ್ಳುವ ಜವಾಬ್ದಾರಿ ವಿಜ್ಞಾನದ್ದು. ಅದು ಧರ್ಮವನ್ನು ಸ್ವಸ್ವರೂಪದಲ್ಲಿ, ಶುದ್ಧ ರೂಪದಲ್ಲಿ ಇರಿಸುವ ಶಕ್ತಿ. ಅಂತೆಯೆ, ರಾಕ್ಷಸವಾಗಿ ವಿರಾಡ್ರೂಪಿಯಾಗಿ ಬೆಳೆಯುತ್ತಿರುವ ವಿಜ್ಞಾನ ಲೋಕನಾಶಕವಾಗದಂತೆ, ಭಸ್ಮಾಸುರಹಸ್ತವಾಗದಂತೆ ಅದನ್ನು ನಿಯಂತ್ರಿಸುವ ಕರ್ತವ್ಯ ಧರ್ಮದ್ದು. ಧರ್ಮ, ವಿಜ್ಞಾನಗಳ ಸಮುಚಿತ ಸಮನ್ವಯದಲ್ಲಿ, ಒಂದರ ಮಂತ್ರ ಮತ್ತು ಇನ್ನೊಂದರ ತಂತ್ರದ ಸಾಂಗತ್ಯದಲ್ಲಿ ಇಂದಿನ ಹಾಗೂ ಮುಂದಿನ ಜಗತ್ತು ತನ್ನ ಯೋಗಕ್ಷೇಮವನ್ನು ಕಂಡುಕೊಳ್ಳಬೇಕಾಗಿದೆ.

■■

೪೬. ಕಾವ್ಯಾಸ್ವಾದನ

ತನ್ನನ್ನು ತಾನು ಮರೆಯಬೇಕು, ಮೀರಬೇಕು ಎಂಬುದು ಯಾವಾಗಲೂ ಮಾನವನ ಹಂಬಲ. ಇದಕ್ಕಿರುವ ಮಾರ್ಗಗಳು ಎರಡು : ಒಂದು ಅಧೋಮಾರ್ಗ, ಇನ್ನೊಂದು ಊರ್ಧ್ವಮಾರ್ಗ. ಬಹುಮಂದಿ ಮದ್ಯಪಾನ, ಲೈಂಗಿಕ ಸುಖ ಮುಂತಾದುವುಗಳಿಂದ ತುಂಬಿದ ಅಧೋಮಾರ್ಗದಲ್ಲಿ ಪಯಣಿಗರಾಗುತ್ತಾರೆ. ಎಲ್ಲೋ ಕೆಲವರು ಧರ್ಮ, ಕಲೆ ಇತ್ಯಾದಿಗಳ ಊರ್ಧ್ವಮಾರ್ಗದಲ್ಲಿ ಯಾತ್ರಿಕರಾಗುತ್ತಾರೆ. ಕಾವ್ಯ ಇಂಥ ಊರ್ಧ್ವಪಥ ಸೋಪಾನಗಳಲ್ಲೊಂದು.

ಇದು ಸಂಸ್ಕೃತದಲ್ಲಿರುವ ಒಂದು ಪ್ರಸಿದ್ಧವೂ ಪರಿಭಾವನಾರ್ಹವೂ ಆದ ಸುಭಾಷಿತ :

ಸಂಸಾರವಿಷವೃಕ್ಷಸ್ಯ ದ್ವೇ ಫಲೇ ಅಮೃತೋಪಮೇ
ಕಾವ್ಯಾಮೃತರಸಾಸ್ವಾದಃ ಸಲ್ಲಾಪಃ ಸಜ್ಜನೈಸ್ಸಹ

(ಸಂಸಾರವೆಂಬ ವಿಷವೃಕ್ಷದಲ್ಲಿ ಅಮೃತಸಮಾನವಾದ ಎರಡು ಹಣ್ಣುಗಳಿವೆ : ಕಾವ್ಯಾಮೃತರಸದ ಆಸ್ವಾದ ಮತ್ತು ಸಜ್ಜನರೊಡನೆ ಸಲ್ಲಾಪ.)

ಸಜ್ಜನರು ಸಮಾಜದಲ್ಲಿ ಅಪರೂಪ ; ಅವರೊಡನೆ ಸಲ್ಲಾಪ ದುರ್ಲಭ. ಆದರೆ ಕಾವ್ಯರಸಾಸ್ವಾದವನ್ನು ಯಾರು ಬೇಕಾದರೂ ಪಡೆಯಬಹುದು, ಮನಸ್ಸಿದ್ದರೆ. ಕಾವ್ಯದ ಸಹವಾಸವೆ ಸಜ್ಜನ ಸಂಗದ ಲಾಭವನ್ನೂ ದೊರಕಿಸಿ ಕೊಡಬಲ್ಲುದು. ''ಹೊತ್ತು ಹೋಗುವುದೆನಗೆ ಸತ್ತವರ ಸಂಗದಲಿ'' ಎಂದಾಡಿದ ಆಂಗ್ಲಕವಿ ಸದೇ ಕಾವ್ಯಗಳ ಮೂಲಕ ಒದಗುವ ಸಜ್ಜನ ಸಲ್ಲಾಪವನ್ನೇ ಸೂಚಿಸಿದ್ದಾನೆ. ಅಂತೂ ಕಾವ್ಯರಸಾಸ್ವಾದ ಒಂದು ಎಣೆಯಿಲ್ಲದ ಭಾಗ್ಯ. ಅದನ್ನು ವಿವೇಕಿಗಳು ಗಳಿಸುತ್ತಾರೆ. ಈ ಸುಭಾಷಿತವನ್ನು ನೋಡಬಹುದು :

ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಂ
ವ್ಯಸನೇನ ತು ಮೂರ್ಖಾಣಾಂ ನಿದ್ರಯಾ ಕಲಹೇನ ವಾ

(ಕಾವ್ಯಶಾಸ್ತ್ರ ವಿನೋದದಲ್ಲಿ ಬುದ್ಧಿವಂತರ ವೇಳೆ ಕಳೆಯುತ್ತದೆ. ಮೂರ್ಖರ ವೇಳೆ ದುಶ್ಚಟ, ನಿದ್ರೆ ಅಥವಾ ಜಗಳದಲ್ಲಿ ಕಳೆಯುತ್ತದೆ.)

ಕಾವ್ಯದಿಂದಾಗುವ ಪ್ರಯೋಜನವೇನು ? ''ಕಲೆಯೆಲ್ಲ ನಿಷ್ಪ್ರಯೋಜಕ'' (All art is useless) ಎಂದು ಪಾಶ್ಚಾತ್ಯ ಲೇಖಕನೊಬ್ಬನ ಹೇಳಿಕೆ. ಅವನು ಒಂದು ವಿಶಿಷ್ಟಾರ್ಥದಲ್ಲಿ ಆ ಮಾತನ್ನಾಡಿದ್ದಾನೆ. ಅದನ್ನು ಸಾಮಾನ್ಯಾರ್ಥದಲ್ಲೂ ತೆಗೆದುಕೊಂಡರೆ ತಪ್ಪಾಗದು. ಕಾವ್ಯಾನುಸಂಧಾನದಿಂದ ಹೊಟ್ಟೆ ತುಂಬುತ್ತದೆಯೆ, ಬಟ್ಟೆ ದೊರೆಯುತ್ತದೆಯೆ ? ಏತಕ್ಕೆ ಬೇಕು ಕಾವ್ಯ ? ''ಕಾವ್ಯಾಲಾಪಾಂಶ್ಚ ವರ್ಜಯೇತ್''

ಎಂದು ಭಾರತದಲ್ಲೂ ಯಾರೋ ಯಾವಾಗಲೋ ಹೇಳಿದ್ದುಂಟು. ಅಲ್ಲದೆ, ಈ ಉಕ್ತಿಯನ್ನು ನೋಡಬಹುದು :

ವ್ಯಾಕರಣವನು ಭುಜಿಸರಯ್ಯ ಹಸಿದವರು,
ಕಾವ್ಯರಸವೀಂಟರ್ರೆ ಬಾಯಾರಿದವರು.
ಛಂದಸ್ಸಿನಿಂದಾರು ಕುಲವನೆತ್ತಿದರು ?
ಹಣವನೊಂದನೆ ಗಳಿಸು. ಫಲವಿಲ್ಲ ಕಲೆಗೆ ![೧]

ಇದು ಒಂದು ದೃಷ್ಟಿಯಿಂದ, ವ್ಯಾವಹಾರಿಕ ನಿಲುವಿನಿಂದ ಸರಿ. ಆದರೆ ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಹೊಟ್ಟೆಬಟ್ಟೆಗಳೆ ಮನುಷ್ಯನಿಗೆ ಸರ್ವಸ್ವವಲ್ಲ. "Art bakes no bread"ಎಂಬ ಮಾತು ಇರುವಂತೆಯೆ, "Man does not live by bread alone"ಎಂಬ ಮಾತೂ ಇರುವುದು ಗಮನಾರ್ಹ. ಹೊಟ್ಟೆಗೆ ಹಿಟ್ಟಿಲ್ಲದಿರುವಾಗ ಜುಟ್ಟಿಗೆ ಮಲ್ಲಿಗೆ ಹೂವೇತಕ್ಕೆ ಎಂಬ ಪ್ರಶ್ನೆ ಅರ್ಥರಹಿತವೇನಲ್ಲ, ಆದರೆ ಹೊಟ್ಟೆ ತುಂಬಿದ ಮೇಲಾದರೂ ಮಲ್ಲಿಗೆಯನ್ನು ಮುಡಿಯದಿದ್ದರೆ ಬಾಳು ಪರಿಪೂರ್ಣವಾಗದೆ, ಅರಕೆ ಉಳಿಯುತ್ತದೆ.

ಕಾವ್ಯ ನಿಷ್ಫಲ ಎನ್ನುವವರ ಗೊಡವೆ ನಮಗೆ ಬೇಡ. ಆದರಿಂದ ಉಪಯೋಗವಿದ್ದರೆ ಅದು ಎಂಥ ಉಪಯೋಗ, ಅದರಲ್ಲಿ ಹಂತಗಳೇನಾದರೂ ಇವೆಯೇ ಎಂಬುದು ವಿಚಾರಣೀಯ. ಕಾವ್ಯದ ಮೊದಲ ಪ್ರಯೋಜನವೆಂದರೆ ಆನಂದ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ : ''ಕಾವ್ಯಂ ಆನಂದಾಯ.'' ಕಾವ್ಯದಿಂದ ದೊರಕುವ ಆನಂದ ಎಂತಹುದೆಂದರೆ, ಅದನ್ನು ಸವಿಯುವ ಸಲುವಾಗಿ ಪ್ರೇಮಿ ತನ್ನ ಪ್ರೇಯಸಿಯನ್ನು ತೊರೆಯುವುದೂ ಸಂಭಾವ್ಯ ಎನ್ನುತ್ತಾನೆ, ಎಪಿಕ್ಯೂರಸ್. ಕಾವ್ಯದ ಸಮ್ಮೋಹನ ಶಕ್ತಿಯನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಅರುಹುವುದು ಅಶಕ್ಯ. ಇದೇ ಅಭಿಪ್ರಾಯದ ಸೂಕ್ತಿಯೊಂದು ಸಂಸ್ಕೃತದಲ್ಲಿದೆ :

ಸುಭಾಷಿತರಸಾಸ್ವಾದಬದ್ಧ ರೋಮಾಂಚಕಂಚುಕಾಃ
ವಿನಾಪಿ ಕಾಮಿನೀ ಸಂಗಂ ಕವಯಃ ಸುಖಮಾಸತೇ

(ಸುಭಾಷಿತಗಳ ರಸಾನುಭವದಿಂದುಂಟಾದ ರೋಮಾಂಚವುಳ್ಳ ಕವಿಗಳು ಕಾಮಿನಿಯ ಸಂಗವಿಲ್ಲದೆಯೆ ಸುಖವನ್ನನುಭವಿಸುತ್ತಾರೆ). ಸೋಮದೇವ ಸೂರಿ ಕವಿತೆಯನ್ನು 'ಪಿಶಾಚ' ಎಂದು ಕರೆದು ನಿಂದಾಸ್ತುತಿ ಮಾಡಿದ್ದಾನೆ : ''ಎಲೈ ಕವಿತೆ ಪಿಶಾಚ ! ನನ್ನ ನಿದ್ರೆಯನ್ನು ದೂರಮಾಡುವೆ, ಶಾಸ್ತ್ರಾಭಿರುಚಿಯನ್ನು ಹೋಗಲಾಡಿಸುವೆ, ಸಮಸ್ತ ಇಂದ್ರಿಯಗಳನ್ನೂ ಅಸಮರ್ಥಗೊಳಿಸುವೆ. ಬುದ್ಧಿಯನ್ನು ವಿಭ್ರಮಗೊಳಿಸುವೆ. ಆದರೂ ನಿನ್ನ ಅನುಗ್ರಹದಿಂದ ಲೋಕ ಧನ್ಯವಾಗಿದೆ.''

---

೧. ಅನು : ತೀನಂಶ್ರೀ

ಕಾವ್ಯಪ್ರಯೋಜನ ಆನಂದದಲ್ಲೆ ಪರ್ಯವಸಾನಗೊಳ್ಳುವುದಿಲ್ಲ. ಆತ್ಮ ಸಂಸ್ಕಾರವನ್ನೂ ಉಂಟುಮಾಡುತ್ತದೆ, ಕಾವ್ಯ. ಅದು ಬಾಳಿಗೆ ಬೆಳಕು ಬೀರುತ್ತದೆ; ಪುರುಷಾರ್ಥ ಸಾಧಕವಾಗುತ್ತದೆ. 'ಕವಿರಾಜಮಾರ್ಗ' ಕಾರ ಹೇಳುವಂತೆ, ''ಪಾಪ ಮಿದು–ಪುಣ್ಯಮಿದು, ಹಿತರೂಪಮಿದು–ಅಹಿತಪ್ರಕಾರಮಿದು, ಸುಖಮಿದು–ದುಃಖೋಪಾತ್ತಮಿದು'' ಎಂಬ ವಿವೇಚನೆಗೆ ನೆರವಾಗುತ್ತದೆ. ಅದರಿಂದ ತುಷ್ಟಿ ಮಾತ್ರವಲ್ಲ, ಪುಷ್ಟಿಯೂ ಉಂಟು. ಆದರೆ ಇತರ ಕಾವ್ಯ ಪ್ರಯೋಜನಗಳೇನಿದ್ದರೂ ಆನಂದದ ಮೂಲಕವೇ ಪ್ರಾಪ್ತವಾಗಬೇಕು. ಆನಂದವನ್ನುಂಟುಮಾಡುವುದು ಕಾವ್ಯದ ಸ್ವಧರ್ಮ; ಅದನ್ನು ತ್ಯಜಿಸದೆಯೆ ಇತರ ಪ್ರಯೋಜನಗಳನ್ನೂ ಸಾಧಿಸುತ್ತದೆ ಸತ್ ಕಾವ್ಯ. ವಾಸ್ತವವಾಗಿ, 'ಆನಂದ' ಎಂಬ ಮಾತೆ ಎಲ್ಲ ಪ್ರಯೋಜನಗಳನ್ನೂ ಒಳಗೊಳ್ಳುತ್ತದೆ. ಅದು ಕೇವಲ ಸುಖವಲ್ಲ, ಕ್ಷಣಿಕ ಮನೋರಂಜನವಲ್ಲ. ಆನಂದ, ರಸಾನುಭವಗಳು ಲೋಕೋತ್ತರ; ಅವುಗಳ ಪರಿಣಾಮ ದೀರ್ಘಕಾಲೀನ. ಕಾವ್ಯಾನಂದವನ್ನು ಬ್ರಹ್ಮಾನಂದ ಸಹೋದರ ಎಂದು ಕರೆದಿದ್ದಾರೆ. ಆದರೆ, ಬ್ರಹ್ಮ ಯೋಗ, ಸಮಾಧಿ ಮುಂತಾದುವೆಲ್ಲ ಸಾಮಾನ್ಯರಿಗೆ ಎಟುಕದ ನುಡಿಗಳು ಮತ್ತು ನಿಲುವುಗಳು. ಅವುಗಳ ಹೆಸರೆತ್ತದೆಯೆ, ಕಾವ್ಯದಿಂದೊದಗುವ ಅಸಾಧಾರಣ ಸಂತೋಷ ಮತ್ತು ಶ್ರೇಯಸ್ಸನ್ನು ಸಮರ್ಥಿಸುವುದು ಸಾಧ್ಯ.

ಇಂದಿನ ದಿನಗಳಲ್ಲಿ ಸಂಸಾರ ವಿಷವೃಕ್ಷ ಶಾಖೋಪಶಾಖೆಗಳಿಂದ ನಿಬಿಡವಾದ ಹೆಮ್ಮರವಾಗಿ, ಸೊಂಪಾಗಿ ವರ್ಧಿಸುತ್ತಿದೆ. ಆದರೆ ಅದರ ಎರಡು ಹಣ್ಣುಗಳು–ಕಾವ್ಯಾಮೃತ ರಸಾಸ್ವಾದ ಮತ್ತು ಸಜ್ಜನಸಲ್ಲಾಪ–ವಿರಳವಾಗುತ್ತಿವೆ ; ಜನತೆಗೆ ಅವುಗಳಲ್ಲಿ ಆಸಕ್ತಿಯೂ ಕಡಿಮೆಯಾಗುತ್ತಿದೆ. ಈ ಪರಿಸ್ಥಿತಿ ತಪ್ಪಬೇಕು. ವಿಷವೃಕ್ಷ ವಿಪುಲವಾಗಿ ಅಮೃತಫಲಗಳನ್ನು ಬಿಡಲಿ; ಜನತೆ ಅವುಗಳನ್ನು ಸವಿದು ತಣಿದು ಶುಭಪಾತ್ರರೂ ಅಮೃತಪುತ್ರರೂ ಆಗಲಿ.

■■

೪೭. ಪ್ರತೀಕಾರ

ಮಾನವನಲ್ಲಿ ದಾನವಾಂಶ, ದೇವಾಂಶಗಳೆರಡೂ ಕೂಡಿಕೊಂಡಿವೆ. ದಾನವಾಂಶವನ್ನು ನಿಗ್ರಹಿಸಿ, ದೇವಾಂಶವನ್ನು ಜಾಗೃತಿಗೊಳಿಸುವುದು ಮತ್ತು ಸಂವರ್ಧನಗೊಳಿಸುವುದು ಎಲ್ಲ ಸಾಧನೆಯ ಗುರಿ. ಅಧ್ಯಾತ್ಮ, ಧರ್ಮ, ಕಲೆ, ಸಂಸ್ಕೃತಿ, ನಾಗರಿಕತೆಗಳೆಲ್ಲ ಇದೇ ಕರ್ತವ್ಯಕ್ಕೆ – ಮಾನವನ ದೈವೀಕರಣಕ್ಕೆ–ನೋಂತಿವೆ.

ರಾಗದ್ವೇಷಗಳ ತೌರುಮನೆ ಮಾನವನ ಮನಸ್ಸು. ತನ್ನವರನ್ನು ಮತ್ತು ತನಗೆ ಒಳಿತು ಮಾಡಿದವರನ್ನು ಮಾತ್ರ ಪ್ರೀತಿಸುವುದು, ಕೆಡುಕು ಮಾಡಿದವರನ್ನು ದ್ವೇಷಿಸುವುದು ಮಾನವ ಸಹಜ ಗುಣ. ಈ ರಾಗದ್ವೇಷಗಳನ್ನು ಅವನು ಉದಾತ್ತೀಕರಿಸಬಲ್ಲನಾದರೆ ದೇವತ್ವದ ಹಾದಿ ಹಿಡಿಯುತ್ತಾನೆ. ಎಲ್ಲರನ್ನೂ, ತನ್ನ ಶತ್ರುಗಳನ್ನು ಕೂಡ, ಅವನು ಪ್ರೀತಿಸುವುದನ್ನು ಕಲಿಯಬೇಕು. ಇದು ರಾಗದ ಉದಾತ್ತೀಕರಣ. ಇನ್ನು ದ್ವೇಷದ ಉದಾತ್ತೀಕರಣ ಹೇಗೆ ?

ತನಗೆ ಕೆಡುಕು ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳಬೇಕು, ಕೆಟ್ಟುದಕ್ಕೆ ಪ್ರತಿಯಾಗಿ ಕೆಟ್ಟದ್ದು ಮಾಡಬೇಕು ಎಂದು ಮಾನವ ಸ್ವಾಭಾವಿಕವಾಗಿ ಬಯಸುತ್ತಾನೆ. ಈ ಪ್ರತೀಕಾರ ಪ್ರವೃತ್ತಿಯಿಂದ ಸೇಡು ಮರಿಗೆ ಮರಿಯಿಕ್ಕುತ್ತ ಸರಪಳಿಯಾಗುತ್ತ ಹೋಗುತ್ತದೆ. ದ್ವೇಷದ ವಿಷವೃತ್ತವೊಂದು ನಿರ್ಮಿತವಾಗುತ್ತದೆ. ಇದರಿಂದ ಯಾರಿಗೂ ಸುಖವಿಲ್ಲ. ಈ ಸೇಡಿನ ಸರಪಳಿಯನ್ನು ಎಲ್ಲಿಯಾದರೂ ತುಂಡರಿಸಬೇಕು ; ಈ ವೈರದ ವಿಷವೃತ್ತವನ್ನು ಕತ್ತರಿಸಬೇಕು. ಆಗ ಮಾತ್ರವೇ ಮನುಕುಲಕ್ಕೆ ಮಂಗಳ.

ಅನ್ಯಾಯ ಮಾಡಿದವರನ್ನು ಕ್ಷಮಿಸಿಬಿಡಬೇಕು, ಹಿಂಸೆಗೆ ಪ್ರತಿಹಿಂಸೆ ಸಲ್ಲದು ಎನ್ನುತ್ತದೆ ಅಹಿಂಸಾ ತತ್ತ್ವ. ''ಒಂದು ಕೆನ್ನೆಗೆ ಹೊಡೆದವನಿಗೆ ಮತ್ತೊಂದು ಕೆನ್ನೆಯನ್ನೊಡ್ಡು'' ಎಂಬ ಕ್ರಿಸ್ತನ ಉಪದೇಶದಲ್ಲಿರತಕ್ಕದ್ದು ಇದೇ ಭಾವ. ಕ್ಷಮೆಯೊಂದು ಕವಚವಿದ್ದಂತೆ. ಸಂಸ್ಕೃತ ಸೂಕ್ತಿಯೊಂದು ಹೀಗಿದೆ :

ಕ್ಷಮೆಯ ಶಸ್ತ್ರವ ಹಿಡಿದ ಮನುಜನಿಗೇನ ಗೈವನು ದುರ್ಜನ ?
ಹುಲ್ಲಿರದ ಕಡೆ ಬಿದ್ದ ಬೆಂಕಿಯು ತಾನೆ ಪಡೆವುದು ಪ್ರಶಮವ !

ಕ್ಷಮೆಯಿಂದ ಎದುರಾಳಿಯ ಹೃದಯ ಪರಿವರ್ತನೆಯಾಗುವುದು ಸಂಭಾವ್ಯ. ಆದರೆ ಕ್ಷಮೆ ಒಂದು ಬಗೆಯ ತಾಟಸ್ಥ್ಯ. ಮಾನವನ ಪ್ರತೀಕಾರ ಸ್ವಭಾವಕ್ಕೆ ಇದರಿಂದ ತೃಪ್ತಿಯಿಲ್ಲ, ಕ್ಷಮಾಗುಣವನ್ನು ಅವನು ನಿರವಧಿಯಾಗಿ ವಿಸ್ತರಿಸಿ, ಸೇಡು ತೀರಿಸಿಕೊಳ್ಳಬೇಕು. ಎಂಥ ಸೇಡು ? ಉದಾತ್ತವೂ ಉದಾರವೂ ಆದ ಸೇಡು ! ಅಪಕಾರಕ್ಕೆ ಬದಲು ಉಪಕಾರ ಮಾಡುವುದರ ಮೂಲಕ, ಕೆಡುಕಿಗೆ ಬದಲು ಒಳಿತನ್ನು ಹಿಂದಿರುಗಿಸುವುದರ ಮೂಲಕ ಇಂಥ ಉದಾತ್ತ ಪ್ರತೀಕಾರ ಸಾಧ್ಯ. ಇದು ಅತ್ಯಂತ ಪ್ರಭಾವಶಾಲಿಯಾದುದು ; ಮನಃಪರಿವರ್ತನೆಯಲ್ಲಿ ಮಹತ್‌ಪಾತ್ರ ವಹಿಸುವ, ದ್ವೇಷವನ್ನು ನಿಸ್ಸಂಶಯವಾಗಿ ಪ್ರೀತಿಗೆ ತಿರುಗಿಸುವ ಇತ್ಯಾತ್ಮಕ ಶಕ್ತಿ.

ಈ ಸಂಬಂಧವಾಗಿ, ಬಾರ್ಬ್ರಾಲ್ಡ್ ಎಂಬಾಕೆ ಹೇಳಿರುವ ಒಂದು ಸತ್ಯ ಕಥೆ ನೆನಪಿಗೆ ಬರುತ್ತದೆ. ಜಿನೋವಾ ಗಣರಾಜ್ಯದಲ್ಲಿ ಶ್ರೀಮಂತ ಮತ್ತು ಸಾಮಾನ್ಯ ಜನತೆಯ ಎರಡು ಪಕ್ಷಗಳಿದ್ದ ಕಾಲದಲ್ಲಿ ಉಬರ್ಟೋ ಎಂಬಾತ ಜನತಾಪಕ್ಷದ ಅಧ್ಯಕ್ಷನಾಗಿ ಸಾಕಷ್ಟು ಕಾಲ ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಂಡು ಬಂದ. ಅವನದು ತೀರಾ ಸಾಮಾನ್ಯವಾದ ಹುಟ್ಟು ; ಆದರೆ ಘನವಾದ ವ್ಯಕ್ತಿತ್ವ. ಕಡೆಗೂ ಶ್ರೀಮಂತರು ಪ್ರಜಾಪ್ರಭುತ್ವವನ್ನು ಉರುಳಿಸಿ, ಉಬರ್ಟೋವನ್ನು ದೇಶದ್ರೋಹದ ಆಪಾದನೆಯ ಮೇಲೆ ಬಂಧಿಸಿ, ಅವನ ಆಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು, ಅವನನ್ನು ಗಡಿಪಾರು ಮಾಡಲು ನಿರ್ಧರಿಸಿದರು. ಅಡೋರ್ನೋ ಎಂಬ ದುರಹಂಕಾರಿ ನ್ಯಾಯಾಧೀಶ ಉಬರ್ಟೋಗೆ ಆ ಶಿಕ್ಷೆಯನ್ನು ವಿಧಿಸಿದ್ದಲ್ಲದೆ ''ಎಲೊ, ಕೀಳು ಕುಲದವನೆ'' ಮುಂತಾದ ತುಚ್ಛವಾದ ಮಾತುಗಳಿಂದ ಹೀಯಾಳಿಸಿದ. ನ್ಯಾಯಾಲಯದ ತೀರ್ಪನ್ನು ಸ್ವೀಕರಿಸಿದ ಉಬರ್ಟೋ, ''ನೀನು ಬಳಸಿದ ಭಾಷೆಗಾಗಿ ಪಶ್ಚಾತ್ತಾಪ ಪಡುವ ಕಾಲ ಬರಬಹುದು''ಎಂದಷ್ಟೆ ಅಡೋರ್ನೋಗೆ ಹೇಳಿ, ಒಂದು ಹಡಗಿನಲ್ಲಿ ನೇಪಲ್ಸ್‌ಗೆ ಹೊರಟುಹೋದ. ಬಳಿಕ ಅವನು ವೆನಿಸ್‌ಗೆ ಸೇರಿದ ಆರ್ಚಿಪೆಲಗೊ ದ್ವೀಪವೊಂದರಲ್ಲಿ ನೆಲಸಿ, ವಿಪುಲವಾದ ಐಶ್ವರ್ಯವನ್ನೂ ಕೀರ್ತಿ ಗೌರವಗಳನ್ನೂ ಸಂಪಾದಿಸಿದ. ಒಮ್ಮೆ ಅವನು ಟ್ಯೂನಿಸ್ ನಗರಕ್ಕೆ ಹೋಗಿದ್ದಾಗ, ಅಲ್ಲಿ ಗುಲಾಮನಾಗಿ ಕರುಣಾಜನಕ ಸ್ಥಿತಿಯಲ್ಲಿ ದುಡಿಯುತ್ತಿದ್ದ ಒಬ್ಬ ತರುಣ ಅವನ ಗಮನವನ್ನು ಸೆಳೆದ. ವಿಚಾರಿಸಿದಾಗ, ತಾನು ಜಿನೋವಾದವನೆಂದೂ ಅಡೋರ್ನೋ ಎಂಬವನು ತನ್ನ ತಂದೆಯೆಂದೂ ತಾನು ಒತ್ತೆಯಾಳಾಗಿ ಇಲ್ಲಿ ಸೆರೆಸಿಕ್ಕಿರುವುದಾಗಿಯೂ ಅವನು ತಿಳಿಸಿದ. ಅಡೋರ್ನೋ ಎಂಬ ಹೆಸರನ್ನು ಕೇಳಿದೊಡನೆಯೆ ಉಬರ್ಟೋ ತನಗೆ ತಾನೆ ಹೇಳಿಕೊಂಡ : ''ದೇವರೆ ! ಸೇಡು ತೀರಿಸಿಕೊಳ್ಳುವ ಸಮಯವೀಗ ಬಂದಿದೆ !'' ಅನಂತರ ಅವನು ಆ ಯುವಕನನ್ನು ಬಂಧಿಸಿದ್ದವರಿಗೆ ಅಪಾರವಾದ ಒತ್ತೆಹಣವನ್ನು ತೆತ್ತು, ಅವನನ್ನು ಬಿಡಿಸಿಕೊಂಡ. ಅವನ ಸಂಕೋಲೆಗಳನ್ನು ತಾನೆ ತೆಗೆದು, ವಸ್ತ್ರಗಳನ್ನು ಬದಲಿಸುವಂತೆ ಮಾಡಿ, ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಮನೆಗೆ ಕರೆದೊಯ್ದ. ಅವನನ್ನು ತಂದೆಯಂತೆ ಬಹಳ ಆಕ್ಕರೆಯಿಂದ ನೋಡಿಕೊಳ್ಳುತ್ತ ತನ್ನ ಮನೆಯಲ್ಲಿ ಕೆಲವು ದಿನ ಇರಿಸಿಕೊಂಡಿದ್ದು, ಅನಂತರ ಅವನ ಕೈಗೆ ಒಂದು ಹಣದ ಚೀಲವನ್ನೂ ಮತ್ತೊಂದು ಕೈಗೆ ಪತ್ರವನ್ನೂ ಕೊಟ್ಟು, ''ನಿನ್ನನ್ನು ಇಷ್ಟು ದಿನ ನನ್ನ ಮನೆಯಲ್ಲಿರಿಸಿಕೊಳ್ಳುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ. ನಿನ್ನ ತಂದೆ ತಾಯಿಗಳಿಂದಲೂ ಸ್ನೇಹಿತರಿಂದಲೂ ನಿನ್ನನ್ನು ಅಗಲಿಸಿ ಮತ್ತಷ್ಟು ಕಾಲ ಇರಿಸಿಕೊಳ್ಳುವುದು ಕ್ರೌರ್ಯವಾದೀತು. ಈ ಪತ್ರವನ್ನು ನಿನ್ನ ತಂದೆಗೆ ಕೊಡು. ಅವನಿಗೆ ನನ್ನ ನೆನಪಾಗಬಹುದು'' ಎಂದು ಹೇಳಿ ಬೀಳ್ಕೊಟ್ಟ. ಯುವಕ ಸುಖವಾಗಿ ತನ್ನ ಊರಿಗೆ ಹಿಂದಿರುಗಿದಾಗ ಅವನ ತಂದೆತಾಯಿಗಳಿಗಾದ ಆನಂದ ಅಷ್ಟಿಷ್ಟಲ್ಲ. ಅವನು ಟ್ಯೂನಿಸ್‌ನಲ್ಲಿ ಒತ್ತೆಯಾಳಾಗಿದ್ದುದನ್ನು ತಿಳಿದ ಅಡೋರ್ನೋ, ''ನಿನ್ನನ್ನು ನನಗೆ ಮರಳಿ ದೊರಕಿಸಿಕೊಟ್ಟುದಕ್ಕಾಗಿ ನಾನು ಯಾರಿಗೆ ಕೃತಜ್ಞನಾಗಿರಬೇಕು ?'' ಎಂದು ಮಗನನ್ನು ಕೇಳಿದ. ಆಗ ಯುವಕ ತನ್ನಲ್ಲಿದ್ದ ಪತ್ರವನ್ನು ಕೊಟ್ಟ. ಅದರಲ್ಲಿ ಹೀಗೆ ಬರೆದಿತ್ತು:

“ನೀನಾಡಿದ ಮಾತುಗಳಿಗಾಗಿ ಪಶ್ಚಾತ್ತಾಪ ಪಡುವ ಕಾಲ ಬರಬಹುದು ಎಂದು ಹೇಳಿದ್ದ ಕೀಳು ಕುಲದ ವ್ಯಕ್ತಿಗೆ, ತನ್ನ ನುಡಿ ದಿಟವಾದುದಕ್ಕಾಗಿ ಈಗ ತೃಪ್ತಿಯಾಗಿದೆ. ಅಯ್ಯಾ, ಶ್ರೀಮಂತ! ನಿನ್ನ ಏಕೈಕ ಪುತ್ರನನ್ನು ರಕ್ಷಿಸಿದವನು ಬಹುಷ್ಕೃತ ಉಬರ್ಟೋ ಎಂಬುದನ್ನು ತಿಳಿ”. ಅಡೋರ್ನೋ ಮುಖ ಮುಚ್ಚಿಕೊಂಡು ಅತ್ತ. ಬಳಿಕ, ಇತರ ಶ್ರೀಮಂತರೊಡನೆ ಚರ್ಚಿಸಿ, ಉಬರ್ಟೋಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದು ಮಾಡಿ, ಜಿನೋವಕ್ಕೆ ಅವನು ಹಿಂದಿರುಗಲು ಅನುಮತಿ ಕೊಟ್ಟ. ಉಬರ್ಟೋ ಸ್ನೇಹದ ಕರೆಯನ್ನು ಮನ್ನಿಸಿ, ತನ್ನ ತಾಯ್ನಾಡಿಗೆ ಮರಳಿ, ಎಲ್ಲರ ಗೌರವಕ್ಕೆ ಪಾತ್ರನಾಗಿ, ತನ್ನ ಕಡೆಯ ದಿನಗಳನ್ನು ಶಾಂತಿಯಿಂದ ಕಳೆದ.

ಪಂಪನ ‘ಆದಿಪುರಾಣ’ದಲ್ಲಿ ಬರುವ ಭರತ–ಬಾಹುಬಲಿ ಪ್ರಸಂಗವನ್ನೂ ಇಲ್ಲಿ ಸ್ಮರಿಸಬಹುದು. ಭರತಚಕ್ರಿ ಷಟ್ಖಂಡ ಭೂಮಂಡಲವನ್ನೂ ಗೆದ್ದು ಗಂಡಗರ್ವದಿಂದ ತನ್ನ ತಮ್ಮನಾದ ಬಾಹುಬಲಿಯ ರಾಜಧಾನಿಗೆ ಬಂದು ಅವನನ್ನು ಕೆಣಕುತ್ತಾನೆ. ಅಣ್ಣ ತಮ್ಮಂದಿರಿಗೆ ಬಹುಬಗೆಯ ಯುದ್ಧ ನಡೆದು ಭರತ ಪರಾಜಿತನಾಗುತ್ತಾನೆ. ಮನಸ್ಸು ಮಾಡಿದ್ದರೆ ಬಾಹುಬಲಿ ಅವನನ್ನು ಕೊಂದು ಸೇಡು ತೀರಿಸಿಕೊಳ್ಳಬಹುದಿತ್ತು; ಆದರೆ ಅವನು ಹಾಗೆ ಮಾಡಲಿಲ್ಲ. ಅವನು ಪ್ರತೀಕಾರ ಮಾಡುತ್ತಾನೆ, ತನ್ನದೇ ಆದ ಲೋಕೋತ್ತರವೂ ಮೇರುಸದೃಶವೂ ಆದ ನಿಲುವಿನಿಂದ. ಇದ್ದಕ್ಕಿದ್ದಂತೆ ವಿರಕ್ತನಾಗಿ ಅಣ್ಣನಿಗೆ ಹೇಳುತ್ತಾನೆ: “ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಂ, ಈ ಭಟಖಡ್ಗ ಮಂಡಲೋತ್ಪಲ ವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ”. ತಾನು ತಪಸ್ಸಿಗೆ ಹೋಗುವುದಾಗಿ ನಿರ್ಧರಿಸುತ್ತಾನೆ, ಬಾಹುಬಲಿ. ಇದರಿಂದ ಭರತನ ಮನಸ್ಸು ಕರಗಿ ಪರಿವರ್ತಿತವಾಗಿ, ಅವನು ತಮ್ಮನಿಗೆ ನುಡಿಯುತ್ತಾನೆ : “ನೀನೊರ್ಬನಯ್ ಮನುವಂಶಕ್ಕೆ ಲಲಾಮನಪ್ಪನುಜನಯ್, ಬೇಡಮ್ಮ, ನೀನುಂ ತಪೋವನಮಂ ಸಾರ್ವುದುಮಾನದಾರ್ಗೆ ಮೆಚ್ಚಿವೆಂ ಮತ್ಸಾಮ್ರಾಜ್ಯ ಸಾಮ್ರಾಜ್ಯಮಂ ?” ಅವನು ತಲೆಬಾಗಿ ಬಾಹುಬಲಿಯ ಪಾದಗಳ ಮೇಲೆ ಕಂಬನಿಗರೆಯುತ್ತಾನೆ; ಭರತನ ತಲೆಯ ಮೇಲೆ ಬಾಹುಬಲಿಯ ಕಂಬನಿ ಸುರಿಯುತ್ತದೆ :

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮ ಬಾ
ಷ್ಪಜಲೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಟ್ಟುದೆಂಬಾಶಂಕೆಯಂ ಮಾಡಿದಂ

ಎಂಥ ದಿವ್ಯ ದೃಶ್ಯ! ತ್ಯಾಗಕ್ಕಾಗಿ ಇಲ್ಲಿ ಸ್ಪರ್ಧೆ ನಡೆಯುತ್ತದೆ; ರಾಜ್ಯ ನನಗೆ ಬೇಡ, ನನಗೆ ಬೇಡ ಎಂಬ ಹುರುಡು ಸೋದರರಲ್ಲಿ ಉಂಟಾಗುತ್ತದೆ. ಜೀವನದಲ್ಲಿ ಇಂಥ ಸ್ಪರ್ಧಾ ಮನೋಭಾವ, ಪ್ರತೀಕಾರ ಮನೋಭಾವ ಬೇಕು–ಒಳ್ಳಿನ ಸಿದ್ಧಿಗಾಗಿ. ಅದಕ್ಕೆ ಮೂಲ ಹತಾಶೆಯಲ್ಲ, ಹಿತಾಶೆ.

■■

ಈ ಸಂಬಂಧವಾಗಿ, ಬಾರ್ಬಾಲ್ಡ್ ಎಂಬಾಕೆ ಹೇಳಿರುವ ಒಂದು ಸತ್ಯ ಕಥೆ ನೆನಪಿಗೆ ಬರುತ್ತದೆ. ಜಿನೋವಾ ಗಣರಾಜ್ಯದಲ್ಲಿ ಶ್ರೀಮಂತ ಮತ್ತು ಸಾಮಾನ್ಯ ಜನತೆಯ ಎರಡು ಪಕ್ಷಗಳಿದ್ದ ಕಾಲದಲ್ಲಿ ಉಬರ್ಟೋ ಎಂಬಾತ ಜನತಾಪಕ್ಷದ ಅಧ್ಯಕ್ಷನಾಗಿ ಸಾಕಷ್ಟು ಕಾಲ ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಂಡು ಬಂದ. ಅವನದು ತೀರಾ ಸಾಮಾನ್ಯವಾದ ಹುಟ್ಟು ; ಆದರೆ ಘನವಾದ ವ್ಯಕ್ತಿತ್ವ. ಕಡೆಗೂ ಶ್ರೀಮಂತರು ಪ್ರಜಾಪ್ರಭುತ್ವವನ್ನು ಉರುಳಿಸಿ, ಉಬರ್ಟೋವನ್ನು ದೇಶದ್ರೋಹದ ಆಪಾದನೆಯ ಮೇಲೆ ಬಂಧಿಸಿ, ಅವನ ಆಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು, ಅವನನ್ನು ಗಡಿಪಾರು ಮಾಡಲು ನಿರ್ಧರಿಸಿದರು. ಅಡೋರ್ನೋ ಎಂಬ ದುರಹಂಕಾರಿ ನ್ಯಾಯಾಧೀಶ ಉಬರ್ಟೋಗೆ ಆ ಶಿಕ್ಷೆಯನ್ನು ವಿಧಿಸಿದ್ದಲ್ಲದೆ ''ಎಲೊ, ಕೀಳು ಕುಲದವನೆ'' ಮುಂತಾದ ತುಚ್ಛವಾದ ಮಾತುಗಳಿಂದ ಹೀಯಾಳಿಸಿದ. ನ್ಯಾಯಾಲಯದ ತೀರ್ಪನ್ನು ಸ್ವೀಕರಿಸಿದ ಉಬರ್ಟೋ, ''ನೀನು ಬಳಸಿದ ಭಾಷೆಗಾಗಿ ಪಶ್ಚಾತ್ತಾಪ ಪಡುವ ಕಾಲ ಬರಬಹುದು''ಎಂದಷ್ಟೆ ಅಡೋರ್ನೋಗೆ ಹೇಳಿ, ಒಂದು ಹಡಗಿನಲ್ಲಿ ನೇಪಲ್ಸ್‌ಗೆ ಹೊರಟುಹೋದ. ಬಳಿಕ ಅವನು ವೆನಿಸ್‌ಗೆ ಸೇರಿದ ಆರ್ಚಿಪೆಲಗೊ ದ್ವೀಪವೊಂದರಲ್ಲಿ ನೆಲಸಿ, ವಿಪುಲವಾದ ಐಶ್ವರ್ಯವನ್ನೂ ಕೀರ್ತಿ ಗೌರವಗಳನ್ನೂ ಸಂಪಾದಿಸಿದ. ಒಮ್ಮೆ ಅವನು ಟ್ಯೂನಿಸ್ ನಗರಕ್ಕೆ ಹೋಗಿದ್ದಾಗ, ಅಲ್ಲಿ ಗುಲಾಮನಾಗಿ ಕರುಣಾಜನಕ ಸ್ಥಿತಿಯಲ್ಲಿ ದುಡಿಯುತ್ತಿದ್ದ ಒಬ್ಬ ತರುಣ ಅವನ ಗಮನವನ್ನು ಸೆಳೆದ. ವಿಚಾರಿಸಿದಾಗ, ತಾನು ಜಿನೋವಾದವನೆಂದೂ ಅಡೋರ್ನೋ ಎಂಬವನು ತನ್ನ ತಂದೆಯೆಂದೂ ತಾನು ಒತ್ತೆಯಾಳಾಗಿ ಇಲ್ಲಿ ಸೆರೆಸಿಕ್ಕಿರುವುದಾಗಿಯೂ ಅವನು ತಿಳಿಸಿದ. ಅಡೋರ್ನೋ ಎಂಬ ಹೆಸರನ್ನು ಕೇಳಿದೊಡನೆಯೆ ಉಬರ್ಟೋ ತನಗೆ ತಾನೆ ಹೇಳಿಕೊಂಡ : ''ದೇವರೆ ! ಸೇಡು ತೀರಿಸಿಕೊಳ್ಳುವ ಸಮಯವೀಗ ಬಂದಿದೆ !'' ಅನಂತರ ಅವನು ಆ ಯುವಕನನ್ನು ಬಂಧಿಸಿದ್ದವರಿಗೆ ಅಪಾರವಾದ ಒತ್ತೆಹಣವನ್ನು ತೆತ್ತು, ಅವನನ್ನು ಬಿಡಿಸಿಕೊಂಡ. ಅವನ ಸಂಕೋಲೆಗಳನ್ನು ತಾನೆ ತೆಗೆದು, ವಸ್ತ್ರಗಳನ್ನು ಬದಲಿಸುವಂತೆ ಮಾಡಿ, ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಮನೆಗೆ ಕರೆದೊಯ್ದ. ಅವನನ್ನು ತಂದೆಯಂತೆ ಬಹಳ ಆಕ್ಕರೆಯಿಂದ ನೋಡಿಕೊಳ್ಳುತ್ತ ತನ್ನ ಮನೆಯಲ್ಲಿ ಕೆಲವು ದಿನ ಇರಿಸಿಕೊಂಡಿದ್ದು, ಅನಂತರ ಅವನ ಕೈಗೆ ಒಂದು ಹಣದ ಚೀಲವನ್ನೂ ಮತ್ತೊಂದು ಕೈಗೆ ಪತ್ರವನ್ನೂ ಕೊಟ್ಟು, ''ನಿನ್ನನ್ನು ಇಷ್ಟು ದಿನ ನನ್ನ ಮನೆಯಲ್ಲಿರಿಸಿಕೊಳ್ಳುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ. ನಿನ್ನ ತಂದೆ ತಾಯಿಗಳಿಂದಲೂ ಸ್ನೇಹಿತರಿಂದಲೂ ನಿನ್ನನ್ನು ಅಗಲಿಸಿ ಮತ್ತಷ್ಟು ಕಾಲ ಇರಿಸಿಕೊಳ್ಳುವುದು ಕ್ರೌರ್ಯವಾದೀತು. ಈ ಪತ್ರವನ್ನು ನಿನ್ನ ತಂದೆಗೆ ಕೊಡು. ಅವನಿಗೆ ನನ್ನ ನೆನಪಾಗಬಹುದು'' ಎಂದು ಹೇಳಿ ಬೀಳ್ಕೊಟ್ಟ. ಯುವಕ ಸುಖವಾಗಿ ತನ್ನ ಊರಿಗೆ ಹಿಂದಿರುಗಿದಾಗ ಅವನ ತಂದೆತಾಯಿಗಳಿಗಾದ ಆನಂದ ಅಷ್ಟಿಷ್ಟಲ್ಲ. ಅವನು ಟ್ಯೂನಿಸ್‌ನಲ್ಲಿ ಒತ್ತೆಯಾಳಾಗಿದ್ದುದನ್ನು ತಿಳಿದ ಅಡೋರ್ನೋ, ''ನಿನ್ನನ್ನು ನನಗೆ ಮರಳಿ ದೊರಕಿಸಿಕೊಟ್ಟುದಕ್ಕಾಗಿ ನಾನು ಯಾರಿಗೆ ಕೃತಜ್ಞನಾಗಿರಬೇಕು ?'' ಎಂದು ಮಗನನ್ನು ಕೇಳಿದ. ಆಗ ಯುವಕ ತನ್ನಲ್ಲಿದ್ದ ಪತ್ರವನ್ನು ಕೊಟ್ಟ. ಅದರಲ್ಲಿ ಹೀಗೆ ಬರೆದಿತ್ತು :

''ನೀನಾಡಿದ ಮಾತುಗಳಿಗಾಗಿ ಪಶ್ಚಾತ್ತಾಪ ಪಡುವ ಕಾಲ ಬರಬಹುದು ಎಂದು ಹೇಳಿದ್ದ ಕೀಳು ಕುಲದ ವ್ಯಕ್ತಿಗೆ, ತನ್ನ ನುಡಿ ದಿಟವಾದುದಕ್ಕಾಗಿ ಈಗ ತೃಪ್ತಿಯಾಗಿದೆ. ಅಯ್ಯಾ, ಶ್ರೀಮಂತ ! ನಿನ್ನ ಏಕೈಕ ಪುತ್ರನನ್ನು ರಕ್ಷಿಸಿದವನು ಬಹಿಷ್ಕೃತ ಉಬರ್ಟೋ ಎಂಬುದನ್ನು ತಿಳಿ''. ಅಡೋರ್ನೊ ಮುಖ ಮುಚ್ಚಿಕೊಂಡು ಅತ್ತ. ಬಳಿಕ, ಇತರ ಶ್ರೀಮಂತರೊಡನೆ ಚರ್ಚಿಸಿ, ಉಬರ್ಟೋಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದು ಮಾಡಿ, ಜಿನೋವಕ್ಕೆ ಅವನು ಹಿಂದಿರುಗಲು ಅನುಮತಿ ಕೊಟ್ಟ. ಉಬರ್ಟೋ ಸ್ನೇಹದ ಕರೆಯನ್ನು ಮನ್ನಿಸಿ, ತನ್ನ ತಾಯ್ನಾಡಿಗೆ ಮರಳಿ, ಎಲ್ಲರ ಗೌರವಕ್ಕೆ ಪಾತ್ರನಾಗಿ, ತನ್ನ ಕಡೆಯ ದಿನಗಳನ್ನು ಶಾಂತಿಯಿಂದ ಕಳೆದ.

ಪಂಪನ 'ಆದಿಪುರಾಣ'ದಲ್ಲಿ ಬರುವ ಭರತ–ಬಾಹುಬಲಿ ಪ್ರಸಂಗವನ್ನೂ ಇಲ್ಲಿ ಸ್ಮರಿಸಬಹುದು. ಭರತಚಕ್ರಿ ಷಟ್ಖಂಡ ಭೂಮಂಡಲವನ್ನೂ ಗೆದ್ದು, ಗಂಡಗರ್ವದಿಂದ ತನ್ನ ತಮ್ಮನಾದ ಬಾಹುಬಲಿಯ ರಾಜಧಾನಿಗೆ ಬಂದು ಅವನನ್ನು ಕೆಣಕುತ್ತಾನೆ. ಅಣ್ಣ ತಮ್ಮಂದಿರಿಗೆ ಬಹುಬಗೆಯ ಯುದ್ಧ ನಡೆದು ಭರತ ಪರಾಜಿತನಾಗುತ್ತಾನೆ. ಮನಸ್ಸು ಮಾಡಿದ್ದರೆ ಬಾಹುಬಲಿ ಅವನನ್ನು ಕೊಂದು ಸೇಡು ತೀರಿಸಿಕೊಳ್ಳಬಹುದಿತ್ತು; ಆದರೆ ಅವನು ಹಾಗೆ ಮಾಡಲಿಲ್ಲ. ಅವನು ಪ್ರತೀಕಾರ ಮಾಡುತ್ತಾನೆ, ತನ್ನದೇ ಆದ ಲೋಕೋತ್ತರವೂ ಮೇರುಸದೃಶವೂ ಆದ ನಿಲುವಿನಿಂದ. ಇದ್ದಕ್ಕಿದ್ದಂತೆ ವಿರಕ್ತನಾಗಿ ಅಣ್ಣನಿಗೆ ಹೇಳುತ್ತಾನೆ: ''ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಂ, ಈ ಭಟಖಡ್ಗ ಮಂಡಲೋತ್ಪಲ ವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ''. ತಾನು ತಪಸ್ಸಿಗೆ ಹೋಗುವುದಾಗಿ ನಿರ್ಧರಿಸುತ್ತಾನೆ, ಬಾಹುಬಲಿ. ಇದರಿಂದ ಭರತನ ಮನಸ್ಸು ಕರಗಿ ಪರಿವರ್ತಿತವಾಗಿ, ಅವನು ತಮ್ಮನಿಗೆ ನುಡಿಯುತ್ತಾನೆ : ''ನೀನೊರ್ಬನಯ್ ಮನುವಂಶಕ್ಕೆ ಲಲಾಮನಪ್ಪನುಜನಯ್, ಬೇಡಮ್ಮ, ನೀನುಂ ತಪೋವನಮಂ ಸಾರ್ವುದುಮಾನದಾರ್ಗೆ ಮೆಚಿವೆಂ ಮತ್ರಾಜ್ಯ ಸಾಮ್ರಾಜ್ಯಮಂ ?'' ಅವನು ತಲೆಬಾಗಿ ಬಾಹುಬಲಿಯ ಪಾದಗಳ ಮೇಲೆ ಕಂಬನಿಗರೆಯುತ್ತಾನೆ; ಭರತನ ತಲೆಯ ಮೇಲೆ ಬಾಹುಬಲಿಯ ಕಂಬನಿ ಸುರಿಯುತ್ತದೆ :

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮ ಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಟ್ಟುದೆಂಬಾಶಂಕೆಯಂ ಮಾಡಿದಂ

ಎಂಥ ದಿವ್ಯ ದೃಶ್ಯ ! ತ್ಯಾಗಕ್ಕಾಗಿ ಇಲ್ಲಿ ಸ್ಪರ್ಧೆ ನಡೆಯುತ್ತದೆ; ರಾಜ್ಯ ನನಗೆ ಬೇಡ, ನನಗೆ ಬೇಡ ಎಂಬ ಹುರುಡು ಸೋದರರಲ್ಲಿ ಉಂಟಾಗುತ್ತದೆ. ಜೀವನದಲ್ಲಿ ಇಂಥ ಸ್ಪರ್ಧಾ ಮನೋಭಾವ, ಪ್ರತೀಕಾರ ಮನೋಭಾವ ಬೇಕು–ಒಳ್ಳಿನ ಸಿದ್ಧಿಗಾಗಿ. ಅದಕ್ಕೆ ಮೂಲ ಹತಾಶೆಯಲ್ಲ, ಹಿತಾಶೆ.

■■

೪೮. ಅಹಿಂಸೆಯ ಮಿತಿ

ಶ್ಲೋಕಾರ್ಧೇ ತು ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ
ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ

ಇದು ವ್ಯಾಸರ ಅನುಶಾಸನ. ಪರೋಪಕಾರದಿಂದ ಪುಣ್ಯ, ಪರಪೀಡನೆಯಿಂದ ಪಾಪ: ಬದುಕಿನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಇದಕ್ಕಿಂತ ಸೂತ್ರವತ್ತಾಗಿ ಹೇಳುವುದು ಸಾಧ್ಯವಿಲ್ಲ. ಪರೋಪಕಾರ, ಪರಪೀಡನೆಯ ವರ್ಜನ ಎರಡನ್ನೂ ನಾವಿಂದು 'ಅಹಿಂಸೆ' ಎಂಬ ಒಂದು ಮಾತಿನಲ್ಲಿ ಅಡಕಮಾಡಬಹುದು. (ಗಾಂಧೀಜಿಯ ವ್ಯಾಖ್ಯಾನದ ಪ್ರಕಾರ ಅಹಿಂಸೆಯೊಂದು ಇತ್ಯಾತ್ಮಕ ಶಕ್ತಿ).

ಜೀವನದಲ್ಲಿ ಅಹಿಂಸೆಯನ್ನು ಆಚರಿಸಬೇಕು, ಅದರಿಂದಲೇ ಅಸ್ತಿತ್ವಕ್ಕೆ ಸಾರ್ಥಕತೆ ಎಂಬುದರ ಬಗೆಗೆ ಭಿನ್ನಾಭಿಪ್ರಾಯವಿರಲಾರದು. ಆದರೆ ಅಹಿಂಸೆಯ ಅನುಷ್ಠಾನ ಯಾರು ಯಾರಿಗೆ ಯಾವ ಯಾವ ಪ್ರಮಾಣದಲ್ಲಿ ಸಾಧು ಮತ್ತು ಸಾಧ್ಯ ಎಂಬುದು ವಿಚಾರಾರ್ಹ. ಈ ದಿಶೆಯಲ್ಲಿ ಸಂನ್ಯಾಸಿಯೊಬ್ಬ ಹೋಗಬಹುದಾದಷ್ಟು ದೂರ ಸಂಸಾರಿಯೊಬ್ಬ ಹೋಗಲಾರ. ''ಅತಿ ಸರ್ವತ್ರ ವರ್ಜಯೇತ್'' ಎಂಬುದು ಉಳಿದೆಡೆಗಳಂತೆ ಇಲ್ಲಿಯೂ ಮಾನ್ಯ. ಸಾಮಾನ್ಯರಿಗೆ ಸುವರ್ಣ ಮಧ್ಯಮ ಮಾರ್ಗ ಕ್ಷೇಮಕರ. ದೇವತೆಗಳ ಹಿತಕ್ಕಾಗಿ ತನ್ನ ಬೆನ್ನು ಮೂಳೆಯನ್ನೆ ಕೊಟ್ಟ ದಧೀಚಿಯಾಗುವುದು, ಒಂದು ಪಾರಿವಾಳವನ್ನು ಕಾಪಾಡಲೋಸುಗ ಶರೀರ ತ್ಯಾಗಕ್ಕೆ ಸಿದ್ಧನಾದ ಶಿಬಿಯಾಗುವುದು, ಒಂದು ಸರ್ಪವನ್ನು ಉಳಿಸುವುದಕ್ಕಾಗಿ ತನ್ನ ದೇಹವನ್ನೆ ಗರುಡನಿಗೆ ಆಹಾರವಾಗಿತ್ತ ಜೀಮೂತವಾಹನನಾಗುವುದು ಎಲ್ಲರಿಗೂ ಶಕ್ಯವಿಲ್ಲ ; ಅದರ ಆವಶ್ಯಕತೆಯೂ ಇಲ್ಲ. ಶರೀರವಿದ್ದರೆ ಸಾಧ್ಯವಾದಷ್ಟು ಕಾಲ ಸಮಾಜಕ್ಕೆ ಸೇವೆ ಸಲ್ಲಿಸಬಹುದು ; ಅದನ್ನೆ ನೀಗಿಕೊಂಡರೆ ಏನು ಫಲ ? ''ಶರೀರಮಾದ್ಯಂ ಖಲು ಧರ್ಮಸಾಧನಂ'' (ಶರೀರವೆ ಮೊತ್ತಮೊದಲ ಧರ್ಮ ಸಾಧನ) ಎಂಬ ಕಾಳಿದಾಸನ ಉಕ್ತಿ ಬಹಳ ಅರ್ಥಪೂರ್ಣವಾದುದು. ಆತ್ಮ ಬಲಿ ಎಲ್ಲ ಸಂದರ್ಭಗಳಲ್ಲೂ ಅಪೇಕ್ಷಣೀಯವಲ್ಲ.

ಮನುಷ್ಯ ಒಳ್ಳೆಯವನಾಗಿರಬೇಕೆಂಬುದನ್ನು ಯಾರು ತಾನೆ ಒಪ್ಪುವುದಿಲ್ಲ? ಆದರೆ ಆ ಒಳ್ಳೆಯತನ ಹೊರಗೆ ಅಷ್ಟಾಗಿ ವ್ಯಕ್ತವಾಗಬಾರದು, ಅತಿರೇಕಕ್ಕೆ ಹೋಗಬಾರದು. ''ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ'' ಎಂಬಂತಿರಬೇಕು: ಹೊರಗೆ ವಜ್ರಕಾಠಿಣ್ಯ, ಒಳಗೆ ಕುಸುಮ ಕೋಮಲತೆ–ಇದು ಸಜ್ಜನರ ಆದರ್ಶವಾಗಬೇಕು. ಇಲ್ಲವಾದರೆ ಸೌಜನ್ಯ ಸ್ವನಾಶಕ್ಕೆ ಕಾರಣವಾಗಬಹುದು. ಒಳ್ಳೆಯತನವನ್ನು ದುರುಪಯೋಗಪಡಿಸಿಕೊಳ್ಳುವ ಜನ ಯಾವಾಗಲೂ ಇರುತ್ತಾರೆ:

ಹಾಲಿದೆ ಎಂದು ಗೊತ್ತಾದರೆ ಕೆಚ್ಚಲನ್ನೆ ಕತ್ತರಿಸುವುದಕ್ಕೂ ಕೆಲವರು ಹೇಸುವುದಿಲ್ಲ. ಅದಕ್ಕೆ ಅವಕಾಶ ಕೊಡಬಾರದು. ಒಳ್ಳೆಯತನ ಎಂದರೆ ಮೂರ್ಖತನವಲ್ಲ, ದೌರ್ಬಲ್ಯವಲ್ಲ. ಸಜ್ಜನಿಕೆಯ ಹೆಸರಿನಲ್ಲಿ ಬೆಪ್ಪುತಕ್ಕಡಿಗಳಾಗುವುದು ತಪ್ಪು. ಅಹಿಂಸೆ ಆತ್ಮಘಾತಕವಾಗದಂತೆ ನಿರಂತರ ಪರಿಜ್ಞಾನ, ಜಾಣ್ಮೆ ವ್ಯಕ್ತಗಿರಬೇಕು.

ಈ ಸಂದರ್ಭದಲ್ಲಿ ಎ.ಆರ್. ಕೃಷ್ಣಶಾಸ್ತ್ರಿಯವರು ಒಂದೆಡೆ ಆಡಿರುವ ಮಾತು ಗಮನಾರ್ಹವಾಗಿದೆ : ''ಅಹಿಂಸೆಯೆಂಬುದು ಅಪರಂಜಿಯ ಹಾಗೆ; ಶುದ್ಧ ಅಪರಂಜಿ ನಾಣ್ಯವಾಗುವುದಿಲ್ಲ, ವ್ಯವಹಾರಕ್ಕೆ ಸಲ್ಲುವುದಿಲ್ಲ; ಅದಕ್ಕೆ ಸ್ವಲ್ಪವಾದರೂ ಪೆಡಸಾದ, ಕೆಚ್ಚನೆಯ ತಾಮ್ರ ಬೆರೆಯಬೇಕು. ಹಾಗೆಯೇ, ರಾಜನಲ್ಲಿ ಸ್ವಲ್ಪ ಕಾಠಿಣ್ಯ ಬೇಕು.'' ಇಲ್ಲಿ ಅಹಿಂಸೆಯ ಅತಿರೇಕದ ಬಗ್ಗೆ ಎಚ್ಚರಿಕೆಯಿದೆ; ಕಾರ್ಯತಃ ಅಹಿಂಸೆ ಹೇಗಿರ ಬೇಕೆಂಬುದನ್ನು ಸೊಗಸಾದ ಹೋಲಿಕೆಯೊಂದರ ಮೂಲಕ ಮನಗಾಣಿಸಲಾಗಿದೆ. ರಾಜನಲ್ಲಿ ಮಾತ್ರವಲ್ಲ, ಎಲ್ಲರಲ್ಲೂ ಸ್ವಲ್ಪ ಕಾಠಿಣ್ಯ–ತೋರಿಕೆಯದಾದರೂ ಸರಿಯೆ– ಇರಬೇಕಾಗುತ್ತದೆ. ಇಲ್ಲವಾದಲ್ಲಿ ''ಪರರಿಗುಪಕಾರಿ, ತನಗೆ ಮಾರಿ'' ಎಂಬಂತಾದೀತು.

ಶುದ್ಧ ಲೌಕಿಕರೆ ಜಗತ್ತಿನಲ್ಲಿ ಬಹಳ ಮಂದಿ; ಶುದ್ಧ ಪಾರಮಾರ್ಥಿಕರು ಎಲ್ಲೋ ಕೆಲವರು. ಈ ನಡುವೆ, ಇಹ–ಪರಗಳೆರಡನ್ನೂ ಸಾಧಿಸಬಯಸುವವರದೊಂದು ಸಣ್ಣ ಗುಂಪು. ಇಂಥವರು ಪ್ರಪಂಚದಲ್ಲಿ ಹೇಗೆ ಬಾಳಬೇಕು ಎಂಬುದನ್ನು ಶ್ರೀರಾಮಕೃಷ್ಣ ಪರಮಹಂಸರು ಒಂದು ಸುಂದರವಾದ ಸಾಮತಿಯ ಮೂಲಕ ಶ್ರುತಪಡಿಸಿದ್ದಾರೆ. ಒಂದು ಕಾಡಿನಲ್ಲಿ ಒಂದು ವಿಷ ಸರ್ಪವಿತ್ತು; ಬಳಿ ಬಂದವರನ್ನೆಲ್ಲ ಕಚ್ಚುತ್ತಿತ್ತು. ಒಮ್ಮೆ ಒಬ್ಬ ಋಷಿ ಆ ಕಡೆ ಬಂದ. ದನ ಕಾಯುವ ಹುಡುಗರು ''ಸ್ವಾಮಿ, ಅಲ್ಲೊಂದು ಸರ್ಪವಿದೆ. ಅಲ್ಲಿ ಹೋಗಬೇಡಿ'' ಎಂದರು. ಋಷಿ ''ನನ್ನಲ್ಲಿ ಮಂತ್ರವಿದೆ'' ಎಂದು ಹೇಳಿ ಮುಂದೆ ಹೋದ. ಹಾವು ಹೆಡೆಯೆತ್ತಿ ಕಚ್ಚಲು ಬಂತು; ಆದರೆ ಅವನ ಮಂತ್ರಕ್ಕೆ ಮಣಿಯಿತು. ಅವನು ಆ ಹಾವಿಗೆ ಅಹಿಂಸೆಯ ದೀಕ್ಷೆ ಕೊಟ್ಟುಹೋದ. ಅಹಿಂಸಾವ್ರತಿಯಾದ ಸರ್ಪ ಮುಂದೆ ಯಾರನ್ನೂ ಕಚ್ಚುತ್ತಿರಲಿಲ್ಲ. ಅದು ಸಾಧುವಾಗಿರುವುದನ್ನು ಗಮನಿಸಿದ ಹುಡುಗರು ದೂರದಿಂದ ಕಲ್ಲೆಸೆದರು; ಅದು ಏನೂ ಮಾಡಲಿಲ್ಲ. ಹತ್ತಿರಕ್ಕೆ ಹೋದಾಗಲೂ ಅದು ತೆಪ್ಪಗಿತ್ತು. ಅವರು ಅದನ್ನು ಮೇಲಕ್ಕೆತ್ತಿ ಅಪ್ಪಳಿಸಿದರು. ಅದಕ್ಕೆ ಪ್ರಜ್ಞೆ ತಪ್ಪಿದಾಗ, ಸತ್ತುಹೋಯಿತೆಂದು ಹೊರಟು ಹೋದರು. ಬಳಿಕ ಹಾವು ಎಚ್ಚತ್ತು ಪ್ರಯಾಸದಿಂದ ಹುತ್ತವನ್ನು ಹೊಕ್ಕಿತು. ಹುಡುಗರ ಹೆದರಿಕೆಯಿಂದ ಅದು ಹಗಲು ಹೊರಬರದೆ, ರಾತ್ರಿ ಮಾತ್ರ ಬಂದು ಸಾತ್ವಿಕವಾದ ಆಹಾರವನ್ನು ಹುಡುಕಿ ತಿನ್ನುತ್ತಿತ್ತು. ಅದರ ದೇಹವೆಲ್ಲ ಕೃಶವಾಗಿ ಹೋಯಿತು. ಒಂದು ವರ್ಷದ ನಂತರ ಅದೇ ದಾರಿಯಲ್ಲಿ ಬಂದ ಋಷಿ, ತಾನು ದೀಕ್ಷೆ ಕೊಟ್ಟಿದ್ದ ಹಾವಿನ ಗತಿ ಏನಾಯಿತೆಂದು ತಿಳಿಯುವ ಕುತುಹಲದಿಂದ ಅದನ್ನು ಕೂಗಿ ಕರೆದ. ಅದು ಹುತ್ತದಿಂದ ಹೊರ ಬಂದು ವಂದಿಸಿತು. ''ಬಡಕಲಾದಂತೆ ತೋರುತ್ತಿದ್ದೀಯಲ್ಲಾ, ಏನು ಸಮಾಚಾರ?'' ಎಂದು ಋಷಿ ಕೇಳಿದ. ಆಗ

''ಯಾರನ್ನೂ ಹಿಂಸಿಸಬೇಡವೆಂದು ತಾವು ಹೇಳಿದ್ದಿರಿ. ಆದ್ದರಿಂದ ನಾನು ಸಾತ್ವಿಕವಾದ ಆಹಾರವನ್ನು ಮಾತ್ರ ತಿನ್ನುತ್ತಿದ್ದೇನೆ. ಆ ಕಾರಣದಿಂದ ಹೀಗಾಗಿರಬಹುದು'' ಎಂದಿತು ಹಾವು. ಹುಡುಗರು ಮಾಡಿದ ಕೀಟಲೆಯ ವಿಷಯ ಆಮೇಲೆ ಋಷಿಗೆ ತಿಳಿಯಿತು. ಅವನು ಛೀಮಾರಿ ಹಾಕಿದ: ''ಅಯ್ಯೋ ದಡ್ಡ, ನಾನು ಯಾರನ್ನೂ ಕಚ್ಚಿ ಕೊಲ್ಲಬೇಡವೆಂದು ಹೇಳಿದ್ದೇನೇ ಹೊರತು, ಹೆಡೆಯೆತ್ತಿ ಬುಸ್ಸೆಂದು ಹೆದರಿಸಬೇಡ ಎಂದು ಹೇಳಿದ್ದೇನೇ? ನೀನು ಬುಸ್ ಎಂದಿದ್ದರೆ ಹುಡುಗರು ನಿನ್ನ ತಂಟೆಗೇ ಬರುತ್ತಿರಲಿಲ್ಲ. ಆತ್ಮರಕ್ಷಣೆ ಮಾಡಿಕೊಳ್ಳಲಾರದೆ ಈ ಅವಸ್ಥೆಯನ್ನು ತಂದುಕೊಂಡೆಯಲ್ಲ!''

ಈ ಕತೆಗೆ ಹೆಚ್ಚು ವ್ಯಾಖ್ಯಾನ ಬೇಕಿಲ್ಲ. ಸಮಾಜಜೀವಿಯಾದವನು ಬಳಿ ಬಂದವರನ್ನು ಹೆದರಿಸಬೇಕು, ಆದರೆ ಕಚ್ಚಬಾರದು ; ಹಲಸಿನ ಹಣ್ಣಿನ ಮುಳ್ಳಿನಂತಿರಬೇಕು, ಚುಚ್ಚಬಾರದು. ಹಾಗೆ ತೋರಿಕೆಗಾದರೂ ಗಡುಸಾಗಿರದಿದ್ದರೆ ಆ ಹಾವಿನ ದಶೆಯೇ ಅವನಿಗೂ ಬರುತ್ತದೆ. ಮೆತ್ತಗಿರುವವನನ್ನು ಜನ ನುಂಗಿಹಾಕುತ್ತಾರೆ.

ಪ್ರಕೃತ ವಿಚಾರಕ್ಕೆ ಉಪಷ್ಟಂಭಕವಾಗುವ ಸಂಸ್ಕೃತ ಸೂಕ್ತಿಯೊಂದು ಹೀಗಿದೆ:

ಶಕ್ತನಾದರು ಕೂಡ ಶಕ್ತಿಯನು ಪ್ರಕಟಿಸದ
ಮನುಜನು ತಿರಸ್ಕಾರವನು ಪಡೆವನು :
ಮರದೊಳಡಗಿದ ಬೆಂಕಿಯನು ದಾಟುವುದು ಸುಲಭ;
ಉರಿವ ಬೆಂಕಿಯನೆಂತು ದಾಟಬಹುದು ?

ಭಾರವಿಕವಿ ಹೇಳುವ ಈ ಮಾತೂ ಗಮನಿಸತಕ್ಕುದು : ''ಜ್ವಲಿತಂ ನ ಹಿರಣ್ಯರೇತಸಂ ಚಯಮಾಸ್ಕಂದತಿ ಭಸ್ಮನಾಂ ಜನಃ'' (ಜನ ಬೂದಿಯನ್ನು ತುಳಿಯುತ್ತಾರೆ, ಆದರೆ ಉರಿಯುತ್ತಿರುವ ಬೆಂಕಿಯ ಹತ್ತಿರವೂ ಹೋಗುವುದಿಲ್ಲ).

ತಾತ್ಪರ್ಯವೇನೆಂದರೆ, ಯಾರೂ ಬೂದಿಯಾಗಬಾರದು, ದಳ್ಳುರಿಯೂ ಆಗಬಾರದು; ಜ್ವಲಿಸುವ ಕೆಂಡವಾಗಬೇಕು. ಇದು ಜೀವನದಲ್ಲಿ ಗೆಲುವಿನ ಗುಟ್ಟು. ಧರ್ಮಪರತೆಗೆ ಮುಗ್ಧತೆ ಅನಿವಾರ್ಯವಲ್ಲ. ಮೋಸಮಾಡುವುದು ಹೇಗೆಂಬುದು ಗೊತ್ತಿರಬೇಕು, ಆದರೆ ಮಾಡಬಾರದು ; ಸುಳ್ಳು ಹೇಳುವುದು ಹೇಗೆಂಬುದು ಗೊತ್ತಿರಬೇಕು, ಆದರೆ ಹೇಳಬಾರದು. ಹೀಗೆಯೇ ಎಲ್ಲವನ್ನೂ ತಿಳಿದುಕೊಂಡಿದ್ದು ಸಮಾಜ ಹಿತದ ದೃಷ್ಟಿಯಿಂದ ಮಾಡಬೇಕಾದುದನ್ನು ಮಾಡಬೇಕು, ಬಿಡಬೇಕಾದುದನ್ನು ಬಿಡಬೇಕು. ಅಂತೂ ಸಂದರ್ಭೋಚಿತವಾಗಿ ವರ್ತಿಸಬೇಕು. ಇದು ಉತ್ತಮವಾದ ಬಾಳಿನ ರೀತಿ ಎನಿಸುತ್ತದೆ.

■■

೪೯. ಸಮಾನ ಧರ್ಮ

ಸುಪ್ರಸಿದ್ಧ ಆಂಗ್ಲ ಸಾಹಿತಿ ಆಲಿವರ್ ಗೋಲ್ಡ್‌ಸ್ಮಿತ್ ಒಂದು ಸ್ವಾರಸ್ಯ ಪೂರ್ಣವಾದ ಕತೆ ಹೇಳಿದ್ದಾನೆ. ಒಂದಾನೊಂದು ಕಾಲದಲ್ಲಿ ಒಬ್ಬ ರಾಕ್ಷಸನಿಗೂ ಒಬ್ಬ ಕುಳ್ಳನಿಗೂ ಸ್ನೇಹವಾಯಿತು. ತಾವು ಒಬ್ಬರನ್ನೊಬ್ಬರು ಅಗಲತಕ್ಕದ್ದಲ್ಲವೆಂದೂ ಸಾಹಸ ಕೃತ್ಯಗಳನ್ನು ಕೈಗೊಳ್ಳಬೇಕೆಂದೂ ಅವರು ಒಪ್ಪಂದ ಮಾಡಿಕೊಂಡರು. ಅವರ ಮೊದಲ ಸಾಹಸವೆಂದರೆ, ಇಬ್ಬರು ಅರಬ್ಬರೊಡನೆ ಮಾಡಿದ ಯುದ್ಧ. ಬಹು ಧೈರ್ಯಶಾಲಿಯಾದ ಕುಳ್ಳ ಅರಬ್ಬರಲ್ಲಿ ಒಬ್ಬನಿಗೆ ಒಂದು ಬಲವಾದ ಏಟು ಕೊಟ್ಟ. ಆದರಿಂದ ಅರಬ್ಬನಿಗೇನೂ ನೋವಾಗಲಿಲ್ಲ. ಅವನು ಕತ್ತಿಯನ್ನೆತ್ತಿ ಬಡಪಾಯಿ ಕುಳ್ಳನ ಒಂದು ತೋಳನ್ನು ಕತ್ತರಿಸಿಹಾಕಿದ. ಅಷ್ಟರಲ್ಲಿ ರಾಕ್ಷಸ ಕುಳ್ಳನ ನೆರವಿಗೆ ಬಂದು ಇಬ್ಬರು ಅರಬ್ಬರನ್ನೂ ಕ್ಷಣಮಾತ್ರದಲ್ಲಿ ಯಮಲೋಕಕ್ಕಟ್ಟಿದ. ಮುಂದಿನ ಸಾಹಸಕ್ಕೆ ಅವರು ನಡೆದರು. ಸುಂದರಿಯೊಬ್ಬಳನ್ನು ಕದ್ದೊಯ್ಯುತ್ತಿದ್ದ ಮೂವರು ಕ್ರೂರ ವನದೇವತೆಗಳೊಡನೆ ಅವರೀಗ ಹೋರಾಡಬೇಕಾಯಿತು. ಕುಳ್ಳನಿಗೆ ಹಿಂದಿನ ಹುಮ್ಮಸ್ಸು ಇರಲಿಲ್ಲ. ಆದರೂ ಅವನೇ ಮೊದಲ ಪೆಟ್ಟು ಹಾಕಿದ. ಆಗ ಶತ್ರುಗಳಲ್ಲೊಬ್ಬ ಅವನ ಒಂದು ಕಣ್ಣನ್ನು ತಿವಿದು ಹಾಳುಮಾಡಿದ. ಅಷ್ಟರಲ್ಲಿ ರಾಕ್ಷಸ ಬಂದ. ಅವರೆಲ್ಲ ಪರಾರಿಯಾದರು. ಅವರು ಬಿಟ್ಟುಹೋದ ಸುಂದರಿ ರಾಕ್ಷಸನನ್ನು ಮೆಚ್ಚಿ ವರಿಸಿದಳು. ಆಮೇಲೆ ರಾಕ್ಷಸ ಮತ್ತು ಕುಳ್ಳ ಬಹುದೂರ ಪ್ರಯಾಣ ಮಾಡಿ, ದರೋಡೆಕಾರರ ತಂಡವೊಂದನ್ನು ಎದುರಿಸಿದರು. ಈಗ ರಾಕ್ಷಸನೆ ಕದನಕ್ಕೆ ಮುಂದಾದ. ಆದರೆ ಕುಳ್ಳನೇನೂ ಹಿಂದುಳಿಯಲಿಲ್ಲ. ಕಡೆಗೆ ಹೋರಾಟದಲ್ಲಿ ಇಬ್ಬರು ಗೆಳೆಯರಿಗೇ ಜಯವಾಯಿತು. ಆದರೆ, ಕುಳ್ಳ ಒಂದು ಕಾಲು ಕಳೆದುಕೊಂಡ. ಈಗ ಅವನು ಒಂದು ತೋಳು, ಒಂದು ಕಣ್ಣು ಮತ್ತು ಒಂದು ಕಾಲು ಇಲ್ಲದವನಾಗಿದ್ದ. ರಾಕ್ಷಸನಿಗಾದರೋ ಒಂದು ಗಾಯವೂ ಆಗಿರಲಿಲ್ಲ. ''ಗೆಳೆಯ, ಮತ್ತೊಂದು ವಿಜಯವನ್ನು ಸಾಧಿಸಿ, ಚಿರಕೀರ್ತಿಯನ್ನು ಪಡೆಯೋಣ'' ಎಂದು ರಾಕ್ಷಸ ಕುಳ್ಳನಿಗೆ ಹೇಳಿದ. ಇಷ್ಟರಲ್ಲಿ ಕುಳ್ಳನಿಗೆ ಬುದ್ಧಿ ಬಂದಿತ್ತು. ಅವನು ಹೇಳಿದ : ''ಬೇಡ, ಮಾರಾಯ. ನಾನಿನ್ನು ಹೋರಾಡುವುದಿಲ್ಲ. ಪ್ರತಿಯೊಂದು ಯುದ್ಧದಲ್ಲೂ ಎಲ್ಲ ಮನ್ನಣೆ, ಕೀರ್ತಿ ನಿನಗೇ ಸಿಗುತ್ತವೆ ; ಆದರೆ ಎಲ್ಲ ಪೆಟ್ಟುಗಳೂ ನನಗೆ ಮಾತ್ರ ಬೀಳುತ್ತವೆ.''

ನಮಗೆ ಸಮಾನರಲ್ಲದವರೊಡನೆ ಸ್ನೇಹ ಬೆಳೆಸಿದರೆ ಎಂತಹ ಅನಾಹುತ ವಾಗುತ್ತದೆ ಎಂಬುದು ಈ ಕತೆಯಿಂದ ತಿಳಿದುಬರುವ ನೀತಿ. ಸಣ್ಣವರು ದೊಡ್ಡವರ ಸಂಗ ಮಾಡಬಾರದು ; ಅವರನ್ನು ಅನುಸರಿಸಬಾರದು. ಆದರಿಂದ ಅಪಾಯ

ಗಳೇನಿದ್ದರೂ ಸಣ್ಣವರಿಗೇ ಹೊರತು ದೊಡ್ಡವರಿಗಲ್ಲ; ಅವರು ಸುರಕ್ಷಿತವಾಗಿರುತ್ತಾರೆ. ಇಲ್ಲಿ ದೊಡ್ಡವರೆಂದರೆ ಗುಣದಲ್ಲಿ, ಯೋಗ್ಯತೆಯಲ್ಲಿ ದೊಡ್ಡವರೆಂದಲ್ಲ; ಐಶ್ವರ್ಯ, ಅಧಿಕಾರ ಪ್ರತಿಷ್ಠೆಗಳಲ್ಲಿ ಆಢ್ಯರು ಎಂದರ್ಥ. ಈ ಸಂದರ್ಭದಲ್ಲಿ ಒಂದು ದೃಷ್ಟಾಂತ ಕೊಡಬಹುದು: ಕೆಲವರು ಸೈಕಲ್ ಸವಾರರು ಲಾರಿಗಳ ಹಿಂದೆ, ಅವುಗಳನ್ನು ಹಿಡಿದುಕೊಂಡು, ಯಾವ ಪ್ರಯಾಸವೂ ಇಲ್ಲದೆ ಲಾರಿಯ ವೇಗದಲ್ಲೆ ಧಾವಿಸುವುದನ್ನು ಆಗಾಗ ನೋಡುತ್ತೇವೆ. ಆದರೆ ಲಾರಿ ಹಟಾತ್ತಾಗಿ ನಿಂತಾಗ ಇವರ ಹಲ್ಲು, ಸೈಕಲ್ಲು ಎರಡಕ್ಕೂ ಹಾನಿ ; ಲಾರಿಗೇನೂ ನಷ್ಟವಿಲ್ಲ.

ಆದ್ದರಿಂದ, ಮೂಲಭೂತ ಸಂಗತಿಯೇನೆಂದರೆ ಸ್ನೇಹಕ್ಕೆ ಸಮಾನ ಧರ್ಮ ಆವಶ್ಯಕ ಎಂಬುದು. ''ಸಮಾನ ಶೀಲ ವ್ಯಸನೇಷು ಸಖ್ಯಂ'' ಎಂಬ ಸಂಸ್ಕೃತ ಸೂಕ್ತಿಯನ್ನಿಲ್ಲಿ ಸ್ಮರಿಸಬಹುದು. ಸಮಾನ ವಯಸ್ಸು ಸ್ವಭಾವ ಅಭಿರುಚಿ ಆಸಕ್ತಿಗಳನ್ನುಳ್ಳವರೊಡನೆ ಕೆಳೆ ಬೆಳೆಸಬೇಕು; ಅದರಿಂದ ವ್ಯಕ್ತಿಗೆ ಹಿತ. ಸಾಮಾನ್ಯವಾಗಿ ಮೈತ್ರಿ ಘಟಿಸುವುದು ಸಮಾನಧರ್ಮಿಗಳಲ್ಲಿಯೇ; ಇಂಗ್ಲಿಷಿನಲ್ಲಿ ಹೇಳುವಂತೆ, "Birds of the same feather flock together" (ಒಂದೇ ಬಣ್ಣದ ಹಕ್ಕಿಗಳು ಒಂದುಗೂಡುತ್ತವೆ). ಆದರೆ ಯಾವಾಗಲೂ ಹೀಗಾಗುತ್ತದೆ ಎಂದು ಹೇಳಬರದು. ಅಂಥ ಸಂದರ್ಭಗಳಲ್ಲಿ ಸಮಾನಧರ್ಮವನ್ನು, ಭಾವೈಕ್ಯವನ್ನು ಪ್ರಯತ್ನ ಪೂರ್ವಕವಾಗಿ ಸಾಧಿಸಬೇಕಾಗುತ್ತದೆ. ವೃತ್ತಿ ಮನೋವೃತ್ತಿ ಎರಡರಲ್ಲೂ ಸಮಾನತೆಯುಳ್ಳ ವ್ಯಕ್ತಿಗಳ ಸಂಗಮ ಹಾಲು–ಸಕ್ಕರೆಗಳ ಮಿಲನದಂತೆ ಮಧುರ ಸಾಮರಸ್ಯವುಳ್ಳದ್ದಾಗಿರುತ್ತದೆ. ಇಂಥ ಹೊಂದಾಣಿಕೆ, ಹೃದಯ ಸಾಮರಸ್ಯಗಳೆ ಸುಖಶಾಂತಿಗಳ ಬುನಾದಿ.

ಕುಟುಂಬ ಸೌಖ್ಯಕ್ಕೆ ಸಮಾನಧರ್ಮ ಅತ್ಯಗತ್ಯ. ಭಾರತೀಯ ಪರಂಪರೆಯಲ್ಲಿ ಹೆಂಡತಿಯನ್ನು 'ಧರ್ಮಪತ್ನಿ' ಎಂದು ಕರೆದಿದ್ದಾರೆ. ಪತಿಯ ಧರ್ಮದಲ್ಲಿ ಪಾಲ್ಗೊಳ್ಳುವವಳು ಎಂಬ ಅರ್ಥದಲ್ಲಿ, ಇದು ಏಕಪಕ್ಷೀಯವಾಯಿತು. ಗಂಡನೂ 'ಧರ್ಮಪತಿ' ಯಾಗಿರಬೇಕು ಎಂಬುದನ್ನು ಈ ಕಾಲದಲ್ಲಿ ಸೇರಿಸಬೇಕು. ಧರ್ಮ ಸಂವಾದ ದಾಂಪತ್ಯಜೀವನದ ಯಶಸ್ಸಿನ ರಹಸ್ಯ. ಕುಟುಂಬ ಸಮಾಜದ ಅತ್ಯಂತ ಚಿಕ್ಕದಾದ ಮೂಲಘಟಕ. ಮೇಲೆ ಮೇಲೆ ಹೋದಂತೆ ಎಲ್ಲ ಸಂಸ್ಥೆಗಳಲ್ಲಿ, ಕಡೆಗೆ ಅತ್ಯುಚ್ಚ ರಾಷ್ಟ್ರಸಂಸ್ಥೆಯಾದ ಸರ್ಕಾರದಲ್ಲಿ ಸಂವಾದ, ಸಮನ್ವಯಗಳಿರಬೇಕು, ಒಬ್ಬರು ಏರಿಗೆಳೆದರೆ ಮತ್ತೊಬ್ಬರು ನೀರಿಗೆಳೆಯುವಂತಾಗಬಾರದು.

ಸಮಾನಧರ್ಮ ಎಂಬ ಮಾತು ಸ್ವಧರ್ಮದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಸ್ವಧರ್ಮ–ಸಹಧರ್ಮಗಳಲ್ಲಿ ಬದುಕಿನ ಮರ್ಮವಿದೆ. ವ್ಯಕ್ತಿ ತನ್ನ ಸ್ವಧರ್ಮವನ್ನು ಮರೆತು, ತನ್ನ ಪರಿಮಿತಿಯಾಚೆಗೆ ಹೋಗಿ, ಇತರರನ್ನು ಅನುಕರಿಸಲು ತೊಡಗಿದರೆ ಅನರ್ಥ ತಪ್ಪಿದ್ದಲ್ಲ. ರಾಕ್ಷಸನನ್ನು ಅನುಕರಿಸಲು ಹೋಗಿ ಪಾಡುಪಟ್ಟ ಕತೆಯ ಕುಳ್ಳ ಯಾರಿಗೂ ಆದರ್ಶವಾಗಬಾರದು. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು; ಹಾಸಿಗೆಯಿಲ್ಲದಿದ್ದರೆ ಚಾಪೆಯ ಮೇಲೆಯೆ ಮಲಗಬೇಕು.

ಶ್ರೀಮಂತರು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಮದುವೆ ಮಾಡುತ್ತಾರೆಂದು, ಬಡವರೂ ಹಾಗೆ ಮಾಡುವುದರಲ್ಲಿ ಔಚಿತ್ಯವಾಗಲಿ ಲೇಸಾಗಲಿ ಇಲ್ಲ. ಇಂಥ ಅನುಕರಣದ ಅನಾಹುತವನ್ನು ನಮ್ಮ ಸಮಾಜದಲ್ಲಿ, ದೇಶದ ಮಟ್ಟದಲ್ಲಿ ಕೂಡ ಇಂದು ನೋಡುತ್ತಿದ್ದೇವೆ. ವ್ಯಕ್ತಿ ಸ್ವಧರ್ಮ–ಸಮಾನಧರ್ಮದ ಚೌಕಟ್ಟಿನಲ್ಲೇ ಸುಖ ಸಂತೋಷಗಳನ್ನು ಕಂಡುಕೊಳ್ಳಬೇಕು. ''ಸ್ವಧರ್ಮೇ ನಿಧನಂ ಶ್ರೇಯಃ'' ಎಂದಂತೆ ''ಸಮಾನಧರ್ಮೇ ನಿಧನಂ ಶ್ರೇಯಃ'' ಎಂದೂ ಹೇಳಬಹುದು.

ಸಮಾನಧರ್ಮಿಗಳು ಯಾವಾಗಲೂ ಸುಲಭವಾಗಿ ದೊರಕುತ್ತಾರೆಂದು ಹೇಳುವಂತಿಲ್ಲ. ಭವಭೂತಿ ಕವಿ ತನ್ನ ಕಾವ್ಯವನ್ನು ಆಸ್ವಾದಿಸಬಲ್ಲ ಸಹೃದಯರ ಅಭಾವದಿಂದ ನೊಂದುಕೊಂಡು 'ಮಾಲತೀ ಮಾಧವ' ನಾಟಕದಲ್ಲಿ ಹೀಗೆ ಉದ್ಗರಿಸಿದ್ದಾನೆ.

ಉತ್ಪತ್ಸ್ಯತೇಸ್ತಿ ಮಮ ಕೋಽಪಿ ಸಮಾನಧರ್ಮಾ
ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ

(ನನಗೆ ಸಮಾನಧರ್ಮಿಯಾದವನು ಯಾವನೊ ಒಬ್ಬ ಮುಂದೆ ಹುಟ್ಟುತ್ತಾನೆ : ಕಾಲ ಆಪಾರವಾದುದು, ಲೋಕ ವಿಶಾಲವಾದುದು.)

ಇದರಿಂದ ವ್ಯಕ್ತವಾಗುವ ಸತ್ಯವೇನೆಂದರೆ, ಸಮಾನ ಧರ್ಮಿಗಳು, ಸಹೃದಯರು ಎಂದೂ ವಿರಳವೆಂಬುದು. ಅಂಥವರನ್ನು ಸಂಪಾದಿಸುವುದು ಪ್ರತಿಯೊಬ್ಬರ ಕರ್ತವ್ಯ. ಭವಭೂತಿಯಂತೆ ಎಲ್ಲವನ್ನೂ ಕಾಲದೇಶಗಳಿಗೆ ಬಿಡಬೇಕಾಗಿಲ್ಲ, ಏಕೆಂದರೆ, ಕಾಲ ದೇಶಗಳು ಅಪರಿಮಿತ ; ವ್ಯಷ್ಟಿಜೀವನವಾದರೋ ಸೀಮಿತ. ಸಹೃದಯರು, ಸುಹೃದಯರು ಯಾರಿಗೂ, ಯಾವಾಗಲೂ ಬಹು ದೊಡ್ಡ ಆಸ್ತಿ.

■■

೫೦. ಅಹಂಕಾರ ನಿರಸನ

ಶ್ರೀ ರಾಮಕೃಷ್ಣ ಪರಮಹಂಸರ ಸುಂದರ ದೃಷ್ಟಾಂತಗಳಲ್ಲಿ ಇದೊಂದು : ರಾತ್ರಿಯ ಹೊತ್ತು ಮಿಣುಕು ಹುಳುಗಳು ತಮ್ಮಿಂದಲೇ ಲೋಕಕ್ಕೆ ಬೆಳಕು ಎಂದು ತಿಳಿದುಕೊಂಡಿರುತ್ತವೆ. ಆದರೆ ತಾರೆಗಳು ಮೂಡಿದ ಮೇಲೆ ಅವುಗಳ ಅಹಂಕಾರವಳಿಯುತ್ತದೆ. ಅನಂತರ ತಾರೆಗಳು ತಮ್ಮಿಂದಲೇ ಲೋಕಕ್ಕೆ ಬೆಳಕು ಎಂದು ಬೀಗುತ್ತವೆ. ಆದರೆ ಚಂದ್ರ ಉದಯಿಸಿದ ಕೂಡಲೇ ಅವುಗಳಿಗೆ ನಾಚಿಕೆಯಾಗುತ್ತದೆ. ಬಳಿಕ ಚಂದ್ರ ತಾನೇ ಜಗತ್ತಿಗೆ ಬೆಳಕು ಕೊಡುವವನು ಎಂದು ಗರ್ವಿಸುತ್ತಾನೆ. ಆದರೆ ಸೂರ್ಯೋದಯವಾದೊಡನೆಯೆ ಅವನು ಕಳೆಗುಂದಿ ಅದೃಶ್ಯನಾಗುತ್ತಾನೆ. ಆದ್ದರಿಂದ, ನೀವೇ ಶ್ರೀಮಂತರೆಂದುಕೊಳ್ಳಬೇಡಿ, ನಿಮಗಿಂತ ಶ್ರೀಮಂತರಿರುತ್ತಾರೆ.'' (ಸೂರ್ಯನಿಗಿಂತ ದೊಡ್ಡ ಗ್ರಹಗಳು ಅಸಂಖ್ಯಾತವಾಗಿವೆ, ವಿಶ್ವದಲ್ಲಿ!)

ಇದೇ ಅರ್ಥದ ಮಾತನ್ನು ನಮ್ಮ ಪಂಪಕವಿ ಸಾವಿರ ವರ್ಷಗಳ ಹಿಂದೆ ಆಡಿದ್ದಾನೆ: ''ನಿಡಿಯರ್ಗಂ ನಿಡಿಯರೊಳರ್'' (ದೊಡ್ಡವರಿಗಿಂತ ದೊಡ್ಡವರಿದ್ದಾರೆ). ಅಹಂಕಾರ ನಿರಸನಕ್ಕೆ ಇದು ಬೀಜಮಂತ್ರದಂತಿದೆ. ತಾವೇ ಅದ್ವಿತೀಯರೆಂದು ಮೊದ ಮೊದಲು ಅಹಂಕಾರ ವಶರಾಗಿ, ತಮಗಿಂತಲೂ ಮೀರಿದ ಶಕ್ತಿಗಳ ಅರಿವಾದ ಬಳಿಕ ವಿನೀತರಾದ ವ್ಯಕ್ತಿಗಳ ನಿದರ್ಶನಗಳು ನಮ್ಮ ಕಾವ್ಯಗಳಲ್ಲಿ ಎಷ್ಟೋ ಸಿಗುತ್ತವೆ. ಅಹಂಕಾರನಾಶದ ಇಂಥ ಕೆಲವು ಪ್ರಸಂಗಗಳನ್ನು ಇಲ್ಲಿ ನೆನೆಯಬಹುದು.

ಮಹಾಭಾರತದಲ್ಲಿ ಅರ್ಜುನ ಮತ್ತು ಭೀಮನ ಅಹಂಕಾರಕ್ಕೆ ಆಘಾತವೊದಗಿದ ಎರಡು ಪ್ರಸಂಗಗಳನ್ನು ನೋಡುತ್ತೇವೆ. ಕಿರಾತಾರ್ಜುನೀಯ ಪ್ರಕರಣದಲ್ಲಿ ತಾನು ಲೋಕೈಕ ವೀರನೆಂದು ಭಾವಿಸಿಕೊಂಡಿದ್ದ ಅರ್ಜುನ ಶಬರವೇಷದ ಶಂಕರನಿಂದ ಪರಾಭವಗೊಂಡು ಪಶ್ಚಾತ್ತಾಪಪಡುವ ಚಿತ್ರವಿದೆ. ಕಪಟ ಕಿರಾತ ತನ್ನೆಲ್ಲ ಮಂತ್ರಾಸ್ತ್ರ ಗಳನ್ನೂ ನುಂಗಿದಾಗ, ಇಂತಹ ಸಮರ್ಥ ಯಾರಿರಬಹುದೆಂಬ ಜಿಜ್ಞಾಸೆಯೆ ಪಾರ್ಥನಲ್ಲಿ ಮೊದಲು ಉಂಟಾಗುವುದಿಲ್ಲ; ಅವನ ಅಹಂಕಾರ ಅಷ್ಟು ದಟ್ಟವಾಗಿತ್ತು. ಅವನು ಮತ್ತೆ ಮತ್ತೆ ಶಿವನೊಡನೆ ಸೆಣಸುತ್ತಾನೆ. ಕಡೆಗೆ ಶಬರ ಪಾರ್ಥನನ್ನು ಮೆಟ್ಟಿದಾಗ ಅವನ ಮೂಗು ಬಾಯಿಗಳಲ್ಲಿ ರಕ್ತ ಚಿಮ್ಮುತ್ತದೆ; ಆಗ ಬೀಳುತ್ತದೆ, ಅವನ ಅಹಂಕಾರಕ್ಕೆ ಸಿಡಿಲೇಟು. ತಾನು ಇದುವರೆಗೂ ಹೋರಾಡಿದ್ದು ಸಾಕ್ಷಾತ್ ಈಶ್ವರನೊಡನೆ ಎಂಬುದು ಅವನಿಗೆ ಮುಂದೆ ಅರಿವಾಗುತ್ತದೆ; ಆಗ ಅವನ ಪಶ್ಚಾತ್ತಾಪ ಹೇಳತೀರದು. ಬಳಿಕ ಅರ್ಜುನ ಶಿವನನ್ನು ಬಗೆ ಬಗೆಯಾಗಿ ಸ್ತುತಿಸಿ ಕ್ಷಮೆ ಯಾಚಿಸುತ್ತಾನೆ ; ಪಾಶುಪತಾಸ್ತ್ರ ಪಡೆಯುತ್ತಾನೆ. ಅವನಾಡುವ ಈ ಪಶ್ಚಾತ್ತಾಪದ ನುಡಿಗಳಲ್ಲಿ ಹುಲುಮಾನವರ ಮಿತಿ ಚೆನ್ನಾಗಿ ವ್ಯಕ್ತವಾಗುತ್ತದೆ :

ಎವಗೆರಡು ಕಣು ವಿಶ್ವತೋ ಚ
ಕ್ಷುವಿನೊಡನೆ ಸಕ್ರೋಧ ದರುಶನ
ವೆವಗೆರಡು ಭುಜ ವಿಶ್ವತೋಭುಜನೊಡನೆ ಸಂಗ್ರಾಮ
ಭುವನಚರಣನ ವಿಶ್ವತೋಮುಖ
ಶಿವನನೆಮ್ಮೀ ಕಾಲು ನಾಲಗೆ
ಯವಗಡಿಸಿ ಗೆಲಲಾಪ್ ಸಮರ್ಥರೆ...

ಭೀಮ ಆಂಜನೇಯನನ್ನು ಸಂದರ್ಶಿಸಿದ ಪ್ರಸಂಗವೂ ಇಂಥದೇ. ದ್ರೌಪದಿ ಬಯಸಿದ ಸೌಂಗಧಿಕ ಪುಷ್ಪವನ್ನು ತರುವುದಕ್ಕಾಗಿ ಅರಣ್ಯದಲ್ಲಿ ನಡೆಯುತ್ತಾನೆ, ಭೀಮ. ಅವನ ಕಾಲ್ತುಳಿತಕ್ಕೆ ಕಾನನ ಕಂಪಿಸುತ್ತದೆ ; ಅವನು ಒದರಿದರೆ ಪರ್ವತ ಶಿಖರದ ಹೆಗ್ಗುಂಡುಗಳು ಉದುರುತ್ತವೆ; ಮಹಾವೃಕ್ಷಗಳು ಬೇರುಸಹಿತ ಬೀಳುತ್ತವೆ. ಅವನ ಗದೆಯ ಹೊಯ್ಲಿಗೆ ಗಿರಿತರುಗಳು ಬಾಳೆಯಂತೆ ಮುರಿಯುತ್ತವೆ; ಅವನ ಬೊಬ್ಬಿರಿತಕ್ಕೆ ಇಳೆ ಬಿರಿಯುತ್ತದೆ ; ಅವನ ತೊಡೆಯ ಗಾಳಿಗೆ ಕಿರುಮರಗಳು ಹಾರಿಹೋಗುತ್ತವೆ; ಕಾಡುಮೃಗಗಳು ಅವನ ದನಿಗೆ ಬೆದರಿ ಓಡುತ್ತವೆ. ಅಲ್ಲೊಂದು ಪರ್ವತದ ತಪ್ಪಲಲ್ಲಿ ಬಾಳೆಯ ವನದಲ್ಲಿ ರಾಮಧ್ಯಾನ ಮಾಡುತ್ತ ಹಾಯಾಗಿ ಮಲಗಿದ್ದ ಹನುಮಂತ ಭೀಮನ ಗರ್ಜನೆ ಕೇಳಿ ಕಣ್ಣುತೆರೆಯುತ್ತಾನೆ. ಅಷ್ಟರಲ್ಲಿ ಬಳಿಗೆ ಬಂದ ಭೀಮನನ್ನು ಕುರಿತು ನೀನಾರೆಂದು ವಿಚಾರಿಸುತ್ತಾನೆ ; ಭೀಮ ತನ್ನ ವಿಷಯವನ್ನು ತಿಳಿಸುತ್ತಾನೆ. ಆದರೆ ಅವನು ಮುಂದೆ ಹೋಗಬೇಕೆಂದರೆ ಹನುಮನ ಬಾಲ ಅವನ ದಾರಿಯನ್ನು ತಡೆಯುತ್ತದೆ. ಅದನ್ನು ತಿರಸ್ಕಾರದಿಂದ ಗದೆಯ ಮೊನೆಯಲ್ಲಿ ನೂಕುತ್ತಾನೆ ; ಆ ಬಾಲದ ರೋಮವೂ ಚಲಿಸುವುದಿಲ್ಲ! ಆಗ "ಇದೇನು ವಿಚಿತ್ರ ! ನಾನು ಒದೆದರೆ ಪರ್ವತಗಳೂ ಅಳಿಯುತ್ತವೆ. ನಾನು ಮಹಾಬಲಶಾಲಿ ! ಬಾಲದ ಕದವನ್ನು ತೆಗೆ'' ಎಂದು ಗರ್ಜಿಸುತ್ತಾನೆ. ಆಗ ಆಂಜನೇಯ "ನೀವು ಬಲ್ಲಿದರೇ ಹೌದು–ಇಲ್ಲದಿದ್ದರೆ ಈ ಮೃಗಪಕ್ಷಿಗಳು ನಿಮಗೆ ಅಂಜುತ್ತಿದ್ದುವೆ ? ನಾವು ಮುದುಕರು, ನಮ್ಮ ಬಾಲವನ್ನು ಸರಿಸಲಾರೆವು; ನೀವೇ ಅದನ್ನು ನಿವಾರಿಸಿ ದಯಮಾಡಿಸಬಹುದು !'' ಎನ್ನುತ್ತಾನೆ, ವ್ಯಂಗ್ಯವಾಗಿ. ಭೀಮ ಆಗಲೆಂದು ತನ್ನ ಬಲವನ್ನೆಲ್ಲ ಪ್ರಯೋಗಿಸಿ ಬೊಬ್ಬಿಡುತ್ತ ಆ ಬಾಲವನ್ನು ತೊಲಗಿಸಲು ಪ್ರಯತ್ನಿಸುತ್ತಾನೆ ; ಅದು ಎಳ್ಳಷ್ಟೂ ಮಿಡುಕುವುದಿಲ್ಲ. ಭೀಮನಿಗೆ ಎಂದೂ ಆಗದ ಆಯಾಸವಾಗುತ್ತದೆ. ಆಗ, ಈತ ಯಾರೋ ಮಹಾತ್ಮನೆನಿಸುತ್ತದೆ, ಅವನಿಗೆ. "ಈ ಮನುಷ್ಯ ಶರೀರ ಅಪಜಯದ ನೆಲೆವನೆ'' ಎಂದುಕೊಂಡು, ಆ ಕಪಿವರನನ್ನು "ನೀವಾರು ?'' ಎಂದು ಗೌರವದಿಂದ ಕೇಳುತ್ತಾನೆ. ಆಂಜನೇಯ ತನ್ನ ವೃತ್ತಾಂತವನ್ನು ತಿಳಿಸಿದ ಬಳಿಕ ಭೀಮನಿಗೆ ಸಂತೋಷ, ಪಶ್ಚಾತ್ತಾಪಗಳೆರಡೂ ಉಂಟಾಗುತ್ತವೆ.

'ಆದಿಪುರಾಣ'ದಲ್ಲಿ ಬರುವ ಭರತನ ದಿಗ್ವಿಜಯ ಪ್ರಸಂಗ ಅಹಂಕಾರ ನಿರಸನಕ್ಕೆ ಮತ್ತೊಂದು ಉಜ್ವಲವಾದ ಉದಾಹರಣೆ. ಷಟ್ಖಂಡ ಭೂಮಂಡಲವನ್ನು ಗೆದ್ದ ಭರತಚಕ್ರಿಗೆ ತನ್ನದು ಅಪೂರ್ವ ಸಾಧನೆಯೆಂಬ ಭ್ರಮೆ ಅಡರುತ್ತದೆ. ತನ್ನ

ಪ್ರಶಸ್ತಿಯನ್ನು ಲೋಕವಿಶ್ರುತವಾಗುವಂತೆ ವೃಷಭಾಚಲದ ತಪ್ಪಲಿನಲ್ಲಿ ಕೆತ್ತಿಸಬೇಕೆಂದು ವೈಭವದಿಂದ ಅಲ್ಲಿಗೈದುತ್ತಾನೆ. ಅಲ್ಲಿ ಹೋಗಿ ನೋಡಿದರೆ, ಆ ವೃಷಭಾದ್ರಿ ಇವನಂತೆಯೇ ಭೂಮಂಡಲ ಸಮಸ್ತವನ್ನೂ ಅಡಿಗೆರಗಿಸಿಕೊಂಡಿದ್ದ ಹಿಂದಿನ ಚಕ್ರವರ್ತಿಗಳ ಪ್ರಶಸ್ತಿಗಳಿಂದ ಕಿಕ್ಕಿರಿದಿದೆ; ಮತ್ತೊಂದು ಪ್ರಶಸ್ತಿಗೆ ಅಲ್ಲಿ ಜಾಗವೆ ಇಲ್ಲ! ಆ ಚಲ ಶೌರ್ಯ ಸಾಹಸ ತ್ಯಾಗಗಳ ಪ್ರಶಸ್ತಿಗಳನ್ನು ನೋಡಿ ಅವನ ಗರ್ವ ಗಳಿತವಾಗುತ್ತದೆ: ''ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಂ ಭರತೇಶ್ವರ ಚಕ್ರವರ್ತಿಯಾ!'' ಆದರೂ ಮುಖ ಉಳಿಸಿಕೊಳ್ಳುವುದಕ್ಕಾಗಿ ಆ ಪ್ರಶಸ್ತಿಗಳಲ್ಲೊಂದನ್ನು ಅಳಿಸಿ ಹಾಕಿ ಆ ಜಾಗದಲ್ಲಿ ತನ್ನದನ್ನು ಕೊರೆಯಿಸುತ್ತಾನೆ, ಭರತ. ಅಂತೂ ''ಈಂಟುವೆನೋ ದಾಂಟುವೆನೋ ಲವಣಾಂಬು ರಾಶಿಯಂ'' ಎಂದು ಮೆರೆಯುತ್ತ ಹೊರಟವನು ಪೆಚ್ಚುಮೋರೆ ಹಾಕಿಕೊಂಡು ಮರಳ ಬೇಕಾಗುತ್ತದೆ. ಆದರೂ ಅವನ ಗರ್ವ ಪೂರ್ಣವಾಗಿ ಹೋಗಿರುವುದಿಲ್ಲ. ಮುಂದೆ ತನ್ನ ತಮ್ಮನಾದ ಬಾಹುಬಲಿ ತನ್ನನ್ನು ಚಕ್ರವರ್ತಿಯೆಂದು ಒಪ್ಪಿಕೊಳ್ಳಲು ಸಿದ್ಧನಿಲ್ಲದಿದ್ದಾಗ ಅವನ ಮೇಲೆ ಯುದ್ಧ ಹೂಡುತ್ತಾನೆ. ದೃಷ್ಟಿಯುದ್ಧ ಮಲ್ಲಯುದ್ಧಗಳಲ್ಲಿ ಬಾಹುಬಲಿಯಿಂದ ಪರಾಜಿತನಾಗಿ, ಕಡೆಗೆ ರೋಷದಿಂದ ಅವನ ಮೇಲೆ ಚಕ್ರಪ್ರಯೋಗ ಮಾಡುತ್ತಾನೆ. ಅದು ಬಾಹುಬಲಿಯನ್ನು ಬಲವಂದು ನಿಂದಾಗ, ನಾಚಿ ತಲೆ ತಗ್ಗಿಸುತ್ತಾನೆ ಭರತೇಶ್ವರ.

ಮಾನವ ಸ್ವಭಾವದಲ್ಲಿ ಮೂರು ಪ್ರಕಾರಗಳು : ಸಾತ್ವಿಕ, ರಾಜಸ ಮತ್ತು ತಾಮಸ. ಸಾತ್ವಿಕ ವ್ಯಕ್ತಿಗಳು ಅಹಂಕಾರಕ್ಕೆ ತುತ್ತಾಗುವುದೆ ಇಲ್ಲ; ಸದಾ ವಿನಮ್ರರಾಗಿಯೇ ವರ್ತಿಸುತ್ತಾರೆ. ಆದ್ದರಿಂದ ಅವರಿಗೆ ಆಘಾತವನ್ನನುಭವಿಸುವ ಪ್ರಮೇಯವೆ ಒದಗದು. ಯುಧಿಷ್ಠಿರನಂತಹ ಜನ ಇಂಥವರು. ಯಕ್ಷ ಪ್ರಶ್ನೆಯ ಪ್ರಕರಣದಲ್ಲಿ ಭೀಮಾರ್ಜುನ ನಕುಲ ಸಹದೇವರು ಗರ್ವ ಗ್ರಸ್ತರಾಗಿ ಅಶರೀರವಾಣಿಯನ್ನು ಅಲಕ್ಷಿಸಿ ಕೇಡು ತಂದುಕೊಳ್ಳುತ್ತಾರೆ; ಆದರೆ ವಿವೇಕಿಯಾದ ಯುಧಿಷ್ಠರ ಯಕ್ಷಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರವಿತ್ತು ಶುಭಫಲವನ್ನು ಪಡೆಯುತ್ತಾನೆ. ರಾಜಸ ವ್ಯಕ್ತಿಗಳು ಹೀಗಲ್ಲ, ಅವರು ಮೊದಲು ಅಹಂಕಾರದಿಂದ ಮಲೆಯುತ್ತಾರೆ; ತಮಗಿಂತ ಹಿರಿದಾದ ಶಕ್ತಿಯೊಂದು ಅಪ್ಪಳಿಸಿದಾಗ ಆ ಅಹಂಕಾರವನ್ನು ಕಳೆದುಕೊಂಡು ವಿವೇಕ ತಂದುಕೊಳ್ಳುತ್ತಾರೆ. ಹಿಂದೆ ನೋಡಿದ ವ್ಯಕ್ತಿಗಳೆಲ್ಲ ಈ ವರ್ಗದವರು. ಇನ್ನು, ತಾಮಸ ಸ್ವಭಾವದ ವ್ಯಕ್ತಿಗಳಾದರೋ ತಮ್ಮ ಅಹಂಕಾರವನ್ನು ಎಂದೂ ನೀಗಿಕೊಳ್ಳುವುದಿಲ್ಲ; ಅದನ್ನವರು ಚಲದಿಂದ ಕಡೆಯ ತನಕ ಉಳಿಸಿಕೊಂಡು ನಾಶ ಹೊಂದುತ್ತಾರೆ. ತಮಗಿಂತ ದೊಡ್ಡವರುಂಟು, ತಾವು ಎದುರಿಸುತ್ತಿರುವುದು ಅಜೇಯ ಶಕ್ತಿಗಳನ್ನು ಎಂಬ ಅರಿವು ಅವರಿಗಿಲ್ಲದೆ ಇಲ್ಲ; ಆದರೂ ತಮ್ಮ ಸಹಜ ಪ್ರವೃತ್ತಿಯನ್ನು, ರಕ್ತಗತ ದುರ್ಗುಣವನ್ನು ತೊರೆಯಲಾರದೆ ಅವರು ಸತ್ ಶಕ್ತಿಗಳೊಡನೆ ಸಾಯುವತನಕ ಹೋರಾಡುತ್ತಾರೆ. ರಾವಣ ದುರ್ಯೋಧನರಂತಹವರು ಈ ಪಂಕ್ತಿಯಲ್ಲಿ ಬರುವ ವ್ಯಕ್ತಿಗಳು. ದುರ್ಯೋಧನನಿಗೆ

ತಾನು ಮಾಡುತ್ತಿರುವುದು ಅಧರ್ಮ, ತನ್ನ ವಿರುದ್ಧ ನಿಂತಿರುವ ಕೃಷ್ಣ ದೇವರು, ಅವನು ಮುಳಿದರೆ ತಾನು ಬದುಕುವಂತಿಲ್ಲ ಎಂಬುದೆಲ್ಲ ಗೊತ್ತಿತ್ತು ''ನನಗೆ ಧರ್ಮ ತಿಳಿದಿದೆ, ಆದರೆ ಅದರಲ್ಲಿ ಪ್ರವೃತ್ತಿಯಿಲ್ಲ; ನನಗೆ ಅಧರ್ಮ ತಿಳಿದಿದೆ, ಆದರೆ ಅದರಿಂದ ನಿವೃತ್ತಿಯಿಲ್ಲ'' (''ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ, ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ'') ಎಂದು ಅವನೇ ಹೇಳಿಕೊಳ್ಳುತ್ತಾನೆ; ''ರಣಮಹೋತ್ಸವವೆನ್ನ ಮತ, ಕೈದಣಿಯೆ ಹೊಯ್ದಾಡುವೆನು, ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ'' ಎಂದು ಘೋಷಿಸುತ್ತಾನೆ. ಇಂಥ ವಾಮ ಪ್ರವೃತ್ತಿಯವರನ್ನು ತಿದ್ದುವುದು ಯಾರಿಗೂ ಶಕ್ಯವಿಲ್ಲ.

ಅಹಂಕಾರ ಭಂಗವಾಗಲಿ, ಆಗದಿರಲಿ, ''ನಿಡಿಯರ್ಗಂ ನಿಡಿಯರೊಳರ್'' ಎಂಬುದಂತೂ ಪರಮ ಸತ್ಯ. ಹೌದು, ದೊಡ್ಡವರಿಗೂ ದೊಡ್ಡವರಿದ್ದಾರೆ ; ಭಗವಂತ ಎಲ್ಲರಿಗೂ ದೊಡ್ಡವನು.

■■

೫೧. ಸುಪ್ರಭಾತ

ಶ್ರೀ ಮದ್ವಾಲ್ಮೀಕಿ ರಾಮಾಯಣದಲ್ಲಿ ಬರುವ ಈ ಬಹು ಸುಂದರವಾದ ಶ್ಲೋಕದ ಪರಿಚಯ ಯಾರಿಗಿಲ್ಲ? ಬೆಳಗಿನ ಹೊತ್ತು ಯಾರ ಕಿವಿಯನ್ನಿದು ತಟ್ಟಿಲ್ಲ? ಮೈಮನಗಳನ್ನು ಪುಳಕಿಸಿಲ್ಲ?–

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಂ

ಮುಂದೆ ಸಮೃದ್ಧವಾಗಿ ಬೆಳೆದ ಸುಪ್ರಭಾತ ಪರಂಪರೆಗೆ ಈ ಒಂದು ಪದ್ಯವೆ ಮೂಲವಾಯಿತೆಂದು ತೋರುತ್ತದೆ. ಇಂದು ನಾವು ಎಲ್ಲ ದೇವತೆಗಳನ್ನೂ ಎಚ್ಚರಿಸುವ ಸುಪ್ರಭಾತ ಸ್ತೋತ್ರಗಳನ್ನು ಕೇಳುತ್ತಿದ್ದೇವೆ ; ಪ್ರೌಢರು ಕಟ್ಟಿದ ಸುಪ್ರಭಾತಗಳಿರುವಂತೆಯೆ ಪಾಮರರು ಕಟ್ಟಿದ ಸುಪ್ರಭಾತಗಳೂ ಉಂಟು. ಜನಪದ ಸಾಹಿತ್ಯದಲ್ಲಿ ಕೂಡ ಈ ಪದ್ಧತಿಯನ್ನು ಕಾಣುತ್ತೇವೆ. ''ಏಳಯ್ಯ ಏಳು, ಏಳು ಚಿನ್ನದ ಗಿರಿ, ಏಳಯ್ಯ ಸ್ವಾಮಿ ಬೆಳಗಾದೊ'' ಎಂದು ಬಿಳಿಗಿರಿ ರಂಗಸ್ವಾಮಿಯನ್ನು ಎಚ್ಚರಿಸುವ ಪದ್ಯವೊಂದಿದೆ.

ವಾಲ್ಮೀಕಿ ರಾಮಾಯಣದಲ್ಲಿ ಬರುವ ಶ್ಲೋಕ ವಿಶ್ವಾಮಿತ್ರಮಹರ್ಷಿ ಶ್ರೀ ರಾಮನನ್ನು ಪ್ರಾತಃಕಾಲ ಎಬ್ಬಿಸುತ್ತಿದ್ದ ರೀತಿಯನ್ನು ನಿರೂಪಿಸುತ್ತದೆ. ಇದರಲ್ಲಿ ಯಾವ ಅಸಹಜತೆಯೂ ನಮಗೆ ಕಾಣಿಸುವುದಿಲ್ಲ. ಆದರೆ ಅನಂತರ ಹುಲುಸಾಗಿ ಹುಟ್ಟಿಕೊಂಡ ಸುಪ್ರಭಾತಗಳಿಗೆ ಏನು ಸಮಾಧಾನ ? ಮೇಲುನೋಟಕ್ಕೆ ಇವುಗಳ ರೀತಿ ಅಸಹಜವಾಗಿ ತೋರುತ್ತದೆ. ಏಕೆಂದರೆ, ಅನಿಮಿಷರಾದ–ಸದಾ ಜಾಗ್ರತರಾದ –ದೇವತೆಗಳು ಮಲಗುವುದೆಂದರೇನು, ಅವರನ್ನು ನಾವು ಬೆಳಗಾಯಿತೆಂದು ಎಚ್ಚರಿಸುವುದೆಂದರೇನು ! ಇದು ಸೋಜಿಗವೇ ಸರಿ ಎನಿಸದಿರದು.

ಆದರೆ ನಮ್ಮವರು ಔಚಿತ್ಯಪ್ರಜ್ಞೆಯಿಲ್ಲದೆ ಸುಪ್ರಭಾತ ಸಾಹಿತ್ಯವನ್ನು ನಿರ್ಮಿಸಲಿಲ್ಲ. ಒಳಹೊಕ್ಕು ನೋಡಿದರೆ ಇದು ಬಹಳ ಅರ್ಥವತ್ತಾದ ಸಂಪ್ರದಾಯವಾಗಿಯೆ ತೋರುತ್ತದೆ. ನಮ್ಮ ಸಂಸ್ಕೃತಿಯ ಒಂದು ಪಾರ್ಶ್ವವನ್ನು ಬಿಂಬಿಸುವ ರನ್ನಗನ್ನಡಿ, ಈ ಸುಪ್ರಭಾತ ವ್ಯವಸ್ಥೆ.

ಈ ಸುಪ್ರಭಾತಗಳ ರೀತಿ ಸಾಂಕೇತಿಕವಾದದ್ದು. ದೇವತೆಗಳನ್ನು ಎಚ್ಚರಿಸುವ ನೆಪದಲ್ಲಿ ಮನುಷ್ಯಲೋಕವನ್ನು ಎಚ್ಚರಿಸುವ ಪರಿ ಇವುಗಳಲ್ಲಿ ಸೂಚಿತವಾಗಿದೆ. ಎಂದೂ ಕಣ್ಮುಚ್ಚದ ದೇವತೆಗಳನ್ನು ಎಚ್ಚರಿಸುವುದೇನು ಬಂತು, ನಮ್ಮನ್ನು ನಾವು ಎಚ್ಚರಿಸಿಕೊಳ್ಳುತ್ತೇವೆ, ಈ ಸುಪ್ರಭಾತಗಳ ಮೂಲಕ. ನಾರಾಯಣನನ್ನು ಕುರಿತ ಸ್ತೋತ್ರ ವಾಸ್ತವನಾಗಿ ನರನನ್ನು ಉದ್ದೇಶಿಸಿದ್ದು.

ಒಬ್ಬ ವ್ಯಕ್ತಿಯನ್ನು ಬೆಳಗಿನ ಹೊತ್ತು 'ಏಳೋ ಕತ್ತೆ' ಎಂದು ರೂಕ್ಷವಾಗಿ ಬೈದು ಎಚ್ಚರಿಸಿದರೆ ಅದರ ಪರಿಣಾಮ ಅವನ ಮೇಲೆ ತೀವ್ರವಾಗಿ ಆಗುತ್ತದೆ. ತನ್ನನ್ನು ಎಬ್ಬಿಸಿದವನನ್ನು ಶಪಿಸುತ್ತಲೆ ಅವನು ಮೇಲೇಳುತ್ತಾನೆ; ಇಡೀ ದಿವಸ ಅವನ ಚಿತ್ತಸ್ವಾಸ್ಥ್ಯವೇ ಹಾಳಾಗುತ್ತದೆ. ಅವನು ಏನು ಉತ್ಸಾಹದಿಂದ ಕೆಲಸ ಮಾಡಿಯಾನು ? ಬೈದು ಎಬ್ಬಿಸಿದವನಿಗಾದರೂ ಇದರಿಂದ ಏನು ಸುಖ ? ಅವನೂ ವೃಥಾ ಮನಸ್ಸು ಕೆಡಿಸಿಕೊಂಡಂತಾಯಿತು. ಹೇಗೆ ಒಂದು ಮಾತು ಎರಡು ಚಿತ್ತಗಳನ್ನು ಕಲುಷಿತಗೊಳಿಸಬಹುದು ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಡ. ಈ ಪ್ರವೃತ್ತಿಗೆ ಬದಲು, ಒಳ್ಳೆಯ ಮಾತಿನಿಂದ ಎಚ್ಚರಗೊಳಿಸಿದರೆ ಅದರ ಪರಿಣಾಮವೇ ಬೇರೆ. ಎದ್ದ ವ್ಯಕ್ತಿಯ ಮನಸ್ಸು ಇದರಿಂದ ಹಗುರವಾಗುತ್ತದೆ ; ದಿನವೆಲ್ಲ ಲವಲವಿಕೆಯಿಂದಿರುತ್ತದೆ. ಎಬ್ಬಿಸಿದ ವ್ಯಕ್ತಿಯೂ ಈ ಸಂತೋಷದಲ್ಲಿ ಭಾಗಿಯಾಗುತ್ತಾನೆ. ಯಾವಾಗಲೂ ಬೆಳಗಿನ ಹೊತ್ತು ಮನಸ್ಸು ಹೊಚ್ಚ ಹೊಸದಾಗಿರುತ್ತದೆ ; ಸೂಕ್ಷ್ಮಗ್ರಾಹಿಯಾಗಿರುತ್ತದೆ. ಒಳ್ಳೆಯ ಅಥವಾ ಕೆಟ್ಟ ಮಾತು ಸುಲಭವಾಗಿ ಅದರ ಮೇಲೆ ಅನುಕೂಲ ಅಥವಾ ಪ್ರತಿಕೂಲ ಪರಿಣಾಮವೆಸಗಬಲ್ಲುದು. ಆದ್ದರಿಂದಲೇ, ಒಬ್ಬ ವ್ಯಕ್ತಿಯನ್ನು ಎಚ್ಚರಿಸುವ ವಿಧಾನದಲ್ಲೂ ಸಂಸ್ಕೃತಿ ಗೋಚರವಾಗಬಹುದು. ಸಂಸ್ಕೃತಿ ಎನ್ನುವುದು ಒಂದೊಂದು ನಡೆ, ನುಡಿಯಲ್ಲೂ ವ್ಯಕ್ತವಾಗುವಂಥದು.

ವಾಲ್ಮೀಕಿಗಳು ಎಂತಹ ಆದರ್ಶವನ್ನು ಕೊಟ್ಟಿದ್ದಾರೆ, 'ಕೌಸಲ್ಯಾ ಸುಪ್ರಜಾ ರಾಮ...' ಎಂಬ ದಿವ್ಯವಾದ ಶ್ಲೋಕದಲ್ಲಿ! ರಾಮ ಇನ್ನೂ ಬಾಲಕ ; ಬೆಳಗಾದರೂ ನಿದ್ದೆ ಮಾಡುವ ಸ್ವಭಾವ ಎಂದು ಕಾಣುತ್ತದೆ ; ಅಲ್ಲದೆ ಅರಮನೆಯಲ್ಲಿ ಬಹಳ ಬೇಗ ಏಳುವ ಅಗತ್ಯವಾದರೂ ಏನಿತ್ತು? ಆದರೆ ವಿಶ್ವಾಮಿತ್ರರೊಡನೆ ಕಾಡಿಗೆ ಬಂದ ಮೇಲೆ ಕರ್ತವ್ಯ ನಿರ್ವಹಣೆಗಾಗಿ ಬೇಗ ಕಣ್ತೆರೆಯಲೇಬೇಕಾಗಿದೆ ; ವಿಶ್ವಾಮಿತ್ರರು ನಿಯತಕಾಲಕ್ಕೆ ಸರಿಯಾಗಿ ಅವನನ್ನು ಎಬ್ಬಿಸಿಬಿಡುತ್ತಾರೆ. ಆದರೆ ಹೇಗೆ ಎಬ್ಬಿಸುತ್ತಾರೆ ಎನ್ನುವುದೆ ಇಲ್ಲಿನ ಸ್ವಾರಸ್ಯ. ''ಕೌಸಲ್ಯಾ ಸುಪ್ರಜಾ'' (ಕೌಸಲ್ಯೆಯ ಸುಪುತ್ರನೇ) ಎಂದು ಅವನನ್ನು ಸಂಬೋಧಿಸುತ್ತಾರೆ ; ರಾಮನಿಗೆ ತನ್ನ ತಾಯಿಯ ನೆನಪು ಮಾಡುವುದು ಅವರ ಉದ್ದೇಶ. ಆ ತಾಯಿ ಅಯೋಧ್ಯೆಯಲ್ಲಿ ಎಷ್ಟು ಬೇಗ ಎದ್ದು ದೈನಂದಿನ ಕರ್ತವ್ಯಗಳಲ್ಲಿ ತೊಡಗುತ್ತಿದ್ದಳೋ ! ಅದರ ನೆನಪು ರಾಮನಿಗಾಗಬೇಕು, ಅಂಥ ಪುಣ್ಯವಂತರ ಹೊಟ್ಟೆಯಲ್ಲಿ ಹುಟ್ಟಿದ ತಾನು ಸೋಮಾರಿಯಾಗಿರಕೂಡದು, ಬೇಗ ಏಳಬೇಕು ಎಂಬ ಭಾವನೆ ಅವನಲ್ಲಿ ಸ್ಫುರಿಸಬೇಕು–ಇದು ವಿಶ್ವಾಮಿತ್ರರ ಉದ್ದೇಶವೇ ? ಇದ್ದೀತು. 'ನರಶಾರ್ದೂಲ' ಎಂಬ ಮುಂದಿನ ವಿಶೇಷಣವನ್ನು ಲಕ್ಷಿಸಬೇಕು. 'ಅಯ್ಯಾ, ಮಹಾಪುರುಷ, ಶೂರಪ್ರವರ, ನಿನ್ನಿಂದಾಗಬೇಕಾದ ಮಹತ್ಕಾರ್ಯಗಳಿವೆ, ಎದ್ದೇಳು' ಎಂಬುದು ವಿಶ್ವಾಮಿತ್ರರ ಮಾತಿನ ಅಭಿಪ್ರಾಯ. ಇದನ್ನು ಕೇಳಿದ ರಾಮ ಎಷ್ಟು ಹಿಗ್ಗಿನಿಂದ ಹಾಸಿಗೆ ಬಿಟ್ಟೆದ್ದಿರಬೇಕು ! ವಿಶ್ವಾಮಿತ್ರರಾಡಿದ ಇಂಥ ಹೊಗಳಿಕೆಯ, ಪ್ರೋತ್ಸಾಹದ ನುಡಿಗಳೂ ಅವನನ್ನು 'ನರಶಾರ್ದೂಲ'ನನ್ನಾಗಿ ಮಾಡಿದುವೆಂದು ತೋರುತ್ತದೆ.

ಯಾವ ವ್ಯಕ್ತಿಯಲ್ಲೇ ಆಗಲಿ ಶಕ್ತಿ ತುಂಬುವ ಮಾರ್ಗಗಳು ಎರಡು: ಅವನಲ್ಲಿರುವ ಗುಣಗಳನ್ನು ಎತ್ತಿ ಹಿಡಿದು ಕೊಂಡಾಡಿ ಬೆನ್ನು ತಟ್ಟುವುದೊಂದು. ಆಂಜನೇಯನನ್ನು ವಾನರ ದಳವೆಲ್ಲ ಹುರಿದುಂಬಿಸಿದಾಗ ಅವನು ವಿರಾಡ್ರೂಪಿಯಾಗಿ ವಿಜೃಂಭಿಸಿ ಸಾಗರ ಲಂಘನ ಮಾಡಲಿಲ್ಲವೆ ? ಒಂದು ವೇಳೆ ವ್ಯಕ್ತಿಯಲ್ಲಿ ಗುಣವಿಲ್ಲ ದಿದ್ದರೂ ಅವನಿಗೆ ಗುಣವನ್ನಾರೋಪಿಸಿ ಸದಾ ಹೊಗಳುತ್ತಿದ್ದರೆ ಅವನು ಇಂದಲ್ಲ ನಾಳೆ ಅದನ್ನು ಸಂಪಾದಿಸಿಕೊಂಡಾನು. ಇದು ಮತ್ತೊಂದು ಮಾರ್ಗ. ಆದರೆ ಸದಾ ನಿಂದಿಸುತ್ತ, ಹೇಡಿಯೆಂದು ಬೈಯುತ್ತ ತಣ್ಣೀರೆರಚುತ್ತಿದ್ದರೆ ಎಂತ ಸತ್ವಶಾಲಿಯೂ ಕಾಲಕ್ರಮದಲ್ಲಿ ಜರ್ಜರಿತನಾಗಬಹುದು. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ : ''ವಚನೇ ಕಾ ದರಿದ್ರತಾ ?'' (ಬಡತನ ಮಾತಿನೊಳೇಕೆ ?) ಎಂಬುದು ಅದರ ಕೊನೆಯ ಭಾಗ. ಒಳ್ಳೆಯ ಮಾತಿಗೂ ಕಾರ್ಪಣ್ಯವೆ ? ಅಷ್ಟನ್ನಾದರೂ ಯಥೇಚ್ಛವಾಗಿ ಕೊಡಿ ; ಅದು ವ್ಯಕ್ತಿಯ ಉದ್ಧಾರವನ್ನು ಸಾಧಿಸಬಹುದು. ಒಳ್ಳೆಯ ಮಾತಿನಿಂದಲೇ ಎಲ್ಲವೂ ಸಿದ್ಧಿಸಲಾರದು, ನಿಜ ; ಆದರೆ ಅದು ಪೋಷಕಧಾತುವಾಗಬಲ್ಲುದು.

ವ್ಯಕ್ತಿಯನ್ನು ಬೆಳಗಿನ ವೇಳೆ ಎಚ್ಚರಿಸುವಾಗಲೆ ಇಷ್ಟೆಲ್ಲ ನೆನಪಿದ್ದರೆ ಉತ್ತಮವಲ್ಲವೆ ? ನಮ್ಮ ಸುಪ್ರಭಾತ ವಾಙ್ಮಯ ಈ ಜಾಡಿನಲ್ಲಿ ನಡೆದು ಬಂದದ್ದು. ''ದೇವರ ಮಕ್ಕಳೆ ಎಲ್ಲರು ಏಳಿ, ಬೆಳ್ಳನೆ ಬೆಳಗಾಯಿತು ಬೇಗೇಳಿ'' ಎಂದು ಕುವೆಂಪು ಅವರು ಪ್ರಭಾತಗೀತೆ ಹಾಡಿರುವಲ್ಲಿ ಇದೇ ಉದಾರವಾದ, ಶುಭಾಕಾಂಕ್ಷಿಯಾದ ದೃಷ್ಟಿಯನ್ನು ಗುರುತಿಸಬಹುದು.

ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ನಡೆಯಬೇಕು, ಹೇಗೆ ಹೇಗೆ ನುಡಿಯಬೇಕು ಎಂಬುದನ್ನು ತಮ್ಮ ಕಾವ್ಯದ ತುಂಬ ಚಿತ್ರಿಸಿರುವ ವಾಲ್ಮೀಕಿಗಳ ಋಷಿವಾಣಿ ಸದಾ ನಮ್ಮ ಕಿವಿಯಲ್ಲಿರಲಿ ; ಅದಕ್ಕೆ ಆಚಾರ್ಯ ವಿನೋಬಾಜಿಯವರು ಆಡಿರುವ ವ್ಯಾಖ್ಯಾನವೂ ನೆನಪಿನಲ್ಲಿರಲಿ : ''ಮೆಲ್ಲ ಮೆಲ್ಲನೆ ಕರೆಯಿರಿ, ಅನಂತರ ಗಟ್ಟಿಯಾಗಿ. ಕರ್ಕಶತೆ, ಕಠೋರತೆ ಬೇಡ. ಏಳದಿದ್ದರೆ ನಾಳೆಯಾದರೂ ಎದ್ದಾನು ಎಂದು ಆಸೆಯಿಟ್ಟುಕೊಳ್ಳಿ. ಆತ ಏಳಬೇಕೆಂದು ಸುಂದರವಾದ ಹಾಡು, ಸ್ತೋತ್ರ, ಶ್ಲೋಕ ಹೇಳಿ. ಎಬ್ಬಿಸುವ ಈ ಸಾದಾ ಕ್ರಿಯೆ–ಅದನ್ನು ಸಹ ಕಾವ್ಯಮಯವಾಗಿ, ಸಹೃದಯವಾಗಿ, ಸುಂದರವಾಗಿ ಮಾಡಬಹುದು. ದೇವರನ್ನೇ ಎಬ್ಬಿಸುವ ಹಾಗೆ, ಪರಮೇಶ್ವರನ ಮೂರ್ತಿಯನ್ನೇ ಮೆಲ್ಲನೆ ಎಚ್ಚರಿಸುವ ಹಾಗೆ ಇದು. ನಿದ್ದೆಯಿಂದ ಎಬ್ಬಿಸುವುದೂ ಒಂದು ಶಾಸ್ತ್ರ !'' (–'ಗೀತಾ ಪ್ರವಚನ').

'ವಚನೇ ಕಾ ದರಿದ್ರತಾ ?' ಎಂಬ ಸೂಕ್ತಿಯಂತೂ ನಮಗೆ ದಾರಿ ದೀವಿಗೆ.

■■

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ
ಪ್ರಕಟಿಸಿದ ಗ್ರಂಥಗಳು

೧. ಹಾರಕೂಡ ಹಿರೇಮಠದ ಶ್ರೀ ಸದ್ಗುರು ಚನ್ನಬಸವ ಸ್ವಾಮಿಗಳ ಅಷ್ಟೋತ್ತರ ಶತನಾಮಾವಳಿ	– ವೇ. ಪುರಾಣಿಕ ಶರಣಯ್ಯನವರು ಹೊಸಮಠ, ಗುರುಸಣಗಿ
೨. ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	– ಪ್ರೊ. ಸೂಗಯ್ಯ ಹಿರೇಮಠ
೩. ಅನುಭವ ಮಂಟಪದಲ್ಲಿ ವೀರಶೈವ ಸಂಸ್ಕೃತಿ	– ಶ್ರೀ ವಿ. ಎಸ್. ಚರಂತಿಮಠ
೪. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	– ಡಾ. ಎಂ. ಎಸ್. ಲಠ್ಠೆ
೫. ಅಂತರ (ಸಣ್ಣ ಕತೆಗಳ ಸಂಕಲನ)	– ಪ್ರೊ. ಸೂಗಯ್ಯ ಹಿರೇಮಠ
೬. ಅನುಭಾವಿಯ ಆತ್ಮಕಥನ	– ಡಾ. ಎಸ್. ಆರ್. ಗುಂಜಾಳ
೭. ಶರಣರ ಕಾಯಕ ಮತ್ತು ದಾಸೋಹ	– ಶಿವರಾಜ ಜಿ. ಪಾಟೀಲ
೮. ಶರಣರ ವಚನಗಳಲ್ಲಿ ಸಮಾಜ ಕಾರ್ಯ ದರ್ಶನ	– ಪ್ರೊ. ಎಸ್. ಆರ್. ಶಾಸ್ತ್ರಿ
೯. ಸನ್ನಿಧಿ	– ಡಾ. ಸಂಗಮೇಶ ಸವದತ್ತಿಮಠ
೧೦. ಪುಣ್ಯಚಿತ್ತರು	– ಡಾ. ಪಂಚಾಕ್ಷರಿ ಹಿರೇಮಠ
೧೧. ಶೂನ್ಯ ಸಂಪಾದನೆಯ ಮುಖಗಳು	– ಡಾ. ಸಂಗಮೇಶ ಸವದತ್ತಿಮಠ
೧೨. ಚನ್ನವೀರ	– (ಸಂ.) ಡಾ. ಸಂಗಮೇಶ ಸವದತ್ತಿಮಠ
೧೩. ವೀರಶೈವ ಸಾಹಿತ್ಯ	– ಡಾ. ಎಸ್. ಎಂ. ಹಿರೇಮಠ
೧೪. ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವ ಪದಗಳು	– (ಸಂ.) ಡಾ. ಮೀನಾಕ್ಷಿ ಬಾಳಿ
೧೫. ವೀರಶೈವ ಸಂಪದ	– ಡಾ. ಬಿ. ಆರ್. ಹಿರೇಮಠ
೧೬. ಶಿವಶರಣರು ಹಾಗೂ ವೈಚಾರಿಕತೆ	– ಡಾ. ಎಸ್. ವಿದ್ಯಾಶಂಕರ
೧೭. ಸಿದ್ಧರಾಮ – ಒಂದು ಸಮೀಕ್ಷೆ	– ಡಾ. ಬಿ. ವ್ಹಿ. ಮಲ್ಲಾಪೂರ
೧೮. ಹಾರಕೂಡ ಶ್ರೀ ಚನ್ನಬಸವೇಶ್ವರ ಚರಿತ್ರೆ	– ಶ್ರೀಮತಿ ಗೋಪಿಕಾದೇವಿ ದೇಶಮುಖ
೧೯. ರುದ್ರಲಿಂಗ ಸಂಸ್ಕೃತಿ	– ಆಚಾರ್ಯ ನಂದೀಶ

೨೦.	ಬಸವೋತ್ತರ ಯುಗದ ವಚನಕಾರರು	– ಡಾ. ವೀರಣ್ಣ ರಾಜೂರ
೨೧.	ಕಲ್ಯಾಣ ನಾಡಿನ ಪರಂಜ್ಯೋತಿ	–(ಸಂ.) ಡಾ. ಎಂ. ಎಸ್. ಲಠ್ಠೆ
		– ಮಲ್ಲಿನಾಥ ಹಿರೇಮಠ, ಹಾರಕೂಡ
		– ಡಾ. ಹೆಚ್. ಕಾಶೀನಾಥರೆಡ್ಡಿ
೨೨.	ಕರಿಯನಿತ್ತಡೆ ಒಲ್ಲೆ	– ರಮೇಶಬಾಬು ಯಾಳಗಿ
೨೩.	ವೀರಶೈವ ಪರಿಜ್ಞಾನ	– ಷಣ್ಮುಖಯ್ಯ ಅಕ್ಕೂರಮಠ
೨೪.	ಶಿವಶರಣರ ಲೋಕನೀತಿ	– ಡಾ. ಸಂಗಮೇಶ ಸವದತ್ತಿಮಠ
೨೫.	ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು	– ಡಾ. ಜೆ. ಎಂ. ನಾಗಯ್ಯ
೨೬.	ಅಲಂದೆಯ ಏಕಾಂತ ರಾಮಯ್ಯ	– ಡಾ. ಸಿ. ನಾಗಭೂಷಣ
೨೭.	ಪುಲಿಗೆರೆಯ ಆದಯ್ಯ	– ಡಾ. ಸೋಮನಾಥ ಯಾಳವಾರ
೨೮.	ಉಡುತಡಿಯ ಮಹಾದೇವಿಯಕ್ಕ	– ಡಾ. ಶಾಂತಾ ಇಮ್ರಾಪೂರ
೨೯.	ಸದ್ಗುರು ಶ್ರೀ ಚನ್ನಬಸವ ಶಿವಯೋಗಿಗಳ ಪುರಾಣ	–(ಸಂ.) ಡಾ. ಸಂಗಮೇಶ ಸವದತ್ತಿಮಠ
೩೦.	ಅಲ್ಲಮಪ್ರಭು–ಬೆರಗು, ಬೆಡಗು, ಬೆಳಗು	– ಶ್ರೀ ಬಸವರಾಜ ಪುರಾಣಿಕ ಬೆಂಗಳೂರು
೩೧.	ಬಸವಸಿರಿ	– ಪ್ರೊ. ವೀರೇಂದ್ರ ಸಿಂಪಿ
೩೨.	ಚಿಂತನಧಾರೆ	– ಡಾ. ಸಿ. ಪಿ. ಕೃಷ್ಣಕುಮಾರ್

■■

ಹಾರಕೂಡ ಹಿರೇಮಠದ ಸೃಜನ ಸಾಹಿತ್ಯಮಾಲೆಯ ಏಳನೆಯ ಕೃತಿಯಾಗಿ ಡಾ. ಸಿ.ಪಿ.ಕೆ ಅವರ ಚಿಂತನಧಾರೆ ಪ್ರಕಟಗೊಂಡಿದೆ. ಹಾರಕೂಡಗ್ರಾಮವು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಒಂದು ಪುಟ್ಟ ಗ್ರಾಮವಾದರೂ ಅಲ್ಲಿನ ಲಿಂ|| ಶ್ರೀ ಚನ್ನಬಸವ ಶಿವಯೋಗಿಗಳವರ ಪುಣ್ಯಭೂಮಿಯಾಗಿ, ಗ್ರಾಮೀಣ ವಿದ್ಯಾಕೇಂದ್ರವಾಗಿ, ಧರ್ಮ ಸಂಸ್ಕೃತಿಗಳ ನೆಲೆಯಾಗಿ ಕಂಗೊಳಿಸಿದೆ. ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ತಪೋನಿಷ್ಠೆ, ಪೂಜೆ, ಸಾತ್ವಿಕ ವ್ಯಕ್ತಿತ್ವದಿಂದ ಜನರಲ್ಲಿ ಸದ್ಭಕ್ತಿ, ಸದ್ಭಾವ, ಸದಾಚಾರಗಳನ್ನು ಬಿತ್ತಿದ್ದರಿಂದ ಇಂದು ಅದು ಶಿಕ್ಷಣ, ಧರ್ಮ, ಸಂತೃಪ್ತಸಮಾಜ, ಸುಸಂಸ್ಕೃತಿ, ಸಾಹಿತ್ಯ, ಕಲೆ ಹೀಗೆ ಮನುಷ್ಯನ ಸಾರ್ಥಕ ಜೀವನದ ಆಯಾಮಗಳನ್ನು ಬೆಳೆಸುವ ಶಕ್ತಿಕೇಂದ್ರವಾಗಿ ನಿಂತಿದೆ. ಸದ್ಯದ ಮಠಾಧೀಶರಾದ ಷ. ಬ್ರ. ಶ್ರೀ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳವರ ಸಮರ್ಥ ಮಾರ್ಗದರ್ಶನ, ನೇತೃತ್ವದಲ್ಲಿ ಶ್ರೀ ಮಠ ದಾಂಗುಡಿಯಿಟ್ಟು ಮುನ್ನಡೆದಿದ ಈ ವರೆಗೆ ನಾಡಿನ ಖ್ಯಾತ ವಿದ್ವಾಂಸರು ಬರೆದ ಅತ್ಯುತ್ತಮ ಪುಸ್ತಕಗಳನ್ನು ಪ್ರಕಟಿ ಮೆಚ್ಚುಗೆಯನ್ನು ಗಳಿಸಿದೆ. ಆ ಮಾರ್ಗದಲ್ಲಿ 30ಕ್ಕೂ ಹೆಚ್ಚು ಸಂಖ್ಯೆಯ ಮೌ ಕೃತಿಗಳು ಮೂಡಿಬಂದಿವೆ. ಅಂತಹ ಕೃತಿಗಳ ಮಾಲೆಯಲ್ಲಿ ಡಾ.ಸಿ.ಪಿ.ಕೆ ಅವ ಚಿಂತನಧಾರೆ ಒಂದಾಗಿದೆ.

ಸಿ.ಪಿ.ಕೆ ಎಂದೇ ಪ್ರಸಿದ್ಧಿಯನ್ನು ಪಡೆದ ಮೈಸೂರಿನ ಖ್ಯಾತ ಸಾಹಿತಿ- ವಿದ್ವಾಂಸರಾ ಡಾ.ಸಿ.ಪಿ.ಕೃಷ್ಣಕುಮಾರ್ ಅವರು ಕನ್ನಡದ ಅಪರೂಪದ ವಿದ್ವಾಂಸರು. ಸಂಸ್ಕೃ ಕನ್ನಡ, ಇಂಗ್ಲಿಶ್ ಮುಂತಾದ ಭಾಷೆಗಳಲ್ಲಿನ ಜ್ಞಾನವನ್ನು ಅರಗಿಸಿಕೊಂಡ ಅಚ್ಚುಕಟ್ಟಾಗಿ, ಮನಂಬುಗುವಂತೆ ತಮ್ಮ ಅನುಭವದ ಮೂಸೆಯಲ್ಲಿ ಪಾಕಗೊ ಬರೆಯುವ ಕನ್ನಡ ವಿದ್ವಾಂಸರು ತೀರ ಅಪರೂಪ. ಅಂಥ ಅಪರೂಪ ವಿದ್ವಾಂಸರಲ್ಲಿ ಡಾ.ಸಿ.ಪಿ.ಕೆ ಅವರ ಹೆಸರು ಎದ್ದುಕಾಣುವಂತಹುದು. ಸೃಜ ವಿಮರ್ಶೆ, ಸಂಶೋಧನೆಯ ಕ್ಷೇತ್ರಗಳಲ್ಲಿ ಅವರ ಕೃಷಿ ಗಮನಾರ್ಹ. ಅವ ಸೃಜನಶೀಲ ಸಾಹಿತಿಗಳೂ ಹೌದು, ಜೊತೆಗೆ ಶಾಸ್ತ್ರಸಾಹಿತ್ಯದಲ್ಲೂ ಅವರಿಗೆ ಅ ಪರಿಣತಿ ಇದೆ. ಡಾ.ಸಿ.ಪಿ.ಕೆ ಅವರ ಚಿಂತನೆಗಳಂತೂ ತುಂ ಸುಪ್ರಸಿದ್ಧವಾದವುಗಳು. ಅವು ಮನುಷ್ಯನ ಬದುಕಿನ ವಾಸ್ತವ ಚಿತ್ರಣವ ನೀಡುತ್ತಲೇ ಸನ್ಮಾರ್ಗದತ್ತ ಕೊಂಡೊಯ್ಯುವಂಥವುಗಳಾಗಿವೆ. ಅವ ಉದಾಹರಣೆಗಾಗಿ ನೀಡುವ ಪ್ರಾಚೀನ ಉಲ್ಲೇಖಗಳು, ಶ್ಲೋಕಗಳು, ಸೂಕ್ತಿಗ ಯಾವ ಕಾಲಕ್ಕೂ ಹೊಂದುವಂಥವುಗಳು.

ಅವರ ಚಿಂತನಧಾರೆಯಲ್ಲಿ ಹರಿವ ಅಮೃತವಿಚಾರಬಿಂದುಗಳು ಕೋಡಿವರಿದಿ ಪ್ರಸ್ತುತ ಗ್ರಂಥದಲ್ಲಿ 51 ಬಿಂದುಗಳನ್ನು ಆಯ್ದು ಸಂಗ್ರಹಿಸಿ ಪ್ರಕಟಿಸಲಾಗಿ ಪ್ರಾಚೀನವನ್ನು ಅರ್ವಾಚೀನಕ್ಕೆ ಪ್ರಸ್ತುತಗೊಳಿಸುವುದು, ಹಾಗೂ ಹಳೆಯ ಹೊಸ ವ್ಯಾಖ್ಯಾನವನ್ನು ಕೊಡುವುದು ಇಲ್ಲಿನ ಚಿಂತನೆಗಳ ವೈಶಿಷ್ಟ್ಯವಾಗಿದೆ.